ಗುರುವಾರ, ಸೆಪ್ಟೆಂಬರ್ 12, 2024 | ₹ 7.00

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಂತಸ

ನವದೆಹಲಿಯಲ್ಲಿ ಬುಧವಾರ ನಡೆದ ಸನ್ಮಾನ ಸಮಾರಂಭದ ವೇಳೆ ಪ್ಯಾರಾಲಿಂಪಿಕ್ ಕಂಚಿನ ಪದಕ ವಿಜೇತೆ ಶೀತಲ್ ದೇವಿ ಅವರು ತಾಯಿ ಶಕ್ತಿದೇವಿ ಜೊತೆಗೆ ಸಂತಸ ಹಂಚಿಕೊಂಡ ಆತ್ಮೀಯ ಕ್ಷಣ



ತುಂಗಭದ್ರಾ ಅಣೆಕಟ್ಟೆ: ಕ್ರಸ್ಟ್‌ಗೇಟ್‌ಗಳಿಗೆ ಸ್ಟಾಪ್‌ಲಾಗ್ ಅಳವಡಿಸಲು 2021ರಲ್ಲೇ ತಜ್ಞರ ಶಿಫಾರಸು

ತಜ್ಞರ ಎಚ್ಚರಿಕೆ ಕಡೆಗಣಿಸಿದ್ದ ಬಿಜೆಪಿ ಸರ್ಕಾರ

• ಜಯಸಿಂಹ ಆರ್.

ಮುಖ್ಯಾಂಶಗಳು


- ಬೊಮ್ಮಾಯಿ ಸರ್ಕಾರಕ್ಕೆ ವರದಿ ನೀಡಿದ್ದ ಎ.ಕೆ. ಬಜಾಜ್ ಸಮಿತಿ
- ತುರ್ತು ಸಂದರ್ಭದಲ್ಲಿ ಸ್ಟಾಪ್‌ಲಾಗ್ ಅಗತ್ಯ ಎಂದು ಶಿಫಾರಸು
- ಎರಡು ಬಾರಿ ಶಿಫಾರಸು ಬದಿಗೊತ್ತಿದ್ದ ಅಣೆಕಟ್ಟೆ ಮಂಡಳಿ

ಬೆಂಗಳೂರು: 'ತುಂಗಭದ್ರಾ ಅಣೆಕಟ್ಟೆಯ ಎಲ್ಲ 33 ಕ್ರಸ್ಟ್‌ಗೇಟ್‌ಗಳಿಗೂ ಮುನ್ನೆಚ್ಚರಿಕೆ ಕ್ರಮವಾಗಿ ಸ್ಟಾಪ್‌ಲಾಗ್‌ಗಳನ್ನು ಅಳವಡಿಸಬೇಕು' ಎಂದು ಎ.ಕೆ. ಬಜಾಜ್ ನೇತೃತ್ವದ ತಜ್ಞರ ತಂಡವು 2021ರಲ್ಲೇ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಆದರೆ, ಸ್ಟಾಪ್‌ಲಾಗ್‌ಗಳನ್ನು ಅಳವಡಿಸಲು ಅಂದಿನ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ.

ಈಚೆಗೆ ಕೊಚ್ಚಿಹೋದ 19ನೇ ಕ್ರಸ್ಟ್‌ಗೇಟ್‌ಗೂ ಸ್ಟಾಪ್‌ಲಾಗ್‌ಗಳನ್ನು ಅಳವಡಿಸಬೇಕು ಎಂದು ಸಮಿತಿ ಸೂಚಿಸಿತ್ತು. ಕ್ರಸ್ಟ್‌ಗೇಟ್ ಕೊಚ್ಚಿಹೋದಾಗ ಸ್ಟಾಪ್‌ಲಾಗ್ ಇಲ್ಲದೇ ಇದ್ದ ಕಾರಣಕ್ಕೆ 36 ಟಿಎಂಸಿ ಅಡಿಯಷ್ಟು ನೀರು ನಷ್ಟವಾಗಿತ್ತು. ನಂತರ ತುರ್ತು ಕಾರ್ಯಾಚರಣೆ ನಡೆಸಿ, ಇನ್ನಷ್ಟು ನೀರು ನಷ್ಟವಾಗುವುದನ್ನು ತಪ್ಪಿಸಲಾಯಿತು.

ಅಧಿಕಾರಕ್ಕೆ ಬಂದು ವರ್ಷ ಕಳೆದರೂ, ಕಾಂಗ್ರೆಸ್ ಸರ್ಕಾರವು ಹಿಂದಿನ ಸರ್ಕಾರದಂತೆಯೇ ಇದನ್ನು ನಿರ್ಲಕ್ಷ್ಯಿಸಿತ್ತು. ಆದರೆ ಗೇಟ್ ಕೊಚ್ಚಿಹೋದ ಕಾರಣ, ಶಿಫಾರಸಿನ ಕಾರ್ಯಸಾಧ್ಯತೆ ಪರಿಶೀಲನೆಗೆ ಮುಂದಾಗಿದೆ.

ಅಣೆಕಟ್ಟೆಗಳ ಸ್ಥಿತಿಗತಿ ಪರಿಶೀಲನೆಗೆ ರಾಜ್ಯ ಸರ್ಕಾರವು ಎ.ಕೆ.ಬಜಾಜ್ ಅವರ ನೇತೃತ್ವದಲ್ಲಿ 'ಅಣೆಕಟ್ಟೆ ಸುರಕ್ಷತೆ ಪರಿಶೀಲನಾ ಸಮಿತಿ'ಯನ್ನು 2021ರ ಆಗಸ್ಟ್‌ನಲ್ಲಿ ರಚಿಸಿತ್ತು. 2021ರ ಅಕ್ಟೋಬರ್ 8ರಂದು ತುಂಗಭದ್ರಾ ಜಲಾಶಯಕ್ಕೆ ಭೇಟಿ ನೀಡಿದ್ದ ಸಮಿತಿಯು, ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು.



ತುಂಗಭದ್ರಾ ಜಲಾಶಯದ 19ನೇ ತೂಬಿನಿಂದ ಕೊಚ್ಚಿ ಹೋಗಿದ್ದ ಕ್ರಸ್ಟ್‌ಗೇಟ್

ಅಣೆಕಟ್ಟೆಯ ಸುರಕ್ಷತೆಗೆ ಸಂಬಂಧಿಸಿದಂತೆ ಸಮಿತಿಯು ಒಟ್ಟು 65 ಶಿಫಾರಸುಗಳನ್ನು ಮಾಡಿತ್ತು. 'ಕ್ರಸ್ಟ್‌ಗೇಟ್‌ಗಳು ಹಳತಾಗಿದ್ದು, ಅವು ಕೆಲಸ ಮಾಡದೇ ಇರುವ ಸಾಧ್ಯತೆಗಳು ಇವೆ. ಅಂತಹ ಸಂದರ್ಭ ಎದುರಾದರೆ, ಜಲಾಶಯದ ನೀರನ್ನು ಕಾಪಿಟ್ಟುಕೊಳ್ಳುವುದು ಸಾಧ್ಯವಿಲ್ಲ. ಹೀಗಾಗಿ, ಎಲ್ಲ 33 ಕ್ರಸ್ಟ್‌ಗೇಟ್‌ಗಳಿಗೂ ತಲಾ ಮೂರು ಸ್ಟಾಪ್‌ಲಾಗ್‌ಗಳನ್ನು ಅಳವಡಿಸಬೇಕು' ಎಂದು ಶಿಫಾರಸು ಮಾಡಿತ್ತು.

ಮುಂದುವರಿದು, 'ಕ್ರಸ್ಟ್‌ಗೇಟ್ ಹಿಡಿದಿಟ್ಟುಕೊಳ್ಳುವ ಕಂಬದಂತಹ ರಚನೆಗಳ ಈಗಿನ ವಿನ್ಯಾಸದಲ್ಲಿ ಸ್ಟಾಪ್‌ಲಾಗ್‌ಗಳನ್ನು ಅಳವಡಿಸಲು ಸಾಧ್ಯವಿಲ್ಲ. ಕಂಬಗಳ ವಿನ್ಯಾಸ ಮಾರ್ಪಡಿಸಿ, ಸ್ಟಾಪ್‌ಲಾಗ್ ಅಳವಡಿಸಬೇಕು' ಎಂದು ಸಮಿತಿ ಹೇಳಿತ್ತು.

2021ರಲ್ಲೇ ತುಂಗಭದ್ರಾ ಅಣೆಕಟ್ಟು ಮಂಡಳಿಯ ಮುಂದೆ ಈ ಶಿಫಾರಸು ಬಂದಿತ್ತು. ಇತರ ಹಲವು ಶಿಫಾರಸುಗಳನ್ನು ಕಾರ್ಯರೂಪಕ್ಕೆ ತಂದಿದ್ದ ಮಂಡಳಿಯು, ಸ್ಟಾಪ್‌ಲಾಗ್‌ಗಳನ್ನು ಅಳವಡಿಸುವ ಶಿಫಾರಸನ್ನು ಅನುಷ್ಠಾನಕ್ಕೆ ತರಲಿಲ್ಲ. ಬದಲಿಗೆ ಸಮಿತಿಗೆ ಸಲ್ಲಿಸಿದ ಕಾರ್ಯಪಾಲನಾ ವರದಿಯಲ್ಲಿ, 'ಈ ಶಿಫಾರಸನ್ನು ಗಮನಿಸಿದ್ದೇವೆ' ಎಂದಷ್ಟೇ ಉಲ್ಲೇಖಿಸಿತ್ತು.

ಬಿಜೆಪಿ ಸರ್ಕಾರದ ಅವಧಿಯಲ್ಲೇ 2021–22ನೇ ಸಾಲಿನಲ್ಲಿ ಮತ್ತೊಮ್ಮೆ ಈ ಶಿಫಾರಸು ಮಂಡಳಿಯ ಮುಂದೆ ಬಂದಿತ್ತು. ಆಗಲೂ, 'ಗಮನಿಸಿದ್ದೇವೆ' ಎಂದು ಉಲ್ಲೇಖಿಸಿ ಶಿಫಾರಸನ್ನು ಕಡೆಗಣಿಸಲಾಗಿತ್ತು.

'ಗಂಭೀರವಾಗಿ ಪರಿಗಣಿಸಿರಲಿಲ್ಲ'

'ಸಮಿತಿಯ ಶಿಫಾರಸನ್ನು ಜಾರಿಗೆ ತರುವ ಮುನ್ನ ಹಣಕಾಸು ಲಭ್ಯತೆ ಮತ್ತು ಕಾರ್ಯಸಾಧ್ಯತಾ ಪರಿಶೀಲನೆಯನ್ನು ನಡೆಸಬೇಕಿತ್ತು. ಹಿಂದಿನ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸದೇ ಇದ್ದ ಕಾರಣ, ಕಾರ್ಯಸಾಧ್ಯತಾ ಪರಿಶೀಲನೆ ಕೆಲಸ ಆಗಿರಲಿಲ್ಲ' ಎಂದು ತುಂಗಭದ್ರಾ ಅಣೆಕಟ್ಟೆ ಮಂಡಳಿಯ ಸದಸ್ಯರೂ ಆಗಿರುವ ರಾಜ್ಯ ಜಲಸಂಪನ್ಮೂಲ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

'ಈಗ, ಒಂದು ಕ್ರಸ್ಟ್‌ಗೇಟ್ ಕೊಚ್ಚಿಹೋದ ನಂತರ ಈಗಿನ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿದೆ' ಎಂದೂ ಅವರು ಹೇಳಿದರು.

'ಈಗ ಎ.ಕೆ.ಬಜಾಜ್ ಅವರ ನೇತೃತ್ವದ ತಾಂತ್ರಿಕ ತಜ್ಞರ ತಂಡಕ್ಕೇ ಅಣೆಕಟ್ಟೆಯ ಸುರಕ್ಷತೆ ಪರಿಶೀಲನೆಯ ಹೊಣೆ ನೀಡಲಾಗಿದೆ. ಸ್ಟಾಪ್‌ಲಾಗ್‌ಗಳನ್ನು ಅಳವಡಿಸುವ ಸಂಬಂಧ ಕಾರ್ಯಸಾಧ್ಯತೆಯ ಪರಿಶೀಲನೆಯೂ ನಡೆಯಲಿದೆ. ಇದನ್ನು ಕಡೆಗಣಿಸಿದರ ಪರಿಣಾಮ ಏನು ಎಂಬುದು ಸರ್ಕಾರಕ್ಕೆ ಅರಿವಾಗಿರುವ ಕಾರಣ, ಈ ಕಾರ್ಯಕ್ಕೆ ಚುರುಕು ದೊರೆಯಲಿದೆ' ಎಂದರು.

ಸುದ್ದಿ 2 ನಿಮಿಷ

ಹಳೆ ವಿದ್ಯುನ್ಮಾನ ಉಪಕರಣ ಮರು ಖರೀದಿಗೆ ನಿಯಮ– ಖಂಡ್ರೆ

ಬೆಂಗಳೂರು: 'ಹಳೆಯ ಟಿ.ವಿ, ಕಂಪ್ಯೂಟರ್, ಮೊಬೈಲ್, ಚಾರ್ಜರ್ ಇತ್ಯಾದಿ ಉಪಕರಣಗಳನ್ನು ಕನಿಷ್ಠ ಬೆಲೆ ನೀಡಿ ಮಾರಾಟಗಾರರೇ ಕಡ್ಡಾಯವಾಗಿ ಮರು ಖರೀದಿ ಮಾಡಬೇಕೆಂಬ ನಿಯಮ ಜಾರಿಗೆ ತಂದರೆ ಇ- ತ್ಯಾಜ್ಯವನ್ನು ನಿಯಂತ್ರಿಸಲು ಸಾಧ್ಯವಿದೆ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಅಭಿಪ್ರಾಯಪಟ್ಟಿದ್ದಾರೆ.

ಈ ಕುರಿತು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಟಿಪ್ಪಣಿ ನೀಡಿರುವ ಸಚಿವರು, 'ಕಂಪ್ಯೂಟರ್, ಮೊಬೈಲ್ ದತ್ತಾಂಶ ದುರ್ಬಳಕೆ ಆಗದ ರೀತಿಯಲ್ಲಿ ಹಳೆಯ ವಿದ್ಯುನ್ಮಾನ ಸಲಕರಣೆಗಳ ಮರು ಖರೀದಿಯ ಸಾಧಕ-ಬಾಧಕ ಮತ್ತು ಅನುಷ್ಠಾನ ಕುರಿತಂತೆ 30 ದಿನಗಳ ಒಳಗೆ ಕಡತದಲ್ಲಿ ಪ್ರಸ್ತಾವ ಸಲ್ಲಿಸಬೇಕು' ಎಂದು ಸೂಚಿಸಿದ್ದಾರೆ.

'ಮನೆಗಳಲ್ಲಿಯೂ ದಿನದಿಂದ ದಿನಕ್ಕೆ ಅಪಾಯಕಾರಿಯಾದ ಇ- ತ್ಯಾಜ್ಯ ಹೆಚ್ಚಳ ಆಗುತ್ತಿದೆ. ಗುಜರಿ ಅಂಗಡಿಗಳಲ್ಲಿ ವಿದ್ಯುನ್ಮಾನ ಉಪಕರಣಗಳಿಂದ ಆಯ್ದ ವಸ್ತುಗಳನ್ನು ಮಾತ್ರ ತೆಗೆದುಕೊಂಡು ಉಳಿದ ವಸ್ತುಗಳನ್ನು ವೈಜ್ಞಾನಿಕವಾಗಿ ಸಂಸ್ಕರಿಸದೇ ಇರುವುದು ಗಮನಕ್ಕೆ ಬಂದಿದೆ. ಸಾರ್ವಜನಿಕರ ಮತ್ತು ಸಮುದಾಯ ಆರೋಗ್ಯ ರಕ್ಷಣೆಯ ಹಿನ್ನೆಲೆಯಲ್ಲಿ ಇ- ತ್ಯಾಜ್ಯದ ವೈಜ್ಞಾನಿಕ ವಿಲೇವಾರಿ ಇಂದಿನ ಅಗತ್ಯವಾಗಿದೆ. ಇದಕ್ಕಾಗಿ ಹೊಸ ಟಿ.ವಿ, ಕಂಪ್ಯೂಟರ್, ಮೊಬೈಲ್ ಇತ್ಯಾದಿ ಯಾವುದೇ ವಿದ್ಯುನ್ಮಾನ ಉಪಕರಣಗಳನ್ನು ಖರೀದಿಸುವ ಸಂದರ್ಭದಲ್ಲಿ ಗ್ರಾಹಕರು ಇಚ್ಛಿಸಿದರೆ, ಅವರ ಹಳೆಯ ಉಪಕರಣಗಳನ್ನು ಮಾರಾಟಗಾರರು ಕನಿಷ್ಠ ಬೆಲೆ ನೀಡಿ ಮತ್ತೆ ಖರೀದಿ ಮಾಡಬೇಕೆಂಬ ನಿಯಮ ಜಾರಿಗೆ ಬರಬೇಕಿದೆ' ಎಂದೂ ಖಂಡ್ರೆ ಅವರು ಹೇಳಿದ್ದಾರೆ.



ಮಾದರಿ ಪ್ರಶ್ನೆಪತ್ರಿಕೆ ಬಿಡುಗಡೆ

ಬೆಂಗಳೂರು: ದ್ವಿತೀಯ ಪಿಯುಸಿಯ ಎಲ್ಲ ವಿಷಯಗಳ ಮಾದರಿ ಪ್ರಶ್ನೆಪತ್ರಿಕೆಗಳನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಜಾಲತಾಣದಲ್ಲಿ ಪ್ರಕಟಿಸಲಾಗಿದೆ.

ಪದವಿಪೂರ್ವ ಪಠ್ಯಕ್ರಮ ಬೋಧಿಸುವ ಆಯಾ ವಿಷಯಗಳ ಉಪನ್ಯಾಸಕರಿಂದ ಸಿದ್ಧಪಡಿಸಿರುವ ಮಾದರಿ ಪ್ರಶ್ನೆಪತ್ರಿಕೆಗಳನ್ನು ಬಳಸಿಕೊಂಡು 2024–25ನೇ ಸಾಲಿನ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಬೇಕು. ಫಲಿತಾಂಶ ಉತ್ತಮಪಡಿಸಲು ಎಲ್ಲ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು ಕ್ರಮ ಕೈಗೊಳ್ಳಬೇಕು ಎಂದು ಮಂಡಳಿ ಅಧ್ಯಕ್ಷೆ ಮಂಜುಶ್ರೀ ಸೂಚಿಸಿದ್ದಾರೆ.

ಪ್ರತಿ ವಿಷಯದ ಪ್ರಶ್ನೆಪತ್ರಿಕೆಯಲ್ಲಿ ನೀಡಿರುವ ಸೂಚನೆಗಳನ್ನು ವಿದ್ಯಾರ್ಥಿಗಳಿಗೆ ವಿವರಿಸಬೇಕು. ಆಯಾ ವಿಷಯಗಳ ಲಿಖಿತ ಪರೀಕ್ಷೆಗೆ ನಿಗದಿಪಡಿಸಿರುವ ಒಟ್ಟು ಅಂಕಗಳು, ಪರೀಕ್ಷಾ ಅವಧಿ ಮತ್ತಿತರ ವಿಷಯಗಳನ್ನು ಮನವರಿಕೆ ಮಾಡಿಸಬೇಕು ಎಂದು ಹೇಳಿದ್ದಾರೆ. ಹೆಚ್ಚಿನ ಮಾಹಿತಿಗೆ http://kseab.karnataka.gov.in ಸಂಪರ್ಕಿಸಬಹುದು.



ಮೆರವಣಿಗೆ ಮೈಸೂರು ಸಾಮೂಹಿಕ ಗಣೇಶ ವಿಸರ್ಜನಾ ಮಂಡಳಿ ಹಾಗೂ ಮೈಸೂರು ಧಾರ್ಮಿಕ ಪ್ರತಿಷ್ಠಾನವು ಬುಧವಾರ ಆಯೋಜಿಸಿದ್ದ ಮೆರವಣಿಗೆಯಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡರು –ಪ್ರಜಾವಾಣಿ ಚಿತ್ರ

ಕಾನೂನು ಆಯೋಗ: ಹೊಸ ಅಧ್ಯಕ್ಷರ ಆಯ್ಕೆಗೆ ಪ್ರಕ್ರಿಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಕಾನೂನು ಆಯೋಗದ ಅಧ್ಯಕ್ಷ ಎಸ್.ಆರ್. ಬನ್ನೂರ್‌ಮಠ ಅವರ ಐದು ವರ್ಷಗಳ ಅಧಿಕಾರ ಅವಧಿ ಇದೇ 19ಕ್ಕೆ ಕೊನೆಯಾಗಲಿದ್ದು, ಹೊಸ ಅಧ್ಯಕ್ಷರ ನೇಮಕಕ್ಕೆ ಕಾನೂನು ಇಲಾಖೆ ಪ್ರಕ್ರಿಯೆ ಆರಂಭಿಸಿದೆ.

ಬನ್ನೂರ್‌ಮಠ ಅವರು 2019ರ ಸೆ.19ರಂದು ಅಧ್ಯಕ್ಷರಾಗಿ ನೇಮಕಗೊಂಡಿದ್ದರು.

ಕಾನೂನು ಆಯೋಗದ ಅಧ್ಯಕ್ಷರನ್ನಾಗಿ ಹೈಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಅಥವಾ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿಯನ್ನು ರಾಜ್ಯ ಸರ್ಕಾರ ನೇಮಿಸಬೇಕಿದೆ. ಅಧ್ಯಕ್ಷರನ್ನು ನಾಮನಿರ್ದೇಶನ ಮಾಡುವಂತೆ ಕಾನೂನು ಸಚಿವ ಎಚ್.ಕೆ. ಪಾಟೀಲ ಅವರಿಗೆ ಇಲಾಖೆ ಪ್ರಸ್ತಾವ ಸಲ್ಲಿಸಿದ್ದು, ಮುಖ್ಯಮಂತ್ರಿಯ ಅನುಮೋದನೆಯ ಬಳಿಕ ಸಚಿವ ಸಂಪುಟಕ್ಕೆ ಈ ಪ್ರಸ್ತಾವ ಮಂಡನೆ ಆಗಲಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಈ ಮಧ್ಯೆ, ಆಯೋಗದ ಅಧ್ಯಕ್ಷರು, ಸದಸ್ಯರು ಮತ್ತು ಸದಸ್ಯ ಕಾರ್ಯದರ್ಶಿಗಳ ನೇಮಕಾತಿಗೆ ಸಂಬಂಧಿಸಿದಂತೆ ಗರಿಷ್ಠ ವಯೋಮಿತಿಯನ್ನು 70 ವರ್ಷಕ್ಕೆ ನಿಗದಿಪಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಾಗಲೇ ಅನುಮೋದನೆ ನೀಡಿದ್ದಾರೆ. ಈವರೆಗೆ ಗರಿಷ್ಠ ವಯೋಮಿತಿ ನಿಗದಿಪಡಿಸಿರಲಿಲ್ಲ. ಹೀಗಾಗಿ, ಈ ಅಂಶವನ್ನು ಪರಿಗಣಿಸಿ ನಾಮನಿರ್ದೇಶನ ಮಾಡಬೇಕಾಗಿದೆ ಎಂದೂ ಇಲಾಖೆಯ ಮೂಲಗಳು ಹೇಳಿವೆ.

ವಿಶೇಷ ರೈಲು ಸಂಚಾರ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ-ಹೊಸಪೇಟೆ ನಿಲ್ದಾಣಗಳ ನಡುವೆ ಬಳ್ಳಾರಿ ಬೈಪಾಸ್ ಮಾರ್ಗದ ಮೂಲಕ ಸಂಚರಿಸುವ ವಿಶೇಷ ಎಕ್ಸ್‌ಪ್ರೆಸ್ ರೈಲುಗಳ ಸಂಚಾರವನ್ನು ನೈರುತ್ಯ ರೈಲ್ವೆ ವಿಸ್ತರಿಸಿದೆ.

ಬೆಂಗಳೂರು- ಹೊಸಪೇಟೆ ವಿಶೇಷ ಎಕ್ಸ್‌ಪ್ರೆಸ್ ರೈಲು ಸೆಪ್ಟೆಂಬರ್ 13ರವರೆಗೆ ಹಾಗೂ ಹೊಸಪೇಟೆ-ಬೆಂಗಳೂರು ವಿಶೇಷ ಎಕ್ಸ್‌ಪ್ರೆಸ್ ರೈಲು ಸೆ.15 ಕಾರ್ಯಾಚರಿಸಲು ನಿರ್ಧರಿಸಲಾಗಿತ್ತು. ಈ ಕಾರ್ಯಾಚರಣೆಯನ್ನು ಮುಂದಿನ ಆದೇಶ ಬರುವವರೆಗೆ ವಿಸ್ತರಿಸಲಾಗಿದೆ.

ಓಣಂ ರೈಲು ವಿಸ್ತರಣೆ: ಓಣಂ ಸಮಯದಲ್ಲಿ ಪ್ರಯಾಣಿಕರ ದಟ್ಟಣೆ ಕಡಿಮೆ ಮಾಡಲು ಸೆ.18ರವರೆಗೆ ಯಲಹಂಕ–ಎರ್ನಾಕುಲಂ ಗರೀಬ್ ರಥ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ ವಿಶೇಷ ರೈಲು ಸಂಚಾರವನ್ನು ವಿಸ್ತರಿಸಲಾಗಿದೆ.

ಪೋಕ್ಸೊ ಪ್ರಕರಣ ರದ್ದುಪಡಿಸಲು ಹೈಕೋರ್ಟ್ ನಕಾರ

'ಬಾಲಕಿಯರ ವಿಡಿಯೊ: ಶಿಕ್ಷಕನ ಕೃತ್ಯ ಅಸಭ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ವಸತಿ ಶಾಲೆಯಲ್ಲಿ ವಿದ್ಯಾರ್ಥಿನಿಯರು ಬಟ್ಟೆ ಬದಲಿಸುವ ವೇಳೆ ಫೋಟೊಗಳನ್ನು ಕ್ಲಿಕ್ಕಿಸಿದ ಹಾಗೂ ವಿಡಿಯೊ ಚಿತ್ರೀಕರಣ ಮಾಡಿದ ಆರೋಪ ಹೊತ್ತಿರುವ ವಸತಿ ಶಾಲೆಯೊಂದರ ಚಿತ್ರಕಲಾ ಶಿಕ್ಷಕನ ವಿರುದ್ಧದ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಪ್ರಕರಣ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

'ನನ್ನ ವಿರುದ್ಧದ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ವಸತಿ ಶಾಲೆಯ ಶಿಕ್ಷಕ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಆರೋಪಿ ಎಸಗಿದ್ದಾನೆ ಎನ್ನಲಾದ ಕೃತ್ಯ ನಿಜಕ್ಕೂ ಅಸಭ್ಯ ಹಾಗೂ ಭಯಾನಕವಾಗಿದೆ' ಎಂದು ತೀವ್ರ ಕಳವಳ ವ್ಯಕ್ತಪಡಿಸಿದೆ.

'ಅರ್ಜಿದಾರ ಶಿಕ್ಷಕ 5 ಮೊಬೈಲ್ ಫೋನ್‌ಗಳನ್ನು ಹೊಂದಿದ್ದು, ಪ್ರತಿ ಮೊಬೈಲ್‌ನಲ್ಲೂ ಸುಮಾರು ಸಾವಿರ ಫೋಟೊಗಳು ಹಾಗೂ ನೂರಾರು ವಿಡಿಯೊಗಳಿವೆ ಎಂಬುದು ಪ್ರಕರಣದ ತನಿಖಾ ವರದಿ ಮತ್ತು ವಿಧಿವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ದಾಖಲೆಗಳಿಂದ ಕಂಡುಬಂದಿದೆ. ಈ ವಿಚಾರ ನಿಜಕ್ಕೂ ಆಘಾತಕಾರಿ' ಎಂದು ಎಂದು ನ್ಯಾಯಪೀಠ ವ್ಯಾಕುಲ ಹೊರಹಾಕಿದೆ.

ಕೋರ್ಟ್ ಕೇಳಿದ್ದೇನು?

- ಐದು ಮೊಬೈಲ್, ನೂರಾರು ವಿಡಿಯೊ...
- ಒಬ್ಬ ಚಿತ್ರಕಲಾ ಶಿಕ್ಷಕ ಇಷ್ಟು ಮೊಬೈಲ್‌ಗಳನ್ನು ಏಕೆ ಹೊಂದಿದ್ದರು?
- ಮೊಬೈಲ್‌ಗಳಲ್ಲಿರುವ ವಿಡಿಯೊ ಹಾಗೂ ಫೋಟೊಗಳು ಯಾವುವು?

ಪೋಕ್ಸೊ ಕಾಯ್ದೆ--2012ರ ಪ್ರಕಾರ ಮಕ್ಕಳ ದೇಹ ಅಥವಾ ದೇಹದ ಯಾವುದೇ ಭಾಗವನ್ನು ಅಸಭ್ಯ ರೀತಿಯಲ್ಲಿ ತೋರಿಸುವುದು ಲೈಂಗಿಕ ಕಿರುಕುಳವಾಗುತ್ತದೆ

ಎಂ.ನಾಗಪ್ರಸನ್ನ, ನ್ಯಾಯಮೂರ್ತಿ

'ಒಬ್ಬ ಶಿಕ್ಷಕನಾಗಿ ಈ ರೀತಿಯ ವಿಡಿಯೊ ಚಿತ್ರೀಕರಿಸುವುದು ನಿಜವಾಗಿಯೂ ಅಸಭ್ಯತನದ ಪರಮಾವಧಿ. ಇಂತಹ ಕೃತ್ಯಗಳು ಕ್ಷಮಾರ್ಹವಲ್ಲ. ಬೇಕಿದ್ದರೆ ಅರ್ಜಿದಾರ ಪೂರ್ಣ ಪ್ರಮಾಣದ ವಿಚಾರಣೆ ಎದುರಿಸಿ ಆರೋಪಮುಕ್ತನಾಗಿ ಹೊರಬರಲಿ. ಆದರೆ, ಈ ಹಂತದಲ್ಲಿ ಎಫ್‌ಐಆರ್ ರದ್ದುಪಡಿಸಿದರೆ ಆತನ ಅಕ್ರಮ ಚಟುವಟಿಕೆಯನ್ನು ಉತ್ತೇಜಿಸಿದಂತಾಗುತ್ತದೆ. ಹೀಗಾಗಿ, ಪ್ರಕರಣದ ಸತ್ಯಾಂಶ ತನಿಖೆ ಹಾಗೂ ವಿಚಾರಣೆಯಿಂದ ಬಹಿರಂಗವಾಗಬೇಕಿದೆ' ಎಂಬ ಅಭಿಪ್ರಾಯವನ್ನು ನ್ಯಾಯಪೀಠ ವ್ಯಕ್ತಪಡಿಸಿದೆ.

ಅರ್ಜಿದಾರ ತನಿಖೆಗೆ ಸಹಕರಿಸುತ್ತಿಲ್ಲ...

'ಅರ್ಜಿದಾರರ ಬಳಿ ಇರುವ ಮೊಬೈಲ್ ಫೋನ್‌ಗಳಲ್ಲಿ ಭಾರಿ ಡೇಟಾ ಸಂಗ್ರಹವಿದೆ. ಫೋನ್ ಲಾಕ್ ಮಾಡಲಾಗಿದೆ ಮತ್ತು ಅರ್ಜಿದಾರರು ತನಿಖೆಗೆ ಸಹಕರಿಸುತ್ತಿಲ್ಲ' ಎಂದು ರಾಜ್ಯ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ನ್ಯಾಯಪೀಠಕ್ಕೆ ದೂರಿದ್ದರು.

'ಶಿಕ್ಷಕನ ಬಳಿ ಇದ್ದ ಎಲ್ಲ ಮೊಬೈಲ್‌ಗಳೂ ಲಾಕ್ ಆಗಿವೆ. ಮೊಬೈಲ್‌ನ ಮೆಮೊರಿ ಕಾರ್ಡ್‌ನಲ್ಲಿರುವ ಚಿತ್ರಗಳನ್ನು ಎಫ್‌ಎಸ್‌ಎಲ್‌ಗೆ ಕಳುಹಿಸಲಾಗಿದ್ದು, ಅವು ಅರ್ಜಿದಾರರ ಮೇಲಿನ ಆರೋಪಗಳನ್ನು ದೃಢಪಡಿಸುತ್ತವೆ' ಎಂದು ಅವರ ಪರ ವಕೀಲರ ವಾದವನ್ನು ಬಲವಾಗಿ ಅಲ್ಲಗಳೆದಿದ್ದರು.



'ಪ್ರಕರಣಕ್ಕೆ ಸಂಬಂಧಿಸಿದಂತೆ ದೋಷಾರೋಪ ಪಟ್ಟಿ ಸಿದ್ಧವಾಗಿದ್ದು, ಯಾವುದೇ ಸಂದರ್ಭದಲ್ಲಾದರೂ ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಕೆಯಾಗಬಹುದು. ಆದ್ದರಿಂದ, ಅರ್ಜಿದಾರರ ವಿರುದ್ಧದ ಪ್ರಕರಣ ರದ್ದುಪಡಿಸಬಾರದು' ಎಂದು ಜಗದೀಶ್ ನ್ಯಾಯಪೀಠಕ್ಕೆ ಮನವಿ ಮಾಡಿದ್ದರು.

ಪ್ರಕರಣವೇನು?: 'ಶಾಲಾ ಬಾಲಕಿಯರು ಬಟ್ಟೆ ಬದಲಿಸುವ ಸಮಯದಲ್ಲಿ ಫೋಟೊ ಕ್ಲಿಕ್ಕಿಸಿದ ಹಾಗೂ ವಿಡಿಯೊ ಚಿತ್ರೀಕರಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಶಿಕ್ಷಕನ ವಿರುದ್ಧ ನಿಯಂತ್ರಣ ಕೊಠಡಿ ಮೂಲಕ ದೂರು ಸ್ವೀಕರಿಸಿದ್ದ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು 2023ರ ಡಿಸೆಂಬರ್ 15ರಂದು ದೂರು ದಾಖಲಿಸಿದ್ದರು. ಡಿಸೆಂಬರ್ 17ರಂದು ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಇದರನ್ವಯ ಕೋಲಾರ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ (ಪೋಕ್ಸೊ ವಿಶೇಷ ನ್ಯಾಯಾಲಯ) ನ್ಯಾಯಿಕ ವಿಚಾರಣೆ ಕೈಗೊಂಡಿತ್ತು.

ಆಕ್ಷೇಪ: 'ಎಫ್‌ಐಆರ್ ದಾಖಲಾಗುವ ಮುನ್ನ ಶಿಕ್ಷಕ ಯಾವುದೇ ತಪ್ಪು ಎಸಗಿರಲಿಲ್ಲ. 2023ರ ಡಿಸೆಂಬರ್ 15ರಂದು ನಿಯಂತ್ರಣ ಕೊಠಡಿ ಮೂಲಕ ದೂರು ಸ್ವೀಕರಿಸಿದ ನಂತರ ಜಂಟಿ ನಿರ್ದೇಶಕರು ಶಿಕ್ಷಕನ ಮೊಬೈಲ್ ಫೋನ್ ಜಪ್ತಿ ಮಾಡಿದ್ದರು. ನಂತರ ಎಫ್‌ಐಆರ್ ದಾಖಲಾಗಿದೆ. ಎಫ್‌ಐಆರ್ ದಾಖಲಾಗುವ ಮುನ್ನವೇ ತನಿಖೆ ಆರಂಭವಾಗಿದ್ದು, ಇದು ಕಾನೂನಿನ ಉಲ್ಲಂಘನೆ' ಎಂದು ಅರ್ಜಿದಾರರ ಪರ ವಾದ ಮಂಡಿಸಿದ್ದ ವಕೀಲರು ಆಕ್ಷೇಪಿಸಿದ್ದರು.

ರಾಹುಲ್- ಡಿಕೆಶಿ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಕುರ್ಚಿ ಮೇಲೆ ಕಣ್ಣಿಟ್ಟು ಕೆಲವು ಸಚಿವರು ಹೇಳಿಕೆಗಳನ್ನು ನೀಡುತ್ತಿರುವ ಮಧ್ಯೆಯೇ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅಮೆರಿಕದ ವಾಷಿಂಗ್ಟನ್ ಡಿಸಿಯಲ್ಲಿ ಭೇಟಿ ಮಾಡಿರುವುದು ಕಾಂಗ್ರೆಸ್ ವಲಯದಲ್ಲಿ ನಾನಾ ರೀತಿಯ ಚರ್ಚೆಗಳಿಗೆ ಕಾರಣವಾಗಿದೆ.

ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅನುಮತಿ ನೀಡಿರುವ ಪ್ರಕರಣದಲ್ಲಿ ಹೈಕೋರ್ಟ್ ನೀಡಲಿರುವ ತೀರ್ಪಿನ ಕಡೆಗೆ ಕಾಂಗ್ರೆಸ್ ನಾಯಕರ ಚಿತ್ತ ನೆಟ್ಟಿದೆ. ಈ ನಡುವೆ, 'ಮುಖ್ಯಮಂತ್ರಿ ಬದಲಾವಣೆ ಪ್ರಶ್ನೆಯೇ ಇಲ್ಲ' ಎನ್ನುತ್ತಲೇ ಕೆಲವು ಸಚಿವರು ಮುಖ್ಯಮಂತ್ರಿ ಪಟ್ಟದ ಮೇಲಿನ ತಮ್ಮ ಆಸೆ ವ್ಯಕ್ತಪಡಿಸುತ್ತಿರುವುದಕ್ಕೆ ಪಕ್ಷದ ನಾಯಕರಲ್ಲಿ ಭಿನ್ನ ಧ್ವನಿ ಕೇಳಿಸಿದೆ.

ರಾಹುಲ್ ಗಾಂಧಿ ಅವರು ಅಮೆರಿಕ ಪ್ರವಾಸದಲ್ಲಿರುವ ಸಂದರ್ಭದಲ್ಲೇ ಶಿವಕುಮಾರ್ ಕೂಡಾ ಅಮೆರಿಕ ಪ್ರವಾಸಕ್ಕೆ ತೆರಳಿರುವುದು ಕಾಂಗ್ರೆಸ್‌ನಲ್ಲೇ ಚರ್ಚೆ ಹುಟ್ಟು ಹಾಕಿತ್ತು. ಅದಕ್ಕೆ ಪೂರಕವೆಂಬಂತೆ ಇಬ್ಬರೂ ಅಲ್ಲಿನ ಹೋಟೆಲೊಂದರಲ್ಲಿ ಮುಖಾಮುಖಿ ಆಗಿದ್ದಾರೆ.



ರಾಹುಲ್ ಗಾಂಧಿ ಜೊತೆ ಡಿ.ಕೆ. ಶಿವಕುಮಾರ್ ಮತ್ತು ಉಷಾ ಶಿವಕುಮಾರ್

'ಅಮೆರಿಕ ಪ್ರವಾಸ ಖಾಸಗಿಯಾಗಿದ್ದು, ಕುಟುಂಬ ಸಮೇತ ಹೋಗುತ್ತಿದ್ದೇನೆ. ಅಲ್ಲಿ ಯಾವ ನಾಯಕರನ್ನೂ ನಾನು ಭೇಟಿ ಮಾಡುವುದಿಲ್ಲ' ಎಂದು ಶಿವಕುಮಾರ್ ಹೇಳಿದ್ದರು. ಆದರೆ, ರಾಹುಲ್ ಗಾಂಧಿಯನ್ನು ವಾಷಿಂಗ್ಟನ್ ಡಿಸಿಯಲ್ಲಿ ತಮ್ಮ ಪತ್ನಿ ಉಷಾ ಜೊತೆ ಭೇಟಿಯಾಗಿರುವ ಶಿವಕುಮಾರ್ ಕೆಲಹೊತ್ತು ಅನೌಪಚಾರಿಕವಾಗಿ ಚರ್ಚೆ ನಡೆಸಿದ್ದಾರೆ. ಇಬ್ಬರು ನಡುವಿನ ಮಾತುಕತೆ ಏನು ಎಂಬುದು ಬಹಿರಂಗವಾಗಿಲ್ಲ. ಹಾಗಿದ್ದರೂ ರಾಜ್ಯದ ರಾಜಕೀಯ ವಲಯದಲ್ಲಿ ಚರ್ಚೆ ಬಿರುಸುಗೊಂಡಿದೆ.

ದರ್ಶನ್‌ಗೆ 1 ಗಂಟೆ ಮಾತ್ರ ಓಡಾಡಲು ಅವಕಾಶ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿರುವ ಕೊಲೆ ಆರೋಪಿ, ನಟ ದರ್ಶನ್‌ಗೆ ದಿನಕ್ಕೆ ಒಂದು ಗಂಟೆ ಮಾತ್ರ ಕೊಠಡಿಯಿಂದ ಹೊರಬಂದು ಓಡಾಡಲು ಅವಕಾಶವಿದೆ.

'ಎಲ್ಲ ಕೈದಿಗಳಿಗೂ ಹಗಲಲ್ಲಿ ಜೈಲು ಆವರಣದಲ್ಲಿ ಓಡಾಡಲು ಮತ್ತು ಇತರ ಕೆಲಸದಲ್ಲಿ ತೊಡಗಲು ಅವಕಾಶವಿದೆ. ನಿಗದಿತ ಸಮಯಕ್ಕೆ ಎಲ್ಲರೂ ಲಾಕಪ್ ಸೇರಬೇಕು. ಆದರೆ, ವಿಶೇಷ ಭದ್ರತಾ ವಿಭಾಗದಲ್ಲಿ ಇರುವ ದರ್ಶನ್‌ಗೆ ಆ ಅವಕಾಶವಿಲ್ಲ. ಈ ವಿಭಾಗದಲ್ಲಿರುವ ಯಾರನ್ನೂ ಹೊರಗೆ ಬಿಡುವುದಿಲ್ಲ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಿನಪೂರ್ತಿ ಬಂದಿ ಆಗಿರಲು ಬೇಸರಗೊಂಡಿರುವ ದರ್ಶನ್, 'ಬೆಳಿಗ್ಗೆ ಮತ್ತು ಸಂಜೆ ಅರ್ಧ ಗಂಟೆ ಹೊರಗಿರಲು ಬಿಡಿ' ಎಂದು ಜೈಲು ಅಧಿಕಾರಿಗಳಿಗೆ ಕೋರಿದ್ದಾರೆಂದು ಗೊತ್ತಾಗಿದೆ. 'ದರ್ಶನ್ ಕೊಠಡಿಗೆ ಟಿ.ವಿ ವ್ಯವಸ್ಥೆ ಇನ್ನೂ ಆಗಿಲ್ಲ. ಹಳೆಯ ಟಿ.ವಿ ರಿಪೇರಿ ಆಗಿಲ್ಲ. ಹೊಸ ಟಿ.ವಿ ಕೊಡಲು ಅನುದಾನವಿಲ್ಲ. ಬೇಸರ ಕಳೆಯಲು ದರ್ಶನ್‌ಗೆ ಸಣ್ಣ ಕತೆಗಳು ಪುಸ್ತಕ, ಕೆಲ ಕಾದಂಬರಿಗಳನ್ನು ಕೊಡಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ದರ್ಶನ್ ಭೇಟಿಗೆ ಕುಟುಂಬ: 'ದರ್ಶನ್ ಪತ್ನಿ, ತಾಯಿ ಬುಧವಾರ ಭೇಟಿ ನೀಡುವ ನಿರೀಕ್ಷೆ ಇತ್ತು. ಆದರೆ, ಬರಲಿಲ್ಲ. ಗುರುವಾರ ಭೇಟಿಯಾಗುವ ಸಾಧ್ಯತೆಯಿದೆ.

'ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಬೇಕು'

ಮೈಸೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿರುವುದು ಒಳ್ಳೆಯ ಕೆಲಸ. ಪ್ರಾಧಿಕಾರ ಬೇಕೆಂದು ಬಿಜೆಪಿ ಸರ್ಕಾರ ವಿದ್ದಾಗಲೂ ಒತ್ತಾಯಿಸಿದ್ದೆವು' ಎಂದು ಮಾಜಿ ಸಂಸದ ಪ್ರತಾಪಸಿಂಹ ಹೇಳಿದರು.

ಪ್ರಾಧಿಕಾರ ರಚನೆಗೆ ರಾಜವಂಶಸ್ಥರು ವಿರೋಧ ಕುರಿತು ಬುಧವಾರ ಪ್ರತಿಕ್ರಿಯಿಸಿದ ಅವರು, 'ಸಿದ್ದರಾಮಯ್ಯ ಅವರನ್ನು ಸೈದ್ಧಾಂತಿಕವಾಗಿ ವಿರೋಧಿಸುತ್ತೇನೆಯೇ ಹೊರತು ಎಲ್ಲದ್ದರಲ್ಲೂ ಅಲ್ಲ. ಚಾಮುಂಡಿ ಬೆಟ್ಟದಲ್ಲಿ ಯದ್ವಾತದ್ವಾ ಬೆಳವಣಿಗೆ ನಿಯಂತ್ರಿಸಲು ಹಾಗೂ ನ್ಯೂನತೆ ಸರಿದೂಗಿಸಲು ಪ್ರಾಧಿಕಾರ ಅವಶ್ಯಕ' ಎಂದರು. 'ಬೆಟ್ಟಕ್ಕೆ ಪೊಲೀಸ್ ಠಾಣೆ ಹಾಗೂ ಆಸ್ಪತ್ರೆ ಬೇಕು. ಇದಕ್ಕಾಗಿ ಪ್ರಾಧಿಕಾರ ಬೇಕೇ ಬೇಕು. ಪ್ರಾಧಿಕಾರ ರಚಿಸಿರುವ ರಾಜ್ಯ ಸರ್ಕಾರದ ಕ್ರಮ ಸರಿಯಾಗಿದೆ. ಭಕ್ತರಿಗೆ ಸೌಲಭ್ಯ ಕಲ್ಪಿಸಬೇಕಾದ್ದು ಸರ್ಕಾರದ ಕರ್ತವ್ಯ' ಎಂದರು. 'ಅಮೃತ್ ಯೋಜನೆಯಡಿ ಬೆಟ್ಟಕ್ಕೆ ಕುಡಿಯುವ ನೀರು ತಲುಪದಿರಲು ಯಾರು ಕಾರಣ? ನಾನು ಹೇಳಿದರೆ ವಿವಾದ ಆಗಲಿದೆ.ಪೈಪ್‌ಲೈನ್ ಹಾಕಲು ಎಲ್ಲಿ ತಡೆಯಾಗಿದೆ ಎಂದು ಸಂಬಂಧಿಸಿದವರೇ ನೋಡಲಿ' ಎಂದರು.

ಕೇಂದ್ರ-ರಾಜ್ಯ ಸಂಬಂಧ: ನಾಗಮೋಹನ್‌ದಾಸ್ ಕಳವಳ

'ಒಕ್ಕೂಟ ವ್ಯವಸ್ಥೆಯಲ್ಲಿ ಕರ್ನಾಟಕ ಇರಬೇಕೇ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಿಂದ ಕೇಂದ್ರಕ್ಕೆ ಹೋಗುವ ಪ್ರತಿ ಒಂದು ರೂಪಾಯಿಯಲ್ಲಿ ವಾಪಸ್ ಬರುವುದು 15 ಪೈಸೆ ಮಾತ್ರ. ಇದು ಹೀಗೇ ಮುಂದುವರಿಯುವುದಾದರೆ, ಕರ್ನಾಟಕವು ಈ ಒಕ್ಕೂಟ ವ್ಯವಸ್ಥೆಯಲ್ಲಿ ಇರಬೇಕೇ ಎಂಬ ಪ್ರಶ್ನೆ ಹುಟ್ಟುತ್ತದೆ' ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ಹೇಳಿದರು.

ಸಮಾಜವಾದಿ ಅಧ್ಯಯನ ಕೇಂದ್ರವು ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ನೆನಪಿನಲ್ಲಿ ಬುಧವಾರ ಆಯೋಜಿಸಿದ್ದ 'ಕೇಂದ್ರ ಮತ್ತು ರಾಜ್ಯಗಳ ಸಂಬಂಧ' ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ಕೇಂದ್ರ ಮತ್ತು ರಾಜ್ಯಗಳ ಸಂಬಂಧ ಹೇಗಿರಬೇಕು ಎಂಬುದನ್ನು ಸಂವಿಧಾನ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಿ, ಅಧಿಕಾರವು ವಿಕೇಂದ್ರೀಕರಣದ ಸ್ವರೂಪದಲ್ಲಿ ಇರಬೇಕು ಎಂದು ನಿರ್ಧರಿಸಲಾಗಿತ್ತು. 1947ಕ್ಕೂ ಮುನ್ನ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಭಾರತವು ಒಂದೇ ರಾಜಕೀಯ ಆಡಳಿತದಲ್ಲಿ ಇರಲಿಲ್ಲ. ಸುಮಾರು 600 ಸಂಸ್ಥಾನಗಳನ್ನು ಒಗ್ಗೂಡಿಸಲು ಪ್ರಬಲ ಕೇಂದ್ರ ಸರ್ಕಾರದ ಅಗತ್ಯ ಇತ್ತು. ಹೀಗಾಗಿಯೇ ಕೇಂದ್ರ ಸರ್ಕಾರಕ್ಕೆ ಸಂವಿಧಾನವು ಹೆಚ್ಚಿನ ಅಧಿಕಾರ ಕೊಟ್ಟಿದೆ. ಆ ಅಧಿಕಾರ ಈಗ ದುರುಪಯೋಗವಾಗುತ್ತಿದೆ' ಎಂದರು.

'ಬಲಿಷ್ಠ ಕೇಂದ್ರ ಸರ್ಕಾರವು ಈಗ ದಮನಕಾರಿ ಮತ್ತು ಸರ್ವಾಧಿಕಾರಿ ಸರ್ಕಾರವಾಗಿ ಬದಲಾಗುತ್ತಿದೆ. ಅಧಿಕಾರವನ್ನು ಕೇಂದ್ರೀಕರಣ ಮಾಡುತ್ತಿದೆ. ಅದರ ಫಲವೇ ಆರ್ಥಿಕ ಕೇಂದ್ರೀಕರಣ. ರಾಜ್ಯಕ್ಕೆ ನ್ಯಾಯಯುತವಾಗಿ ಸಿಗಬೇಕಿರುವ ತೆರಿಗೆ ಪಾಲು ಸಿಗುತ್ತಿಲ್ಲ. ಈ ಅನ್ಯಾಯ ಮುಂದುವರಿಯುತ್ತಲೇ ಇದ್ದರೆ, ಈ ವ್ಯವಸ್ಥೆಯಲ್ಲಿ ಏಕೆ ಇರಬೇಕು ಎಂಬ ಪ್ರಶ್ನೆ ಎದುರಾಗುತ್ತದೆ' ಎಂದರು.



ವಿಚಾರ ಸಂಕಿರಣದಲ್ಲಿ ಲೇಖಕಿ ಬಿ.ಟಿ. ಲಲಿತಾ ನಾಯಕ್, ಸಾಹಿತಿ ಎಲ್.ಎನ್. ಮುಕುಂದರಾಜು, ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್, ಕವಿ ಎಲ್.ಹನುಮಂತಯ್ಯ, ಮುಖ್ಯಮಂತ್ರಿಗಳ ಸಲಹೆಗಾರ ಬಿ.ಆರ್. ಪಾಟೀಲ, ಸಿಪಿಐ ಮುಖಂಡ ಕೆ. ಪ್ರಕಾಶ್ ಮತ್ತು ಸಿದ್ದನಗೌಡ ಪಾಟೀಲ್ ಅವರು ರಾಮಕೃಷ್ಣ ಹೆಗಡೆ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ಕೇಂದ್ರ - ರಾಜ್ಯದ ಸಂಬಂಧದಲ್ಲಿ ರಾಜಕೀಯ ಹಿತಾಸಕ್ತಿ ಬಂದ ಕಾರಣದಿಂದಲೇ ಸಂಘರ್ಷ ಉಂಟಾಗುತ್ತಿದೆ. ಇದು ಕೇಂದ್ರಕ್ಕೂ, ರಾಜ್ಯಕ್ಕೂ ಒಳ್ಳೆಯದಲ್ಲ

ಬಿ.ಆರ್.ಪಾಟೀಲ, ಮುಖ್ಯಮಂತ್ರಿಯ ನೀತಿ ನಿರೂಪಣೆ ಸಲಹೆಗಾರ

ಕೇಂದ್ರ ಸರ್ಕಾರವು ರಾಜಭವನವನ್ನು ಯಾವ ಮಟ್ಟಿಗೆ ದುರ್ಬಳಕೆ ಮಾಡಿಕೊಳ್ಳುತ್ತಿದೆ ಅಂದರೆ, ರಾಜ್ಯಪಾಲರ ಹುದ್ದೆ ಅವಶ್ಯ ಇದೆಯೇ ಎಂದು ಪ್ರಶ್ನಿಸುವಂತಾಗಿದೆ

ಎಲ್.ಹನುಮಂತಯ್ಯ, ರಾಜ್ಯಸಭಾ ಮಾಜಿ ಸದಸ್ಯ

ಸೇನೆಯಲ್ಲಿ ಮದ್ರಾಸ್, ಅಸ್ಸಾಂ ರೆಜಿಮೆಂಟ್ ಎಂದೆಲ್ಲಾ ಇದೆ. ಕೇಂದ್ರದ ಜತೆ ಸಂಘರ್ಷವಾದರೆ, ನಮ್ಮನ್ನು ಕಾಪಾಡುವ ರೆಜಿಮೆಂಟ್ ಎಲ್ಲಿದೆ ಎಂದು ಯೋಚಿಸಬೇಕಾಗುತ್ತದೆ

ಎಲ್.ಎನ್.ಮುಕುಂದರಾಜ್, ಅಧ್ಯಕ್ಷ, ಕರ್ನಾಟಕ ಸಾಹಿತ್ಯ ಅಕಾಡೆಮಿ

'ವಿರೋಧ ಪಕ್ಷವೇ ಇರಬಾರದು ಎಂಬ ಮನಃಸ್ಥಿತಿಯಲ್ಲಿ ಈಗಿನ ಕೇಂದ್ರ ಸರ್ಕಾರ ಇದೆ. ಎಲ್ಲೆಡೆ ಡಬಲ್ ಎಂಜಿನ್ ಸರ್ಕಾರ ಇರಬೇಕು ಎನ್ನುತ್ತಿದೆ. ಇತರ ಪಕ್ಷಗಳ ಚುನಾಯಿತ ಸರ್ಕಾರವನ್ನು ಖರೀದಿಸುತ್ತಿದೆ. ವಿರೋಧ ಪಕ್ಷಗಳ ನಾಯಕರ ವಿರುದ್ಧ ಕೇಂದ್ರದ ತನಿಖಾ ಸಂಸ್ಥೆಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿದೆ. ಈ ಮೂಲಕ ರಾಜಕೀಯ ಕೇಂದ್ರೀಕರಣ ಮಾಡುತ್ತಿದೆ. ಇದು ಕರ್ನಾಟಕಕ್ಕೆ ಮಾತ್ರವಲ್ಲ, ದೇಶದ ಎಲ್ಲ ರಾಜ್ಯಗಳಿಗೂ ಎದುರಾಗಿರುವ ಗಂಡಾಂತರ. ಇದರ ವಿರುದ್ಧ ನಾವು ಎಚ್ಚೆತ್ತುಕೊಳ್ಳಬೇಕಿದೆ' ಎಂದರು.

ರಾಜ್ಯಸಭೆಯ ಮಾಜಿ ಸದಸ್ಯ ಎಲ್.ಹನುಮಂತಯ್ಯ ಮಾತನಾಡಿ, 'ಹಣಕಾಸು ಆಯೋಗವು ರಾಜ್ಯಕ್ಕೆ ನೀಡಿರುವ ತೆರಿಗೆ ಪಾಲೇ ಕಡಿಮೆ ಇದೆ. ಅದನ್ನೂ ಕೇಂದ್ರ ಸರ್ಕಾರ ಪೂರ್ಣ ಪ್ರಮಾಣದಲ್ಲಿ ಕೊಡುತ್ತಿಲ್ಲ. ತನಿಖಾ ಸಂಸ್ಥೆಗಳನ್ನು ದುರುಪಯೋಗ ಮಾಡಿ ಕೊಳ್ಳುತ್ತಿದೆ. ಇದನ್ನು ಪ್ರಶ್ನಿಸಿದವರನ್ನು, ಜಾಮೀನಿಗೆ ಅವಕಾಶವೇ ಇಲ್ಲದ ಯುಎಪಿಎ ಕಾಯ್ದೆ ಅಡಿ ಬಂಧಿಸುತ್ತಿದೆ. ಒಕ್ಕೂಟ ವ್ಯವಸ್ಥೆಯ ಎಲ್ಲ ನೀತಿಗಳನ್ನು ಮುರಿಯುತ್ತಿದೆ' ಎಂದರು.

ಪತ್ನಿ ಬದಲಿಗೆ ಸಿ.ಎಂ ಆಪ್ತನ ಸಹಿ


ನಿವೇಶನಗಳ ಖಾತೆ ರದ್ದತಿಗೆ ಒತ್ತಾಯ: ಮುಡಾಗೆ ದೂರು

• ಆರ್. ಜಿತೇಂದ್ರ

ಮೈಸೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ ಅವರು ಮುಡಾಕ್ಕೆ ಸಲ್ಲಿಸಿರುವ ಕೆಲವು ದಾಖಲೆಗಳಲ್ಲಿ ಅವರ ಬದಲಿಗೆ ಸಿದ್ದರಾಮಯ್ಯ ಆಪ್ತ ಸಹಾಯಕ ಎಸ್.ಜಿ.ದಿನೇಶ್ ಕುಮಾರ್ (ಸಿ.ಟಿ. ಕುಮಾರ್) ಸಹಿ ಇದೆ. ಇದು ಇಡೀ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರ ಪಾತ್ರ ಪುಷ್ಟೀಕರಿಸುವಂತೆ ಇದೆ' ಎಂದು ಆರೋಪಿಸಲಾಗಿದೆ.

ವಿಜಯನಗರ ಮೂರು ಹಾಗೂ ನಾಲ್ಕನೇ ಹಂತದ ವಿವಿಧೆಡೆ ತಮ್ಮ ಹೆಸರಿಗೆ ಮುಡಾದಿಂದ ಕ್ರಯಪತ್ರವಾಗಿರುವ 13 ನಿವೇಶನಗಳ ಖಾತೆ ನೋಂದಣಿ ಕೋರಿ ಪಾರ್ವತಿ ಅವರು 2022ರ ಜನವರಿ 14ರಂದು ಮುಡಾ ಆಯುಕ್ತರಿಗೆ ಪತ್ರ ಬರೆದಿದ್ದರು. ಆದರೆ ಈ ಪತ್ರದ ಕೊನೆಯಲ್ಲಿ ಅವರ ಸಹಿಯ ಜಾಗದಲ್ಲಿ ದಿನೇಶ್‌ಕುಮಾರ್ ಸಹಿ ಮಾಡಿದ್ದಾರೆ. ಅದನ್ನೇ ಮಾನ್ಯ ಮಾಡಿ ಮುಡಾ ಅಧಿಕಾರಿಗಳು ನಿವೇಶನಗಳ ಖಾತೆ ನೋಂದಣಿ ಮಾಡಿಕೊಟ್ಟಿದ್ದಾರೆ ಇದರ ದಾಖಲೆಗಳು 'ಪ್ರಜಾವಾಣಿ'ಗೆ ಲಭ್ಯವಾಗಿವೆ.

2014ರ ಜೂನ್ 23ರಂದು ಪಾರ್ವತಿ ಅವರು ಕೆಸರೆ ಗ್ರಾಮದ ಸರ್ವೆ ಸಂಖ್ಯೆ 464ರ ಜಮೀನಿಗೆ ಬದಲಿ ಜಮೀನು ಇಲ್ಲವೇ ನಿವೇಶನ ಕೋರಿ ಮುಡಾಕ್ಕೆ ಪತ್ರ ಬರೆದಿದ್ದರು. ಪ್ರತಿಯಾಗಿ ಮುಡಾ ಆಗಸ್ಟ್ 18ರಂದು ಪಾರ್ವತಿ ಅವರಿಗೆ ತಿಳಿವಳಿಕೆ ಪತ್ರ ಬರೆದು, ಬದಲಿ ನಿವೇಶನದ ಸಾಧ್ಯತೆ ಕುರಿತು ವಿವರಿಸಿತ್ತು. ಆ ಪತ್ರಕ್ಕೆ ಪಾರ್ವತಿ ಅವರ ಬದಲಿಗೆ ದಿನೇಶ್‌ಕುಮಾರ್ ಅವರು ಸ್ವೀಕೃತಿ ಸಹಿ ಮಾಡಿಕೊಟ್ಟಿದ್ದಾರೆ.



ದಿನಾಂಕ: 14.01.2022

ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರು ಮುಡಾಕ್ಕೆ ಬರೆದ ಪತ್ರದ ಕೊನೆಯಲ್ಲಿ ದಿನೇಶ್‌ಕುಮಾರ್ ಅವರ ಸಹಿ ಇದೆ

ದೂರು: 'ಮುಖ್ಯಮಂತ್ರಿ ಪತ್ನಿ ಬದಲಿಗೆ ಅವರ ಆಪ್ತ ಸಹಾಯಕ ಸಹಿ ಮಾಡಿರುವುದು ನಿಯಮಬಾಹಿರ. ಹೀಗಾಗಿ ಎಲ್ಲ ನಿವೇಶನಗಳ ಖಾತೆ ರದ್ದುಪಡಿಸಬೇಕು' ಎಂದು ಒತ್ತಾಯಿಸಿ ಮಾಹಿತಿ ಹಕ್ಕು ಕಾರ್ಯಕರ್ತ ಎನ್. ಗಂಗರಾಜು ಮುಡಾ ಆಯುಕ್ತರು ಹಾಗೂ ಕಾರ್ಯದರ್ಶಿಗೆ ಬುಧವಾರ ದೂರು ಸಲ್ಲಿಸಿದ್ದಾರೆ.

'ಮುಡಾದಿಂದ ನೀಡಲಾಗಿದ್ದ ತಿಳಿವಳಿಕೆ ಪತ್ರಕ್ಕೆ ಪಾರ್ವತಿ ಅವರ ಬದಲಿಗೆ ದಿನೇಶ್‌ಕುಮಾರ್ ಸ್ವೀಕೃತಿ ಸಹಿ ಮಾಡಿದ್ದಾರೆ. ಪ್ರಕರಣದ ಆರಂಭದಿಂದಲೂ ಇದನ್ನು ಸಿದ್ದರಾಮಯ್ಯ ಅವರ ಆಪ್ತ ಸಹಾಯಕನೇ ನಿರ್ವಹಿಸುತ್ತಿರುವುದಕ್ಕೆ ಇದೇ ಸಾಕ್ಷ್ಯವಾಗಿದೆ' ಎಂದು ಗಂಗರಾಜು ಹೇಳುತ್ತಾರೆ.

'2022ರಲ್ಲಿ ಪಾರ್ವತಿ ಅವರು ಬರೆದಿದ್ದ ಪತ್ರದಲ್ಲಿ ದಿನೇಶ್‌ಕುಮಾರ್ ಸಹಿ ಇದೆ. ಅರ್ಜಿದಾರ ಹೊರತುಪಡಿಸಿ ಉಳಿದವರಿಗೆ ಸಹಿ ಮಾಡಲು ಅವಕಾಶವಿಲ್ಲ. ಇದು ಗೊತ್ತಿದ್ದೂ ಅಧಿಕಾರಿಗಳು ನಿವೇಶನಗಳ ಖಾತೆ ಮಾಡಿದ್ದಾರೆ. 13 ನಿವೇಶನ ಮಂಜೂರಾಗಿದ್ದು, 14 ನಿವೇಶನಗಳನ್ನು ಖಾತೆ ಮಾಡಿಕೊಡಲಾಗಿದೆ.

'ವಿರೋಧ ಪಕ್ಷದ ನಾಯಕರಾಗಿ, ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅಧಿಕಾರ ದುರುಪಯೋಗಪಡಿಸಿಕೊಂಡಿರುವುದಕ್ಕೆ ಇದು ಸಾಕ್ಷ್ಯ. ಈ ಅಕ್ರಮಕ್ಕೆ ಸಹಕರಿಸಿದ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಬೇಕು. ಹೀಗಾಗಿ ಇಡೀ ಪ್ರಕರಣವನ್ನು ತನಿಖೆಗೆ ಒಳಪಡಿಸಬೇಕು' ಎಂದು ಒತ್ತಾಯಿಸುತ್ತಾರೆ.

ಗುರುವಾರ, ಸೆಪ್ಟೆಂಬರ್ 12, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 254 | ಪುಟ 16

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ

ವಿಮೆಗೆ ಜಿಎಸ್‌ಟಿ; ಇಳಿಯಲಿದೆಯೇ ಹೊರೆ?

ಆರ್.ಜಿ. ಕರ್ ಬಿಕ್ಕಟ್ಟು ತೀವ್ರ: ವೈದ್ಯರ ಷರತ್ತು ತಿರಸ್ಕರಿಸಿದ ಸರ್ಕಾರ 8

ಸೆಮಿಕಂಡಕ್ಟರ್: ₹1.5 ಲಕ್ಷ ಕೋಟಿ ಹೂಡಿಕೆ 12

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,523	24,918	₹74,170 (ಬೆಂಗಳೂರು)	₹84,900 (ಬೆಂಗಳೂರು)	83.99

ಉದ್ಯಮಿ ಅಪಹರಿಸಿ ₹1.5 ಕೋಟಿ ವಸೂಲಿ • 4 ಅಧಿಕಾರಿಗಳು ಹತ್ತು ದಿನ ಪೊಲೀಸ್ ಕಸ್ಟಡಿಗೆ

ಸುಲಿಗೆ: ಜಿಎಸ್‌ಟಿಯ ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೋಧದ ನೆಪದಲ್ಲಿ ಉದ್ಯಮಿಯೊಬ್ಬರ ಕಂಪನಿ ಮೇಲೆ ದಾಳಿ ನಡೆಸಿ, ₹1.5 ಕೋಟಿ ಸುಲಿಗೆ ಮಾಡಿದ್ದ ಆರೋಪದಡಿ ಕೇಂದ್ರ ಸರ್ಕಾರದ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಇಲಾಖೆಯ ಪ್ರಾದೇಶಿಕ ಕಚೇರಿಯ ಅಧೀಕ್ಷಕ ಸೇರಿದಂತೆ ನಾಲ್ವರು ಅಧಿಕಾರಿಗಳನ್ನು ಸಿಸಿಬಿ ಮತ್ತು ಪೂರ್ವ ವಿಭಾಗದ ಪೊಲೀಸ್ ತಂಡ ಜಂಟಿ ಕಾರ್ಯಾಚರಣೆ ನಡೆಸಿ ಬಂಧಿಸಿದೆ.

ಜೀವನ್ ಬಿಮಾನಗರದ ಜಿ.ಎಂ. ಪಾಳ್ಯದಲ್ಲಿ ನೆಲಸಿರುವ ಉದ್ಯಮಿ ಕೇಶವ್ ತಕ್ ನೀಡಿದ ದೂರಿನ ಮೇರೆಗೆ ಜಿಎಸ್‌ಟಿ ಗುಪ್ತಚರ ವಿಭಾಗದ ಮಹಾ ನಿರ್ದೇಶನಾಲಯದ ಬೆಂಗಳೂರು ಪ್ರಾದೇಶಿಕ ಕಚೇರಿ ವ್ಯಾಪ್ತಿಯ ದಕ್ಷಿಣ ವಲಯದ ಅಧೀಕ್ಷಕ ಅಭಿಷೇಕ್, ಹಿರಿಯ ಗುಪ್ತಚರ ಅಧಿಕಾರಿಗಳಾದ ಮನೋಜ್ ಸೈನಿ, ನಾಗೇಶ್ ಬಾಬು ಹಾಗೂ ಗುಪ್ತಚರ ಅಧಿಕಾರಿ ಸೋನಾಲಿ ಸಹಾಯ್ ಅವರನ್ನು ಮಂಗಳವಾರ ಬಂಧಿಸಲಾಗಿದೆ.

‘ಆರೋಪಿಗಳನ್ನು ಬುಧವಾರ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದ್ದು, ಹೆಚ್ಚಿನ ವಿಚಾರಣೆಗಾಗಿ ಹತ್ತು ದಿನ ಪೊಲೀಸ್ ವಶಕ್ಕೆ ಪಡೆಯಲಾಗಿದೆ. ಆರೋಪಿಗಳಿಂದ 32 ಮೊಬೈಲ್ ಫೋನ್, ಎರಡು ಲ್ಯಾಪ್‌ಟಾಪ್ ಹಾಗೂ 50 ಚೆಕ್ ಪುಸ್ತಕಗಳನ್ನು ಜಪ್ತಿ ಮಾಡಲಾಗಿದೆ. ಸುಲಿಗೆ ಮಾಡಿರುವ ಹಣದ ಪತ್ತೆ ಕಾರ್ಯ ಹಾಗೂ ಉದ್ಯಮಿ ಕೇಶವ್ ತಕ್ ಮನೆ ಮೇಲೆಯೇ ದಾಳಿ ನಡೆಸಲು ಕಾರಣವೇನು ಎಂಬುದರ ಬಗ್ಗೆ ತನಿಖೆ ಮುಂದುವರಿದಿದೆ’ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

‘ಆರೋಪಿಗಳು ಉದ್ದೇಶಪೂರ್ವಕವಾಗಿ ಉದ್ಯಮಿಯನ್ನು ಸುಲಿಗೆ ಮಾಡಲು ಬಂದಿದ್ದರು ಎಂಬುದು ಪ್ರಾಥಮಿಕ ತನಿಖೆ ವೇಳೆ ಗೊತ್ತಾಗಿದೆ. ಪ್ರಕರಣ ದಾಖಲಿಸಿದ್ದ ಬೈಯಪ್ಪನಹಳ್ಳಿ ಪೊಲೀಸರು ಮೊದಲು ಆರೋಪಿ ಅಭಿಷೇಕ್ ಅವರನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಿದಾಗ ಜಿಎಸ್‌ಟಿ ಅಧಿಕಾರಿ ಎಂಬುದು ಖಚಿತವಾಯಿತು. ಹೆಚ್ಚಿನ ತನಿಖೆಗಾಗಿ ಪ್ರಕರಣವನ್ನು ಸಿಸಿಬಿಗೆ ಹಸ್ತಾಂತರಿಸಲಾಯಿತು. ಅಭಿಷೇಕ್ ನೀಡಿದ ಮಾಹಿತಿ ಮೇರೆಗೆ ಸಿಸಿಬಿ ಅಧಿಕಾರಿಗಳ ತಂಡವು ಉಳಿದ ಮೂವರನ್ನು ಜಿಎಸ್‌ಟಿ ಕಚೇರಿಯಲ್ಲಿಯೇ ವಶಕ್ಕೆ ಪಡೆದು ಬಂಧಿಸಿತು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಇ.ಡಿ ಹೆಸರು ಬಳಕೆ: ‘ಬಂಧಿತ ನಾಲ್ವರು ಜಿಎಸ್‌ಟಿ ಮತ್ತು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಎಂದು ಹೇಳಿಕೊಂಡು ಆಗಸ್ಟ್ 30ರಂದು ನಮ್ಮ ಮನೆಗೆ ಬಂದಿದ್ದರು. ಮನೆಯಿಂದ ನನ್ನನ್ನು ಹಾಗೂ ಪವನ್ ತಕ್, ಮುಕೇಶ್ ಜೈನ್, ರಾಕೇಶ್ ಮನಕ್ ಚಂದನಿ ಎಂಬವರನ್ನು ಬಲವಂತವಾಗಿ ಕಾರಿನಲ್ಲಿ ಕರೆದುಕೊಂಡು ನಮ್ಮ ಕಂಪನಿ ಕಚೇರಿಗೆ ತೆರಳಿದ್ದರು. ಅಲ್ಲಿ ನಮ್ಮ ಮೇಲೆ ಹಲ್ಲೆ ನಡೆಸಿ ಪ್ರತ್ಯೇಕ ಕೊಠಡಿಯಲ್ಲಿ ಕೂಡಿಹಾಕಿದ್ದರು. ನಂತರ ಕಚೇರಿಯಿಂದ ಎಲ್ಲರನ್ನೂ ಇಂದಿರಾನಗರಕ್ಕೆ ಕಾರಿನಲ್ಲಿ ಕರೆದೊಯ್ದರು. ನಮ್ಮೆಲ್ಲರ ಮೊಬೈಲ್ ಫೋನ್‌ಗಳನ್ನು ಫ್ಲೈಟ್ ಮೋಡ್‌ಗೆ ಹಾಕಿಸಿದ್ದರು.

₹3 ಕೋಟಿ ಕೊಡುವಂತೆ ಆರೋಪಿಗಳು ಬೇಡಿಕೆ ಇಟ್ಟಿದ್ದರು. ಅವರ ಸೂಚನೆಯಂತೆ ರೋಷನ್ ಜೈನ್ ಎಂಬವರಿಗೆ ನಾನು ವಾಟ್ಸ್‌ಆ್ಯಪ್ ಕರೆ ಮಾಡಿ ₹3 ಕೋಟಿ ತರಲು ಹೇಳಿದ್ದೆ. ಹಣ ತರುವುದು ತಡವಾದ ಕಾರಣ ನನ್ನ ಮೇಲೆ ಪುನಃ ಹಲ್ಲೆ ನಡೆಸಿದ್ದರು. ಸೆಪ್ಟೆಂಬರ್ 1ರ ತಡರಾತ್ರಿ 2.30ರ ಸಮಯದಲ್ಲಿ ಮುಕೇಶ್ ಜೈನ್ ಎಂಬವರು ₹1.50 ಕೋಟಿ ತಂದು ಕೊಟ್ಟ ಬಳಿಕ ನಮ್ಮನ್ನು ಬಿಟ್ಟು ಕಳುಹಿಸಿದರು’ ಎಂದು ಕೇಶವ್ ತಕ್ ಅವರು ಬೈಯಪ್ಪನಹಳ್ಳಿ ಪೊಲೀಸ್ ಠಾಣೆಗೆ ನೀಡಿದ್ದ ದೂರಿನಲ್ಲಿ ಆರೋಪಿಸಿದ್ದರು.

‘ಉದ್ಯಮಿ ಮನೆ ಮೇಲೆ ದಾಳಿ ನಡೆಸಿರುವುದಕ್ಕೆ ನೋಟಿಸ್ ನೀಡಿರಲಿಲ್ಲ. ದೂರವಾಣಿ ಸಂಖ್ಯೆಯನ್ನೂ ನೀಡಿರಲಿಲ್ಲ. ಹಿರಿಯ ಅಧಿಕಾರಿಗಳಿಂದ ಅನುಮತಿ ಪಡೆಯದೆ ದಾಳಿ ನಡೆಸಲಾಗಿದೆ. ಹಣ ಸುಲಿಗೆ ಮಾಡುವ ಉದ್ದೇಶದಿಂದಲೇ ಈ ರೀತಿ ಕೃತ್ಯ ಎಸಗಲಾಗಿದೆ. ಉದ್ಯಮಿ ಬಗ್ಗೆ ಎಲ್ಲಾ ಮಾಹಿತಿ ತಿಳಿದುಕೊಂಡು ದಾಳಿ ನಡೆಸಿರುವ ಸಾಧ್ಯತೆ ಇದೆ’ ಎಂದು ಮೂಲಗಳು ತಿಳಿಸಿವೆ.

ದೂರಿನಲ್ಲೇನಿದೆ?: ‘ಜೀವನ್ ಬಿಮಾನಗರದಲ್ಲಿ ಮೆಕ್ರೊ ಸಲ್ಯೂಷನ್ ಎಂಬ ಖಾಸಗಿ ಕಂಪನಿಯನ್ನು ನಾನು ನಡೆಸುತ್ತಿದ್ದು, ನನ್ನ ಮನೆಗೆ ಆ. 31ರಂದು ಇ.ಡಿ ಹಾಗೂ ಜಿಎಸ್‌ಟಿ ಅಧಿಕಾರಿಗಳು ಎಂದು ಪರಿಚಯಿಸಿಕೊಂಡು ಆರೋಪಿಗಳು ಬಂದಿದ್ದರು. ಮೊಬೈಲ್ ಸೇರಿದಂತೆ ಇತರೆ ವಸ್ತುಗಳನ್ನು ವಶಪಡಿಸಿಕೊಂಡರು’ ಎಂದು ಕೇಶವ್ ತಕ್ ದೂರಿನಲ್ಲಿ ತಿಳಿಸಿದ್ದಾರೆ.

ಪೊಲೀಸರ ಕಣ್ತಪ್ಪಿಸಲು ಖಾಸಗಿ ಕಾರು

‘ಆರೋಪಿಗಳು ಕೃತ್ಯಕ್ಕೆ ಖಾಸಗಿ ಕಾರನ್ನು ಬಳಸಿದ್ದರು. ಆರಂಭದಲ್ಲಿ ಆರೋಪಿಗಳ ಬಗ್ಗೆ ಯಾವುದೇ ಸುಳಿವು ದೊರೆತಿರಲಿಲ್ಲ. 15 ಕಿ.ಮೀ. ವರೆಗೂ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಪರಿಶೀಲಿಸಿದಾಗ ಮನೆಯಿಂದ ಎರಡು ರಸ್ತೆ ಬಿಟ್ಟು ಕಾರು ನಿಲ್ಲಿಸಿ, ನಡೆದುಕೊಂಡೇ ಕೇಶವ್ ತಕ್ ಅವರ ಮನೆಗೆ ಆರೋಪಿಗಳು ಬಂದಿರುವುದು ಗೊತ್ತಾಯಿತು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಾವಳಿಯಲ್ಲಿ ಕಾರಿನ ನೋಂದಣಿ ಸಂಖ್ಯೆ ಪತ್ತೆಹಚ್ಚಿ, ಮಾಲೀಕನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಜಿಎಸ್‌ಟಿ ಅಧಿಕಾರಿ ಅಭಿಷೇಕ್ ಕಾರನ್ನು ಕೊಂಡೊಯ್ದಿದ್ದ ಮಾಹಿತಿ ವಾಹನ ಮಾಲೀಕನಿಂದ ಲಭಿಸಿತು. ಅದೇ ಸುಳಿವು ಆಧರಿಸಿ ಪ್ರಮುಖ ಆರೋಪಿಯನ್ನು ಬಂಧಿಸಲಾಯಿತು ಎಂದು ಮೂಲಗಳು ತಿಳಿಸಿವೆ.

‘ಪೊಲೀಸರಿಗೆ ಸುಳಿವು ಸಿಗಬಾರದು ಎಂಬ ತಂತ್ರ ರೂಪಿಸಿದ್ದ ಆರೋಪಿಗಳು, ಕೃತ್ಯದ ಸಂದರ್ಭದಲ್ಲಿ ಮೊಬೈಲ್‌ಗಳನ್ನು ಫ್ಲೈಟ್ ಮೋಡ್‌ನಲ್ಲಿ ಇರಿಸಿಕೊಂಡಿದ್ದರು. ಆ ಸಮಯದಲ್ಲಿ ನಾಲ್ವರ ಮೊಬೈಲ್ ಫೋನ್‌ಗಳು ಸ್ವಿಚ್ ಆಫ್ ಇದ್ದವು ಎಂಬುದು ಕರೆ ವಿವರಗಳ (ಸಿಡಿಆರ್) ಮಾಹಿತಿ ಸಂಗ್ರಹಿಸಿದಾಗ ಖಚಿತವಾಯಿತು’ ಎಂದು ಮೂಲಗಳು ಹೇಳಿವೆ.

‘ಶೋಧನೆಗೆ ಅನುಮತಿಯೇ ಇರಲಿಲ್ಲ’

ಅಭಿಷೇಕ್ ಬಂಧನದ ಬಳಿಕ ಉಳಿದ ಮೂವರನ್ನು ವಶಕ್ಕೆ ಪಡೆಯಲು ಜಿಎಸ್‌ಟಿ ವಲಯ ಕಚೇರಿಗೆ ತೆರಳಿದ್ದ ಸಿಸಿಬಿಯ ಪೊಲೀಸ್ ಅಧಿಕಾರಿಗಳು, ಅಲ್ಲಿನ ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡಿ ಪ್ರಕರಣದ ಕುರಿತು ಚರ್ಚಿಸಿದ್ದರು. ಕೇಶವ್ ತಕ್ ಕಂಪನಿ ಕಚೇರಿ ಅಥವಾ ಮನೆಯಲ್ಲಿ ಶೋಧಕ್ಕೆ ಅನುಮತಿ ನೀಡಿರಲಿಲ್ಲ ಎಂದು ಖಚಿತಪಡಿಸಿದ್ದ ಜಿಎಸ್‌ಟಿ ಅಧಿಕಾರಿಗಳು, ಆರೋಪಿಗಳನ್ನು ಬಂಧಿಸಿ ಕರೆದೊಯ್ಯುವಂತೆ ಹೇಳಿದ್ದರು ಎಂದೂ ಮೂಲಗಳು ತಿಳಿಸಿವೆ.



ಗೌರವ ಸಮರ್ಪಣೆ ಅರಣ್ಯ ಇಲಾಖೆ ಬೆಂಗಳೂರಿನಲ್ಲಿ ಬುಧವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ ಕಾರ್ಯಕ್ರಮದಲ್ಲಿ ಅರಣ್ಯ ಹುತಾತ್ಮರಿಗೆ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆ ಗೌರವ ಸಲ್ಲಿಸಿತು -ಪ್ರಜಾವಾಣಿ ಚಿತ್ರ

ಹಿರಿಯರಿಗೂ ‘ಆಯುಷ್ಮಾನ್ ಭಾರತ’


ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ‘ಆಯುಷ್ಮಾನ್ ಭಾರತ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ’ಯ ಅಡಿಯಲ್ಲಿ ಆರೋಗ್ಯ ವಿಮಾ ಸೌಲಭ್ಯವನ್ನು 70 ವರ್ಷ ಹಾಗೂ ಅದಕ್ಕಿಂತ ಹೆಚ್ಚು ವಯಸ್ಸಾದ ಎಲ್ಲರಿಗೂ ವಿಸ್ತರಿಸಲು ಕೇಂದ್ರ ಸಚಿವ ಸಂಪುಟ ಬುಧವಾರ ತೀರ್ಮಾನಿಸಿದೆ.

ಈ ತೀರ್ಮಾನದಿಂದಾಗಿ ನಾಲ್ಕೂವರೆ ಕೋಟಿ ಕುಟುಂಬಗಳಿಗೆ ಅನುಕೂಲ ಆಗಲಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ. ಹಿರಿಯ ನಾಗರಿಕರ ಆದಾಯ ಎಷ್ಟೇ ಇದ್ದರೂ ಅವರು ಈ ಯೋಜನೆಯ ಪ್ರಯೋಜನ ಪಡೆಯಲು ಅರ್ಹರಾಗಿರುತ್ತಾರೆ.

ಈ ಯೋಜನೆಯ ಅಡಿಯಲ್ಲಿ 4.5 ಕೋಟಿ ಕುಟುಂಬಗಳ ಒಟ್ಟು ಆರು ಕೋಟಿ ಹಿರಿಯ ನಾಗರಿಕರು ₹5 ಲಕ್ಷ ಮೌಲ್ಯದ ಉಚಿತ ಆರೋಗ್ಯ ವಿಮೆಗೆ ಅರ್ಹರಾಗುತ್ತಾರೆ.

ಈ ಯೋಜನೆಯ ವ್ಯಾಪ್ತಿಗೆ ಈಗಾಗಲೇ ಬಂದಿರುವ ಕುಟುಂಬಗಳ ಹಿರಿಯ ನಾಗರಿಕರಿಗೆ ಹೆಚ್ಚುವರಿಯಾಗಿ ₹5 ಲಕ್ಷದ ವಿಮಾ ರಕ್ಷೆ ಸಿಗಲಿದೆ. ಈ ವಿಮಾ ಮೊತ್ತವನ್ನು ಹಿರಿಯ ನಾಗರಿಕರು ತಮ್ಮ ಕುಟುಂಬದ ಇತರರ ಜೊತೆ ಹಂಚಿಕೊಳ್ಳಬೇಕಿಲ್ಲ.



ಒಂದೇ ಕುಟುಂಬದಲ್ಲಿ 70 ವರ್ಷಕ್ಕಿಂತ ಹೆಚ್ಚು ವಯಸ್ಸಾದವರು ಇಬ್ಬರಿದ್ದರೆ, ₹5 ಲಕ್ಷವನ್ನು ಅವರಿಬ್ಬರ ನಡುವೆ ಹಂಚಲಾಗುತ್ತದೆ. ಕೇಂದ್ರ ಸರ್ಕಾರದ ಆರೋಗ್ಯ ಯೋಜನೆ (ಸಿಜಿಎಚ್‌ಎಸ್), ನಿವೃತ್ತ ಯೋಧರ ಆರೋಗ್ಯ ಯೋಜನೆ (ಇಸಿಎಚ್‌ಎಸ್), ಆಯುಷ್ಮಾನ್ ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆ ಯೋಜನೆ ಅಥವಾ ಇತರ ಸರ್ಕಾರಿ ಯೋಜನೆಗಳ ಫಲಾನುಭವಿಗಳು ತಾವು ಈಗ ಇರುವ ಯೋಜನೆಯಲ್ಲೇ ಮುಂದುವರಿಯಬಹುದು ಅಥವಾ ಆಯುಷ್ಮಾನ್ ಭಾರತ್ ಯೋಜನೆಗೆ ಸೇರ್ಪಡೆ ಆಗಬಹುದು.

ಖಾಸಗಿ ವಿಮಾ ಪಾಲಿಸಿ ಅಥವಾ ನೌಕರರ ರಾಜ್ಯ ವಿಮೆ ಪಡೆದಿರುವ ಹಿರಿಯ ನಾಗರಿಕರು ಕೂಡ ಆಯುಷ್ಮಾನ್ ಭಾರತ್ ಯೋಜನೆಯ ಪ್ರಯೋಜನ ಪಡೆಯಬಹುದು. ಅವರಿಗೆ ಇದು ಹೆಚ್ಚುವರಿ ವಿಮಾ ರಕ್ಷೆಯಾಗಿ ಒದಗಿಬರಲಿದೆ ಎಂದು ವೈಷ್ಣವ್ ತಿಳಿಸಿದರು.

ಸರ್ಕಾರದ ವಿರುದ್ಧ ಬಳ್ಳಾರಿಗೆ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣವನ್ನು ಖಂಡಿಸಿ ರಾಜ್ಯ ಸರ್ಕಾರದ ವಿರುದ್ಧ ಜನಾಂದೋಲನ ರೂಪಿಸಲು ಉತ್ತರ ಕರ್ನಾಟಕ ಭಾಗದಲ್ಲಿ ಪಾದಯಾತ್ರೆ ನಡೆಸಲು ಪಕ್ಷ ಉದ್ದೇಶಿಸಿದ್ದು, ವರಿಷ್ಠರು ಇದಕ್ಕೆ ಅನುಮತಿ ನೀಡಿದ್ದಾರೆ’ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.



ನಾರಾಯಣಸ್ವಾಮಿ

ಬುಧವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ‘ಬಳ್ಳಾರಿಗೆ ಪಾದಯಾತ್ರೆ ನಡೆಸಲಾಗುವುದು. ಎಲ್ಲಿಂದ ಮತ್ತು ಯಾವಾಗ ಎಂಬುದನ್ನು ಅಧ್ಯಕ್ಷರು ಮತ್ತು ಇತರ ನಾಯಕರು ಸೇರಿ ತೀರ್ಮಾನಿಸುತ್ತಾರೆ. ಬಹುತೇಕ ಮುಂದಿನ ತಿಂಗಳ ಕೊನೆಯ ವೇಳೆಗೆ ನಡೆಯುವ ಸಾಧ್ಯತೆ ಇದೆ. ಒಟ್ಟು ಎರಡು ಹಂತಗಳಲ್ಲಿ ಹೋರಾಟ ನಡೆಸಲಾಗುವುದು’ ಎಂದು ತಿಳಿಸಿದರು.

5ನೇ ಪುಟ ನೋಡಿ

ಸಚಿವರೆಲ್ಲ ನನ್ನ ಬೆಂಬಲಕ್ಕೆ: ಸಿದ್ದರಾಮಯ್ಯ ಸ್ಪಷ್ಟ ನುಡಿ

‘ಸಂಶಯವೇಕೆ, ಸಿ.ಎಂ ಆಗಿ ನಾನೇ ಮುಂದುವರಿಯುವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿಯಾಗಿ ನಾನೇ ಮುಂದುವರಿಯುವುದರಲ್ಲಿ ಯಾವುದೇ ಸಂಶಯವಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಅರಣ್ಯ ಇಲಾಖೆ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ ಕಾರ್ಯಕ್ರಮದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸ್ಥಾನದ ವಿಚಾರವಾಗಿ ಸಚಿವರು ನೀಡುತ್ತಿರುವ ಹೇಳಿಕೆಗಳಿಗೆ ಸ್ಪಷ್ಟನೆ ನೀಡಿದರು.

‘ಸಿದ್ದರಾಮಯ್ಯನವರೇ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ ಎಂದು ಸಚಿವರು ಹೇಳುತ್ತಿದ್ದಾರೆ. ನಾನೇ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತೇನೆ. ಮುಖ್ಯಮಂತ್ರಿ ಸ್ಥಾನ ಖಾಲಿಯಿಲ್ಲ. ಆದ್ದರಿಂದ ಆ ಕುರಿತ ಚರ್ಚೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ’ ಎಂದು ಹೇಳಿದರು.

‘ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದ ಅವಧಿಯಲ್ಲಿ 21 ಹಗರಣಗಳು ನಡೆದಿವೆ. ಈ ಎಲ್ಲ ಹಗರಣಗಳ ತನಿಖೆಗೆ ತ್ವರಿತವಾಗಿ ಚಾಲನೆ ನೀಡಲು ಹಾಗೂ ಈ ಬಗ್ಗೆ ತೆಗೆದುಕೊಳ್ಳಬೇಕಾದ ಮುಂದಿನ ಕ್ರಮಗಳ ಬಗ್ಗೆ ಸಲಹೆ ನೀಡಲು ಸಂಪುಟ ಉಪಸಮಿತಿ ರಚಿಸಲಾಗಿದೆ. ಗೃಹ ಸಚಿವ ಜಿ. ಪರಮೇಶ್ವರ ಅವರ ಅಧ್ಯಕ್ಷತೆಯ ಸಮಿತಿಗೆ ವರದಿ ನೀಡಲು ಒಂದರಿಂದ ಎರಡು ತಿಂಗಳು ಕಾಲಾವಕಾಶ ನೀಡಲಾಗಿದೆ. ನಾವು ದ್ವೇಷದ ರಾಜಕಾರಣ ಮಾಡುವುದಿಲ್ಲ. ತಪ್ಪು ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳುವ ಕೆಲಸವನ್ನು ಮಾಡುತ್ತೇವೆ’ ಎಂದರು.

‘ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿಯಲ್ಲಿನ ಹಗರಣ, ಶೇ 40ರಷ್ಟು ಕಮಿಷನ್ ಹಗರಣ, ಕೋವಿಡ್ 19, ಬಿಟ್ ಕಾಯಿನ್ ಹಗರಣಗಳ ತನಿಖೆಗೆ ಮಾತ್ರ ಆಯೋಗಗಳನ್ನು ರಚಿಸಲಾಗಿದೆ. ಅದರಲ್ಲಿ ಕೋವಿಡ್–19 ಅವ್ಯವಹಾರದ ಬಗ್ಗೆ ತನಿಖಾ ಆಯೋಗ ಪ್ರಾಥಮಿಕ ವರದಿಯನ್ನು ನೀಡಿದೆ. ಅಧಿಕಾರಿಗಳ ಪರಿಶೀಲನೆಯ ನಂತರ ಈ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಳ್ಳಲಾಗುವುದು’ ಎಂದು ಹೇಳಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಪ್ರಕರಣದ ಬಗ್ಗೆ ಎಸ್‌ಐಟಿ ಅಧಿಕಾರಿಗಳೂ ತನಿಖೆ ಮಾಡಿ ಆರೋಪಪಟ್ಟಿ ಸಲ್ಲಿಸಿದ್ದಾರೆ. ಈ ಬಗ್ಗೆ ನ್ಯಾಯಾಲಯ ತೀರ್ಮಾನ ಕೈಗೊಳ್ಳಲಿದೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಮೌನ ಮುರಿದು ಚರ್ಚೆಗೆ ತೆರೆ

ಮುಖ್ಯಮಂತ್ರಿ ಪಟ್ಟದ ಕುರಿತು ಕಾಂಗ್ರೆಸ್ ಪಕ್ಷದಲ್ಲಿ ಹಲವು ದಿನಗಳಿಂದ ಚರ್ಚೆ ಆರಂಭವಾಗಿತ್ತು. ಶಾಸಕ ಆರ್.ವಿ. ದೇಶಪಾಂಡೆ ಅವರು ತಾವೂ ಮುಖ್ಯಮಂತ್ರಿ ಆಕಾಂಕ್ಷಿ ಎಂದು ಹೇಳಿದ್ದರಿಂದಾಗಿ, ಅನೇಕ ಸಚಿವರು, ಶಾಸಕರು ತಮ್ಮ ಆಕಾಂಕ್ಷೆಯನ್ನು ಹೊರಹಾಕಿದ್ದರು. ‘ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ; ಸಿದ್ದರಾಮಯ್ಯ ಅವಧಿ ಪೂರೈಸುವುದರಲ್ಲಿ ಅನುಮಾನವೂ ಇಲ್ಲ’ ಎಂದು ಹಲವು ಸಚಿವರು ಹೇಳಿಕೆ ನೀಡಿದ್ದರು. ಇಲ್ಲಿಯವರೆಗೆ ಈ ಬಗ್ಗೆ ಪ್ರತಿಕ್ರಿಯೆ ಸದೇ ಇದ್ದ ಸಿದ್ದರಾಮಯ್ಯ, ಇದೇ ಮೊದಲ ಬಾರಿಗೆ ‘ನಾನೇ ಮುಂದುವರಿಯುವೆ’ ಎಂದು ಸ್ಪಷ್ಟನೆ ನೀಡಿದ್ದಾರೆ.

‘ಸಿ.ಎಂ ಸ್ಥಾನಕ್ಕೆ ಸಡ್ಡು’

ದಾವಣಗೆರೆ: ‘ಸಿದ್ದರಾಮಯ್ಯ ಉತ್ತಮ ಆಡಳಿತ ನಡೆಸುತ್ತಿದ್ದಾರೆ. ಒಂದು ವೇಳೆ ಅವರನ್ನು ಬದಲಾವಣೆ ಮಾಡುವ ಪ್ರಸಂಗ ಉದ್ಭವಿಸಿದರೆ ನಾವು (ಲಿಂಗಾಯತರು) ಸಡ್ಡು ಹೊಡೆಯುತ್ತೇವೆ. ಸಿ.ಎಂ ಸ್ಥಾನಕ್ಕೆ ನಾನೂ ಸ್ಪರ್ಧೆ ಮಾಡುವೆ’ ಎಂದು ಶಾಸಕ ಶಾಮನೂರು ಶಿವಶಂಕರಪ್ಪ ತಿಳಿಸಿದರು.

‘ಸದ್ಯ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ. ಸಿದ್ದರಾಮಯ್ಯ ಅವರ ಅಧಿಕಾರಾವಧಿ ಮುಗಿದ ಬಳಿಕ, ಹೈಕಮಾಂಡ್, ಪಕ್ಷದ ಶಾಸಕರು ಯಾರ ಬಗ್ಗೆ ಒಲವು ತೋರುತ್ತಾರೋ ಅವರಿಗೆ ಅದೃಷ್ಟ ಒಲಿಯುತ್ತದೆ. ಅವಕಾಶ ಸಿಕ್ಕರೆ ಲಿಂಗಾಯತರು ಸಿದ್ಧರಿದ್ದೇವೆ’ ಎಂದರು.

ಮೀಸಲಾತಿ ನೀತಿ ರದ್ದು ಅಸಾಧ್ಯ: ಶಾ

ರಾಹುಲ್ ಆಡಿರುವ ಮಾತುಗಳು ನಾಚಿಕೆಗೇಡಿನವು: ಸಚಿವ ರಾಜನಾಥ ಸಿಂಗ್

ನವದೆಹಲಿ (ಪಿಟಿಐ): ಬಿಜೆಪಿ ಇರುವವರೆಗೆ ಮೀಸಲಾತಿ ನೀತಿಯನ್ನು ರದ್ದುಗೊಳಿಸಲು ಅಥವಾ ದೇಶದ ಭದ್ರತೆಯ ಜೊತೆ ಆಟವಾಡಲು ಯಾರಿಂದಲೂ ಸಾಧ್ಯವಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬುಧವಾರ ಹೇಳಿದ್ದಾರೆ.



ಅಮಿತ್ ಶಾ

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮೀಸಲಾತಿ ಕುರಿತು ಅಮೆರಿಕದಲ್ಲಿ ಆಡಿರುವ ಮಾತುಗಳು ಕಾಂಗ್ರೆಸ್ ಪಕ್ಷದ ಮೀಸಲಾತಿ ವಿರೋಧಿ ಮುಖವನ್ನು ಅನಾವರಣ ಮಾಡಿವೆ. ಅಲ್ಲದೆ, ರಾಷ್ಟ್ರ ವಿರೋಧಿ ಹೇಳಿಕೆಗಳನ್ನು ನೀಡುವುದು ರಾಹುಲ್ ಮತ್ತು ಅವರ ಪಕ್ಷಕ್ಕೆ ಅಭ್ಯಾಸವಾಗಿಬಿಟ್ಟಿದೆ ಎಂದು ಟೀಕಿಸಿದ್ದಾರೆ.


ಜಮ್ಮು ಮತ್ತು ಕಾಶ್ಮೀರದಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಮೀಸಲಾತಿ ವಿರೋಧಿ ಹಾಗೂ ರಾಷ್ಟ್ರವಿರೋಧಿ ಕಾರ್ಯಸೂಚಿಯನ್ನು ಬೆಂಬಲಿಸುವುದಿರಬಹುದು ಅಥವಾ ವಿದೇಶದ ವೇದಿಕೆಗಳಲ್ಲಿ ಭಾರತ ವಿರೋಧಿ ಹೇಳಿಕೆಗಳನ್ನು ನೀಡುವುದಿರಬಹುದು, ರಾಹುಲ್ ಅವರು ದೇಶದ ಭದ್ರತೆಗೆ ಯಾವಾಗಲೂ ಬೆದರಿಕೆ ಒಡ್ಡಿದ್ದಾರೆ ಮತ್ತು ಭಾವನೆಗಳನ್ನು ಗಾಸಿಗೊಳಿಸುವ ಕೆಲಸ ಮಾಡಿದ್ದಾರೆ ಎಂದು ಶಾ ಅವರು ‘ಎಕ್ಸ್’ನಲ್ಲಿ ಬರೆದಿದ್ದಾರೆ.

ರಾಹುಲ್ ಗಾಂಧಿ ಅವರು ಅಮೆರಿಕದಲ್ಲಿ ಭಾರತದ ಬಗ್ಗೆ ‘ತಪ್ಪುದಾರಿಗೆ ಎಳೆಯುವಂತಹ, ಆಧಾರವಿಲ್ಲದ ಹಾಗೂ ಸತ್ಯವಲ್ಲದ’ ಮಾತುಗಳನ್ನು ಆಡುತ್ತಿರುವುದು ಹಾಗೂ ಆ ಮೂಲಕ ಅವರು ಭಾರತದ ಘನತೆಯನ್ನು ಹಾಳು ಮಾಡುತ್ತಿರುವುದು ತೀರಾ ನಾಚಿಕೆಗೇಡಿನ ಸಂಗತಿ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಹುಲ್ ಹೇಳಿದ್ದು

ಭಾರತದಲ್ಲಿ ಎಲ್ಲರಿಗೂ ಸಮಾನ ಅವಕಾಶಗಳು ಸಿಗುವ ಸ್ಥಿತಿ ಮೂಡಿದಾಗ ಮೀಸಲಾತಿಯನ್ನು ತೆಗೆದುಹಾಕುವ ಬಗ್ಗೆ ಕಾಂಗ್ರೆಸ್ ಪಕ್ಷವು ಆಲೋಚಿಸಲಿದೆ ಎಂದು ರಾಹುಲ್ ಗಾಂಧಿ ಹೇಳಿದ್ದರು. ಈಗ ಸಮಾನತೆಯ ಪರಿಸ್ಥಿತಿ ಇಲ್ಲ ಎಂದೂ ಹೇಳಿದ್ದರು.


ಜಾರ್ಜ್‌ಟೌನ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಜೊತೆಗಿನ ಸಂವಾದದಲ್ಲಿ, ಮೀಸಲಾತಿಯು ಎಷ್ಟು ಕಾಲ ಮುಂದುವರಿಯಲಿದೆ ಎಂಬ ಪ್ರಶ್ನೆಗೆ ಉತ್ತರವಾಗಿ ಅವರು ಈ ಮಾತು ಹೇಳಿದ್ದರು.



‘ಮೀಸಲಾತಿ ಮಿತಿ ಶೇ 50ಕ್ಕಿಂತ ಹೆಚ್ಚಿಸುವುದು ನಮ್ಮ ಉದ್ದೇಶ’

ವಾಷಿಂಗ್ಟನ್: ‘ನಾನು ಮೀಸಲಾತಿ ವಿರೋಧಿ ಅಲ್ಲ. ಮೀಸಲಾತಿ ಮಿತಿ ಈಗ ಶೇ 50ರಷ್ಟಿದ್ದು, ಈ ಮಿತಿಯನ್ನು ಹೆಚ್ಚಿಸುವುದು ಕಾಂಗ್ರೆಸ್‌ನ ಉದ್ದೇಶ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬುಧವಾರ ಸ್ಪಷ್ಟೀಕರಣ ನೀಡಿದ್ದಾರೆ.

ಇಲ್ಲಿನ ನ್ಯಾಷನಲ್ ಪ್ರೆಸ್ ಕ್ಲಬ್‌ನಲ್ಲಿ ನಡೆದ ಸಂದರ್ಶನದಲ್ಲಿ ಅವರು ಈ ಮಾತು ಹೇಳಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ. ‘ಮೀಸಲಾತಿ ಕುರಿತಂತೆ ನಾನು ನೀಡಿದ ಹೇಳಿಕೆಯನ್ನು ಕೆಲವರು ತಪ್ಪಾಗಿ ಅರ್ಥೈಸಿದ್ದಾರೆ’ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.



ಒಂದೇ ತಿಂಗಳಲ್ಲಿ ಎರಡು ಸಲ ವರ್ಗಾವಣೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಒಂದೇ ತಿಂಗಳಲ್ಲಿ ಎರಡು ಪ್ರತ್ಯೇಕ ವರ್ಗಾವಣೆ ನಡೆಸಲು ನಿರ್ಧರಿಸಿರುವ ಕಾಲೇಜು ಶಿಕ್ಷಣ ಇಲಾಖೆ ನಡೆಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಧ್ಯಾಪಕರು ಆಕ್ಷೇಪಿಸಿದ್ದಾರೆ.

ಪ್ರತಿ ವರ್ಷದಂತೆ ಸಾಮಾನ್ಯ ವರ್ಗಾವಣೆ ಪ್ರಕ್ರಿಯೆ ಈಗಾಗಲೇ ಆರಂಭವಾಗಿದ್ದು, ಸೆ. 17ರಿಂದ ಸ್ಥಳ ಆಯ್ಕೆಗೆ ಕೌನ್ಸೆಲಿಂಗ್ ನಡೆಯಲಿದೆ. ಸಾಮಾನ್ಯ ವರ್ಗಾವಣೆಯ ಪ್ರಕ್ರಿಯೆ ಮುಗಿದ ತಕ್ಷಣ ಇದೇ ತಿಂಗಳ ಕೊನೆಗೆ ವಿಶೇಷ ವರ್ಗಾವಣೆ ಪ್ರಕ್ರಿಯೆಗಳು ಆರಂಭವಾಗಲಿವೆ. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಆಯ್ಕೆಯಾಗಿರುವ 1,242 ಸಹಾಯಕ ಪ್ರಾಧ್ಯಾಪಕರನ್ನು ಹೋಬಳಿ ಹಾಗೂ ತಾಲ್ಲೂಕು ಕೇಂದ್ರಗಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸ್ಥಳ ನಿಯುಕ್ತಿ ಮಾಡಲು, ಈಗಾಗಲೇ ಆ ಸ್ಥಳಗಳಲ್ಲಿ ಕೆಲಸ ಮಾಡುತ್ತಿರುವ ಪ್ರಾಧ್ಯಾಪಕರನ್ನು ವಿಶೇಷ ವರ್ಗಾವಣೆ ಮೂಲಕ ಎತ್ತಂಗಡಿ ಮಾಡಲಾಗುತ್ತಿದೆ.

ಹೊಸಬರಿಗೆ ಗ್ರಾಮೀಣ ಸೇವೆ ಕಡ್ಡಾಯ, ಅತಿಥಿ ಉಪನ್ಯಾಸಕರ ಸೇವಾ ಭದ್ರತೆ ಅಂಶಗಳಿಗೆ ಒತ್ತು ನೀಡಿ ವಿಶೇಷ ವರ್ಗಾವಣೆ ನಡೆಸಲಾಗುತ್ತಿದೆ. ನಾಲ್ಕು ವರ್ಷ ಪೂರೈಸದವರನ್ನು ವರ್ಗಾವಣೆ ಪಟ್ಟಿಯಿಂದ ಕೈಬಿಡಲಾಗಿದೆ

ಡಾ.ಎಂ.ಸಿ. ಸುಧಾಕರ್, ಉನ್ನತ ಶಿಕ್ಷಣ ಸಚಿವ

5ನೇ ಪುಟ ನೋಡಿ

ಕಾಶ್ಮೀರ: 5 ‘ಗ್ಯಾರಂಟಿ’ ಘೋಷಿಸಿದ ಕಾಂಗ್ರೆಸ್

ಅನಂತ್‌ನಾಗ್ (ಪಿಟಿಐ): ಕಾಂಗ್ರೆಸ್–ಎನ್‌ಸಿ ಮೈತ್ರಿಕೂಟದ ಸರ್ಕಾರ ರಚಿಸಿದೆ ಐದು ‘ಗ್ಯಾರಂಟಿ’ಗಳನ್ನು ಜಾರಿ ಮಾಡುವುದಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಘೋಷಿಸಿದರು. 8

ಚಿನಕುರುಳಿ

ಪ್ರಕಾಶ್ ಶೆಟ್ಟಿ



ದಶಕದಲ್ಲಿ 10 ಪುರುಷರ ವಿರುದ್ಧ ದೀಪಿಕಾ ಕೇಸ್: ಎಚ್ಚರಿಸಿದ ಹೈಕೋರ್ಟ್

ಹನಿಟ್ರ್ಯಾಪ್ ಶೈಲಿ: ಮದುವೆಯ ಖೆಡ್ಡಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಲವು ಪುರುಷರ ವಿರುದ್ಧ ಅನಗತ್ಯ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿರುವ ಕೊಡಗು ಜಿಲ್ಲೆ ಕುಶಾಲಗರ ತಾಲ್ಲೂಕಿನ ಮುಳ್ಳುಸೋಗೆ ನಿವಾಸಿಯಾದ 33 ವರ್ಷದ ದೀಪಿಕಾ ಬಗ್ಗೆ ಸಾರ್ವಜನಿಕರು ಎಚ್ಚರಿಕೆಯಿಂದ ಇರುವಂತೆ ಸೂಚನೆ ಹೊರಡಿಸಲು ಎಲ್ಲ ಪೊಲೀಸ್ ಠಾಣೆಗಳಿಗೆ ನಿರ್ದೇಶನ ನೀಡಿ’ ಎಂದು ಹೈಕೋರ್ಟ್, ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ಆದೇಶಿಸಿದೆ.

ಈ ಸಂಬಂಧ ದೀಪಿಕಾಳ ಕಿರುಕುಳಕ್ಕೆ ತುತ್ತಾದ ಹತ್ತನೇ ಪತಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ಪುರಸ್ಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠವು, ‘ಇಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸದೇ ಹೋದರೆ, ಸುಳ್ಳು ಪ್ರಕರಣಗಳನ್ನು ದಾಖಲಿಸುವವರಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಹಾಗಾಗಿ, ಅರ್ಜಿದಾರರ ವಿರುದ್ಧದ ಪ್ರಕರಣವನ್ನು ರದ್ದುಗೊಳಿಸಲಾಗುತ್ತಿದೆ’ ಎಂದು ತಿಳಿಸಿದೆ.

‘ಪ್ರಕರಣದ ಪ್ರತಿವಾದಿಯಾಗಿರುವ ದೀಪಿಕಾ ಈಗಾಗಲೇ ಹಲವು ಪುರುಷರ ವಿರುದ್ಧ ಲೈಂಗಿಕ ದೌರ್ಜನ್ಯ, ಅತ್ಯಾಚಾರ, ಅಪರಾಧಿಕ ಪಿತೂರಿ ಮತ್ತು ಭಾರತೀಯ ದಂಡ ಸಂಹಿತೆ–1860ರ ಕಲಂ 498ಎ ಅಡಿ 10 ಪ್ರಕರಣಗಳನ್ನು ದಾಖಲಿಸಿದ್ದಾರೆ. ಈಕೆ ಪುನಃ ಯಾರಾದರೂ ಅಮಾಯಕರ ವಿರುದ್ಧ 11ನೇ ಕೇಸು ದಾಖಲಿಸುವುದನ್ನು ತಡೆಯಬೇಕಾದರೆ ಈಕೆಯ ಬಗ್ಗೆ ಎಲ್ಲಾ ಪೊಲೀಸ್ ಠಾಣೆಗಳಿಗೆ ಮಾಹಿತಿ ನೀಡಿ’ ಎಂದು ನ್ಯಾಯಪೀಠ ಡಿಜಿಪಿಗೆ ನಿರ್ದೇಶಿಸಿದೆ.

‘ದೀಪಿಕಾ ಬಗೆಗಿನ ವಿವರಗಳು ಹಲವು ಠಾಣೆಗಳಲ್ಲಿ ಲಭ್ಯ ಇವೆ. ಈ ಮಹಿಳೆ ಅನಗತ್ಯವಾಗಿ ಪುರುಷರ ವಿರುದ್ಧ ದೂರು ನೀಡುವುದನ್ನು ನಿಲ್ಲಿಸಬೇಕಿದೆ. ಕಳೆದೊಂದು ದಶಕದಲ್ಲಿ ಈಕೆ 10 ಕೇಸು ದಾಖಲಿಸಿದ್ದಾರೆ. ಈ ಪ್ರಕರಣದಲ್ಲಿ ನ್ಯಾಯಾಲಯದ ಮುಂದೆ ಹಾಜರಾಗಿ ಅಹವಾಲು ಸಲ್ಲಿಸುವಂತೆ ದೀಪಿಕಾಗೆ ಈ ಹಿಂದೆ ಅವಕಾಶ ನೀಡಲಾಗಿತ್ತು. ಆದರೆ, ಆಕೆ ಕೋರ್ಟ್‌ಗೆ ಗೈರು ಹಾಜರಾಗಿದ್ದಾರೆ’ ಎಂದು ನ್ಯಾಯಪೀಠ ತಿಳಿಸಿದೆ.

‘ದೂರುಗಳಲ್ಲಿ ಸತ್ಯಾಂಶವೇ ಇಲ್ಲ’

‘ಒಂದು ದಶಕದಲ್ಲಿ ಒಬ್ಬ ಮುಸ್ಲಿಂ ಮತ್ತು ಉಳಿದ ಒಂಬತ್ತು ಹಿಂದೂ ಸಮುದಾಯದ ಯುವಕರ ವಿರುದ್ಧ; ಮದುವೆ ಮಾಡಿಕೊಂಡು ಮೋಸ ಎಸಗಿದ, ಮದುವೆ ಭರವಸೆ ನೀಡಿ ಲೈಂಗಿಕ ದೌರ್ಜನ್ಯ ಎಸಗಿದ, ಕೌಟುಂಬಿಕ ದೌರ್ಜನ್ಯದ... ಹೀಗೆ ಹಲವು ಬಗೆಯ ದೂರುಗಳನ್ನು ದೀಪಿಕಾ ದಾಖಲಿಸಿದ್ದಾರೆ. ಈ ದೂರುಗಳಲ್ಲಿ ಕಿಂಚಿತ್ತೂ ಸತ್ಯಾಂಶವಿಲ್ಲ. ಅನಗತ್ಯ ಮತ್ತು ಕ್ಷುಲ್ಲಕ ದೂರುಗಳನ್ನು ನೀಡುವುದೇ ದೀಪಿಕಾಗೆ ಅಭ್ಯಾಸವಾಗಿದೆ’ ಎಂದು ಅರ್ಜಿದಾರರ ಪರ ವಾದ ಮಂಡಿಸಿದ್ದ ಹಿರಿಯ ವಕೀಲ ಮೂರ್ತಿ ಡಿ.ನಾಯಕ್ ಆಕೆಯ ಈ ಹಿಂದಿನ 9 ಕೇಸುಗಳ ವಿವರಗಳನ್ನು ನ್ಯಾಯಪೀಠಕ್ಕೆ ಒದಗಿಸಿದ್ದರು.

‘ಹನಿ ಟ್ರ್ಯಾಪ್ ಸ್ವಭಾವದ ಈಕೆಯ ಕಾರ್ಯಶೈಲಿಯನ್ನು ಗಮನಿಸಿದಾಗ ಪ್ರತಿ ಪ್ರಕರಣದಲ್ಲೂ ಈಕೆಯ ನಡೆ ಸಂಶಯಾಸ್ಪದವಾಗಿದೆ. ಹೀಗಾಗಿ, ಅರ್ಜಿದಾರರಾದ ಹಾಸನ ಜಿಲ್ಲೆಯ ಸಕಲೇಶಪುರದ ಬಾಳುಗದ್ದೆಯ ನಿವಾಸಿಯೂ ಆದ ದೀಪಿಕಾಳ ಹತ್ತನೇ ಪತಿ ಪಿ.ಕೆ. ವಿವೇಕ ಹಾಗೂ ಅವರ ಕುಟುಂಬದ ಐವರು ಸದಸ್ಯರ ವಿರುದ್ಧ ಕುಶಾಲನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಮತ್ತು ಇದಕ್ಕೆ ಸಂಬಂಧಿಸಿದಂತೆ ಕುಶಾಲನಗರ ಜೆಎಂಎಫ್‌ಸಿ ನ್ಯಾಯಾಲಯದಲ್ಲಿನ ವಿಚಾರಣೆ ರದ್ದುಗೊಳಿಸಬೇಕು’ ಎಂದು ಕೋರಿದ್ದರು.



ಎಚ್‌ಎಸ್‌ಆರ್‌ಪಿ : ಬೀಳಲಿದೆ ದಂಡ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕ (ಎಚ್‌ಎಸ್‌ಆರ್‌ಪಿ) ಅಳವಡಿಸುವ ಅವಧಿಯನ್ನು ವಿಸ್ತರಿಸದಿರಲು ಸಾರಿಗೆ ಇಲಾಖೆ ನಿರ್ಧರಿಸಿದೆ. ಫಲಕ ಅಳವಡಿಸದ ವಾಹನಗಳಿಗೆ ಇನ್ನು ಮುಂದೆ ದಂಡ ಬೀಳಲಿದೆ.

2019ರ ಏಪ್ರಿಲ್ 1ರ ನಂತರ ನೋಂದಣಿಯಾದ ವಾಹನಗಳಲ್ಲಿ ಎಚ್‌ಎಸ್‌ಆರ್‌ಪಿ ಇದೆ. ಅದಕ್ಕಿಂತ ಹಿಂದಿನ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಅಳವಡಿಸಲು 2023ರ ಆಗಸ್ಟ್ 16ರಿಂದ ನವೆಂಬರ್ 16ರವರೆಗೆ ಮೂರು ತಿಂಗಳು ಅವಕಾಶವನ್ನು ಸಾರಿಗೆ ಇಲಾಖೆ ಮೊದಲ ಬಾರಿ ನೀಡಿತ್ತು. ವಾಹನ ಮಾಲೀಕರಿಂದ ಸ್ಪಂದನೆ ಸಿಗದೇ ಇದ್ದುದರಿಂದ ಫೆ.17ರವರೆಗೆ ಗಡುವು ವಿಸ್ತರಿಸಿತ್ತು. ಆಗಲೂ ಮಾಲೀಕರು ಎಚ್ಚೆತ್ತುಕೊಳ್ಳದೇ ಇದ್ದುದರಿಂದ ಮೇ 31ರ ಗಡುವು ನೀಡಿತ್ತು.

ಗಡುವು ವಿಸ್ತರಿಸುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಬಿಎನ್‌ಡಿ ಎನರ್ಜಿ ಪ್ರೈವೆಟ್ ಲಿಮಿಟೆಡ್ ಕಂಪನಿಯು ಜೂನ್‌ನಲ್ಲಿ ಹೈಕೋರ್ಟ್ ಮೆಟ್ಟಿಲೇರಿತ್ತು. ಅದನ್ನು ಮಾನ್ಯ ಮಾಡಿದ್ದ ಹೈಕೋರ್ಟ್, ಅವಧಿ ವಿಸ್ತರಿಸುವಂತೆ ಸರ್ಕಾರಕ್ಕೆ ಸೂಚಿಸಿದ್ದರಿಂದ ಸೆ.15ರವರೆಗೆ ಮತ್ತೆ ಗಡುವು ವಿಸ್ತರಿಸಲಾಗಿತ್ತು. ಇನ್ನು ನಾಲ್ಕು ದಿನಗಳಲ್ಲಿ ಈ ಗಡುವು ಮುಗಿಯಲಿದೆ. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಸಂಚಾರ ವಿಭಾಗದ ಪೊಲೀಸರು ಸೆ. 16ರಿಂದ ದಂಡ ವಿಧಿಸುವ ಪ್ರಕ್ರಿಯೆ ಆರಂಭಿಸಲಿದ್ದಾರೆ.

5ನೇ ಪುಟ ನೋಡಿ

ರಶೀದಿ ಇಟ್ಟುಕೊಳ್ಳಿ

‘ಸೆ.15ರ ಒಳಗೆ ಎಚ್‌ಎಸ್‌ಆರ್‌ಪಿಗೆ ನೋಂದಣಿ ಮಾಡಿಕೊಂಡವರು ಅದರ ರಶೀದಿಯನ್ನು ಹೊಸ ನಂಬರ್ ಪ್ಲೇಟ್ ಬರುವವರೆಗೆ ತಮ್ಮಲ್ಲಿ ಇಟ್ಟುಕೊಳ್ಳಬೇಕು. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಅಥವಾ ಪೊಲೀಸರು ತಪಾಸಣೆ ನಡೆಸುವಾಗ ರಶೀದಿ ಇಲ್ಲದೇ ಇದ್ದರೆ ದಂಡ ಕಟ್ಟಬೇಕಾಗುತ್ತದೆ. ಎಲ್ಲರೂ ನಾಲ್ಕು ದಿನಗಳ ಒಳಗೆ ಎಚ್‌ಎಸ್‌ಆರ್‌ಪಿಯನ್ನು ಅಳವಡಿಸಿಕೊಳ್ಳುವ ಮೂಲಕ ದಂಡದಿಂದ ಪಾರಾಗಬಹುದು’ ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಂ. ಯೋಗೀಶ್ ಮಾಹಿತಿ ನೀಡಿದರು.




ಇನ್ನೆಷ್ಟು ಬಾರಿ ವಿಸ್ತರಣೆ?

‘ಅತಿ ಸುರಕ್ಷಿತ ನೋಂದಣಿ ಫಲಕ ಅಳವಡಿಸಲು 2023ರ ಆಗಸ್ಟ್‌ನಿಂದ ಅವಕಾಶ ನೀಡಲಾಗಿದೆ. ಎಷ್ಟು ಬಾರಿ ವಿಸ್ತರಣೆ ಮಾಡುವುದು? ವಿಸ್ತರಣೆಗೂ ಒಂದು ಮಿತಿ ಬೇಕಲ್ಲವೆ? ಹಾಗಾಗಿ ಸೆ. 15ರ ನಂತರ ವಿಸ್ತರಣೆ ಇರುವುದಿಲ್ಲ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಗುಂಡಿ ಮುಚ್ಚಲು 'ಜೆಟ್ ಪ್ಯಾಚರ್'

ಪಾಲಿಕೆಯ ರಾಜರಾಜೇಶ್ವರಿ ನಗರ ವಲಯದಲ್ಲಿ ಪ್ರಾಯೋಗಿಕ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ



'ಜೆಟ್ ಪ್ಯಾಚರ್ ಯಂತ್ರ'ದ ಮೂಲಕ ಪಂತರಪಾಳ್ಯ ನಾಯಂಡಹಳ್ಳಿ ನಮ್ಮ ಮೆಟ್ರೊ ನಿಲ್ದಾಣದ ಬಳಿ ರಸ್ತೆ ಗುಂಡಿ ಮುಚ್ಚಲಾಯಿತು

ಬೆಂಗಳೂರು: ನಗರದಲ್ಲಿ ಕ್ಷಿಪ್ರಗತಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಉದ್ದೇಶದಿಂದ ಬಿಬಿಎಂಪಿ 'ಜೆಟ್ ಪ್ಯಾಚರ್ ಯಂತ್ರ'ವನ್ನು ಬಳಸಲು ಆರಂಭಿಸಿದೆ.

'ಜೆಟ್ ಪ್ಯಾಚರ್' ಯಂತ್ರದ ಮೂಲಕ ಪ್ರಮುಖ ರಸ್ತೆಗಳಲ್ಲಿ ಒಂದು ಬಾರಿಗೆ 150 ಚ.ಮೀ ನಿಂದ 180 ಚ.ಮೀ ಗುಂಡಿಗಳನ್ನು ಮುಚ್ಚಬಹುದು. ಗಂಟೆಯಲ್ಲಿ ಕೆಲಸ ಮುಗಿಯಲಿದ್ದು, ಕೂಡಲೇ ವಾಹನಗಳು ಸಂಚಾರ ಮಾಡಬಹುದು.

ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯಲ್ಲಿ ಪ್ರಾಯೋಗಿಕವಾಗಿ ಜೆಟ್ ಪ್ಯಾಚರ್ ಯಂತ್ರದ ಮೂಲಕ ಪ್ರಮುಖ ರಸ್ತೆ ಗುಂಡಿಗಳನ್ನು ಬುಧವಾರದಿಂದ ಮುಚ್ಚಲಾಗುತ್ತಿದೆ ಎಂದು ವಲಯ ಜಂಟಿ ಆಯುಕ್ತ ಅಜಯ್ ತಿಳಿಸಿದರು.

ಪಂತರಪಾಳ್ಯ - ನಾಯಂಡಹಳ್ಳಿ ನಮ್ಮ ಮೆಟ್ರೊ ನಿಲ್ದಾಣದ ಬಳಿ ರಸ್ತೆ ಗುಂಡಿ ಮುಚ್ಚುವ ಕಾಮಗಾರಿಗೆ ಚಾಲನೆ ನೀಡಿ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಜೆಟ್ ಪ್ಯಾಚರ್ ಯಂತ್ರವು ಹತ್ತು ಜನರು ಮಾಡಬಹುದಾದ ಕೆಲಸವನ್ನು ಒಂದು ಗಂಟೆಯಲ್ಲಿ ಮುಗಿಸುತ್ತದೆ. ಇದರ ಕಾರ್ಯವೈಖರಿ ಹಾಗೂ ಕಾರ್ಯಕ್ಷಮತೆಯನ್ನು ಈ ಪ್ರಾಯೋಗಿಕ ಅವಧಿಯಲ್ಲಿ ಪರಿಶೀಲಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ರಸ್ತೆಯನ್ನು ಕತ್ತರಿಸಿ, ಅದಕ್ಕೆ ಅನುಗುಣವಾಗಿ ಮಿಶ್ರಣವನ್ನು ಪೈಪ್‌ನಲ್ಲಿ ಸುರಿಯಲಾಗುತ್ತದೆ. ನಂತರ ಅದನ್ನು ಕಾಂಪ್ಯಾಕ್ಟರ್ ಮೂಲಕ ಸಮತಟ್ಟಾಗಿಸಲಾಗುತ್ತದೆ. ನಂತರದ ಕೆಲವೇ ಸಮಯದಲ್ಲಿ ವಾಹನಗಳು ಸಂಚರಿಸಬಹುದಾಗಿದೆ ಎಂದು ವಿವರಿಸಿದರು.

ರಾಜರಾಜೇಶ್ವರಿ ನಗರ ವಲಯದಲ್ಲಿ ಸಂಪೂರ್ಣ ಹಾಳಾಗಿರುವ ರಸ್ತೆಗಳನ್ನು ಹೊರತುಪಡಿಸಿ ಗುಂಡಿಗಳನ್ನು ತ್ವರಿತವಾಗಿ ಮುಚ್ಚಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಹಗಲು-ರಾತ್ರಿ ರಸ್ತೆ ಗುಂಡಿಗಳನ್ನು ಮುಚ್ಚಲಾಗುತ್ತಿದ್ದು, ಕಾಲಮಿತಿಯೊಳಗಾಗಿ ಗುಂಡಿಗಳನ್ನು ಮುಚ್ಚಲಾಗುವುದು ಎಂದು ತಿಳಿಸಿದರು.

ವಲಯ ವ್ಯಾಪ್ತಿಯಲ್ಲಿ 20 ವಾರ್ಡ್‌ಗಳಿದ್ದು, 216.45 ಕಿ.ಮೀ ಪ್ರಮುಖ ರಸ್ತೆಗಳು ಸೇರಿದಂತೆ ಒಟ್ಟು 2,045 ಕಿ.ಮೀ ಉದ್ದದ ರಸ್ತೆಗಳಿವೆ. ಮೇ 20ರಿಂದ 2,443 ಗುಂಡಿಗಳನ್ನು ಗುರುತಿಸಲಾಗಿದೆ. 2,408 ರಸ್ತೆಗುಂಡಿಗಳನ್ನು ಮುಚ್ಚಲಾಗಿದ್ದು, 35 ರಸ್ತೆಗುಂಡಿಗಳನ್ನು ಮುಚ್ಚುವ ಕಾರ್ಯ ಪ್ರಗತಿಯಲ್ಲಿದೆ ಎಂದು ಹೇಳಿದರು.

'ರಸ್ತೆ ಗುಂಡಿ ಗಮನ ತಂತ್ರಾಂಶ'ದಲ್ಲಿ ಸಾರ್ವಜನಿಕರಿಂದ 461 ದೂರುಗಳು ದಾಖಲಾಗಿದ್ದು, ಅದರಲ್ಲಿ 86 ರಸ್ತೆ ಗುಂಡಿಗಳನ್ನು ಮುಚ್ಚಲಾಗಿದ್ದು, 302 ರಸ್ತೆ ಗುಂಡಿಗಳನ್ನು ಮುಚ್ಚಬೇಕಿದೆ ಎಂದರು.

ಸುದ್ದಿ 2 ನಿಮಿಷ

ಕಿದ್ವಾಯಿ: ಆಡಳಿತಾಧಿಕಾರಿಯಾಗಿ ನವೀನ್ ಭಟ್ ನೇಮಕ

ಬೆಂಗಳೂರು: ರಾಷ್ಟ್ರೀಯ ಆರೋಗ್ಯ ಅಭಿಯಾನದ (ಎನ್‌ಎಚ್‌ಎಂ) ನಿರ್ದೇಶಕ ನವೀನ್ ಭಟ್ ಅವರನ್ನು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಗೆ ಆಡಳಿತಾಧಿಕಾರಿಯನ್ನಾಗಿ ನೇಮಿಸಲಾಗಿದೆ.

ಸಂಸ್ಥೆಯ ಆಡಳಿತ ಸುಧಾರಣೆ ಹಾಗೂ ಕಾರ್ಯಚಟುವಟಿಕೆಗಳ ನಿರ್ವಹಣೆಗೆ ಐಎಎಸ್ ಅಧಿಕಾರಿ ಎನ್. ಮಂಜುಶ್ರೀ ಅವರನ್ನು ಆಡಳಿತಾಧಿಕಾರಿಯನ್ನಾಗಿ ಫೆಬ್ರುವರಿಯಲ್ಲಿ ನೇಮಕ ಮಾಡಲಾಗಿತ್ತು. ಆರು ತಿಂಗಳ ಅವಧಿ ಮುಕ್ತಾಯವಾಗಿದ್ದರಿಂದ ವೈದ್ಯಕೀಯ ಶಿಕ್ಷಣ ಇಲಾಖೆಯು ಆಡಳಿತಾಧಿಕಾರಿಯ ಕಾರ್ಯಾವಧಿ ವಿಸ್ತರಿಸುವಂತೆ ಸರ್ಕಾರವನ್ನು ಕೋರಿತ್ತು. ಅದರಂತೆ ಎನ್. ಮಂಜುಶ್ರೀ ಅವರ ಸ್ಥಾನಕ್ಕೆ ಐಎಎಸ್ ಅಧಿಕಾರಿ ನವೀನ್ ಭಟ್ ಅವರನ್ನು ನೇಮಿಸಲಾಗಿದೆ.



ಮುಂದಿನ 6 ತಿಂಗಳು ಅಥವಾ ಮುಂದಿನ ಆದೇಶದವರೆಗೆ ಈ ನೇಮಕಾತಿ ಜಾರಿಯಲ್ಲಿ ಇರಲಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಬಿಡಿಎ: 216 ಬದಲಿ ನಿವೇಶನ

ಬೆಂಗಳೂರು: ಅರ್ಕಾವತಿ ಬಡಾವಣೆಯಲ್ಲಿ ನಿವೇಶನ ವಂಚಿತರಿಗೆ ಬದಲಿಯಾಗಿ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ 216 ನಿವೇಶನಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಂಚಿಕೆ ಮಾಡಿದೆ.

ಅರ್ಕಾವತಿ ಬಡಾವಣೆಯಲ್ಲಿ ನಿವೇಶನ ಹಂಚಿಕೆಯಾಗಿದ್ದರೂ ಕಾರಣಾಂತರದಿಂದ ಕೆಲವರಿಗೆ ನಿವೇಶನ ಸಿಕ್ಕಿರಲಿಲ್ಲ. ಅಂತಹವರಿಗೆ ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್ ಸಮ್ಮುಖದಲ್ಲಿ ಗಣಕೀಕೃತ ಹಂಚಿಕೆ ಮೂಲಕ ಬುಧವಾರ ಬದಲಿ ನಿವೇಶನ ಹಂಚಲಾಯಿತು ಎಂದು ಬಿಡಿಎ ಉಪ ಕಾರ್ಯದರ್ಶಿ ಉಮೇಶ್ ತಿಳಿಸಿದರು.

'ಅರ್ಕಾವತಿ ಬಡಾವಣೆಯಲ್ಲಿ ಹಲವು ಕಾರಣಗಳಿಂದ ನಿವೇಶನ ವಂಚಿತರಾದವರು ಇನ್ನೂ ಒಂದು ಸಾವಿರಕ್ಕೂ ಹೆಚ್ಚು ಜನ ಇದ್ದಾರೆ. ಅವರೂ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ನಿವೇಶನ ಬಯಸಿದರೆ ಹಂಚಲಾಗುವುದು' ಎಂದು ಹೇಳಿದರು.

ಜಲಮಂಡಳಿ ಫೋನ್ ಇನ್

ಬೆಂಗಳೂರು: ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್‌ಪ್ರಸಾತ್ ಮನೋಹರ್ ಅವರು ಶುಕ್ರವಾರ(ಸೆಪ್ಟೆಂಬರ್ 13) ಬೆಳಿಗ್ಗೆ 9.30ರಿಂದ 10.30ರವರೆಗೆ ಫೋನ್‌-ಇನ್ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ದೂರವಾಣಿ ಸಂಖ್ಯೆ- 080-22945119 ಮತ್ತು 080-22229639.

'ಅ.2: ಮಾಂಸ ಮಾರಾಟಕ್ಕೆ ಅವಕಾಶ ಕೊಡಿ'

ಬೆಂಗಳೂರು: ಗಾಂಧಿ ಜಯಂತಿ (ಅಕ್ಟೋಬರ್ 2) ದಿನದಂದು ಮಹಾಲಯ ಅಮಾವಾಸ್ಯೆಯ ಪ್ರಯುಕ್ತ ಪಿತೃಪಕ್ಷ ಹಬ್ಬವೂ ಇದೆ. ಇದನ್ನು ವಿಶೇಷ ಸಂದರ್ಭವೆಂದು ಪರಿಗಣಿಸಿ ಆ ದಿನ ಮಾಂಸ ಮಾರಾಟಕ್ಕೆ ಅವಕಾಶ ಕಲ್ಪಿಸಬೇಕು ಎಂದು ಜಯಪ್ರಕಾಶ್ ನಾರಾಯಣ್ ವಿಚಾರ ವೇದಿಕೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಚಾಲನಾ ಪರೀಕ್ಷೆ 18ರಿಂದ

ಬೆಂಗಳೂರು: ಕೆಎಸ್‌ಆರ್‌ಟಿಸಿಯ 'ಚಾಲಕ ಕಂ ನಿರ್ವಾಹಕ' ಹುದ್ದೆಗಳಿಗೆ ಅರ್ಹರಾಗಿರುವ ಅಭ್ಯರ್ಥಿಗಳಿಗೆ ಇದೇ 18ರಿಂದ ಚಾಲನಾ ವೃತ್ತಿ ಪರೀಕ್ಷೆ ನಡೆಯಲಿದೆ.

ಈ ಸಂಬಂಧ ಅಭ್ಯರ್ಥಿಗಳು ಸೆ.13ರಂದು ಮಧ್ಯಾಹ್ನ 1ರಿಂದ ನಿಗಮದ ವೆಬ್‌ಸೈಟ್ ksrtcjobs.karnataka.gov.in ನಿಂದ ಕರೆಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು. ಅದರಲ್ಲಿ ತಿಳಿಸಿರುವ ದಾಖಲಾತಿಗಳೊಂದಿಗೆ ನಿಗದಿತ ದಿನಾಂಕದಂದು ನಿಗದಿತ ಸಮಯಕ್ಕೆ ಹಾಜರಾಗಬೇಕು ಎಂದು ಕೆಎಸ್‌ಆರ್‌ಟಿಸಿ ನಿರ್ದೇಶಕರು (ಸಿಬ್ಬಂದಿ ಮತ್ತು ಜಾಗೃತ) ತಿಳಿಸಿದ್ದಾರೆ.

ಬೃಹತ್ ಕಾಮಗಾರಿ ಮೌದ್ಗಿಲ್ ಉಸ್ತುವಾರಿ

ಬೆಂಗಳೂರು: ಬಿಬಿಎಂಪಿಯ ಬೃಹತ್ ಕಾಮಗಾರಿಗಳ ಉಸ್ತುವಾರಿಗೆ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಅವರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಲಾಗಿದೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸೂಚನೆಯಂತೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಆದೇಶ ಹೊರಡಿಸಿದ್ದಾರೆ.

ರಸ್ತೆಗಳ ವೈಟ್ ಟಾಪಿಂಗ್, ಹೈ-ಡೆನ್ಸಿಟಿ ಕಾರಿಡಾರ್, ಲಾಸ್ಟ್ ಮೈಲ್ ಕನೆಕ್ಟಿವಿಟಿ, ಈಜಿಪುರ ಮೇಲ್ಸೇತುವೆ ಯೋಜನೆ ಸೇರಿದಂತೆ ಮುಖ್ಯ ಆಯುಕ್ತರಿಂದ ಸೂಚಿಸಲಾಗುವ ಇತರೆ ಯೋಜನೆಗಳಿಗೆ ಮುನೀಶ್ ನೋಡಲ್ ಅಧಿಕಾರಿಯಾಗಿರುತ್ತಾರೆ. ಈ ಎಲ್ಲ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು, ಪ್ರಗತಿ ಪರಿಶೀಲನೆ ನಡೆಸಿ ಗುತ್ತಿಗೆದಾರರು ಹಾಗೂ ಎಂಜಿನಿಯರ್‌ಗಳಿಗೆ ಸೂಚನೆ ನೀಡಬಹುದಾಗಿದೆ.

ಮೂರ್ತಿ ಒಡೆಯಲು ಹರಸಾಹಸ • ನಿಷೇಧದ ನಡುವೆಯೂ ಪಿಒಪಿಯಿಂದ ಮಾಡಿದ ಮೂರ್ತಿಗಳ ಬಳಕೆ

ಕರಗದ ಗಣೇಶ ಮೂರ್ತಿ: ಸಿಬ್ಬಂದಿ ಪರದಾಟ

ಪ್ರಜಾವಾಣಿ ಚಿತ್ರ

ಬೆಂಗಳೂರು: ಪಿಒಪಿ ಸೇರಿದಂತೆ ಇತರೆ ವಸ್ತುಗಳಿಂದ ಮಾಡಿರುವ ಬೃಹತ್ ಗಾತ್ರದ ಗಣೇಶ ಮೂರ್ತಿಗಳು ಕೆರೆಯ ನೀರಿನಲ್ಲೂ ಕರಗುತ್ತಿಲ್ಲ. ವಿಸರ್ಜನೆಯಾದ ನಂತರದ ದಿನಗಳಲ್ಲಿ ಕೆರೆಯನ್ನು ಸ್ವಚ್ಛಗೊಳಿಸಬೇಕಾದ ಸಿಬ್ಬಂದಿಗೆ, ಮೂರ್ತಿಗಳನ್ನು ಒಡೆದು ತೆರವುಗೊಳಿಸಬೇಕಾದ ಅನಿವಾರ್ಯತೆ ಎದುರಾಗಿದೆ.

ಹಲವು ರೀತಿಯ ಅರಿವಿನ ಕಾರ್ಯಕ್ರಮಗಳನ್ನು ನಡೆಸುವುದರ ಜೊತೆಯಲ್ಲೇ ಹಾಗೂ ಕೆಲವೊಂದು ಕಡೆ ಪಿಒಪಿ ಮೂರ್ತಿಗಳ ದಾಸ್ತಾನನ್ನು ಜಪ್ತಿ ಮಾಡಲಾಗಿತ್ತು. ಆದರೂ, ನಗರದಲ್ಲಿ ಪಿಒಪಿ ಮೂರ್ತಿಗಳನ್ನು ಪೂಜೆಗೆ ಬಳಸುವುದು ಈ ಬಾರಿಯೂ ನಿಲ್ಲಲಿಲ್ಲ. 'ಪರಿಸರಸ್ನೇಹಿ ಮೂರ್ತಿಗಳನ್ನು ಪೂಜಿಸಿ' ಎಂದು ಬಿಬಿಎಂಪಿ ಹಲವು ಬಾರಿ ಮನವಿ ಮಾಡಿಕೊಂಡಿದ್ದರೂ, ಕೆಲವು ಸಂಘ–ಸಂಸ್ಥೆಗಳೂ ಇದಕ್ಕೆ ಮನ್ನಣೆ ನೀಡುತ್ತಿಲ್ಲ. ಆದ್ದರಿಂದಲೇ, ಕೆರೆಗಳು, ಕಲ್ಯಾಣಿಗಳ ಬಳಿ ಮೂರ್ತಿಗಳ ಭಗ್ನಾವಶೇಷಗಳು ಕಾಣುತ್ತಿವೆ.

ಹಲಸೂರು ಕೆರೆಯಲ್ಲಿ ವಿಸರ್ಜನೆಯಾಗಿರುವ ದೊಡ್ಡ ಮೂರ್ತಿಗಳು ಕರಗಿಲ್ಲ. ಪಿಒಪಿ ಸೇರಿದಂತೆ ನಾರು, ಕಟ್ಟಿಗೆಯಂತಹ ಗಟ್ಟಿ ವಸ್ತುಗಳನ್ನು ಬಳಸಿ ತಯಾರಿಸಿರುವ ಮೂರ್ತಿಗಳಿವು. ಈ ಕರಗದ ಮೂರ್ತಿಗಳನ್ನು ಹೊರಕ್ಕೆ ತೆಗೆದಿರುವ ಬಿಬಿಎಂಪಿ ಸಿಬ್ಬಂದಿ, ಅವುಗಳ ಭಗ್ನಾವಶೇಷಗಳನ್ನು ವಿಂಗಡಿಸಲು ಹರಸಾಹಸ ಪಟ್ಟರು. ಕೊನೆಗೆ ಕೊಡಲಿ, ಸುತ್ತಿಗೆ, ಕ್ರೇನ್‌ಗಳ ಮೊರೆ ಹೊಕ್ಕರು.

ಕರಗದ ಮೂರ್ತಿಗಳನ್ನು ಒಡೆಯಲು ಸ್ವಚ್ಛತಾ ಸಿಬ್ಬಂದಿ ಸುತ್ತಿಗೆಗಳನ್ನು ಬಳಸಿದರು. ಅದರಿಂದಲೂ ಪುಡಿಯಾಗದ ಮೂರ್ತಿಗಳನ್ನು ಕ್ರೇನ್‌ಗಳ ಸಹಾಯದಿಂದ ಮೇಲಕ್ಕೆ ಎತ್ತಿ ಕೆಳಗೆ ಬಿಸಾಡಿದರು. ಆದರೂ ಅವು ಒಡೆದುಹೋಗಲಿಲ್ಲ. ಕೊಡಲಿಯಿಂದ ಕಟ್ಟಿಗೆ ಕಡಿಯುವಂತೆ ಸಿಗಿದರು. ಇಂತಹ ಹಲವು ರೀತಿಯ ಪ್ರಯತ್ನಗಳನ್ನು ಮಾಡಿ ತ್ಯಾಜ್ಯಗಳನ್ನು ಪ್ರತ್ಯೇಕಿಸಲು ಇನ್ನಿಲ್ಲದಂತೆ ಪ್ರಯತ್ನಪಟ್ಟರು.

'ಹಲವು ರೀತಿಯ ಅರಿವು ಮೂಡಿಸಿದರೂ ನಾಗರಿಕರು ಪಿಒಪಿ ಹಾಗೂ ಕರಗದ ವಸ್ತುಗಳಿಂದ ತಯಾರಿಸಿದ ಮೂರ್ತಿಗಳನ್ನು ಬಳಸುತ್ತಿದ್ದಾರೆ. ಸ್ಥಾಪನೆ ಹಾಗೂ ವಿಸರ್ಜನೆ ವೇಳೆಯಲ್ಲಿ ವಿರೋಧಿಸಿದರೆ ಧಾರ್ಮಿಕ ಆಚರಣೆಗೆ ಅಡ್ಡಿಯಾಗುತ್ತಾರೆ ಎಂದು ದೂರುತ್ತಾರೆ. ನಾಗರಿಕರು ಅರಿತುಕೊಂಡು ಪರಿಸರಸ್ನೇಹಿ ಮೂರ್ತಿಗಳನ್ನು ಬಳಸಿದರೆ ಇಂತಹ ಭಗ್ನಾವಶೇಷಗಳು ಉಳಿಯುವುದಿಲ್ಲ. ನಾವೂ ಈ ರೀತಿ ಕಷ್ಟಪಡಬೇಕಿಲ್ಲ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಬಿಬಿಎಂಪಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

1


2


3


1. ಹಲಸೂರು ಕೆರೆಯಲ್ಲಿ ವಿಸರ್ಜನೆಯಾದ ನಂತರ ಕರಗದೇ ಉಳಿದಿರುವ ಗಣೇಶ ಮೂರ್ತಿಗಳನ್ನು ಒಡೆಯಲು ಬಿಬಿಎಂಪಿ ಸಿಬ್ಬಂದಿ ಬುಧವಾರ ಹರಸಾಹಸ ಪಟ್ಟರು 2. ವಿಸರ್ಜನೆಯಾದ ನಂತರ ಕರಗದೇ ಉಳಿದಿರುವ ಗಣೇಶ ಮೂರ್ತಿಯ ತ್ಯಾಜ್ಯವನ್ನು ಕೊಡಲಿಯಿಂದ ಬೇರ್ಪಡಿಸಲಾಯಿತು 3. ಕರಗದೇ ಉಳಿದಿರುವ ಗಣೇಶ ಮೂರ್ತಿಯ ಭಗ್ನಾವಶೇಷ

ಪ್ರಜಾವಾಣಿ ಚಿತ್ರಗಳು: ಪ್ರಶಾಂತ್ ಎಚ್‌.ಜಿ.

'ನಮಗೆಷ್ಟು ಪಾಪ ಸುತ್ತಿಕೊಳ್ಳುತ್ತದೋ?'

'ಗಣೇಶನನ್ನು ನಾವೂ ಪೂಜಿಸುತ್ತೇವೆ. ನಮ್ಮ ನೆಚ್ಚಿನ ದೈವ ಗಣಪ. ಆದರೆ, ಅನಿವಾರ್ಯವಾಗಿ ನಾವು ಮೂರ್ತಿಗಳನ್ನು ಒಡೆಯಬೇಕಾಗಿದೆ. ನಮಗೆಷ್ಟು ಪಾಪ ಸುತ್ತಿಕೊಳ್ಳುತ್ತದೋ ಗೊತ್ತಿಲ್ಲ' ಎಂದು ಹಲಸೂರು ಕೆರೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿ ಕಳವಳ ವ್ಯಕ್ತಪಡಿಸಿದರು.

'ಹಲವು ಮೂರ್ತಿಗಳು ನೀರಿನಲ್ಲಿ ಕರಗುತ್ತಿಲ್ಲ. ಕೆರೆ ಸ್ವಚ್ಛ ಮಾಡಬೇಕಾಗಿದ್ದು, ಅವುಗಳನ್ನೆಲ್ಲ ಹೊರ ತೆಗೆಯಲಾಗುತ್ತದೆ. ತ್ಯಾಜ್ಯವನ್ನೆಲ್ಲ ಒಂದಡೆ ಹಾಕಿದರೆ ಅದನ್ನು ತೆಗೆದುಕೊಂಡು ಹೋಗುತ್ತಾರೆ. ಆದರೆ, ಪಿಒಪಿ ಹಾಗೂ ಇತರೆ ವಸ್ತುಗಳಿಂದ ಮಾಡಿರುವ ಮೂರ್ತಿಗಳು ಒಂದೆರಡು ದಿನ ನೀರಿನಲ್ಲಿದ್ದರೂ ಪೂರ್ಣ ಕರಗಿಲ್ಲ. ಅವುಗಳನ್ನು ಒಡೆದು, ಭಾಗಗಳನ್ನಾಗಿ ಮಾಡುತ್ತಿದ್ದೇವೆ. ಈ ಕೆಲಸ ಮಾಡಲು ಮನಸ್ಸಿಲ್ಲದಿದ್ದರೂ ಅನಿವಾರ್ಯವಾಗಿ ಮಾಡಲೇಬೇಕಾಗಿದೆ' ಎಂದು ಹೇಳಿದರು.



ಪಿಒಪಿಯಿಂದ ತಯಾರಿಸಿದ ಗಣೇಶ ಮೂರ್ತಿಯ ಕಿರೀಟ ಪಾದಚಾರಿ ಮಾರ್ಗದಲ್ಲಿ ಬಿದ್ದಿತ್ತು

ತೆರಿಗೆ ಅನ್ಯಾಯ: ಹೋರಾಟಕ್ಕೆ ಕಾಂಗ್ರೆಸ್ ಮತ್ತೆ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರದ ತೆರಿಗೆ ಆದಾಯ ಹಂಚಿಕೆಯಲ್ಲಿ ಅನ್ಯಾಯವಾಗುತ್ತಿದೆ ಎಂಬ ವಿಚಾರದಲ್ಲಿ ಮತ್ತೆ ಹೋರಾಟ ಸಂಘಟಿಸಲು ರಾಜ್ಯ ಸರ್ಕಾರ ಮುಂದಾಗಿದೆ. ವಿರೋಧ ಪಕ್ಷಗಳ ಆಡಳಿತವಿರುವ ರಾಜ್ಯಗಳ ಜತೆಗೆ, ಕಡಿಮೆ ತೆರಿಗೆ ಪಾಲು ಪಡೆಯುತ್ತಿರುವ ಬಿಜೆಪಿ ಆಡಳಿತದ ರಾಜ್ಯಗಳನ್ನೂ ಈ ಹೋರಾಟಕ್ಕೆ ತರಲು ರಾಜ್ಯ ಕಾಂಗ್ರೆಸ್ ಮುಂದಾಗಿದೆ.

ಈ ಅನ್ಯಾಯದ ಕುರಿತು ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಅತಿಹೆಚ್ಚು ತೆರಿಗೆ ಪಾವತಿಸಿಯೂ ಕಡಿಮೆ ಪಾಲು ಪಡೆಯುತ್ತಿರುವ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ. ಈ ಸಂಬಂಧ ಮಾಹಿತಿಯನ್ನು ಅವರು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ. ಜತೆಗೆ ಪತ್ರದ ಪ್ರತಿಯನ್ನು ಲಗತ್ತಿಸಿದ್ದಾರೆ.

ಕೇರಳ, ತಮಿಳುನಾಡು, ತೆಲಂಗಾಣ, ಮಹಾರಾಷ್ಟ್ರ, ಆಂಧ್ರಪ್ರದೇಶ, ಗುಜರಾತ್, ಹರಿಯಾಣ ಮತ್ತು ಪಂಜಾಬ್ ಮುಖ್ಯಮಂತ್ರಿಗೆ ಸಿದ್ದರಾಮಯ್ಯ ಪತ್ರ ಬರೆದಿದ್ದು, 'ಆರ್ಥಿಕತೆ ಮತ್ತು ಇತರ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಿರುವ ಕರ್ನಾಟಕದಂತಹ ಹಲವು ರಾಜ್ಯಗಳನ್ನು ಅವುಗಳ ಸಾಧನೆಯ ಕಾರಣಕ್ಕೇ ದಂಡಿಸಲಾಗುತ್ತಿದೆ. ಇದರ ವಿರುದ್ಧ ದನಿ ಎತ್ತಬೇಕಿದೆ' ಎಂದು ಹೇಳಿದ್ದಾರೆ.

'ಈ ಬಗ್ಗೆ ಚರ್ಚಿಸಲು ಬೆಂಗಳೂರಿನಲ್ಲಿ ಸಭೆ ಆಯೋಜಿಸಲಾಗುತ್ತದೆ. ಸಭೆಯ ದಿನಾಂಕ ಮತ್ತು ವಿವರಗಳನ್ನು ಶೀಘ್ರದಲ್ಲೇ ತಿಳಿಸಲಾಗುತ್ತದೆ. ತೆರಿಗೆ ಅನ್ಯಾಯವನ್ನು ಸರಿಪಡಿಸಿ ಎಂದು 16ನೇ ಹಣಕಾಸು ಆಯೋಗವನ್ನು ಒತ್ತಾಯಿಸಲು ತಾವೆಲ್ಲರೂ ಆ ಸಭೆಯಲ್ಲಿ ಭಾಗಿಯಾಗಬೇಕು' ಎಂದು ಕೋರಿದ್ದಾರೆ.

2 ಕಾಲೇಜುಗಳ ಪ್ರವೇಶಕ್ಕೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಎಸ್‌ಸಿ ನರ್ಸಿಂಗ್ ಕೋರ್ಸ್‌ಗಳಿಗೆ 2024–25ನೇ ಸಾಲಿಗೆ ಪ್ರವೇಶ ನೀಡದಂತೆ ಮಂಡ್ಯ ಹಾಗೂ ಬೆಂಗಳೂರು ಗ್ರಾಮಾಂತರದ ಎರಡು ನರ್ಸಿಂಗ್ ಕಾಲೇಜುಗಳಿಗೆ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ನಿರ್ಬಂಧ ವಿಧಿಸಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಹಂಚಿಕೆ ಮಾಡಲಾಗಿದ್ದ ಸೀಟುಗಳಿಗೆ ಸರ್ಕಾರ ನಿಗದಿ ಮಾಡಿದ್ದಕ್ಕಿಂತ ಅಧಿಕ ಶುಲ್ಕ ಪಡೆಯುತ್ತಿರುವ ಆರೋಪದ ಮೇಲೆ ಮಂಡ್ಯದ ನ್ಯೂ ನವೋದಯ ನರ್ಸಿಂಗ್ ಕಾಲೇಜು ಹಾಗೂ ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕಿನ ಅತ್ತಿಬೆಲೆಯ ಆಕ್ಸ್‌ಫರ್ಡ್ ನರ್ಸಿಂಗ್ ಕಾಲೇಜುಗಳಿಗೆ ನಿರ್ಬಂಧ ಹೇರಲಾಗಿದೆ.

ಎರಡೂ ಕಾಲೇಜುಗಳ ವಿರುದ್ಧ ದೂರು ಸಲ್ಲಿಕೆಯಾದ ಕಾರಣ ಅಗತ್ಯ ಕ್ರಮ ಕೈಗೊಳ್ಳುವಂತೆ ವೈದ್ಯಕೀಯ ಶಿಕ್ಷಣ ಇಲಾಖೆ ವಿಶ್ವವಿದ್ಯಾಲಯಕ್ಕೆ ಸೂಚಿಸಿತ್ತು. ಕೆಇಎ ಸೀಟು ಹಂಚಿಕೆ ಪಟ್ಟಿಯಿಂದಲೂ ಕಾಲೇಜುಗಳ ಹೆಸರನ್ನು ಕೈಬಿಡಲಾಗಿದೆ. ರಾಜ್ಯದ ಎಲ್ಲ ನರ್ಸಿಂಗ್ ಕಾಲೇಜುಗಳ ಶುಲ್ಕವನ್ನು ನಿಯಂತ್ರಿಸಲು ಸಮಿತಿ ರಚಿಸುವಂತೆ ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಸವಲತ್ತು ವಿತರಣೆ ಕಾರ್ಯಕ್ರಮದಲ್ಲಿ ವಸತಿ ಸಚಿವ ಜಮೀರ್ ಅಹಮದ್

ವಸತಿ, ನಿವೇಶನ ರಹಿತರ ಸಮೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ವಸತಿ ಹಾಗೂ ನಿವೇಶನ ರಹಿತರ ಸಮೀಕ್ಷೆ ನಡೆಸಲು ತೀರ್ಮಾನ ಮಾಡಲಾಗಿದೆ ಎಂದು ವಸತಿ, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದರು.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಬುಧವಾರ ಆಯೋಜಿಸಿದ್ದ ಸವಲತ್ತು ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ರಾಜ್ಯದ ಪ್ರತಿ ಕುಟುಂಬಕ್ಕೂ ಸೂರು ಕಲ್ಪಿಸುವುದು ನಮ್ಮ ಸರ್ಕಾರದ ಸಂಕಲ್ಪ. ಈಗಾಗಲೇ 2.32 ಲಕ್ಷ ಬಡವರಿಗೆ ಮನೆ ಕಟ್ಟಿಕೊಡುವ ಕ್ರಾಂತಿ ಕಾರಕ ನಿರ್ಧಾರ ಮಾಡಲಾಗಿದೆ' ಎಂದು ಹೇಳಿದರು.

ಸಿದ್ದರಾಮಯ್ಯ ನೇತೃತ್ವದ ಸರ್ಕಾರ ₹3,200 ಕೋಟಿ ಒದಗಿಸಿದೆ. ಅದರಲ್ಲಿ ₹1,400 ಕೋಟಿ ಶಿಕ್ಷಣಕ್ಕೆ ವೆಚ್ಚ ಮಾಡಲಾಗುತ್ತಿದೆ. ಇದರಿಂದ ಸಮುದಾಯದ ಲಕ್ಷಾಂತರ ಮಕ್ಕಳು ವೈದ್ಯಕೀಯ, ಎಂಜಿನಿಯರಿಂಗ್ ಸೇರಿ ಉನ್ನತ ಶಿಕ್ಷಣ ಪಡೆಯುವಂತಾಗಿದೆ. ವಿದೇಶದಲ್ಲಿ ವ್ಯಾಸಂಗಕ್ಕೆ ಹೋಗುವಂತಾಗಿದೆ. ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆ ಎದುರಿಸಲು ತರಬೇತಿ ಪಡೆಯುವಂತಾಗಿದೆ ಎಂದು ವಿವರಿಸಿದರು.

ಹಜ್ ಯಾತ್ರಿಗಳ ಸೇವೆ ಸಲ್ಲಿಸಿದ ಸ್ವಯಂ ಸೇವಕರನ್ನು ವೈಯಕ್ತಿಕವಾಗಿ ಉಮ್ರಾ ಯಾತ್ರೆಗೆ ಕಳುಹಿಸಲಾಗುತ್ತಿದ್ದು, ಈ ಬಾರಿಯೂ 220 ಮಂದಿಗೆ ಯಾತ್ರೆಯ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ಉಪಸ್ಥಿತರಿದ್ದರು.

177 ಆಟೋ ರಿಕ್ಷಾ 68 ಟ್ಯಾಕ್ಸಿ, 30 ಗೂಡ್ಸ್ ವಾಹನಗಳು ಸೇರಿದಂತೆ 579 ಫಲಾನುಭವಿಗಳಿಗೆ ₹7.86 ಕೋಟಿ ಮೊತ್ತದ ಸವಲತ್ತು ವಿತರಿಸಲಾಯಿತು.



ನಗರದ ಹಜ್ ಭವನದಲ್ಲಿ ಬುಧವಾರ ಆಯೋಜಿಸಿದ್ದ ಸವಲತ್ತು ವಿತರಣೆ ಕಾರ್ಯಕ್ರಮದಲ್ಲಿ ಸಚಿವ ಜಮೀರ್ ಅಹಮದ್ ಖಾನ್ ಅವರನ್ನು ಸನ್ಮಾನಿಸಲಾಯಿತು

ಉತ್ತರ ವಿ.ವಿ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಕೋಲಾರ: ಯುಯುಸಿಎಂಎಸ್ ತಂತ್ರಾಂಶದಲ್ಲಿ ತಾಂತ್ರಿಕ ತೊಂದರೆ ಉಂಟಾದ ಕಾರಣ ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ವ್ಯಾಪ್ತಿಯ ಸಂಯೋಜಿತ ಕಾಲೇಜುಗಳಲ್ಲಿ 2024–25ನೇ ಸಾಲಿನ ಸ್ನಾತಕೋತ್ತರ ಪದವಿ ಕೋರ್ಸ್ (ಪ್ರಮುಖವಾಗಿ ಎಂ.ಎ ಇತಿಹಾಸ) ಪ್ರವೇಶಾತಿಗಾಗಿ ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳು ದಿನವಿಡೀ ಪರದಾಡಿದರು.

ವಿಶ್ವವಿದ್ಯಾಲಯ ಈ ಮೊದಲು ಘೋಷಿಸಿದಂತೆ ದಂಡವಿಲ್ಲದೆ ಅರ್ಜಿ ಸಲ್ಲಿಸಲು ಸೆ.12 ಕಡೆಯ ದಿನವಾಗಿತ್ತು. ಹೀಗಾಗಿ, ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಮುಗಿಬಿದ್ದಿದ್ದರು. ಪ್ರಮುಖವಾಗಿ ಎಂ.ಎ ಇತಿಹಾಸ ಕೋರ್ಸ್ ಸಂಬಂಧಿಸಿದಂತೆ ತಾಂತ್ರಿಕ ಸಮಸ್ಯೆ ಉಂಟಾಗಿದೆ. ಇತಿಹಾಸ ಬೋಧಿಸುವ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಲು ತಂತ್ರಾಂಶ ಸರಿಯಾಗಿ ಸ್ಪಂದಿಸಿಲ್ಲ. ಈ ಸಂಬಂಧ ಕೋಲಾರ, ಬೆಂಗಳೂರು ಗ್ರಾಮಾಂತರ ಹಾಗೂ ಬೆಂಗಳೂರು ನಗರದ ಭಾಗದ ವಿದ್ಯಾರ್ಥಿಗಳು ದೂರಿದರು. ಈ ಕಾರಣ ಅರ್ಜಿ ಸಲ್ಲಿಸಲು ದಿನಾಂಕವನ್ನು ಸೆ.14ರವರೆಗೆ ವಿಸ್ತರಿಸಲಾಗಿದೆ. ವಿದ್ಯಾರ್ಥಿಗಳು ಕಡ್ಡಾಯವಾಗಿ ವಿಶ್ವವಿದ್ಯಾಲಯ ನೀಡಿರುವ ವೆಬ್‌ಸೈಟ್ ಲಿಂಕ್ (https://uucms.karnataka.gov.in/) ಬಳಸಿಯೇ ಅರ್ಜಿ ಸಲ್ಲಿಸಬೇಕಿದೆ.

'ತಂತ್ರಾಂಶ ಸರಿ ಹೋಗಿದ್ದು, ಸೆ. 14ರವರೆಗೆ ದಂಡವಿಲ್ಲದೆ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡಲಾಗಿದೆ' ಎಂದು ಉತ್ತರ ವಿಶ್ವವಿದ್ಯಾಲಯದ ಪ್ರಭಾರ ಕುಲಸಚಿವರಾದ (ಆಡಳಿತ) ಪ್ರೊ. ಡಿ.ಕುಮುದಾ 'ಪ್ರಜಾವಾಣಿ'ಗೆ ತಿಳಿಸಿದರು.

ಶಿವಗಂಗೆಯಲ್ಲಿ ಹುಲಿ: ಸುಳ್ಳು ಸುದ್ದಿ ಹಂಚಿಕೆ

ಪ್ರಜಾವಾಣಿ ವಾರ್ತೆ

ಮೈಲನಹಳ್ಳಿ (ರಾಮನಗರ)/ಬೆಂಗಳೂರು: ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಗಡಿ ಪ್ರದೇಶದಲ್ಲಿರುವ ಶಿವಗಂಗೆ ಬೆಟ್ಟ, ಕೌಚುಗಲ್ ಬೆಟ್ಟದ ಸಮೀಪದ ಕಾಡಿಗೆ ಹೆಣ್ಣು ಹುಲಿ ಮತ್ತು ನಾಲ್ಕು ಮರಿಗಳು ಬಂದಿವೆ ಎಂಬ ಸುಳ್ಳು ಸುದ್ದಿ ಹಂಚಿಕೊಳ್ಳಲಾಗುತ್ತಿದೆ.

ಹೆಣ್ಣು ಹುಲಿಯೊಂದು ನಾಲ್ಕು ಮರಿಗಳೊಂದಿಗೆ ರಸ್ತೆಯಲ್ಲಿ ಓಡಾಡುತ್ತಿರುವ ಎರಡು ವಿಡಿಯೊ ತುಣುಕುಗಳನ್ನು, 'ಮಾಗಡಿ ತಾಲ್ಲೂಕಿನ ಉಡುಕುಂಟೆ ಗ್ರಾಮದಲ್ಲಿ ಹುಲಿಬಂದಿದೆ' ಎಂಬ ವಿವರದೊಂದಿಗೆ ಹಂಚಿಕೊಳ್ಳಲಾಗಿದೆ. 'ಉಡುಕುಂಟೆಗೆ ಸಮೀಪದಲ್ಲೇ ಇರುವ ಸೋಂಪುರ ಕೈಗಾರಿಕಾ ಪ್ರದೇಶದ ರಸ್ತೆಯಲ್ಲಿ ಹುಲಿ ಓಡಾಡುತ್ತಿತ್ತು' ಎಂದೂ ಇದೇ ವಿಡಿಯೊ ತುಣುಕುಗಳನ್ನು ಹಂಚಿಕೊಳ್ಳಲಾಗಿದೆ.

ಹೀಗಾಗಿ ವಿಡಿಯೊ ತುಣುಕುಗಳ ಸತ್ಯಾಸತ್ಯತೆಯನ್ನು 'ಗೂಗಲ್ ರಿವರ್ಸ್ ಇಮೇಜ್ ಸರ್ಚ್' ಮೂಲಕ ಪರಿಶೀಲಿಸಲಾಯಿತು. ವಿಡಿಯೊ ತುಣುಕಿನ 'ಸ್ಕ್ರೀನ್‌ಶಾಟ್' ಅನ್ನು ಹಾಕಿ, 'ಇಮೇಜ್ ಸರ್ಚ್'ನಲ್ಲಿ ಹುಡುಕಿದಾಗ ಮೂಲ ವಿಡಿಯೊ ತುಣುಕು ಸಿಕ್ಕಿತು. ಐಎಫ್‌ಎಸ್ ಅಧಿಕಾರಿ ರಮೇಶ್ ಪಾಂಡೆ ಅವರು 2020ರ ನವೆಂಬರ್ 9ರಂದು 87 ಸೆಕೆಂಡ್‌ಗಳಷ್ಟು ಅವಧಿಯ ಈ ವಿಡಿಯೊವನ್ನು ಮೊದಲ ಬಾರಿಗೆ 'ಎಕ್ಸ್'ನಲ್ಲಿ ಅಪ್‌ಲೋಡ್ ಮಾಡಿದ್ದರು.

ಹೀಗೆ ಉತ್ತರ ಪ್ರದೇಶಕ್ಕೆ ಸಂಬಂಧಿಸಿದ ಮತ್ತು ನಾಲ್ಕು ವರ್ಷಗಳಷ್ಟು ಹಳೆಯದಾದ ವಿಡಿಯೊ ತುಣುಕುಗಳನ್ನು ಶಿವಗಂಗೆ ಮತ್ತು ಕೌಚುಗಲ್ ಬೆಟ್ಟದ್ದು ಎಂದು ಹಂಚಿಕೊಳ್ಳಲಾಗುತ್ತಿದೆ.



ಐಎಫ್‌ಎಸ್ ಅಧಿಕಾರಿ ರಮೇಶ್ ಪಾಂಡೆ ಅವರು 2020ರಲ್ಲಿ 'ಎಕ್ಸ್'ನಲ್ಲಿ ಹಂಚಿಕೊಂಡಿದ್ದ ಮೂಲ ವಿಡಿಯೊ

'ಯಾರೋ ಕೆಲವರು ಸುಳ್ಳು ಸುದ್ದಿ ಹಬ್ಬಿಸಿದ್ದಾರೆ. ಜನರು ಗಾಬರಿಯಾಗುವ ಅವಶ್ಯಕತೆ ಇಲ್ಲ' ಎಂದು ಮಾಗಡಿ ಅರಣ್ಯ ವಲಯ ಅಧಿಕಾರಿ ಚೈತ್ರಾ ಜಿ.ಕೆ. ಹೇಳಿದರು.

ಅಮಾನತುಗೊಂಡಿದ್ದ ಕಲ್ಲೇಶ್‌ಗೆ ಆಡಳಿತಾಧಿಕಾರಿ ಹುದ್ದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರ ನೀಡಿದ್ದ ₹83 ಕೋಟಿ ಅನುದಾನಕ್ಕೆ ಬಳಕೆ ಪ್ರಮಾಣಪತ್ರ ಸಲ್ಲಿಸಿಲ್ಲ ಎನ್ನುವ ಆರೋಪದ ಮೇಲೆ ಅಮಾನತು ಗೊಂಡಿದ್ದ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ನಿರ್ದೇಶಕ ಕಲ್ಲೇಶ್ ಬಿ. ಅವರಿಗೆ ಕೊಪ್ಪಳದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಹುದ್ದೆ ನೀಡಿ ಸರ್ಕಾರ ಆದೇಶ ಹೊರಡಿಸಿದೆ.

ನಿರ್ದೇಶಕ ಕಲ್ಲೇಶ್ ಅವರು ವಸತಿನಿಲಯಗಳ ಪರಿವೀಕ್ಷಣೆ ಮಾಡದಿರುವುದು, ಇಲಾಖೆಯ ಅಧೀನದಲ್ಲಿರುವ ವಿದ್ಯಾರ್ಥಿ ನಿಲಯಗಳು ಮತ್ತು ವಸತಿ ನಿಲಯಗಳಿಂದ ಬೇಡಿಕೆ ಪಡೆಯದೇ ಸಾಮಗ್ರಿಗಳನ್ನು ಕೇಂದ್ರೀಕೃತ ಟೆಂಡರ್ ಮೂಲಕ ಖರೀದಿಸಿ ಸರಬರಾಜು ಮಾಡಿರುವುದು, ಸಾರ್ವಜನಿಕ ಹಣ ಸಮರ್ಪಕವಾಗಿ ನಿಯೋಜಿತ ಕಾರ್ಯಕ್ರಮಗಳಿಗೆ ಬಳಕೆ ಆಗದಿರುವುದು ಮತ್ತು ವಸತಿ, ಆಶ್ರಯ ಶಾಲೆಗಳಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಶೇ 75ಕ್ಕಿಂತ ಕಡಿಮೆ ಇದ್ದು, ವಿದ್ಯಾರ್ಥಿಗಳಿಗೆ ಹೆಚ್ಚುವರಿ ತರಬೇತಿ ಮೂಲಕ ಗುಣಾತ್ಮಕ ಶಿಕ್ಷಣ ನೀಡಲು ಕ್ರಮ ವಹಿಸದ ಕಾರಣಗಳನ್ನು ನೀಡಿ ಅವರನ್ನು ಅಮಾನತು ಮಾಡಲಾಗಿತ್ತು. ಅಮಾನತು ಆದೇಶವನ್ನು ತೆರವುಗೊಳಿಸಿ, ಕೊಪ್ಪಳ ವೈದ್ಯಕೀಯ ಕಾಲೇಜಿಗೆ ನಿಯೋಜನೆ ಮಾಡುವಂತೆ ಸೆ. 9ರಂದು ಕಲ್ಲೇಶ್ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಪದನಿಮಿತ್ತ ನಿರ್ದೇಶಕರೂ ಆಗಿದ್ದ ಅವರು ನಿಗಮದ ಹಗರಣದಲ್ಲಿ ರಾಜ್ಯ ಸರ್ಕಾರದ ವಿರುದ್ಧ ಸಾಕ್ಷ್ಯ ಹೇಳಲು ಜಾರಿ ನಿರ್ದೇಶನಾಲಯ ಒತ್ತಡ ಹಾಕುತ್ತಿದೆ ಎಂದು ಆರೋಪಿಸಿ, ಇ.ಡಿ. ಅಧಿಕಾರಿಗಳ ವಿರುದ್ಧವೇ ನಗರದ ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಅವರ ದೂರು ಆಧರಿಸಿ ಎಫ್‌ಐಆರ್ ದಾಖಲಾಗಿತ್ತು.

ದೃಷ್ಟಿದೋಷ ಕೋಟಾ: ಅರ್ಜಿ ವಜಾ

ಬೆಂಗಳೂರು: 'ದೃಷ್ಟಿದೋಷ ಕೋಟಾದಡಿ ವೃತ್ತಿಪರ ಕೋರ್ಸ್‌ಗೆ ಪ್ರವೇಶ ಕಲ್ಪಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ನಿರ್ದೇಶಿಸಬೇಕು' ಎಂದು ಕೋರಿ ಧಾರವಾಡದ ವಿದ್ಯಾರ್ಥಿನಿ ದಿಶಾ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ಧಾರವಾಡ ಪೀಠದಲ್ಲಿನ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಮತ್ತು ನ್ಯಾಯಮೂರ್ತಿ ವಿಜಯಕುಮಾರ ಎ.ಪಾಟೀಲ ಅವರ ವಿಭಾಗೀಯ ನ್ಯಾಯಪೀಠ ಆದೇಶಿಸಿದೆ. 'ವಿದ್ಯಾರ್ಥಿನಿಯ ದೃಷ್ಟಿದೋಷ ಪ್ರಮಾಣದ ಬಗ್ಗೆ ವೈದ್ಯರಿಂದ ವಿರೋಧಾಭಾಸದಿಂದ ಕೂಡಿದ ಅಭಿಪ್ರಾಯಗಳು ವ್ಯಕ್ತವಾಗಿ ಗೊಂದಲ ಮೂಡಿವೆ. ಈ ಪ್ರಕರಣದಲ್ಲಿ ವಿದ್ಯಾರ್ಥಿನಿಗೆ ದೃಷ್ಟಿದೋಷವಿಲ್ಲ ಎಂಬ ತ್ರಿಸದಸ್ಯ ವೈದ್ಯರ ಸಮಿತಿ ವರದಿಯನ್ನು ಅಂತಿಮವಾಗಿ ಪರಿಗಣಿಸಲಾಗುತ್ತಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಪೀಠ ಮನವಿಯನ್ನು ತಿರಸ್ಕರಿಸಿದೆ.

₹4,750 ಕೋಟಿ ಮೊತ್ತದ ಟೆಂಡರ್ • ಐದು ಪ್ಯಾಕೇಜ್‌ಗಳ 144 ಕಿ.ಮೀ ಉದ್ದದ ರಸ್ತೆ • ಬೆಂಗಳೂರು ಸುತ್ತಮುತ್ತಲಿನ ನಗರಗಳಿಗೆ ಅನುಕೂಲ

ಉಪನಗರ ವರ್ತುಲ ರಸ್ತೆ ಕಾಮಗಾರಿಗೆ ಟೆಂಡರ್

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಉಪನಗರ ವರ್ತುಲ ರಸ್ತೆ ಯೋಜನೆಯ (ಎಸ್‌ಟಿಆರ್‌ಆರ್) ಐದು ಪ್ಯಾಕೇಜ್‌ಗಳ (144 ಕಿ.ಮೀ) ₹4,750 ಕೋಟಿಯ ಕಾಮಗಾರಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಟೆಂಡರ್ ಆಹ್ವಾನಿಸಿದೆ.

ನಾಲ್ಕರಿಂದ ಆರು ಪಥಗಳ ಈ ಯೋಜನೆಯು ದಾಬಸ್‌ಪೇಟೆ, ದೊಡ್ಡಬಳ್ಳಾಪುರ, ದೇವನಹಳ್ಳಿ, ಸೂಲಿಬೆಲೆ, ಹೊಸಕೋಟೆ, ಆನೇಕಲ್, ಕನಕಪುರ, ರಾಮನಗರ ಮತ್ತು ಮಾಗಡಿ ಸೇರಿದಂತೆ ಬೆಂಗಳೂರು ಮತ್ತು ಸುತ್ತಮುತ್ತಲಿನ ಉಪನಗರ ಪ್ರದೇಶಗಳನ್ನು ಸಂಪರ್ಕಿಸುತ್ತದೆ. ಇದು ತಮಿಳುನಾಡಿನ ಹೊಸೂರನ್ನೂ ಸಂಪರ್ಕಿಸುತ್ತದೆ. ಇದೀಗ ಪಶ್ಚಿಮ ಭಾಗದ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಟೆಂಡರ್ ಪ್ರಕ್ರಿಯೆ ಐದಾರು ವರ್ಷಗಳಲ್ಲಿ ನನೆಗುದಿಗೆ ಬಿದ್ದಿತ್ತು. 'ಟೆಂಡರ್ ಪ್ರಕ್ರಿಯೆಯನ್ನು ಅಕ್ಟೋಬರ್ ಅಂತ್ಯದೊಳಗೆ ಅಂತಿಮಗೊಳಿಸಲಾಗುತ್ತದೆ. ಕಾಮಗಾರಿಗಳು 2026–27ರಲ್ಲಿ ಪೂರ್ಣಗೊಳ್ಳಲಿವೆ' ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮೂಲಗಳು ತಿಳಿಸಿವೆ.

ಈ ಯೋಜನೆಯಡಿ ₹17 ಸಾವಿರ ಕೋಟಿ ಮೊತ್ತದಲ್ಲಿ 285 ಕಿ.ಮೀ. ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಲಾಗುತ್ತಿದೆ. ದಾಬಸ್‌ಪೇಟೆ–ದೊಡ್ಡಬಳ್ಳಾಪುರ ನಡುವಿನ ಪ್ಯಾಕೇಜ್ 1ರ (42 ಕಿ.ಮೀ), ದೊಡ್ಡಬಳ್ಳಾಪುರ– ಹೊಸಕೋಟೆ ನಡುವಿನ ಕಾಮಗಾರಿ (37 ಕಿ.ಮೀ) ಈಗಾಗಲೇ ಪೂರ್ಣಗೊಂಡಿದೆ. ಕರ್ನಾಟಕ ಹಾಗೂ ತಮಿಳುನಾಡು ಗಡಿಯ 20 ಕಿ.ಮೀ. ಕಾಮಗಾರಿ ಶೇ 42ರಷ್ಟು ಪ್ರಗತಿ ಸಾಧಿಸಿದೆ. ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್‌ವೇಯ 6 ಕಿ.ಮೀ ಕಾಮಗಾರಿ ಬಹುತೇಕ ಮುಗಿದಿದೆ.

30 ದಿನಗಳಲ್ಲಿ ಅನುಮೋದನೆ: 4-5 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಈ ಕಾಮಗಾರಿಗೆ ಚಾಲನೆ ನೀಡಬೇಕೆಂದು ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡ ಹಾಗೂ ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್.ಮಂಜುನಾಥ್ ಕೇಂದ್ರ ರಸ್ತೆ ಸಾರಿಗೆ-ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಗೆ ಸಂಸತ್ ಅಧಿವೇಶನದ ಸಂದರ್ಭದಲ್ಲಿ ಮನವಿ ಮಾಡಿದ್ದರು. 45 ದಿನಗಳಲ್ಲಿ ಅನುಮೋದನೆ ನೀಡುವುದಾಗಿ ಸಚಿವರು ಭರವಸೆ ನೀಡಿದ್ದರು. ಸಚಿವರು 30 ದಿನಗಳಲ್ಲೇ ಅನುಮೋದನೆ ನೀಡಿದ್ದಾರೆ ಎಂದು ಮಂಜುನಾಥ್ ಸಂತಸ ವ್ಯಕ್ತಪಡಿಸಿದರು.

ಈ ಯೋಜನೆಯು ಬೆಂಗಳೂರಿನ ಸುತ್ತಮುತ್ತಲಿನ ಪಟ್ಟಣಗಳಿಗೆ ಗಣನೀಯ ಪ್ರಯೋಜನ ನೀಡುತ್ತದೆ. ಸಂಚಾರ ದಟ್ಟಣೆ ಕಡಿಮೆ ಮಾಡಲಿದೆ. ಬೆಂಗಳೂರಿನ ಸಂಚಾರ ಸಮಸ್ಯೆಗಳಿಗೆ ಪರಿಹಾರ ನೀಡುತ್ತದೆ ಎಂದು ಅವರು ತಿಳಿಸಿದ್ದಾರೆ.

ಐದು ಪ್ಯಾಕೇಜ್‌ಗಳು ಯಾವುವು?

1. ನೆಲಮಂಗಲ ತಾಲ್ಲೂಕಿನ ಓಬಳಾಪುರದಿಂದ ಮಾಗಡಿ ತಾಲ್ಲೂಕಿನ ಸೋಮಕ್ಕನಮುತ್ತದವರೆಗೆ. ಒಟ್ಟು 46.30 ಕಿ.ಮೀ. ಟೆಂಡರ್ ಮೊತ್ತ ₹1,419 ಕೋಟಿ.
2. ಸೋಮಕ್ಕನ ಮುತ್ತದಿಂದ ಕುಣಿಗಲ್‌ವರೆಗೆ. 32.7 ಕಿ.ಮೀ. ಟೆಂಡರ್ ಮೊತ್ತ ₹825 ಕೋಟಿ.
3. ಕುಣಿಗಲ್‌ನಿಂದ ಕನಕಪುರ ತಾಲ್ಲೂಕಿನ ತಟ್ಟೆಕೆರೆ ವರೆಗೆ 33.64 ಕಿ.ಮೀ. ಕಾಮಗಾರಿ. ಟೆಂಡರ್ ಮೊತ್ತ ₹978 ಕಿ.ಮೀ.
4. ತಟ್ಟೆಕೆರೆಯಿಂದ ಆನೇಕಲ್ ತಾಲ್ಲೂಕಿನ ಬಗ್ಗನದೊಡ್ಡಿವರೆಗೆ 8.34 ಕಿ.ಮೀ. ಕಾಮಗಾರಿ. ಟೆಂಡರ್ ಮೊತ್ತ ₹1,018 ಕೋಟಿ.
5. ಬಗ್ಗನದೊಡ್ಡಿಯಿಂದ ತಮಿಳುನಾಡಿನ ಹೊಸೂರು ತಾಲ್ಲೂಕಿನ ಎಸ್. ಮುದುಗದಪಲ್ಲಿವರೆಗೆ 23.27 ಕಿ.ಮೀ. ಕಾಮಗಾರಿ. ಟೆಂಡರ್ ಮೊತ್ತ ₹507 ಕೋಟಿ.

ಯೋಜನೆಯ ಹಾದಿ

- 2005ರಲ್ಲಿ ಈ ಯೋಜನೆ ಪ್ರಕಟಿಸಲಾಗಿತ್ತು.
- 2017ರಲ್ಲಿ ಈ ಯೋಜನೆಯನ್ನು ಭಾರತ್ ಮಾಲಾ ಪರಿಯೋಜನಾದಡಿ ಸೇರ್ಪಡೆ
- ಪ್ರಧಾನಿ ನರೇಂದ್ರ ಮೋದಿ ಅವರು 2022ರ ಜೂನ್‌ನಲ್ಲಿ ಕಾಮಗಾರಿಗಳಿಗೆ ಚಾಲನೆ
- ಮೊದಲ ಹಂತದ 80 ಕಿ.ಮೀ.ಗಳ ಕಾಮಗಾರಿಯನ್ನು ಮೋದಿ ಅವರು 2024ರ ಮಾರ್ಚ್‌ನಲ್ಲಿ ಉದ್ಘಾಟಿಸಿದ್ದರು. ಇದರಲ್ಲಿ ದಾಬಸ್‌ಪೇಟೆ–ದೊಡ್ಡಬಳ್ಳಾಪುರ ಬೈಪಾಸ್ (₹1,438 ಕೋಟಿ) ಹಾಗೂ ದೊಡ್ಡಬಳ್ಳಾಪುರ ಬೈಪಾಸ್–ಹೊಸಕೋಟೆ (₹1,317 ಕೋಟಿ) ಕಾಮಗಾರಿಗಳು ಸೇರಿದ್ದವು.

ರಾಷ್ಟ್ರೀಯ ಉದ್ಯಾನದಲ್ಲಿ ಎತ್ತರಿಸಿದ ಮಾರ್ಗ

ನಾಲ್ಕನೇ ಪ್ಯಾಕೇಜ್‌ನ ರಸ್ತೆ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಮೂಲಕ ಹಾದು ಹೋಗಲಿದೆ. ಇಲ್ಲಿ ಎತ್ತರಿಸಿದ ಮಾರ್ಗ ನಿರ್ಮಿಸಲಾಗುತ್ತದೆ. ಇದಕ್ಕೆ ಅರಣ್ಯ ಅನುಮೋದನೆ ಪಡೆಯಬೇಕಿದೆ. ಕಾಡು ಪ್ರಾಣಿಗಳಿಗೆ ತೊಂದರೆಯಾಗದಂತೆ ಉಪಕ್ರಮಗಳನ್ನು ಕೈಗೊಂಡು ಈ ರಸ್ತೆ ನಿರ್ಮಿಸಲಾಗುತ್ತದೆ. ಪರಿಸರದ ಮೇಲಿನ ಹಾನಿ ಕಡಿಮೆ ಮಾಡಲು ರಾತ್ರಿ ಹೊತ್ತಿನಲ್ಲಿ ಕಾಮಗಾರಿ ನಡೆಸಲಾಗುತ್ತದೆ ಎಂದು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಯೊಬ್ಬರು ತಿಳಿಸಿದರು.



‘ರಾಜ್ಯದಲ್ಲಿ ಅರಣ್ಯೀಕರಣ ಹೆಚ್ಚಾಗಬೇಕು’

ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ • ಅರಣ್ಯ ಹುತಾತ್ಮರಿಗೆ ಗೌರವ ಸಲ್ಲಿಕೆ

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಬೆಂಗಳೂರು: ‘ರಾಜ್ಯದಲ್ಲಿ ಶೇಕಡ 25 ರಷ್ಟು ಅರಣ್ಯ ಪ್ರದೇಶವಿದೆ. ಒಟ್ಟು ಭೂಪ್ರದೇಶಕ್ಕೆ ಹೋಲಿಸಿದಲ್ಲಿ ಈ ಪ್ರಮಾಣ ಶೇ 33ರಷ್ಟಿರಬೇಕಿದೆ. ಆದ್ದರಿಂದ ರಾಜ್ಯದಲ್ಲಿ ಅರಣ್ಯೀಕರಣ ಹೆಚ್ಚಾಗಬೇಕಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಅರಣ್ಯ ಇಲಾಖೆಯು ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ ಕಾರ್ಯಕ್ರಮದಲ್ಲಿ ಅರಣ್ಯ ಹುತಾತ್ಮರಿಗೆ ಗೌರವ ಸಲ್ಲಿಸಿ, ಮಾತನಾಡಿದರು.

‘ರಾಜ್ಯದಲ್ಲಿ ಆನೆ, ಹುಲಿಗಳ ಸಂಖ್ಯೆ ಹೆಚ್ಚುತ್ತಿರುವುದು ಸಂತೋಷದ ಸಂಗತಿ. ಆದರೆ, ಪ್ರಾಣಿ-ಮನುಷ್ಯ ಸಂಘರ್ಷ ತಪ್ಪಿಸಿ, ಪ್ರಾಣಿ ಸಂಪತ್ತನ್ನು ಕಾಪಾಡುವ ದಿಕ್ಕಿನಲ್ಲಿ ಇನ್ನಷ್ಟು ಪರಿಣಾಮಕಾರಿ ಕೆಲಸಗಳು ಆಗಬೇಕಿವೆ. ಇದಕ್ಕಾಗಿ ಲಭ್ಯ ಇರುವ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು. ಕಾಡು ಮತ್ತು ವನ್ಯಜೀವಿ ಸಂಪತ್ತಿನ ರಕ್ಷಣೆ ಹೊಣೆ ಅರಣ್ಯಾಧಿಕಾರಿಗಳು ಮತ್ತು ಸಿಬ್ಬಂದಿಗೆ ಸೀಮಿತವಲ್ಲ. ಪ್ರಕೃತಿಯಿಂದ ಲಾಭ ಪಡೆಯುತ್ತಿರುವ ಎಲ್ಲರ ಜವಾಬ್ದಾರಿ’ ಎಂದರು.

ಅರಣ್ಯ ಹುತಾತ್ಮರು ಮನುಕುಲದ ಸಂರಕ್ಷಕರು. ಅವರ ತ್ಯಾಗವು ಅರಣ್ಯ ಸಂರಕ್ಷಣೆಗೆ ಸ್ಫೂರ್ತಿಯಾಗಬೇಕು. ಅರಣ್ಯ ಹುತಾತ್ಮರ ಕುಟುಂಬಕ್ಕೆ ನೀಡುವ ಪರಿಹಾರದ ಮೊತ್ತವನ್ನು ₹30 ಲಕ್ಷದಿಂದ ₹50 ಲಕ್ಷಕ್ಕೆ ಹೆಚ್ಚಿಸಲಾಗಿದೆ’ ಎಂದು ಹೇಳಿದರು.

ಪೊಲೀಸ್ ಕ್ಯಾಂಟೀನ್ ಸೌಲಭ್ಯ: ಅರಣ್ಯ ಸಚಿವ ಈಶ್ವರ ಖಂಡ್ರೆ, ‘ಕಾಡ್ಗಿಚ್ಚು ನಂದಿಸುವಾಗ, ಮಾನವ-ವನ್ಯಜೀವಿ ಸಂಘರ್ಷ ತಡೆಯುವಾಗ, ಒತ್ತುವರಿ ತೆರವು ಸೇರಿ ವಿವಿಧ ಸಂದರ್ಭದಲ್ಲಿ ಈವರೆಗೆ 61 ಅರಣ್ಯ ಸಿಬ್ಬಂದಿ ಮತ್ತು ಅಧಿಕಾರಿಗಳು ಹುತಾತ್ಮರಾಗಿದ್ದಾರೆ. ಅರಣ್ಯ ಸಂಪತ್ತಿನ ರಕ್ಷಣೆಗೆ ಹಗಲಿರುಳು ಶ್ರಮಿಸುತ್ತಿರುವ ಅರಣ್ಯ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಹಾಲಿ ಇರುವ ಪೊಲೀಸ್ ಕ್ಯಾಂಟೀನ್ ಸೌಲಭ್ಯ ಬಳಸಿಕೊಳ್ಳಲು ಅವಕಾಶ ನೀಡಬೇಕೆಂಬ ಪ್ರಸ್ತಾವ ಅರಣ್ಯ ಇಲಾಖೆಯಿಂದ ಸಲ್ಲಿಕೆಯಾಗಿದೆ. ಈ ಬಗ್ಗೆ ಮುಖ್ಯಮಂತ್ರಿಯವರ ಜತೆಗೆ ಚರ್ಚಿಸಿ, ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿದರು.

‘ಕಳೆದ 16 ತಿಂಗಳ ಅವಧಿಯಲ್ಲಿ ಅರಣ್ಯ ಇಲಾಖೆ ಸುಮಾರು 10 ಸಾವಿರ ಎಕರೆ ವಿಸ್ತೀರ್ಣದ ಜಮೀನುಗಳನ್ನು ಅಧಿಸೂಚಿತ ಅರಣ್ಯ ಎಂದು ಘೋಷಿಸಿದೆ. ಬೆಂಗಳೂರು, ಕೋಲಾರ, ಬೀದರ್ ಸೇರಿದಂತೆ ರಾಜ್ಯದ ವಿವಿಧೆಡೆ ಸಾವಿರಾರು ಕೋಟಿ ರೂಪಾಯಿ ಬೆಲೆ ಬಾಳುವ 2,500ಕ್ಕೂ ಹೆಚ್ಚು ಎಕರೆ ಅರಣ್ಯ ಜಮೀನುಗಳನ್ನು ಮರುವಶಕ್ಕೆ ಪಡೆದಿದೆ. 3 ಎಕರೆಗಿಂತ ಅಧಿಕ ಹಾಗೂ ದೊಡ್ಡ ಪ್ರಮಾಣದ ಒತ್ತುವರಿ ತೆರವು ಕಾರ್ಯ ನಡೆಯುತ್ತಿದೆ’ ಎಂದು ಮಾಹಿತಿ ನೀಡಿದರು.

ಮುಖ್ಯಾಂಶಗಳು

- ಸದ್ಯ ಶೇ 25 ರಷ್ಟು ಇರುವ ಅರಣ್ಯ ಪ್ರದೇಶ ಶೇ 33ಕ್ಕೆ ಏರಿಕೆಯಾಗಬೇಕು
- ಕಾಡು ಮತ್ತು ವನ್ಯಜೀವಿ ಸಂಪತ್ತಿನ ರಕ್ಷಣೆ ಹೊಣೆ ಎಲ್ಲರ ಜವಾಬ್ದಾರಿ
- ಅರಣ್ಯ ಹುತಾತ್ಮರ ಕುಟುಂಬಕ್ಕೆ ನೀಡುವ ಪರಿಹಾರದ ಮೊತ್ತ ₹50 ಲಕ್ಷಕ್ಕೆ ಹೆಚ್ಚಳ: ಸಿ.ಎಂ

‘ಕಸ್ತೂರಿ ರಂಗನ್ ವರದಿ ಬಗ್ಗೆ ಅಭಿಪ್ರಾಯ ಸಂಗ್ರಹ’

‘ಪಶ್ಚಿಮಘಟ್ಟ ಹಲವು ನದಿಗಳ ಮೂಲವಷ್ಟೇ ಅಲ್ಲದೆ, ಸಸ್ಯ ಸಂಕುಲ, ಪ್ರಾಣಿ ಸಂಕುಲ, ಕೀಟ ಸಂಕುಲ, ಪಕ್ಷಿ ಸಂಕುಲದ ನೆಲೆಯಾಗಿದೆ. ಇದರ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿದ್ದು, ಕಸ್ತೂರಿ ರಂಗನ್ ವರದಿ ಬಗ್ಗೆ ಇದೇ 19ರಂದು ಪಶ್ಚಿಮಘಟ್ಟ ವ್ಯಾಪ್ತಿಯ ಜಿಲ್ಲೆಗಳ ಪ್ರತಿನಿಧಿಗಳ ಸಭೆ ನಡೆಸಿ ಅಭಿಪ್ರಾಯ ಸಂಗ್ರಹಿಸಲಾಗುವುದು. 20ರಂದು ಸಚಿವ ಸಂಪುಟದ ಉಪ ಸಮಿತಿ ಸಭೆಯಲ್ಲಿ ಚರ್ಚಿಸಿ, 21ರಂದು ಮುಖ್ಯಮಂತ್ರಿಯವರೊಂದಿಗೆ ಸಮಾಲೋಚಿಸಿ, ನಂತರ ಸಚಿವ ಸಂಪುಟದ ಅನುಮೋದನೆ ಪಡೆದುಕೊಳ್ಳಲಾಗುವುದು. ಪಶ್ಚಿಮ ಘಟ್ಟದ ಜೀವವೈವಿಧ್ಯ ಹಾಗೂ ಜನರ ಜೀವನೋಪಾಯ ಎರಡಕ್ಕೂ ತೊಂದರೆ ಆಗದಂತೆ ಕೇಂದ್ರ ಸರ್ಕಾರಕ್ಕೆ ನಮ್ಮ ರಾಜ್ಯದ ನಿಲುವನ್ನು ಇದೇ 25ರೊಳಗೆ ತಿಳಿಸಲಾಗುವುದು’ ಎಂದು ಈಶ್ವರ ಖಂಡ್ರೆ ಹೇಳಿದರು.

ಮಾನಸಿಕ ಅಸ್ವಸ್ಥ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ

ಬೆಂಗಳೂರು: ಮಾದನಾಯಕನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 15 ವರ್ಷದ ಮಾನಸಿಕ ಅಸ್ವಸ್ಥ ಬಾಲಕಿ ಮೇಲೆ ಕೂಲಿ ಕಾರ್ಮಿಕನೊಬ್ಬ ಲೈಂಗಿಕ ದೌರ್ಜನ್ಯವೆಸಗಿ ಪರಾರಿಯಾಗಿರುವ ಘಟನೆ ನಡೆದಿದೆ.

ಬಾಲಕಿ ಬಟ್ಟೆ ಒಣಗಿ ಹಾಕುವ ಸಲುವಾಗಿ ಮಹಡಿ ಮೇಲೆ ತೆರಳಿದ್ದ ವೇಳೆ ಪೋಷಕರು ಇಲ್ಲದ್ದನ್ನು ಗಮನಿಸಿ, ಆರೋಪಿ ಕೃತ್ಯವೆಸಗಿದ್ದಾನೆ. ಬಾಲಕಿ ಕೂಗದಂತೆ ಬಾಯಿ ಮುಚ್ಚಿದ್ದ. ವಿಷಯ ಯಾರಿಗೂ ಹೇಳದಂತೆ ಬೆದರಿಕೆ ಹಾಕಿ, ಪರಾರಿಯಾಗಿದ್ದಾನೆ. ಆರೋಪಿಯ ಚಲನವಲನದ ದೃಶ್ಯ ಸಿ.ಸಿ.ಟಿ.ವಿ.ಯಲ್ಲಿ ಸೆರೆಯಾಗಿದ್ದು, ಪೋಕ್ಸೊ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮಲಗಿದ್ದ ವ್ಯಕ್ತಿ ಮೇಲೆ ಬಸ್ ಚಕ್ರ ಹರಿಸಿದ ಚಾಲಕನ ಬಂಧನ

ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳಲ್ಲಿ ಆರೋಪಿಯ ಸುಳಿವು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ರಾತ್ರಿ ವೇಳೆ ಮಲಗಿದ್ದ ವ್ಯಕ್ತಿ ಮೇಲೆ ಬಸ್ ಚಕ್ರ ಹರಿಸಿ ಸಾವಿಗೆ ಕಾರಣನಾಗಿದ್ದ ಚಾಲಕನನ್ನು ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಳವಳ್ಳಿ ನಿವಾಸಿ ವಿವೇಕ್ ಬಂಧಿತ ಚಾಲಕ. ಶ್ರೀನಿವಾಸಯ್ಯ ಮೃತ ವ್ಯಕ್ತಿ. ದೊಡ್ಡಬಳ್ಳಾಪುರದಲ್ಲಿರುವ ಶ್ರೀ ಟ್ರಾವೆಲ್ಸ್ ಕಂಪನಿಯ ಬಸ್ ಚಾಲಕನಾಗಿರುವ ವಿವೇಕ್, ಕಂಪನಿ ಉದ್ಯೋಗಿಗಳನ್ನು ಕರೆದುಕೊಂಡು ಹೋಗುವ ಮತ್ತು ಬರುವ ಕೆಲಸ ಮಾಡುತ್ತಿದ್ದರು. ಸೆಪ್ಟೆಂಬರ್ 5ರ ರಾತ್ರಿ ಕಾಮಾಕ್ಷಿಪಾಳ್ಯ ಬಸ್ ನಿಲ್ದಾಣದ ಬಳಿ ಬಸ್ ನಿಲ್ಲಿಸಿ, ಅಲ್ಲಿಯೇ ರಾತ್ರಿ ಮಲಗಿದ್ದರು.

ಮಾರನೇ ದಿನ ಬೆಳಿಗ್ಗೆ 6 ಗಂಟೆ ಸುಮಾರಿಗೆ ಎದ್ದು, ನೇರವಾಗಿ ಬಸ್ ಚಾಲನೆ ಮಾಡಿದ್ದರು. ಬಸ್ ಪಕ್ಕದಲ್ಲಿ ಮಲಗಿದ್ದ ಶ್ರೀನಿವಾಸಯ್ಯ ಅವರು ನಿದ್ರೆ ಮಂಪರಿನಲ್ಲಿ ಚಕ್ರದ ಕೆಳಗೆ ಹೊರಳಿದ್ದನ್ನು ಗಮನಿಸದೆ, ವಿವೇಕ್ ಬಸ್ ಚಲಾಯಿಸಿದ್ದರು. ಅವರ ತಲೆ ಮೇಲೆ ಚಕ್ರ ಹರಿದು ಮೃತಪಟ್ಟಿದ್ದರು. ಈ ಘಟನೆ ಅಪಘಾತವೆಸಗಿದ ಚಾಲಕನ ಗಮನಕ್ಕೆ ಬಂದಿರಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ಪೊಲೀಸರು ಸ್ಥಳ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದರು. ಸುತ್ತಮುತ್ತಲಿನ 25ಕ್ಕೂ ಹೆಚ್ಚು ಸಿಸಿಟಿವಿ ಕ್ಯಾಮೆರಾ ಪರಿಶೀಲಿಸಿದಾಗ ವಿವೇಕ್ ಬಸ್ ಚಾಲನೆ ಮಾಡಿರುವುದು ಗೊತ್ತಾಯಿತು. ಬಸ್ ನೋಂದಣಿ ಸಂಖ್ಯೆ ಆಧರಿಸಿ ಚಾಲಕನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

‘ರಾತ್ರಿ ವೇಳೆ ರಸ್ತೆಬದಿ ವಾಹನ ನಿಲ್ಲಿಸುವ ಚಾಲಕರಿಗೆ ಈ ಪ್ರಕರಣ ನೀತಿ ಪಾಠವಾಗಿದೆ. ಬಸ್, ಲಾರಿ, ಕಂಟೇನರ್ ಇತ್ಯಾದಿ ವಾಹನಗಳನ್ನು ರಸ್ತೆಬದಿಯಲ್ಲಿ ನಿಲ್ಲಿಸಿ ವಿಶ್ರಾಂತಿ ಪಡೆದು ಬೆಳಗಿನ ಜಾವ ವಾಹನದ ಕೆಳಗೆ ಏನಿದೆ ಎಂಬುದನ್ನು ಖಚಿತಪಡಿಸಿಕೊಂಡು ನಂತರ ವಾಹನ ಚಾಲನೆ ಮಾಡಬೇಕು’ ಎಂದು ಪೊಲೀಸರು ಸಲಹೆ ನೀಡಿದ್ದಾರೆ.

ಕಾರು ಅಪಘಾತ: ನಟ ಕಿರಣ್ ರಾಜ್‌ಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿರುತೆರೆ ನಟ ಕಿರಣ್ ರಾಜ್ ಅವರು ಪ್ರಯಾಣಿಸುತ್ತಿದ್ದ ಕಾರು ಅಪಘಾತಗೊಂಡಿದ್ದು, ಗಾಯಗೊಂಡಿರುವ ಅವರನ್ನು ಕೆಂಗೇರಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಅಪಘಾತದಲ್ಲಿ ಎದೆಯ ಭಾಗಕ್ಕೆ ಹೆಚ್ಚು ಪೆಟ್ಟಾಗಿದ್ದ ಕಾರಣ ಪ್ರಜ್ಞೆ ಕಳೆದುಕೊಂಡಿದ್ದ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದರು. ಸದ್ಯ ಚೇತರಿಸಿಕೊಂಡಿದ್ದಾರೆ. ಕಾರಿನಲ್ಲಿ ‘ರಾನಿ’ ಸಿನಿಮಾದ ಕಾರ್ಯಕಾರಿ ನಿರ್ಮಾಪಕ ಗಿರೀಶ್ ಸಹ ಇದ್ದರು. ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಗುಟ್ಟಯ್ಯನ ಪಾಳ್ಯದ ಸಿದ್ದೇಶ್ವರ ನಿರಾಶ್ರಿತರ ಕೇಂದ್ರಕ್ಕೆ ಕಿರಣ್ ರಾಜ್ ತೆರಳುತ್ತಿದ್ದರು. ಈ ಕೇಂದ್ರಕ್ಕೆ ಪ್ರತಿವಾರ ಭೇಟಿ ನೀಡಿ ಅನಾಥ ಮಕ್ಕಳಿಗೆ ಊಟ ನೀಡುತ್ತಿದ್ದರು. ಕಿರಣ್ ರಾಜ್ ಅಭಿನಯದ ರಾನಿ ಸಿನಿಮಾ ಬಿಡುಗಡೆ ಗುರುವಾರ ಇರುವ ಕಾರಣದಿಂದ ಎರಡು ದಿನಗಳ ಮುಂಚೆಯೇ ಆಹಾರ ನೀಡಲು ಹೋಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.



ಕಿರಣ್‌ರಾಜ್

ಮಂಗಳವಾರ ರಾತ್ರಿ ಗಿರೀಶ್ ಅವರು ಕಾರು ಚಾಲನೆ ಮಾಡುತ್ತಿದ್ದ ವೇಳೆ ರಸ್ತೆಗೆ ಅಡ್ಡಲಾಗಿ ಬಂದ ಮುಂಗುಸಿಯನ್ನು ತಪ್ಪಿಸಲು ಹೋಗಿ, ನಿಯಂತ್ರಣ ಕಳೆದುಕೊಂಡು ರಸ್ತೆಬದಿ ಕಂಬಕ್ಕೆ ಡಿಕ್ಕಿ ಹೊಡೆದಿದ್ದಾರೆ. ಅಪಘಾತದ ರಭಸಕ್ಕೆ ಕಾರಿನ ಚಕ್ರಗಳು ಕಿತ್ತು ಬಂದಿವೆ. ಕಾರು ಸಂಪೂರ್ಣ ಜಖಂಗೊಂಡಿದೆ.

‘ಅಪಘಾತದಲ್ಲಿ ಸ್ವಲ್ಪ ಪೆಟ್ಟಾಗಿತ್ತು. ವೈದ್ಯರು ಸೂಕ್ತ ಚಿಕಿತ್ಸೆ ನೀಡಿದ್ದು, ಯಾರೂ ಭಯ ಪಡಬೇಡಿ. ನಾನು ಚೇತರಿಸಿಕೊಂಡಿದ್ದೇನೆ ’ ಎಂದು ಕಿರಣ್ ರಾಜ್ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ನಟ ವರುಣ್ ವಿರುದ್ಧ ಎಫ್‌ಐಆರ್

ಖಾಸಗಿ ಫೋಟೊ ಹಾಗೂ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುವುದಾಗಿ ಮಾಜಿ ಪ್ರೇಯಸಿಗೆ ‘ಬ್ಲ್ಯಾಕ್‌ಮೇಲ್’ ಮಾಡಿದ್ದ ಆರೋಪದ ಮೇಲೆ ಕಿರುತೆರೆ ನಟ ವರುಣ್ ಆರಾಧ್ಯ ವಿರುದ್ಧ ಪಶ್ಚಿಮ ವಿಭಾಗದ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂತ್ರಸ್ತೆ ನೀಡಿದ ದೂರಿನ ಆಧಾರದ ಮೇರೆಗೆ ನಟ ವರುಣ್ ಆರಾಧ್ಯ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಖಾಸಗಿ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ ‘ಬೃಂದಾವನ’ ಧಾರಾವಾಹಿಯಲ್ಲಿ ವರುಣ್ ಆರಾಧ್ಯ ನಟಿಸಿದ್ದರು. ಸಂತ್ರಸ್ತೆ, ಇನ್‌ಸ್ಟಾಗ್ರಾಮ್‌ನ ಜಾಹೀರಾತು ವಿಭಾಗದಲ್ಲಿ ಕೆಲಸ ಮಾಡುವಾಗ 2019ರಲ್ಲಿ ಆರೋಪಿಯ ಪರಿಚಯವಾಗಿ ಸ್ನೇಹಕ್ಕೆ ತಿರುಗಿತ್ತು. ಕ್ರಮೇಣ ಸ್ನೇಹ ಪ್ರೀತಿಗೆ ತಿರುಗಿ ಪರಸ್ಪರ ಇಬ್ಬರೂ ಪ್ರೀತಿಸಿದ್ದರು. ನಾಲ್ಕು ವರ್ಷಗಳಿಂದ ಪ್ರೀತಿಸುತ್ತಿದ್ದ ಜೋಡಿ ಮಧ್ಯೆ ವಿರಸವಾಗಿ ಕೆಲ ತಿಂಗಳಿಂದ ದೂರವಾಗಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ನಟನ ಮೊಬೈಲ್ ಪರಿಶೀಲಿಸಿದಾಗ ಯುವತಿಯರ ಖಾಸಗಿ ಫೋಟೊ ಇಟ್ಟುಕೊಂಡಿರುವುದು ಗೊತ್ತಾಯಿತು. ಈ ಬಗ್ಗೆ ಪ್ರಶ್ನಿಸಿದಾಗ, ನನ್ನ ಖಾಸಗಿ ಫೋಟೊ ಹಾಗೂ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುವುದಾಗಿ ಬೆದರಿಸಿದ್ದರು’ ಎಂದು ಯುವತಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ನೀಟ್–ಯುಜಿ ಅಕ್ರಮ: ಆರೋಪಿಗಳಿಂದ ಪರೀಕ್ಷಾ ಕೇಂದ್ರ ನಿಯಂತ್ರಣ’

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ‘ನೀಟ್–ಯುಜಿ’ ಅಕ್ರಮ ಪ್ರಕರಣದ ಆರೋಪಿಗಳು, ಗೋಧ್ರಾದ ಎರಡು ಪರೀಕ್ಷಾ ಕೇಂದ್ರಗಳನ್ನು ಸಂಪೂರ್ಣವಾಗಿ ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡಿದ್ದರು ಎಂದು ಸಿಬಿಐ ಹೇಳಿದೆ.

‘ಪರೀಕ್ಷಾ ಕೇಂದ್ರದ ಮೇಲ್ವಿಚಾರಣೆ ಉಸ್ತುವಾರಿ ಸಿಬ್ಬಂದಿ, ಪರೀಕ್ಷಾ ಮೇಲ್ವಿ ಚಾರಕರು ಹಾಗೂ ಇತರ ಸಿಬ್ಬಂದಿಯನ್ನೂ ನಿಯಂತ್ರಣಕ್ಕೆ ತೆಗೆದುಕೊಂಡಿದ್ದ ಆರೋಪಿಗಳು, ಭಾರಿ ಮೊತ್ತದ ಹಣ ಪಡೆದು ಅಭ್ಯರ್ಥಿಗಳ ಒಎಂಆರ್ ಉತ್ತರಪತ್ರಿಕೆಗಳನ್ನು ತಿರುಚಿದ್ದರು ಎಂಬುದು ಕೂಡ ತನಿಖೆಯಿಂದ ಗೊತ್ತಾಗಿದೆ’ ಎಂದು ಸಿಬಿಐ ದೋಷಾರೋಪ ಪಟ್ಟಿಯಲ್ಲಿ ಹೇಳಿದೆ.

‘ಗೋಧ್ರಾದ ಈ ಶಾಲೆಗಳು ಆರೋಪಿಗಳ ಸಂಪೂರ್ಣ ನಿಯಂತ್ರಣದಲ್ಲಿ ಇದ್ದಿದ್ದು, ಅಭ್ಯರ್ಥಿಗಳು ಇಲ್ಲಿನ ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡಿಕೊಳ್ಳಲು ಮುಖ್ಯ ಕಾರಣ’ ಎಂದೂ ಹೇಳಿದೆ.

‘ಗೋಧ್ರಾದ ಎರಡು ಶಾಲೆಗಳಲ್ಲಿ ಸ್ಥಾಪಿಸಲಾಗಿದ್ದ ಪರೀಕ್ಷಾ ಕೇಂದ್ರದ ಕನಿಷ್ಠ 30 ಅಭ್ಯರ್ಥಿಗಳು ಈ ಕ್ರಿಮಿನಲ್ ಪಿತೂರಿಯಲ್ಲಿ ಶಾಮೀಲಾಗಿದ್ದರು. ಈ ಅಭ್ಯರ್ಥಿಗಳು ವಿವಿಧ ರಾಜ್ಯಗಳಿಗೆ ಸೇರಿದವರು’ ಎಂದು ಸಿಬಿಐ ಹೇಳಿದೆ.

ಮೈಸೂರು ರೇಸ್

ಡಬೀಟ್ ಗೆಲ್ಲುವ ನಿರೀಕ್ಷೆ

ಎಂ.ಎಸ್.ಸುರೇಶ್ ಮೆಮೋರಿಯಲ್ ಟ್ರೋಫಿ ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಡಬೀಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಮೆಗಾನ್ 2, ಚಿರಾಗ್ 4, ಫೈರ್‌ಫಿಂಚ್ 3
2ನೇ ರೇಸ್: ಕಂಟ್ರೀಸ್ ಲೈಟ್ 7, ಎಲಿವಾಡೊ 3, ಸ್ಕ್ವೇರ್ ಕಟ್ 6
3ನೇ ರೇಸ್: ಬೆಂಜಿಮಾ 2, ಸೆಲೆರಿಯೊ 12, ಸೂಪರ್ ಬೋಲ್ಡ್ 4
4ನೇ ರೇಸ್: ಎಮಿರಾಲ್ಡ್ ಕ್ವೀನ್ 1, ಮೆಷರ್ ಆಫ್ ಟೈಮ್ 2, ರಿವರ್ ಆಫ್ ಗೋಲ್ಡ್ 3
5ನೇ ರೇಸ್: ಡಬೀಟ್ 7, ಡಿ ಫ್ರಾಂಕ್ಸ್ 9, ಆಬ್ಸೊಲ್ಯೂಟ್ ಕಾಂಕ್ವರರ್ 8
6ನೇ ರೇಸ್: ನ್ಯಾಚುರಲ್ ಲೈಟ್ 10, ಸ್ಮೈಲ್ ಆಫ್ ಬ್ಯೂಟಿ 11, ಸೂಪರ್ ಕೈಂಡ್ 4
7ನೇ ರೇಸ್: ಚೋಟಪಾರಿ 9, ಸೀ ಗಾಡ್ 6, ತಲೈವಾ 5

ಉತ್ತಮ ಬೆಟ್: ಚೋಟಪಾರಿ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ನಗರದಲ್ಲಿ ಇಂದು

ನಿರ್ಮಾಣ–2024 ಸಮ್ಮೇಳನ: ಅತಿಥಿಗಳು: ಟಿ.ಜಿ. ಸೀತಾರಾಮ್, ಆರ್. ಜೈಪ್ರಸಾದ್, ಎಚ್.ಆರ್. ಶಾಂತರಾಜಣ್ಣ, ಎ.ಎಸ್. ಭೀಮರಾಯಪ್ಪ, ಬಿ.ಎನ್. ರಾಮಕೃಷ್ಣ, ಆಯೋಜನೆ: ಇನ್‌ಸ್ಟ್ರಕ್ಟ್, ಸ್ಥಳ: ಪ್ರೆಸ್ಟೀಜ್ ಶ್ರೀಹರಿ ಖೋಡೆ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್, ಕೋಣನಕುಂಟೆ, ಬೆಳಿಗ್ಗೆ 9.30

39ನೇ ವರ್ಷದ ಮಿಲ್ಕ್ ಕಾಲೊನಿ ಗಣೇಶ ಹಬ್ಬ: ಬೆಳಿಗ್ಗೆ 10ಕ್ಕೆ ಸತ್ಯನಾರಾಯಣಸ್ವಾಮಿ ಪೂಜೆ, ಲಕ್ಷ್ಮೀನಾರಾಯಣ ಹೋಮ, ಮಧ್ಯಾಹ್ನ 12ಕ್ಕೆ ಅನ್ನಸಂತರ್ಪಣೆ, ಆಯೋಜನೆ ಹಾಗೂ ಸ್ಥಳ: ಸ್ವಸ್ತಿಕ್ ಯುವಕರ ಸಂಘ, ಐದನೇ ಮುಖ್ಯ ರಸ್ತೆ, ಮಿಲ್ಕ್ ಕಾಲೊನಿ, ರಾಜಾಜಿನಗರ 2ನೇ ಹಂತ

100 ಬಿ.ಎಸ್-6 ಬಸ್‌ಗಳ ಲೋಕಾರ್ಪಣೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಸಾರಿಗೆ ಇಲಾಖೆ, ಸ್ಥಳ: ವಿಧಾನಸೌಧದ ಪೂರ್ವದ್ವಾರ ಮುಂಭಾಗ, ಬೆಳಿಗ್ಗೆ 10

‘ಭಾರತದ ಅಭಿವೃದ್ಧಿ ಪಥದಲ್ಲಿ ಸರ್ಕಾರಿ ಮಹಿಳಾ ನೌಕರರ ಕೊಡುಗೆಗಳು’ ರಾಜ್ಯಮಟ್ಟದ ವಿಚಾರಸಂಕಿರಣ: ಉದ್ಘಾಟನೆ: ಮಾರ್ಗರೇಟ್ ಆಳ್ವ, ‘ವೀಣಾ ಟೀಚರ್’ ಶೈಕ್ಷಣಿಕ ಕಿರುಚಿತ್ರ ಬಿಡುಗಡೆ: ದಿನೇಶ್ ಗುಂಡೂರಾವ್, ‘ಸಂಕಲ್ಪ’ ಪುಸ್ತಕ ಬಿಡುಗಡೆ: ಬಿ.ಕೆ. ಹರಿಪ್ರಸಾದ್, ಅತಿಥಿಗಳು: ಛಲವಾದಿ ನಾರಾಯಣಸ್ವಾಮಿ, ಟಿ.ಬಿ. ಜಯಚಂದ್ರ, ರಾಮೋಜಿ ಗೌಡ, ರಾಣಿ ಸತೀಶ್, ಸೌಮ್ಯಾ ರೆಡ್ಡಿ, ರಾಧಾಕೃಷ್ಣ, ಆಯೋಜನೆ: ಕರ್ನಾಟಕ ರಾಜ್ಯ ಸರ್ಕಾರಿ ಮಹಿಳೆಯರ ನೌಕರ ಸಂಘ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಅರಮನೆ ರಸ್ತೆ, ಬೆಳಿಗ್ಗೆ 10.30

ಸೈಬರ್ ಜಾಗೃತಿ: ಉದ್ಘಾಟನೆ: ಬಿ. ದಯಾನಂದ, ಅತಿಥಿಗಳು: ಎ.ಎಸ್. ಶಂಕರನಾರಾಯಣ, ಡಿ.ವಿ. ವೆಂಕಟಾಚಲಪತಿ, ನವೀನ್ ಅಮ್ಮೆಂಬಳ, ಭಾಷಣಕಾರರು: ಕೆ. ವೆಂಕಟೇಶಮೂರ್ತಿ, ಶಿವರತ್ನ ಎಸ್., ತರುಣ ಕೃಷ್ಣಮೂರ್ತಿ, ಆಯೋಜನೆ: ಆಕಾಶವಾಣಿ ಬೆಂಗಳೂರು, ಸ್ಥಳ: ರಾಕ್‌ವುಡ್ ಗ್ರೀನ್ ಪಬ್ಲಿಕ್ ಸ್ಕೂಲ್, ಬಸವನಪುರ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 10.30

ಪಿ.ಎಂ. ವಿಶ್ವಕರ್ಮ ಪ್ರದರ್ಶನ ಮತ್ತು ವ್ಯಾಪಾರ ಮೇಳದ ಉದ್ಘಾಟನೆ: ಶೋಭಾ ಕರಂದ್ಲಾಜೆ, ಉಪಸ್ಥಿತಿ: ಶರಣಬಸಪ್ಪ ದರ್ಶನಾಪುರ, ತೇಜಸ್ವಿ ಸೂರ್ಯ, ಪ್ರಿಯಕೃಷ್ಣ, ಆಯೋಜನೆ ಮತ್ತು ಸ್ಥಳ: ಎಂಎಸ್‌ಎಂಇ ಅಭಿವೃದ್ಧಿ ಮತ್ತು ಸೌಲಭ್ಯ ಕಚೇರಿ ಆವರಣ, ರಾಜಾಜಿನಗರ, ಇಂಡಸ್ಟ್ರಿಯಲ್ ಎಸ್ಟೇಟ್, ಬೆಳಿಗ್ಗೆ 11.30



ಸಂಯುಕ್ತಾ ಹೊರನಾಡು

‘ನಿರಂಜನ’ ಯಾಂತ್ರಿಕ (ರೊಬೋಟಿಕ್) ಆನೆಯ ಲೋಕಾರ್ಪಣೆ: ರಾಮಲಿಂಗಾರೆಡ್ಡಿ, ಉಪಸ್ಥಿತಿ: ರಂಗನಾಥ್, ಸಂಯುಕ್ತಾ ಹೊರನಾಡು, ಸೌಮ್ಯಾ ರೆಡ್ಡಿ, ಆಯೋಜನೆ: ಕೂಪಾ, ಪೆಟಾ, ಸ್ಥಳ: ಸಿದ್ಧಲಿಂಗೇಶ್ವರ ಸ್ವಾಮಿ ದೇವಸ್ಥಾನ, ಯಡಿಯೂರು, ಜಯನಗರ, ಬೆಳಿಗ್ಗೆ 11

ಶಿಕ್ಷಕರ ದಿನಾಚರಣೆ, ಗೌರವ ಸಮರ್ಪಣೆ: ಅಧ್ಯಕ್ಷತೆ: ನಾ. ಶ್ರೀಧರ್, ಅತಿಥಿ: ಸಂಗಮೇಶ ಎಂ. ಗೌಡಪ್ಪನವರ, ಉಪಸ್ಥಿತಿ: ವಿಜಯಲಕ್ಷ್ಮಿ ಸತ್ಯಮೂರ್ತಿ, ಗೌರವ ಸ್ವೀಕರಿಸುವವರು: ವೈ.ಜಿ. ಕೋಕಿಲವಾಣಿ, ಗಾಯಿತ್ರಮ್ಮ, ಎಂ.ಬಿ. ಲಕ್ಷ್ಮೀನಾರಾಯಣ, ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಭೋವಿಪಾಳ್ಯ, ಮಹಾಲಕ್ಷ್ಮಿ ಬಡಾವಣೆ, ಮಧ್ಯಾಹ್ನ 2.30

ಭಕ್ತಿ ಗೀತೆಗಳ ಗಾಯನ ಸ್ಪರ್ಧೆ: ಆಯೋಜನೆ ಮತ್ತು ಸ್ಥಳ: ಗುರು ವೇದಿಕೆ, ಹಯವದನರಾವ್ ರಸ್ತೆ, ರಾಮಕೃಷ್ಣ ಆಶ್ರಮ, ಬಸವನಗುಡಿ ರಸ್ತೆ, ಮಧ್ಯಾಹ್ನ 3

‘ಜನಸಾಮಾನ್ಯರ ಪಾಲಿಗೆ ಕಾನೂನು’ ಉಪನ್ಯಾಸ: ಶಂಕರಪ್ಪ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಮಹಾಕವಿ ಭಾಸನ ನಾಟಕೋತ್ಸವ: ‘ದೂತ ಘಟೋತ್ಕಚ’ ನಾಟಕ ಪ್ರದರ್ಶನ: ನಿರ್ದೇಶನ: ಶಿವು ಹೊನ್ನಿಗಾನಹಳ್ಳಿ, ಆಯೋಜನೆ: ಬಿಂಕ ಬಿನ್ನಾಣರು ರಂಗ ತಂಡ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7

‘ಸರ್ಕಾರಿ ಶಾಲೆ ಪ್ರಗತಿಗೆ ದೇಣಿಗೆ ನೀಡಿ’

‘ನಮ್ಮ ಶಾಲೆ ನಮ್ಮ ಜವಾಬ್ದಾರಿ’ ಲಾಂಛನ ಅನಾವರಣ ● ಶಿಕ್ಷಣ ಸಚಿವ ಮಧು ಬಂಗಾರಪ್ಪ ಮನವಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ರಾಜ್ಯದ ಎಲ್ಲ ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ ‘ನಮ್ಮ ಶಾಲೆ ನಮ್ಮ ಜವಾಬ್ದಾರಿ’ ಯೋಜನೆ ಜಾರಿಗೊಳಿಸಿದೆ. ಉದ್ಯೋಗಿಗಳು, ಉದ್ಯಮಿಗಳು, ಪಾಲಕರು ಮತ್ತು ಹಳೆ ವಿದ್ಯಾರ್ಥಿಗಳು ಉದಾರ ದೇಣಿಗೆ ನೀಡಿ ಪ್ರಗತಿಯ ಜವಾಬ್ದಾರಿ ವಹಿಸಿಕೊಳ್ಳಬೇಕು’ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮನವಿ ಮಾಡಿದರು.

ಇಲ್ಲಿನ ಸುವರ್ಣ ವಿಧಾನಸೌಧದಲ್ಲಿ ಬುಧವಾರ ‘ನಮ್ಮ ಶಾಲೆ ನಮ್ಮ ಜವಾಬ್ದಾರಿ’ ಲಾಂಛನ ಅನಾವರಣ, ದಾನಿಗಳಿಗೆ ಸನ್ಮಾನ ಹಾಗೂ ವಿದ್ಯಾರ್ಥಿಗಳ ಜೊತೆಗಿನ ಸಂವಾದ ಸಮಾರಂಭದಲ್ಲಿ ಅವರು ಮಾತನಾಡಿದರು.

‘ರಾಜ್ಯದಲ್ಲಿ 45 ಸಾವಿರ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆಗಳಿವೆ. 56 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳಿದ್ದಾರೆ. ಪಿಯು ವಿದ್ಯಾರ್ಥಿಗಳೂ ಸೇರಿ ಒಟ್ಟು 1.05 ಕೋಟಿ ವಿದ್ಯಾರ್ಥಿಗಳಿದ್ದಾರೆ. ಕಳೆದ ದಶಕಗಳಲ್ಲಿ ಇಲ್ಲಿ ಕಲಿತು ಹೋದವರ ಸಂಖ್ಯೆ ಲೆಕ್ಕಕ್ಕೆ ಸಿಗದು. ಅವರು ತಾವು ಕಲಿತ ಶಾಲೆಗಳಿಗೆ ಮರಳಬೇಕು. ಕನಿಷ್ಠ ₹5 ಸಾವಿರ ದೇಣಿಗೆ ನೀಡಬೇಕು ಅಥವಾ ಇಷ್ಟವಾದದ್ದನ್ನು ಕೊಡುಗೆ ಕೊಡಬೇಕು. ಇದರಿಂದ ಸರ್ಕಾರಿ ಶಾಲೆಗಳ ಚಿತ್ರಣವೇ ಬದಲಾಗುತ್ತದೆ’ ಎಂದರು.

ಮುಖ್ಯಾಂಶಗಳು

- ಶಿಕ್ಷಣ ಸಂಸ್ಥೆ ಅಭಿವೃದ್ಧಿಗೆ ಜನರ ಸಹಭಾಗಿತ್ವ ಅಗತ್ಯ
- ದೇಣಿಗೆ ನೀಡುವಂತೆ ವಾಟ್ಸ್‌ಆ್ಯಪ್ ಮೂಲಕವೂ ಜಾಗೃತಿ
- 45ಕ್ಕೂ ಹೆಚ್ಚು ದಾನಿಗಳಿಗೆ ಸಚಿವರಿಂದ ಸನ್ಮಾನ

ವಾರದಲ್ಲಿ ಆರು ದಿನ ಮಕ್ಕಳಿಗೆ ಮೊಟ್ಟೆ ನೀಡುವ ಯೋಜನೆಗೆ ಸೆ. 25ಕ್ಕೆ ಆರಂಭವಾಗಲಿದೆ. ಇದಕ್ಕೆ ಅಜೀಮ್ ಪ್ರೇಮ್‌ಜಿ ಪ್ರತಿಷ್ಠಾನ ₹1,500 ಕೋಟಿ ದೇಣಿಗೆ ನೀಡಿದೆ

ಮಧು ಬಂಗಾರಪ್ಪ
ಶಾಲಾ ಶಿಕ್ಷಣ ಸಚಿವ

‘ಜನರ ಸಹಭಾಗಿತ್ವದಿಂದ ಶಿಕ್ಷಣ ಸಂಸ್ಥೆ ಅಭಿವೃದ್ಧಿ ಮಾಡಬೇಕು ಎಂಬ ಉದ್ದೇಶದಿಂದ ಈ ಯೋಜನೆ ತರಲಾಗಿದೆ. 7ನೇ ವೇತನ ಆಯೋಗ ಜಾರಿಯಾದ ತಕ್ಷಣ ಶಿಕ್ಷಕರೆಲ್ಲ ತಮ್ಮ ಒಂದು ತಿಂಗಳ ವೇತನವನ್ನು ಈ ಯೋಜನೆಗೆ ನೀಡಬೇಕು. ಸುಮಾರು 31 ಸಾವಿರ ಹಳೆಯ ವಿದ್ಯಾರ್ಥಿಗಳ ಸಂಘಗಳನ್ನು ಕಟ್ಟಲಾಗಿದೆ. ವಾಟ್ಸ್‌ಆ್ಯಪ್ ಗ್ರೂಪುಗಳಲ್ಲಿ ಸೇರಿಸಲಾಗಿದೆ. ಈಗಾಗಲೇ ಕೆಲವರು ಲಕ್ಷಗಟ್ಟಲೇ ದಾನ ನೀಡಿದ್ದಾರೆ’ ಎಂದರು.

‘ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ತಾವುರು ಕಲಿತ ಸಿದ್ದರಾಮನಹುಂಡಿಯ ಸರ್ಕಾರಿ ಶಾಲೆಗೆ ₹ 10 ಲಕ್ಷ ನೀಡಿದ್ದಾರೆ. ಮಾಜಿ ಮುಖ್ಯಮಂತ್ರಿ ದಿವಂಗತ ಎಸ್. ಬಂಗಾರಪ್ಪ ಅವರು ಕಲಿತ ಶಾಲೆಗೆ ನಾನು ₹10 ಲಕ್ಷ ದೇಣಿಗೆ ನೀಡಿದ್ದೇನೆ. ಹಲವು ಶಾಸಕರೂ ಇಂಥ ಕೆಲಸಕ್ಕೆ ಮುಂದಾಗಿದ್ದಾರೆ. ಇದೊಂದು ಕ್ರಾಂತಿಕಾರಕ ನಡೆಯಾಗಬೇಕು’ ಎಂದರು.

ಲಾಂಛನ ಅನಾವರಣಗೊಳಿಸಿದ ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ, ‘ಇದು ಸರ್ಕಾರದ ಯೋಜನೆ ಮಾತ್ರವಲ್ಲ. ಪ್ರತಿಯೊಬ್ಬ ಶಿಕ್ಷಕ, ಪಾಲಕ, ಇಲಾಖೆಯ ಅಧಿಕಾರಿಗಳೂ ಜವಾಬ್ದಾರರು‘ ಎಂದರು.

‘ಧಾರ್ಮಿಕ ಕಾರ್ಯಗಳಿಗೆ ಹುಡುಕಿಕೊಂಡು ಹೋಗಿ ದೇಣಿಗೆ ಕೊಡುತ್ತೀರಿ. ಸರ್ಕಾರಿ ಶಾಲೆಗಳಿಗೆ ಕೊಟ್ಟು ನೋಡಿ; ದೇಶದ ಭವಿಷ್ಯ ಬದಲಾಗುತ್ತದೆ’ ಎಂದರು.

ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅಧ್ಯಕ್ಷತೆ ವಹಿಸಿದ್ದರು. 45ಕ್ಕೂ ಹೆಚ್ಚು ದಾನಿಗಳನ್ನು ಸನ್ಮಾನಿಸಲಾಯಿತು.



ಬೆಳಗಾವಿಯ ಬುಧವಾರ ‘ನಮ್ಮ ಶಾಲೆ ನಮ್ಮ ಜವಾಬ್ದಾರಿ’ ಯೋಜನೆಯ ಲಾಂಛನವನ್ನು ಚಿಣ್ಣರಿಂದ ಅನಾವರಣಗೊಳಿಸಲಾಯಿತು. ಸಚಿವರಾದ ಲಕ್ಷ್ಮಿ ಹೆಬ್ಬಾಳಕರ, ಸತೀಶ ಜಾರಕಿಹೊಳಿ, ಮಧು ಬಂಗಾರಪ್ಪ ಇದ್ದರು –ಪ್ರಜಾವಾಣಿ ಚಿತ್ರ

ಒಂದೇ ತಿಂಗಳಲ್ಲಿ ಎರಡು ಸಲ ವರ್ಗಾವಣೆ

ಒಂದನೇ ಪುಟದಿಂದ...

ವಲಯ ಆಯ್ಕೆಯಲ್ಲೂ ತಾರತಮ್ಯ: ಬೆಂಗಳೂರು ನಗರವನ್ನು ‘ಎ’ ಕೇಂದ್ರವಾಗಿ, ಮಹಾನಗರ ಪಾಲಿಕೆ ಇರುವ ನಗರಗಳನ್ನು ‘ಬಿ’, ಜಿಲ್ಲಾ ಕೇಂದ್ರಗಳನ್ನು ‘ಸಿ’, ತಾಲ್ಲೂಕು ಕೇಂದ್ರಗಳನ್ನು ‘ಡಿ’ ಹಾಗೂ ಹೋಬಳಿ ಮಟ್ಟದಲ್ಲಿರುವ ಪದವಿ ಕಾಲೇಜುಗಳನ್ನು ‘ಇ’ ವಲಯಗಳಾಗಿ ವಿಂಗಡಿಸಲಾಗಿದೆ. ಸಾಮಾನ್ಯ ವರ್ಗಾವಣೆಯಲ್ಲಿ ಒಂದು ವಲಯದಲ್ಲಿ ಕೆಲಸ ಮಾಡುತ್ತಿರುವ ಪ್ರಾಧ್ಯಾಪಕರು ಆ ವಲಯ ಬಿಟ್ಟು ಇತರೆ ಯಾವುದೇ ವಲಯಗಳಲ್ಲಿನ ಖಾಲಿ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಆದರೆ, ವಿಶೇಷ ವರ್ಗಾವಣೆಯಲ್ಲಿ ಹೋಬಳಿ ಮಟ್ಟದ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವವರು ತಾಲ್ಲೂಕು ಕೇಂದ್ರಗಳಿಗೆ, ತಾಲ್ಲೂಕು ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವವರು ಜಿಲ್ಲಾ ಕೇಂದ್ರದ ಕಾಲೇಜುಗಳನ್ನಷ್ಟೇ ಆಯ್ಕೆ ಮಾಡಿಕೊಳ್ಳಲು ಅವಕಾಶ ಇದೆ.

‘ಸಾಮಾನ್ಯ ವರ್ಗಾವಣೆ ಪಟ್ಟಿಯಲ್ಲಿ ಇರುವವರು ‘ಎ’ ವಲಯದಿಂದ ‘ಸಿ’ವರೆಗಿನ ಬಹುತೇಕ ಖಾಲಿ ಹುದ್ದೆಗಳನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ನಂತರ ನಡೆಯುವ ವಿಶೇಷ ವರ್ಗಾವಣೆ ವೇಳೆಗೆ ಸಮೀಪದ ಕಾಲೇಜುಗಳಲ್ಲಿ ಖಾಲಿ ಹುದ್ದೆಗಳ ಲಭ್ಯತೆ ಕಡಿಮೆ ಇರುತ್ತವೆ. ಒಂದು ತಾಲ್ಲೂಕು ವ್ಯಾಪ್ತಿಯ ಹೋಬಳಿ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಆ ಜಿಲ್ಲೆಯ ಯಾವುದೇ ತಾಲ್ಲೂಕು ಕೇಂದ್ರಗಳಲ್ಲಿ ಖಾಲಿ ಹುದ್ದೆ ಸಿಗದಿದ್ದರೆ ಬೇರೆ ಜಿಲ್ಲೆಗೆ ತೆರಳುವುದು ಅನಿವಾರ್ಯ. ಆ ಜಿಲ್ಲೆಯ ಜಿಲ್ಲಾ ಕೇಂದ್ರ ಗಳಲ್ಲಿ ಹುದ್ದೆ ಖಾಲಿ ಇದ್ದರೂ, ಅವಕಾಶ ಇಲ್ಲ’ ಎನ್ನುತ್ತಾರೆ ಸಹಾಯಕ ಪ್ರಾಧ್ಯಾಪಕ ಅನಿಲ್. ‘ಹೊಸದಾಗಿ ನೇಮಕವಾದ ಸಹಾಯಕ ಪ್ರಾಧ್ಯಾಪಕರಿಗೆ ಗ್ರಾಮೀಣ ಪ್ರದೇಶದಲ್ಲಿ ಕೆಲಸ ಕಡ್ಡಾಯಗೊಳಿಸಲು ಸರ್ಕಾರ ವಿಶೇಷ ವರ್ಗಾವಣೆಯ ನಿಯಮ ರೂಪಿಸಿದೆ ನಾವು ಗ್ರಾಮೀಣ ಭಾಗದಲ್ಲೇ ಕೆಲಸ ಮಾಡಲು ಬಯಸಿದರೂ ಕಡ್ಡಾಯ ವರ್ಗಾವಣೆಗೆ ಒಳಗಾಗುತ್ತಿದ್ದೇವೆ. ಯಾರು ಕೆಲಸ ಮಾಡಿದರೇನು? ಗ್ರಾಮೀಣ ವಿದ್ಯಾರ್ಥಿಗಳಿಗೆ ಅನುಕೂಲ ಆಗಬೇಕು ಅಷ್ಟೇ ಎನ್ನುವುದು ನಮ್ಮ ಆಶಯ’ ಎಂದು ಅವರು ವಿವರಿಸಿದರು.

ವಿಶೇಷ ವರ್ಗಾವಣೆಯ ಕರಡು ಅಧಿಸೂಚನೆ ಪ್ರಕಟವಾದ ಮೂರೇ ದಿನದಲ್ಲಿ 500ಕ್ಕೂ ಹೆಚ್ಚು ಆಕ್ಷೇಪಣೆಗಳು ಸಲ್ಲಿಕೆಯಾಗಿವೆ. ಎಲ್ಲಾ ವಲಯದ ಕಾಲೇಜುಗಳನ್ನೂ ಮುಕ್ತವಾಗಿ ಆಯ್ಕೆ ಮಾಡಿಕೊಳ್ಳುವುದೂ ಸೇರಿದಂತೆ ವಿಶೇಷ ವರ್ಗಾವಣೆಯ ನಿಯಮಗಳಲ್ಲಿನ ಹಲವು ನ್ಯೂನತೆಗಳನ್ನು ಸರಿಪಡಿಸಿ, ನಂತರ ಪ್ರಕ್ರಿಯೆ ಆರಂಭಿಸುವಂತೆ ‘ಇ’ ವಲಯದಲ್ಲಿ ಕೆಲಸ ಮಾಡುತ್ತಿರುವ ಬೋಧಕ ಸಿಬ್ಬಂದಿ ಉನ್ನತ ಶಿಕ್ಷಣ ಇಲಾಖೆಗೆ ಮನವಿ ಸಲ್ಲಿಸಿದ್ದಾರೆ.

ಎರಡೂವರೆ ವರ್ಷ; ಆರು ವರ್ಗಾವಣೆ

ಸರ್ಕಾರಿ ಪದವಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಪ್ರಾಧ್ಯಾಪಕರು, ಗ್ರಂಥಪಾಲಕರು ಹಾಗೂ ಕ್ರೀಡಾ ನಿರ್ದೇಶಕರ ವರ್ಗಾವಣೆಗೆ ಸರ್ಕಾರ 2021ರವರೆಗೂ ಸೂಕ್ತ ನಿಯಮಗಳನ್ನೇ ರೂಪಿಸಿರಲಿಲ್ಲ.

2009ರ ನಂತರ ವರ್ಗಾವಣಾ ಪ್ರಕ್ರಿಯೆಗಳು ಸಂಪೂರ್ಣ ಸ್ಥಗಿತವಾಗಿದ್ದವು. 2021ರಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆಗೆ ನಿಯಮಗಳನ್ನು ರೂಪಿಸಿ, ಜಾರಿಗೊಳಿಸಿತ್ತು. ಆದರೆ, ಆ ವರ್ಷ ವರ್ಗಾವಣೆ ಪ್ರಕ್ರಿಯೆಗೆ ಚಾಲನೆ ನೀಡಿರಲಿಲ್ಲ. 2022ರ ಏಪ್ರಿಲ್‌ನಲ್ಲಿ ವರ್ಗಾವಣೆಗೆ ಅಧಿಸೂಚನೆ ಹೊರಡಿಸಲಾಯಿತು. ಅಲ್ಲಿಂದ ಈ ಬಾರಿಯ ಎರಡು ವರ್ಗಾವಣೆಗಳೂ ಸೇರಿ ಎರಡೂವರೆ ವರ್ಷಗಳಲ್ಲಿ ಒಟ್ಟು ಆರು ವರ್ಗಾವಣೆಗಳನ್ನು ನಡೆಸಿದ ಶ್ರೇಯ ಕಾಲೇಜು ಶಿಕ್ಷಣ ಇಲಾಖೆಗೆ ಸಲ್ಲುತ್ತದೆ.

ಸರ್ಕಾರದ ವಿರುದ್ಧ ಬಳ್ಳಾರಿಗೆ ಪಾದಯಾತ್ರೆ

ಒಂದನೇ ಪುಟದಿಂದ...

‘ಮೈಸೂರು ಚಲೋ ಪಾದಯಾತ್ರೆ ಮುಡಾ ಹಗರಣಕ್ಕೆ ಸೀಮಿತವಾಗಿತ್ತು. ಅಲ್ಲಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ವಿಚಾರ ಹೆಚ್ಚು ಪ್ರಸ್ತಾಪವಾಗಲಿಲ್ಲ. ಬಿಜೆಪಿಯ ಹೋರಾಟದಿಂದಾಗಿಯೇ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ನಾಗೇಂದ್ರ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಯಿತು. ಇದೀಗ ನಾಗೇಂದ್ರ ಅವರೇ ಈ ಹಗರಣದ ‘ಮಾಸ್ಟರ್ ಮೈಂಡ್’ ಎಂಬುದು ಇಡಿ ತನಿಖೆಯಿಂದ ಬಯಲಾಗಿದೆ. ರಾಜ್ಯ ಸರ್ಕಾರ ಹಗರಣವನ್ನು ಮುಚ್ಚಿ ಹಾಕಲೆಂದೇ ಎಸ್‌ಐಟಿ ತನಿಖೆಗೆ ಆದೇಶಿಸಿತ್ತು. ನಾಗೇಂದ್ರ ಮತ್ತು ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್ ಅವರಿಗೆ ಎಸ್‌ಐಟಿ ಕ್ಲೀನ್ ಚಿಟ್ ನೀಡಿದೆ’ ಎಂದು ದೂರಿದರು.

‘ಮುಖ್ಯಮಂತ್ರಿಯವರ ಅಧೀನದ ಇಲಾಖೆಯಲ್ಲೇ ನಡೆದ ಇಷ್ಟು ದೊಡ್ಡ ಹಗರಣವನ್ನು ಮುಚ್ಚಿ ಹಾಕಲು ವ್ಯವಸ್ಥಿತ ಸಂಚು ನಡೆಸಿದ್ದರು. ಎಸ್‌ಐಟಿಗೆ ಮೂರು ಕಾಸಿನ ಮಾರ್ಯದೆ ಇದೆಯಾ? ₹20 ಕೋಟಿ ಬಳ್ಳಾರಿ ಚುನಾವಣೆಗೆ ಬಳಕೆಯಾಗಿದೆ ಎಂದು ಜಾರಿ ನಿರ್ದೇಶನಾಲಯ ಹೇಳಿದೆ. ಇದಕ್ಕೆ ಮುಖ್ಯಮಂತ್ರಿಯವರು ಏನು ಹೇಳುತ್ತಾರೆ? ಹಗರಣದಲ್ಲಿ ಭಾಗಿಯಾಗಿರುವ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್ ಅವರನ್ನು ಇನ್ನೂ ಏಕೆ ಇಟ್ಟುಕೊಂಡಿದ್ದೀರಿ’ ಎಂದು ಪ್ರಶ್ನಿಸಿದರು.

ಹನಿಟ್ರ್ಯಾಪ್ ಪ್ರಕರಣ ಸಿಬಿಐಗೆ ಕೊಡಿ: ‘ಕಲಬುರಗಿಯಲ್ಲಿ ಕಾನೂನು–ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಎಲ್ಲ ಕೆಟ್ಟ ಪರಂಪರೆಯ ಕಥೆಗಳೂ ಅಲ್ಲಿಂದ ಆರಂಭ ಆಗುತ್ತಿವೆ. ನಿನ್ನೆ ಹನಿಟ್ರ್ಯಾಪ್ ವಿಚಾರ ಕೇಳಿ ಬಂದಿದೆ. 6 ಜನರನ್ನು ಬಂಧಿಸಿದ್ದು, ಇದರ ಹಿಂದೆ ಬಹಳ ಜನರಿದ್ದಾರೆ. ಪ್ರಿಯಾಂಕ್ ಖರ್ಗೆ ಕೆಟ್ಟ ಹೆಸರು ಬಾರದಂತೆ ಶರಣಾಗತಿ ಆಗುತ್ತೇವೆ ಎಂದು ಆರೋಪಿಗಳು ಹೇಳಿದ್ದಾರೆ. ಇದರ ಬಗ್ಗೆ ಸಿಬಿಐ ತನಿಖೆಯೇ ಆಗಬೇಕು’ ಎಂದು ಅವರು ಒತ್ತಾಯಿಸಿದರು.


ಕಳಸ ಪಟ್ಟಣದಲ್ಲಿ ಬೆಳೆಗಾರರು ಬುಧವಾರ ಮೆರವಣಿಗೆ ನಡೆಸಿದರು

ಒತ್ತುವರಿ ತೆರವು ವಿರೋಧಿಸಿ ಕಳಸ ಬಂದ್ ಯಶಸ್ವಿ

ಪ್ರಜಾವಾಣಿ ವಾರ್ತೆ

ಕಳಸ (ಚಿಕ್ಕಮಗಳೂರು): ಅರಣ್ಯ ಭೂಮಿ ಒತ್ತುವರಿ ತೆರವು ವಿರೋಧಿಸಿ ಬೆಳೆಗಾರರ ಸಂಘ ಮತ್ತು ಒತ್ತುವರಿ ಹೋರಾಟ ಸಮಿತಿಯು ಕರೆ ನೀಡಿದ್ದ ‘ಕಳಸ ಬಂದ್’ ಬುಧವಾರ ಯಶಸ್ವಿಯಾಯಿತು.

ಬೆಳಿಗ್ಗೆ ಅಂಗಡಿಗಳು, ಶಾಲಾ–ಕಾಲೇಜುಗಳು ಮುಚ್ಚಿದ್ದವು. ಸಂಜೆ 4ರ ನಂತರ ಅಂಗಡಿಗಳು ತೆರೆದವು. ಕಳಸೇಶ್ವರ ದೇವಸ್ಥಾನದಿಂದ ಪಟ್ಟಣದ ಪ್ರಮುಖ ಬೀದಿಗಳಲ್ಲಿ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೃಷಿಕರು ಭಾಗವಹಿಸಿದ್ದರು.

‘ಮಲೆನಾಡಿನ ಕಾಫಿ ತೋಟಗಳು ಅರಣ್ಯದ ಸ್ವರೂಪದಲ್ಲೇ ಇವೆ ಎಂದು ಸರ್ಕಾರದ ಗಮನಕ್ಕೆ ತರಲಾಗಿದೆ. ಸದ್ಯಕ್ಕೆ ಯಾವುದೇ ಭೂಮಿ ತೆರವು ಮಾಡದಂತೆ ಅರಣ್ಯ ಸಚಿವರಿಗೆ ಮುಖ್ಯಮಂತ್ರಿ ಸೂಚಿಸಿದ್ದಾರೆ. ರಾಜಕೀಯ ಪ್ರೇರಿತ ವದಂತಿ ನಂಬಬಾರದು’ ಎಂದು ಶಾಸಕ ಟಿ.ಡಿ.ರಾಜೇಗೌಡ ಮನವಿ ಮಾಡಿದರು.

‘ಅರಣ್ಯ ಅಧಿಕಾರಿಗಳು ರೈತರ ಭೂಮಿ ತೆರವು ಮಾಡುವ ಯತ್ನ ಮಾಡಿದರೆ ಜಿಲ್ಲಾಧಿಕಾರಿ ಕಚೇರಿ ಮುಂದೆ ಧರಣಿ ನಡೆಸುತ್ತೇನೆ’ ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಎಚ್ಚರಿಸಿದರು. ಮುಖಂಡರಾದ ಪ್ರಮೋದ್ ಮಧ್ವರಾಜ್, ದೀಪಕ್ ದೊಡ್ಡಯ್ಯ, ಜಿ.ಕೆ.ಮಂಜಪ್ಪಯ್ಯ ಭಾಗವಹಿಸಿದ್ದರು.

ಎಚ್‌ಎಸ್‌ಆರ್‌ಪಿ ಬೀಳಲಿದೆ ದಂಡ

ಒಂದನೇ ಪುಟದಿಂದ...

52 ಲಕ್ಷ ಅಳವಡಿಕೆ: ರಾಜ್ಯದಲ್ಲಿ 2019ರ ಏ.1ಕ್ಕೂ ಮೊದಲು ನೋಂದಣಿಯಾದ 2 ಕೋಟಿ ವಾಹನಗಳು ಎಚ್‌ಎಸ್‌ಆರ್‌ಪಿ ಅಳವಡಿಸಿಕೊಳ್ಳಬೇಕಿದೆ. ಅದರಲ್ಲಿ 52 ಲಕ್ಷ ವಾಹನಗಳಿಗೆ ಮಾತ್ರ ಎಚ್‌ಎಸ್‌ಆರ್‌ಪಿ ಅಳವಡಿಸಲಾಗಿದೆ. ಇನ್ನೂ 1.48 ಕೋಟಿ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಅಳವಡಿಸಲು ಬಾಕಿ ಇದೆ ಎಂದು ಸಾರಿಗೆ ಇಲಾಖೆ (ಪ್ರವರ್ತನ) ಹೆಚ್ಚುವರಿ ಆಯುಕ್ತ ಸಿ. ಮಲ್ಲಿಕಾರ್ಜುನ ತಿಳಿಸಿದ್ದಾರೆ.

ಆನ್‌ಲೈನ್‌ನಲ್ಲಿ ಅವಕಾಶ: http// transport.karnataka.gov.in ಅಥವಾ www.siam.in ಮೂಲಕವೂ ಎಚ್‌ಎಸ್‌ಆರ್‌ಪಿ ಅಳವಡಿಸಲು ನೋಂದಣಿ ಮಾಡಿಕೊಳ್ಳಬಹುದು ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಂ. ಯೋಗೀಶ್ ಮಾಹಿತಿ ನೀಡಿದ್ದಾರೆ.

ಮೊದಲ ಬಾರಿಗೆ ₹500, ಬಳಿಕ ₹1000 ದಂಡ

‘ಎಚ್‌ಎಸ್‌ಆರ್‌ಪಿ ಇಲ್ಲದ ವಾಹನಗಳು ಮೊದಲ ಬಾರಿ ಪತ್ತೆಯಾದಾಗ ₹500 ದಂಡ ವಿಧಿಸಲಾಗುತ್ತದೆ. ಆನಂತರ ಪ್ರತಿ ಬಾರಿ ₹1000 ದಂಡ ಕಟ್ಟಬೇಕಾಗುತ್ತದೆ. ತಪಾಸಣೆ ಮಾಡುವಾಗ ನಂಬರ್ ಪ್ಲೇಟ್ ಒಂದನ್ನೇ ಪರಿಶೀಲಿಸುವುದಿಲ್ಲ. ವಿಮೆ, ನೋಂದಣಿ ಪ್ರಮಾಣಪತ್ರ (ಆರ್‌ಸಿ), ವಾಹನ ಚಾಲನಾ ಪರವಾನಗಿ (ಡಿಎಲ್) ಸೇರಿದಂತೆ ಎಲ್ಲ ದಾಖಲೆಗಳನ್ನೂ ಪರಿಶೀಲಿಸುತ್ತಾರೆ. ಸಂಬಂಧಪಟ್ಟ ದಾಖಲೆಗಳು ಇಲ್ಲದೇ ಇದ್ದರೆ ಇನ್ನಷ್ಟು ದಂಡ ಕಟ್ಟಬೇಕಾಗುತ್ತದೆ’ ಎಂದು ಸಾರಿಗೆ ಇಲಾಖೆಯ (ಪ್ರವರ್ತನ) ಹೆಚ್ಚುವರಿ ಆಯುಕ್ತ ಸಿ. ಮಲ್ಲಿಕಾರ್ಜುನ ತಿಳಿಸಿದರು.

ರಸ್ತೆ ತಡೆ ಯತ್ನ: ವಿದ್ಯಾರ್ಥಿಗಳ ಮೇಲೆ ಲಾಠಿ ಪ್ರಹಾರ

ಮಂಗಳೂರು: ನಗರದ ಹಂಪನಕಟ್ಟೆಯಲ್ಲಿ ವಿಶ್ವವಿದ್ಯಾನಿಲಯ ಕಾಲೇಜಿನ ಬಳಿ ಇದ್ದ ಪ್ರಯಾಣಿಕರ ತಂಗುದಾಣದ ತೆರವು ಖಂಡಿಸಿ ಎಬಿವಿಪಿ ನೇತೃತ್ವದಲ್ಲಿ ಕಾಲೇಜು ವಿದ್ಯಾರ್ಥಿಗಳು ಇಲ್ಲಿನ ಗಡಿಯಾರ ಗೋಪುರದ ಬಳಿ ಬುಧವಾರ ಪ್ರತಿಭಟನೆ ನಡೆಸಿದರು.

ತಂಗುದಾಣವನ್ನು ಮತ್ತೆ ನಿರ್ಮಿಸಬೇಕು. ಜಿಲ್ಲಾಧಿಕಾರಿ ಹಾಗೂ ಪಾಲಿಕೆ ಆಯುಕ್ತರು ಸ್ಥಳಕ್ಕೆ ಬಂದು ಭರವಸೆ ನೀಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಅರ್ಧ ಗಂಟೆ ಕಳೆದರೂ ಯಾವ ಅಧಿಕಾರಿಗಳೂ ಬಂದಿಲ್ಲ ಎಂದು ಸಿಟ್ಟಿಗೆದ್ದ ಪ್ರತಿಭಟನಾಕಾರರು ಏಕಾಏಕಿ ರಸ್ತೆಗೆ ನುಗ್ಗಿ ವಾಹನ ಸಂಚಾರಕ್ಕೆ ಅಡ್ಡಿಪಡಿಸಲು ಯತ್ನಿಸಿದರು.

ರಸ್ತೆಗಿಳಿದ ವಿದ್ಯಾರ್ಥಿಗಳ ಮೇಲೆ ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿ ಚದುರಿಸಿದರು. ಬಳಿಕ ರಸ್ತೆ ತಡೆ ಕೈಬಿಟ್ಟ ವಿದ್ಯಾರ್ಥಿಗಳು ರಸ್ತೆ ಪಕ್ಕದಲ್ಲಿ ಪ್ರತಿಭಟನೆ ಮುಂದುವರಿಸಿದರು.

ತಹಶೀಲ್ದಾರ್ ಪ್ರಶಾಂತ ಪಾಟೀಲ ಅವರು ಸ್ಥಳಕ್ಕೆ ಬಂದು ವಿದ್ಯಾರ್ಥಿಗಳ ಅಹವಾಲು ಆಲಿಸಿದರು.

ಭಾರತದಲ್ಲಿ ಸೂಫಿಯಾನ

ಯು.ಟಿ.ಆಯಿಷಾ ಫರ್ಝಾನ

ಸೂಫಿಸಂ, ಅಥವಾ ತಸಾವ್ವುಫ್, ಇಸ್ಲಾಂ ಧರ್ಮದ ಒಂದು ಅತೀಂದ್ರಿಯ ನಂಬಿಕೆಗಳ ಶಾಖೆಯಾಗಿದ್ದು, ಆಂತರಿಕ ಪ್ರಪಂಚದಲ್ಲಿ ದೇವರ ಹುಡುಕಾಟವನ್ನು ಒತ್ತಿಹೇಳುತ್ತದೆ ಮತ್ತು ಭೌತವಾದವನ್ನು ದೂರವಿಡುತ್ತದೆ.

ಸೂಫಿಸಂನಲ್ಲಿ ಪ್ರಾರ್ಥನೆ, ಧ್ಯಾನ, ಪಠಣ (ಧಿಕ್ರ್) ಮತ್ತು ಕವಿತೆಗಳ ಮೂಲಕ ದೈವಿಕತೆಗೆ ಆಧ್ಯಾತ್ಮಿಕ ಸ್ಪರ್ಶ ಇರುತ್ತದೆ. ಸೂಫಿಸಂ ಪ್ರೀತಿ, ಭಕ್ತಿ ಮತ್ತು ದೇವರ ಜತೆಗಿನ ಆಧ್ಯಾತ್ಮಿಕ ಅನುಭವಕ್ಕೆ ಒತ್ತು ನೀಡುತ್ತದೆ. ಸಾಮಾನ್ಯವಾಗಿ ಇದನ್ನು ಇಹ್ಸಾನ್ (ಆಧ್ಯಾತ್ಮಿಕ ಶ್ರೇಷ್ಠತೆ) ಅನ್ವೇಷಣೆ ಎಂದು ಕರೆಯಲಾಗುತ್ತದೆ.

ಹಿನ್ನೆಲೆ

- 12ನೇ ಶತಮಾನದಲ್ಲಿ ಭಾರತದಲ್ಲಿ ಸೂಫಿಸಂಗೆ ನೆಲೆ ಸಿಕ್ಕಿತು. ಪ್ರಧಾನವಾಗಿ ವ್ಯಾಪಾರಿಗಳು, ವಿದ್ವಾಂಸರು ಮತ್ತು ಅರಸರ ಮೂಲಕ ಇಸ್ಲಾಂನ ತತ್ವಗಳ ಪಸರುವಿಕೆಯಿಂದಾಗಿ ಸೂಫಿಸಂನ ಆಧ್ಯಾತ್ಮಿಕ ಸಂದೇಶವು ಭಾರತದ ವೈವಿಧ್ಯಮಯ ಧಾರ್ಮಿಕ ಪ್ರಪಂಚವನ್ನು ಪ್ರವೇಶಿಸಿತು.
- ಆರಂಭಿಕ ಹಂತದಲ್ಲಿ ಸೂಫಿಗಳು ಆತ್ಮಶುದ್ಧೀಕರಣಕ್ಕೆ ಪ್ರಯತ್ನಿಸುವ ತಪಸ್ವಿಗಳಾಗಿದ್ದರು. ಸರಳವಾಗಿ ಜೀವಿಸುತ್ತಿದ್ದ ಅವರು ದೇವರ ಅನ್ವೇಷಣೆಗೆ ಬದುಕನ್ನು ಮುಡಿಪಾಗಿಟ್ಟರು. ಸೂಫಿ ಪಂಥದ ನಾಯಕರು ಸೂಫಿ ಬೋಧನೆಗಳನ್ನು ಹರಡುವಲ್ಲಿ ಮಹತ್ವದ ಪಾತ್ರ ವಹಿಸಿದರು. ಸೂಫಿ ಆದೇಶಗಳನ್ನು ಅಂದರೆ 'ಸಿಲ್ಸಿಲಾಸ್' ಅನ್ನು ಸ್ಥಾಪಿಸಿದರು.

ಭಾರತದಲ್ಲಿನ ಪ್ರಮುಖ ಸೂಫಿ ಪಂಥಗಳು

- ಹಲವಾರು ಸೂಫಿ ಸಿಲ್ ಸಿಲಾ ಗಳು, ಪ್ರತಿಯೊಂದೂ ವಿಭಿನ್ನ ಆಚರಣೆಗಳು ಮತ್ತು ಬೋಧನೆಗಳೊಂದಿಗೆ, ಭಾರತದಲ್ಲಿ ಸೂಫಿಸಂನ ಹರಡುವಿಕೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿವೆ. ಅವುಗಳು ಹೀಗಿವೆ.

1. ಚಿಶ್ತಿ ಸಿಲ್ ಸಿಲಾ

- ಚಿಶ್ತಿ ಶಾಖೆಯು ಭಾರತದಲ್ಲಿನ ಹಳೆಯ ಮತ್ತು ಅತ್ಯಂತ ಪ್ರಭಾವಶಾಲಿ ಸೂಫಿ ಆದೇಶಗಳಲ್ಲಿ ಒಂದಾಗಿದೆ. 12ನೇ ಶತಮಾನದಲ್ಲಿ ರಾಜಸ್ಥಾನದ ಅಜ್ಮೀರ್‌ನಲ್ಲಿ ಖ್ವಾಜಾ ಮೊಯಿನುದ್ದೀನ್ ಚಿಶ್ತಿ ಸ್ಥಾಪಿಸಿದ ಚಿಶ್ತಿ ಆದೇಶವು ಧರ್ಮ ಅಥವಾ ಜಾತಿಯನ್ನು ಲೆಕ್ಕಿಸದೆ ಎಲ್ಲಾ ಜನರಿಗೆ ಪ್ರೀತಿ, ಸಹಿಷ್ಣುತೆ ಮತ್ತು ಮುಕ್ತತೆಯ ಸಂದೇಶವನ್ನು ಒತ್ತಿಹೇಳಿತು.
- 'ಘರಿಬ್ ನವಾಜ್' (ಬಡವರ ಉಪಕಾರಿ) ಎಂದೂ ಕರೆಯಲ್ಪಡುವ ಖ್ವಾಜಾ ಮೊಯಿನುದ್ದೀನ್ ಚಿಶ್ತಿ ಸಹಾನುಭೂತಿ ಮತ್ತು ಮಾನವೀಯತೆಯ ಸಂಕೇತವಾಗಿದ್ದರು. ಅವರ ಬೋಧನೆಗಳು ಹೆಚ್ಚಿನ ಅನುಯಾಯಿಗಳನ್ನು ಆಕರ್ಷಿಸಿದ್ದು, ಅಜ್ಮೀರ್‌ನಲ್ಲಿರುವ ಅವರ 'ದರ್ಗಾ'ವು (ಗೋರಿಯಿರುವ ದೇಗುಲ) ಎಲ್ಲಾ ಧರ್ಮಗಳ ಜನರ ಪಾಲಿಗೆ ಪ್ರಮುಖ ಯಾತ್ರಾ ಸ್ಥಳವಾಗಿ ಉಳಿದಿದೆ.

2. ಸುಹ್ರವರ್ದಿ ಸಿಲ್ ಸಿಲಾ


- 13ನೇ ಶತಮಾನದಲ್ಲಿ ಬಹಾವುದ್ದೀನ್ ಜಕಾರಿಯಾ ಅವರು ಸುಹ್ರವರ್ದಿ ಕ್ರಮವನ್ನು ಭಾರತಕ್ಕೆ ಪರಿಚಯಿಸಿದರು. ಬಡತನ ಮತ್ತು ವೈರಾಗ್ಯವನ್ನು ಒತ್ತಿಹೇಳುವ ಚಿಶ್ತಿ ಕ್ರಮಕ್ಕಿಂತ ಭಿನ್ನವಾಗಿ, ಸುಹ್ರಾವರ್ದಿಗಳು ಪ್ರಾಪಂಚಿಕ ವ್ಯವಹಾರಗಳಲ್ಲಿ ತೊಡಗಿಸಿಕೊಳ್ಳಲು ಮತ್ತು ದೈನಂದಿನ ಜೀವನದೊಂದಿಗೆ ಕೂಡಿ ಆಧ್ಯಾತ್ಮಿಕ ಅಭ್ಯಾಸಗಳನ್ನು ನಡೆಸಲು ಹೆಚ್ಚು ಒಲವು ತೋರಿದರು.
- ಈ ಉಪದೇಶವು ಮುಲ್ತಾನ್ ಪ್ರದೇಶದಲ್ಲಿ (ಇಂದಿನ ಪಾಕಿಸ್ತಾನದಲ್ಲಿ) ವಿಶೇಷವಾಗಿ ಪ್ರಭಾವಶಾಲಿಯಾಯಿತು ಮತ್ತು ಉಪಖಂಡದಲ್ಲಿ ಸೂಫಿ ಚಿಂತನೆಯ ಬೆಳವಣಿಗೆಗೆ ಗಮನಾರ್ಹವಾಗಿ ಕೊಡುಗೆ ನೀಡಿತು.

3. ಖಾದಿರಿ ಸಿಲ್ ಸಿಲಾ

- 11ನೇ ಶತಮಾನದಲ್ಲಿ ಬಾಗ್ದಾದ್‌ನಲ್ಲಿ ಅಬ್ದುಲ್ ಖಾದಿರ್ ಜಿಲಾನಿ ಅವರು ಖಾದಿರಿ ಸಿಲ್ ಸಿಲಾ ಸ್ಥಾಪಿಸಿದರು ಮತ್ತು 15 ನೇ ಶತಮಾನದಲ್ಲಿ ಇದನ್ನು ಭಾರತಕ್ಕೆ ಪರಿಚಯಿಸಲಾಯಿತು. ಈ ಉಪದೇಶವು ಆಧ್ಯಾತ್ಮಿಕ ಪರಿಶುದ್ಧತೆಯ ಅನ್ವೇಷಣೆಯೊಂದಿಗೆ ಷರಿಯಾದ (ಇಸ್ಲಾಮಿಕ್ ಕಾನೂನು) ಕಟ್ಟುನಿಟ್ಟಾದ ಅನುಸರಣೆಗೆ ಒತ್ತು ನೀಡಿತು.
- ಖಾದಿರಿ ಶಾಖೆಯು ಭಾರತದಾದ್ಯಂತ, ವಿಶೇಷವಾಗಿ ದಖನ್ ಪ್ರದೇಶದಲ್ಲಿ ಮತ್ತು ದಕ್ಷಿಣ ಭಾರತದಲ್ಲಿ ಹರಡಿತು. ಸ್ಥಳೀಯ ಮುಸ್ಲಿಂ ಮತ್ತು ಮುಸ್ಲಿಮೇತರ ಜನಸಂಖ್ಯೆಯ ಮೇಲೆಯೂ ಪ್ರಭಾವವನ್ನು ಬೀರಿತು.

4. ನಕ್ಷಬಂದಿ ಸಿಲ್ ಸಿಲಾ

- 16ನೇ ಶತಮಾನದಲ್ಲಿ ಭಾರತಕ್ಕೆ ಪರಿಚಯಿಸಲಾದ ನಕ್ಷ್‌ಬಂದಿ ಸಿಲ್ ಸಿಲಾವು 'ಧಿಕ್ರ್' (ದೇವರ ಸ್ತುತಿ ಪಠಣ) ಮತ್ತು ಇಸ್ಲಾಮಿಕ್ ಸಾಂಪ್ರದಾಯಿಕತೆಗೆ ಕಟ್ಟುನಿಟ್ಟಾದ ಅನುಸರಣೆಗೆ ಒತ್ತು ನೀಡುತ್ತದೆ. ಮೊಘಲರ ಕಾಲದಲ್ಲಿ ಈ ಶಾಖೆ ಪ್ರಭಾವಶಾಲಿಯಾಗಿತ್ತು.
- ಶೇಖ್ ಅಹ್ಮದ್ ಸಿರ್ಹಿಂಡಿ, ಪ್ರಮುಖ ನಕ್ಷಬಂದಿ ಸೂಫಿ ಶಾಖೆಯನ್ನು ಪುನರುಜ್ಜೀವನಗೊಳಿಸುವ ಮತ್ತು 'ವಹ್ದತ್ ಅಲ್-ಶುಹೂದ್'(ಸಾಕ್ಷಿಯ ಏಕತೆ) ಕಲ್ಪನೆಯನ್ನು ಉತ್ತೇಜಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಇಸ್ಲಾಮಿನ ಬಾಹ್ಯ (ಶರಿಯಾ) ಮತ್ತು ಆಂತರಿಕ (ಆಧ್ಯಾತ್ಮಿಕ) ಅಂಶಗಳ ನಡುವಿನ ಸಮತೋಲನದ ಬಗ್ಗೆ ಪ್ರತಿಪಾದಿಸಿದರು.



'ಸೂಫಿ' ಎಂದರೆ ಉಣ್ಣೆಯ ಉಡುಗೆ. ಸುಫ್ಫಾ'ಎಂದರೆ ಮಸೀದಿಯ ಜಗಲಿ. ಆದಿಮ ಸೂಫಿಗಳು ಮದೀನಾ ಮಸೀದಿಯ ಜಗಲಿಗಳಲ್ಲಿ ವಾಸಿಸುತ್ತಿದ್ದು ಉಣ್ಣೆಯ ನಿಲುವಂಗಿಗಳನ್ನು ಧರಿಸುತ್ತಿದ್ದರು. ಅದನ್ನು ಧರಿಸುವವರು ಸರಳವಾಗಿ ಬಾಳುವವರು ಎನ್ನಲಾಯಿತು. ವಿಲಾಸೀ ಜೀವನದ ವಿರುದ್ಧದ ಪ್ರತಿಭಟನೆಯ ಸಂಕೇತವಾಗಿ ಇದನ್ನು ಆಯ್ದುಕೊಳ್ಳಲಾಗಿದೆ.

ಸೂಫೀ ಪಂಥದಲ್ಲಿ ಸ್ತ್ರೀಯರು

- ಸಾಂಪ್ರದಾಯಿಕ ಇಸ್ಲಾಮಿನ ನಡೆಗಳಿಗೆ ಭಿನ್ನವಾಗಿ ಆರಂಭದ ಸೂಫೀ ಪಂಥದಲ್ಲಿ ಸ್ತ್ರೀಯರು ಇದ್ದರು.ಮೊದಲ ಸೂಫಿ ಪಂಥದ ಮಹಿಳೆಯಲ್ಲಿ ಖ್ಯಾತಳಾದ ರಾಬಿಯಾ ಬಸ್ರಿಯಾ 8ನೇ ಶತಮಾನದಲ್ಲಿ ಬಾಗ್ದಾದ್ ನ ಬಸ್ರಾ ನಗರದಲ್ಲಿ ಜೀವಿಸಿದ್ದಳು.ಪರಮಾತ್ಮನೊಂದಿಗೆ ನೇರ ಸಂಪರ್ಕದಲ್ಲಿ ಇರುವುದನ್ನು ರಾಬಿಯಾ ಒತ್ತಿ ಹೇಳಿದ್ದಾಳೆ.
- ಕಡು ಸಂಪ್ರದಾಯವಾಗಿದ್ದ ಔರಂಗಜೇಬನ ಮಗಳು ಝೈಬುನ್ನೀಸಾ ತನ್ನ ತಂದೆಗೆ ತಿಳಿಯದಂತೆ 'ಮಗ್ಫೀ ಎಂಬ ನಿಗೂಢ ನಾಮದಿಂದ ಸೂಫೀ ಕವನಗಳನ್ನು ಬರೆಯುತ್ತಿದ್ದಳು.ಮಗ್ಫೀ ಎಂದರೆ ನಿಗೂಢತೆ.ಅವಳ 'ಮಗ್ಫೀನಾಮಾ' ಕಡು ಮೋಹದ ಸೂಫೀ ಕಾವ್ಯಗಳ ಸಂಕಲನವಾಗಿದೆ.
- **ಮಂಗಳೂರಿನ ಸೈದಾನ್ ಬೀಬೀ ದರ್ಗಾ :** ಇಂದಿಗೂ ಬಲು ಖ್ಯಾತಿಯ ದರ್ಗಾವಾಗಿದೆ.ಜೈಬುನ್ನೀಸಾ ಅರಮನೆಯಲ್ಲಿ ಕೂತು ಬರೆದಿದ್ದರೆ ಸೈದಾನ್ ಬೀಬೀ ತಳವರ್ಗದ ಮಹಿಳೆಯಾಗಿದ್ದಳು.
- **ಕಾಸರಗೋಡಿನ ಮನವಾಟಿ ಬೀಬೀ ದರ್ಗಾ :** ಕಾಸರಗೋಡಿನ ಪೊಯ್ಯತ್ತಬೈಲ್ ಬಳಿಯಿರುವ ಬಹಳ ಚಾಲ್ತಿಯಲ್ಲಿರುವ ದರ್ಗಾವಾಗಿದೆ. ರಾಜ್ಯದೆಲ್ಲೆಡೆಯ ಅನೇಕ ಜನರು ತಮ್ಮ ಕಳವಿನ ಸಾಮಗ್ರಿಗಳನ್ನು ತಿರುಗಿ ಪಡೆಯುವ ಸಲುವಾಗಿ ಮನವಾಟಿ ಬೀವಿಗೆ ಹರಕೆ ಹೊತ್ತುಕೊಳ್ಳುತ್ತಾರೆ.'ನಫೀಸತ್ ಮಾಲಾ' ವಂತೂ ಇಂದಿಗೂ ಕರಾವಳಿ ಜಿಲ್ಲೆಗಳಲ್ಲಿ ಮಹಿಳೆಯರೆಲ್ಲರೂ ಸೇರಿ ಹಾಡುವ ಮಧುರವಾದ ಗೀತೆಯಾಗಿದೆ.

ಸೂಫಿಸಂನ ಪ್ರಭಾವ

- ಸೂಫಿಸಂ ಭಾರತೀಯ ಸಂಸ್ಕೃತಿಯ ಮೇಲೆ, ವಿಶೇಷವಾಗಿ ಸಾಹಿತ್ಯ, ಸಂಗೀತ ಮತ್ತು ವಾಸ್ತುಶಿಲ್ಪದ ಕ್ಷೇತ್ರಗಳಲ್ಲಿ ಆಳವಾದ ಮತ್ತು ಶಾಶ್ವತವಾದ ಪ್ರಭಾವವನ್ನು ಹೊಂದಿದೆ.

ಸಾಹಿತ್ಯ: ಪರ್ಷಿಯನ್, ಉರ್ದು ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ರಚಿತವಾದ ಸೂಫಿ ಕಾವ್ಯವು ಭಾರತೀಯ ಸಾಹಿತ್ಯವನ್ನು ಶ್ರೀಮಂತಗೊಳಿಸಿದೆ. ಅಮೀರ್ ಖುಸ್ರೊ, ರೂಮಿ ಮತ್ತು ಬಾಬಾ ಫರೀದ್ ಅವರಂತಹ ಸೂಫಿಗಳ ಅತೀಂದ್ರಿಯ ಕಾವ್ಯವು ತನ್ನ ಆಳವಾದ ಆಧ್ಯಾತ್ಮಿಕ ಸಂದೇಶಗಳು ಮತ್ತು ದೈವಿಕ ಪ್ರೀತಿಯ ಸುಂದರ ಅಭಿವ್ಯಕ್ತಿಯೊಂದಿಗೆ ಕೂಡಿದೆ. ಚಿಶ್ತಿ ಸಿಲ್ ಸಿಲಾದ ನಿಜಾಮುದ್ದೀನ್ ಔಲಿಯಾ ಅವರ ಶಿಷ್ಯರಾದ ಅಮೀರ್ ಖುಸ್ರು ಅವರು ಭಾರತೀಯ ಸಂಸ್ಕೃತಿಗೆ ನೀಡಿದ ಕೊಡುಗೆಗಳಿಗಾಗಿ ವಿಶೇಷವಾಗಿ ಗುರುತಿಸಲ್ಪಟ್ಟಿದ್ದಾರೆ. ಉರ್ದು ಭಾಷೆಯ ಬೆಳವಣಿಗೆ ಮತ್ತು ಭಾರತೀಯ ಸಾಹಿತ್ಯಕ್ಕೆ ಪರ್ಷಿಯನ್ ಕಾವ್ಯದ ರೂಪಗಳನ್ನು ಪರಿಚಯಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ.

ಸಂಗೀತ: ಸೂಫಿ ತತ್ತ್ವವು ಭಾರತೀಯ ಸಂಗೀತವನ್ನು ಆಳವಾಗಿ ಪ್ರಭಾವಿಸಿದೆ. ಅದರಲ್ಲೂ ವಿಶೇಷವಾಗಿ ಸೂಫಿ ದೇಗುಲಗಳಲ್ಲಿ ಪ್ರದರ್ಶಿಸಲಾಗುವ ಭಕ್ತಿ ಸಂಗೀತದ ರೂಪವಾದ 'ಕವ್ವಾಲಿ'ಯ ಬೆಳವಣಿಗೆಯ ಮೂಲಕ ಇದು ಬೆಳೆದು ಬಂದಿದೆ. ಸೂಫಿ ದೇಗುಲಗಳಲ್ಲಿ ನಡೆಯುವ 'ಸಮಾ' (ಆಧ್ಯಾತ್ಮಿಕ ಆಲಿಸುವಿಕೆ) ಅವಧಿಗಳು ಕವ್ವಾಲಿ ಪ್ರದರ್ಶನಗಳನ್ನು ಒಳಗೊಂಡಿರುತ್ತವೆ.

ವಾಸ್ತುಶಿಲ್ಪ: ಸೂಫಿ ದೇಗುಲಗಳು ಅಥವಾ 'ದರ್ಗಾ'ಗಳ ವಾಸ್ತುಶಿಲ್ಪವು ಮತ್ತೊಂದು ಮಹತ್ವದ ಸಾಂಸ್ಕೃತಿಕ ಕೊಡುಗೆಯಾಗಿದೆ. ಈ ದೇವಾಲಯಗಳು ತೀರ್ಥಯಾತ್ರೆ ಮತ್ತು ಸಮುದಾಯ ಕೂಟಗಳ ಕೇಂದ್ರಗಳಾಗಿವೆ. ಇಸ್ಲಾಮಿಕ್ ಮತ್ತು ಸ್ಥಳೀಯ ವಾಸ್ತುಶಿಲ್ಪದ ಶೈಲಿಗಳ ವಿಶಿಷ್ಟ ಮಿಶ್ರಣದ ಗುಣಲಕ್ಷಣಗಳನ್ನು ಅವು ಹೊಂದಿವೆ.

- ಅಜ್ಮೀರ್‌ನಲ್ಲಿರುವ ಖ್ವಾಜಾ ಮೊಯಿನುದ್ದೀನ್ ಚಿಶ್ತಿ, ದೆಹಲಿಯ ನಿಜಾಮುದ್ದೀನ್ ಔಲಿಯಾ ಮತ್ತು ಮುಂಬೈನಲ್ಲಿರುವ ಹಾಜಿ ಅಲಿಯಂತಹ ಪ್ರಮುಖ ದರ್ಗಾಗಳು ಧಾರ್ಮಿಕ ಸ್ಥಳಗಳು ಮಾತ್ರವಲ್ಲದೆ ಭಾರತದ ವೈವಿಧ್ಯಮಯ ಸಂಸ್ಕೃತಿಯ ಸಂಕೇತಗಳಾಗಿವೆ.
- ಭಾರತದಲ್ಲಿ ಸೂಫಿಸಂ ತನ್ನ ಸಮನ್ವಯತೆಯ ಸ್ವಭಾವಕ್ಕೆ ಹೆಸರುವಾಸಿಯಾಗಿದೆ. ಇದು ಹಿಂದೂ ಧರ್ಮ, ಇಸ್ಲಾಂ ಮತ್ತು ಇತರ ಧಾರ್ಮಿಕ ಸಂಪ್ರದಾಯಗಳ ಅಂಶಗಳನ್ನು ಸಂಯೋಜಿಸುತ್ತದೆ. ಧಾರ್ಮಿಕ ಗಡಿಗಳನ್ನು ಮೀರಿದ ಭಕ್ತಿ, ಸಂಗೀತ ಮತ್ತು ಕಾವ್ಯದ ಹಂಚಿಕೆಯ ಅಭ್ಯಾಸಗಳಲ್ಲಿ ಈ ಬೆರೆಯುವಿಕೆಯು ಸ್ಪಷ್ಟವಾಗಿ ಕಂಡುಬರುತ್ತದೆ.
- ಭಾರತದಲ್ಲಿನ ಸೂಫಿ ದೇಗುಲಗಳು ಸಾಂಪ್ರದಾಯಿಕವಾಗಿ ಕೋಮು ಸೌಹಾರ್ದತೆಯ ಸ್ಥಳಗಳಾಗಿವೆ. ಅಲ್ಲಿ ವಿವಿಧ ಧರ್ಮದವರು ಆಶೀರ್ವಾದ ಪಡೆಯಲು, ಪ್ರಾರ್ಥಿಸಲು, ಹರಕೆಗಳನ್ನು ತೀರಿಸಲು ಮತ್ತು 'ಉರೂಸ್' (ಸೂಫಿ ಸಂತರ ಮರಣ ವಾರ್ಷಿಕೋತ್ಸವದ ಆಚರಣೆಗಳು) ನಲ್ಲಿ ಭಾಗವಹಿಸಲು ಒಟ್ಟಿಗೆ ಸೇರುತ್ತಾರೆ. ❖

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಕೆಳಗಿನ ಯಾವ ಅಂಶಗಳನ್ನು ಭಾರತದ ರಾಜ ತಾಂತ್ರಿಕ ವ್ಯವಸ್ಥೆಯ ಪ್ರಮುಖ ಸ್ತಂಭಗಳು ಎಂದು ಕರೆಯಬಹುದು?
1. ವಸುದೈವ ಕುಟುಂಬಕಂ.
2. ವಿವಿಧ ಧ್ರುವಗಳ ಮೇಲೆ ಗಮನ ಹರಿಸುವ ಪ್ರಕ್ರಿಯೆ.
3. ಭಾರತದ ರಾಜ್ಯ ತಾಂತ್ರಿಕ ನೀತಿಯನ್ನು ಅಂತರರಾಷ್ಟ್ರೀಯ ಶಕ್ತಿಯಾಗಿ ಪರಿವರ್ತಿಸುವುದು.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. ಒಂದು ಹೇಳಿಕೆ ಸರಿ ಇದೆ
ಬಿ. ಎರಡು ಹೇಳಿಕೆಗಳು ಸರಿ ಇದೆ.
ಸಿ. ಮೂರು ಹೇಳಿಕೆಗಳು ಸರಿ ಇದೆ. ಡಿ. ಮೇಲಿನ ಮೂರು ಹೇಳಿಕೆಗಳು ತಪ್ಪಾಗಿದೆ.

ಉತ್ತರ : ಸಿ

2. ಕೆಳಗಿನ ಹೇಳಿಕೆಗಳು ಯಾವ ಹಂತದ ವಿದೇಶಾಂಗ ನೀತಿಯನ್ನು ಸರಿಯಾದ ರೀತಿಯಲ್ಲಿ ವಿವರಿಸುತ್ತದೆ?
1. ಭಾರತ ಜಾಗತಿಕ ಮಟ್ಟದಲ್ಲಿ ಸಮತೋಲನ ತರುವ ಶಕ್ತಿಯಾಗಿ ಉಗಮವಾಯಿತು.
2. ಅಮೆರಿಕದೊಂದಿಗೆ ಒಂದೆಡೆ ಅಣು ಒಪ್ಪಂದಕ್ಕೆ ಸಹಿ ಹಾಕಿತು.
3. ವಿಶ್ವ ವ್ಯಾಪಾರ ಒಕ್ಕೂಟದ ಕೃಷಿ ನೀತಿಯ ವಿಚಾರದಲ್ಲಿ ಚೀನಾಗೆ ಸಹಕಾರ ನೀಡಿತ್ತು.

ಎ. ಎರಡನೇ ಹಂತದ ವಿದೇಶಾಂಗ ನೀತಿ.
ಬಿ. ಮೂರನೇ ಹಂತದ ವಿದೇಶಾಂಗ ನೀತಿ.
ಸಿ. ನಾಲ್ಕನೇ ಹಂತದ ವಿದೇಶಾಂಗ ನೀತಿ.
ಡಿ. ಐದನೇ ಹಂತದ ವಿದೇಶಾಂಗ ನೀತಿ.

ಉತ್ತರ : ಡಿ

3. ಇತ್ತೀಚೆಗೆ ಕೃಷಿಮೂಲ ಸೌಕರ್ಯ ನಿಧಿ ಎನ್ನುವ ಅಭಿಯಾನವನ್ನು ಕೆಳಗಿನ ಯಾವ ಉದ್ದೇಶಗಳಿಗಾಗಿ ಪ್ರಾರಂಭಿಸಲಾಗಿದೆ?
ಎ. ಕೃಷಿಮೂಲ ಸೌಕರ್ಯ ನಿಧಿಯ ಹಣ ಸಂಗ್ರಹಣೆಗಾಗಿ.
ಬಿ. ರೈತ ಸಮುದಾಯದಲ್ಲಿ ಸಹಕಾರಿ ಸಂಘಗಳ ಉಪಯುಕ್ತತೆಯ ಬಗ್ಗೆ ಅರಿವು ಮೂಡಿಸಲು.
ಸಿ. ಕೃಷಿ ವಲಯದಲ್ಲಿ ವೈವಿಧ್ಯಮಯ ಬೆಳೆಗಳನ್ನು ಬೆಳೆಸಲು ಉತ್ತೇಜನ ನೀಡಲು.
ಡಿ. ಕಟಾವಿನ ನಂತರದ ಕೃಷಿ ಉತ್ಪನ್ನಗಳ ನಿರ್ವಹಣೆ ಸಂಬಂಧಿತ ಅಭಿಯಾನ.

ಉತ್ತರ : ಎ

4. ರಾಷ್ಟ್ರೀಯ ಹಿರಿಯ ನಾಗರೀಕರ ಕಾರ್ಯನಿರ್ವಹಣ ಯೋಜನೆಯನ್ನು ಯಾವ ಹೆಸರಿನಿಂದ ಮರುನಾಮಕರಣ ಮಾಡಲಾಯಿತು?
ಎ. ಭಾರತೀಯ ಹಿರಿಯ ನಾಗರೀಕರ ಯೋಜನೆ.
ಬಿ. ಅಟಲ್ ವಯೋ ಅಭ್ಯುದಯ ಯೋಜನೆ.
ಸಿ. ವಯಸ್ಕ ನಾಗರಿಕರ ಯೋಜನೆ.
ಡಿ. ಭಾರತೀಯ ವಯಸ್ಕ ನಾಗರೀಕರ ಯೋಜನೆ.

ಉತ್ತರ : ಬಿ

5. ಕೆಳಗಿನ ಯಾವ ಉತ್ಪನ್ನಗಳನ್ನು ಭಾರತದಿಂದ ಮಲೇಷ್ಯಾಗೆ ಹೆಚ್ಚಾಗಿ ರಫ್ತು ಮಾಡಲಾಗುತ್ತಿದೆ?
1. ಪೆಟ್ರೋಲಿಯಂ ಉತ್ಪನ್ನಗಳು.
2. ಅಲ್ಯೂಮಿನಿಯಂ.
3. ಖಾದ್ಯ ತೈಲ.
4. ರಾಸಾಯನಿಕಗಳು.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 1 ಮತ್ತು 2
ಸಿ. 2 ಮತ್ತು 3 ಡಿ. 3 ಮತ್ತು 4

ಉತ್ತರ : ಬಿ

6. ಕೆಳಗಿನ ಯಾವ ರಾಷ್ಟ್ರದೊಂದಿಗೆ ಭಾರತ ಸಮಗ್ರ ಮುಕ್ತ ಆರ್ಥಿಕ ಒಪ್ಪಂದವನ್ನು ನವೀಕರಿಸಲು ಮುಂದಾಗಿದೆ?
ಎ. ಮಲೇಷ್ಯಾಯಾ.
ಬಿ. ಥಾಯ್‌ಲೆಂಡ್.
ಸಿ. ಶ್ರೀಲಂಕಾ.
ಡಿ. ಬಾಂಗ್ಲಾದೇಶ.

ಉತ್ತರ : ಎ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ವಿದ್ಯುಚ್ಛಕ್ತಿ

2. ಈ ಕೆಳಗಿನ ಯಾವ ಪದಗಳು ಮಂಡಲದಲ್ಲಿ ವಿದ್ಯುತ್ ಸಾಮರ್ಥ್ಯವನ್ನು ಪ್ರತಿನಿಧಿಸುವುದಿಲ್ಲ ?
(a) I 2 R (b) IR2
(c) VI (d) V2 /R

3. ಒಂದು ವಿದ್ಯುತ್ ಬಲ್ಬ್‌ನ್ನು **220V** ಮತ್ತು **100W** ಎಂದು ನಮೂದಿಸಲಾಗಿದೆ, ಈ ಬಲ್ಬ್ **110V** ನಲ್ಲಿ ಕಾರ್ಯನಿರ್ವಹಿಸಿದರೆ ಅದರಲ್ಲಿ ಬಳಕೆಯಾದ ಸಾಮರ್ಥ್ಯ ಎಷ್ಟು ?
(a) 100 W (b) 75 W
(c) 50 W (d) 25 W

4. ಸಮಾನವಾದ ಉದ್ದ ಮತ್ತು ವ್ಯಾಸವುಳ್ಳ ಒಂದೇ ರೀತಿಯ ಎರಡು ವಸ್ತುಗಳನ್ನು ಮೊದಲು ಸರಣಿಕ್ರಮದಲ್ಲಿ ನಂತರ ಸಮಾಂತರ ಕ್ರಮದಲ್ಲಿ ಒಂದೇ ವಿಭವಾಂತರಕ್ಕೆ ಅಡ್ಡಲಾಗಿ ಸಂಪರ್ಕಿಸಲಾಗಿದೆ. ಸರಣಿ ಕ್ರಮದಲ್ಲಿ ಮತ್ತು ಸಮಾಂತರ ಕ್ರಮದಲ್ಲಿ ಉತ್ಪತ್ತಿಯಾದ ಶಾಖದ ಅನುಪಾತ
(a) 1:2 (b) 2:1
(c) 1:4 (d) 4:1

ಉತ್ತರ:– 1)ಡಿ 2)ಬಿ 3)ಸಿ 4)ಡಿ


34) ಓಮ್‌ನ ನಿಯಮವನ್ನು ಅನ್ವಯಿಸಿದಾಗ ವಾಹಕದ ರೋಧವು ಅವಲಂಬಿಸಿರುವ ಅಂಶಗಳು ಯಾವುವು?

ಉತ್ತರ:– ಓಮ್‌ನ ನಿಯಮವನ್ನು ಅನ್ವಯಿಸಿದಾಗ ವಾಹಕದ ರೋಧವು (1) ವಾಹಕದ ಉದ್ದ (2), ವಾಹಕದ ಅಡ್ಡಕೊಯ್ತ (3), ವಸ್ತುವಿನ ಪ್ರಾಕೃತಿಕ ಗುಣ ಇವುಗಳ ಮೇಲೆ ಅವಲಂಬಿಸಿದೆ. ನಿಖರವಾದ ಮಾಪನಗಳ ಪ್ರಕಾರ, ಯಾವುದೇ ಏಕರೂಪ ಲೋಹೀಯ ವಾಹಕದ ರೋಧವು ಅದರ ಉದ್ದಕ್ಕೆ (l) ನೇರ ಅನುಪಾತದಲ್ಲಿರುತ್ತದೆ ಮತ್ತು ಅದರ ಅಡ್ಡಕೊಯ್ತಕ್ಕೆ (A) ವಿಲೋಮಾನುಪಾತದಲ್ಲಿರುತ್ತದೆ.

35) ಜೌಲ್‌ನ ಉಷ್ಣೋತ್ಪಾದನಾ ನಿಯಮವನ್ನು ಆಧರಿಸಿ ಪರಿಚಯಿಸಿದ ಕೆಲವು ಸಾಧನಗಳ ಹೆಸರನ್ನು ಹೆಸರಿಸಿ

ಉತ್ತರ:– ವಿದ್ಯುತ್ ಇಸ್ತ್ರಿ ಪಟ್ಟಿಗೆ, ವಿದ್ಯುತ್ ಹೀಟರ್, ವಿದ್ಯುತ್ ಕಿಟಲ್, ವಿದ್ಯುತ್ ಒಲೆ ಇತ್ಯಾದಿ.

36) 20Ω ರೋಧ ಹೊಂದಿರುವ ಒಂದು ವಿದ್ಯುತ್ ದೀಪ ಮತ್ತು 4Ω ರೋಧವನ್ನು ಹೊಂದಿರುವ ವಾಹಕವನ್ನು 6Vನ ಶುಷ್ಕಕೋಶಕ್ಕೆ ಜೋಡಿಸಿದೆ. (ಚಿತ್ರದಲ್ಲಿರುವಂತೆ). (a) ಮಂಡಲದ ಒಟ್ಟು ರೋಧ (b) ಮಂಡಲದಲ್ಲಿ ಪ್ರವಹಿಸುತ್ತಿರುವ ವಿದ್ಯುತ್ ಪ್ರವಾಹ ಮತ್ತು (c) ವಿದ್ಯುತ್ ದೀಪ ಹಾಗೂ ವಾಹಕದ ತುದಿಗಳ ನಡುವಿನ ವಿಭವಾಂತರವನ್ನು ಕಂಡುಹಿಡಿಯಿರಿ.



ಉತ್ತರ:– ವಿದ್ಯುತ್ ದೀಪದ ರೋಧ, $R_1 = 20\Omega$
ಸರಣಿಯಲ್ಲಿ ಜೋಡಿಸಿದ ವಾಹಕದ ರೋಧ, $R_2 = 4\Omega$
ಮಂಡಲದಲ್ಲಿನ ಒಟ್ಟು ರೋಧ $Rs = R_1 + R_2$

$$Rs = 20\ \Omega + 4\ \Omega = 24\ \Omega.$$

ಶುಷ್ಕಕೋಶದ ಎರಡು ಧ್ರುವಗಳ ನಡುವಿನ ವಿಭವಾಂತರ

$$V = 6\ V$$

ಈಗ, ಓಮ್‌ನ ನಿಯಮದಂತೆ ಮಂಡಲದಲ್ಲಿ ಪ್ರವಹಿಸುತ್ತಿರುವ ಒಟ್ಟು ವಿದ್ಯುತ್ ಪ್ರವಾಹ,

$$I = \frac{V}{R_s} = \frac{6V}{24\Omega} = 0.25\ A.$$

ಓಮ್‌ನ ನಿಯಮವನ್ನು ಪ್ರತ್ಯೇಕವಾಗಿ ವಿದ್ಯುತ್ ದೀಪ ಮತ್ತು ವಾಹಕಗಳಿಗೆ ಪ್ರತ್ಯೇಕವಾಗಿ ಅನ್ವಯಿಸಿದಾಗ, ನಮಗೆ ವಿದ್ಯುತ್ ದೀಪದ ತುದಿಗಳ ನಡುವಿನ ವಿಭವಾಂತರ ದೊರೆಯುತ್ತದೆ.

$$V_1 = 20\ \Omega \times 0.25\ A = 5\ V;$$

ಮತ್ತು ವಾಹಕದ ತುದಿಗಳ ನಡುವಿನ ವಿಭವಾಂತರ


$$V_2 = 4\ \Omega \times 0.25\ A = 1\ V.$$

ಒಂದು ವೇಳೆ ನಾವು ಸರಣಿ ಜೋಡಣೆಯಲ್ಲಿರುವ ವಿದ್ಯುತ್ ದೀಪ ಮತ್ತು ವಾಹಕಗಳನ್ನು ಒಂದು ಸಮಾನ ರೋಧಕದಿಂದ ಬದಲಾಯಿಸಿದಾಗ ಅದರ ರೋಧವು ಎಷ್ಟೆಂದರೆ ಶುಷ್ಕಕೋಶಗಳ ತುದಿಗಳ ನಡುವಿನ ವಿಭವಾಂತರ 6V ಮಂಡಲದಲ್ಲಿ 0.25 A ವಿದ್ಯುತ್ ಪ್ರವಾಹವನ್ನು ಉಂಟುಮಾಡಬೇಕು. ಅಂತಹ ಸಮಾನ ರೋಧಕ R ನ ರೋಧವು

$$R = \frac{V}{I} = \frac{6V}{0.25A} = 24\ \Omega.$$

ಇದು ಸರಣಿಕ್ರಮ ಮಂಡಲದ ಒಟ್ಟು ರೋಧ. ಇದು ಮಂಡಲದಲ್ಲಿರುವ ಎರಡು ರೋಧಕಗಳ ರೋಧದ ಒಟ್ಟು ಮೊತ್ತ.

37) ಚಿತ್ರದಲ್ಲಿ ನೀಡಲಾದ ಮಂಡಲ ರೇಖಾಚಿತ್ರದಲ್ಲಿ, ರೋಧಕಗಳಾದ R_1 , R_2 ಮತ್ತು R_3 ಗಳ ಬೆಲೆಗಳು ಕ್ರಮವಾಗಿ 5Ω, 10Ω, 30Ω ಗಳಾಗಿದ್ದು ಅವುಗಳನ್ನು 12V ವಿಭವಾಂತರವಿರುವ ಒಂದು ಶುಷ್ಕಕೋಶಕ್ಕೆ ಜೋಡಿಸಿದೆ. ಹಾಗಾದರೆ (a) ಪ್ರತಿಯೊಂದು ರೋಧಕದ ಮೂಲಕ ಪ್ರವಹಿಸುತ್ತಿರುವ ವಿದ್ಯುತ್ ಪ್ರವಾಹ (b) ಮಂಡಲದಲ್ಲಿನ ಒಟ್ಟು ವಿದ್ಯುತ್ ಪ್ರವಾಹ ಮತ್ತು (c) ಮಂಡಲದ ಒಟ್ಟು ರೋಧವನ್ನು ಲೆಕ್ಕಮಾಡಿರಿ.



ಉತ್ತರ:–
$R_1 = 5\Omega$, $R_2 = 10\Omega$ ಮತ್ತು $R_3 = 30\Omega$
ಶುಷ್ಕಕೋಶದ ತುದಿಗಳ ನಡುವಿನ ವಿಭವಾಂತರ : $V = 12V$

ಹಾಗೆಯೇ, ಇದು ಪ್ರತಿಯೊಂದು ರೋಧಕದ ನಡುವಿನ ವಿಭವಾಂತರವಾಗಿದೆ. ಆದ್ದರಿಂದ ನಾವು ರೋಧಕಗಳಲ್ಲಿನ ವಿದ್ಯುತ್ ಪ್ರವಾಹವನ್ನು ಅಳೆಯಲು ಓಮ್‌ನ ನಿಯಮವನ್ನು ಅನ್ವಯಿಸುತ್ತೇವೆ.

R1 ಮೂಲಕ ಪ್ರವಹಿಸಿದ ವಿದ್ಯುತ್ ಪ್ರವಾಹ

$$I_1 = \frac{V}{R_1}$$

$$I_1 = \frac{12V}{5\Omega} = 2.4\ A$$

R_2 ಮೂಲಕ ಪ್ರವಹಿಸಿದ ವಿದ್ಯುತ್ ಪ್ರವಾಹ $I_2 = \frac{V}{R_2}$

$$I_2 = \frac{12V}{10\Omega} = 1.2\ A$$

R_3 ಮೂಲಕ ಪ್ರವಹಿಸಿದ ವಿದ್ಯುತ್ ಪ್ರವಾಹ $I_3 = \frac{V}{R_3}$

$$I_3 = \frac{12V}{30\Omega} = 0.4\ A$$

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC - CHEMISTRY

The i

The d- and f-Block Elements

29.Explain the variations of ionization enthalpies in d-block elements.

Ans:- Ionization enthalpies in d-block elements generally increase across a period due to increasing nuclear charge, but show irregularities due to the stability of certain d-electron configurations like d0, d5, and d10, where elements with these configurations tend to have higher ionization energies compared to their neighbors; this is because the shielding effect of d electrons partially counteracts the increased nuclear charge, leading to smaller variations in ionization enthalpy compared to other blocks on the periodic table.

Key points about ionization enthalpy variations in d-block elements:

Ionization enthalpy generally increases moving from left to right across a d-block series as the nuclear charge increases.

The d electrons added across the series provide some shielding effect, which partially counteracts the increased nuclear charge, leading to smaller variations in ionization enthalpy compared to other blocks.

Stability of certain configurations:

d0: Elements with an empty d-orbital (like Sc) tend to have relatively low ionization energies.

d5: Elements with a half-filled d-orbital (like Mn) show higher ionization energies due to extra stability.

d10: Elements with a fully filled d-orbital (like Zn) also exhibit higher ionization energies due to stability.

Examples of irregular trends:

Chromium (Cr):
Has a lower ionization enthalpy than expected due to its stable d5 configuration.

Copper (Cu):
Shows a relatively high ionization enthalpy due to its stable d10 configuration.

30. What is the reason for irregular variation of ionization enthalpies (first and second) in the first series (3d) of the transition elements?

Ans: The irregular variation of ionization enthalpies in the first series of transition elements is due to the varying stability of different 3d configurations. For example, configurations such as. d0, d5, and d10 are exceptionally stable and have very high ionization enthalpies rregular variation of ionization enthalpies is due to varying degree of stability of different configurations.

31. 3d-series transition metals exhibit +2 as the most common oxidation state (except Sc) why?

Ans: The +2 oxidation state arises from the loss of two 4s electrons. This means that after scandium d-orbitals becomes more stable than the s-orbital. Hence 3d-series transition metals exhibit +2 as the most common oxidation state (except Sc).

32. Name the element of 3d series which shows maximum or highest oxidation state.

Ans: The element in the 3d series that exhibits the highest oxidation state is Manganese (Mn).

33. Name a transition element which does not exhibit variable oxidation states.

Ans: Zinc

34. Which of the 3d series of the transition metals exhibits the largest number of oxidation states and why?

Ans :Manganese (Mn). The oxidation states of mn are +2, +3, +4, +5, +6 and +7. Mn exhibits largest number of oxidation states due to the presence of maximum number of unpaired 3d electrons.

35. Why Cr^{2+} is reducing and Mn^{3+} oxidizing when both have d^4 configuration?

Ans: Cr^{2+} is reducing because its configuration changes from d^4 to d^3, the later has half filled t_{2g} level. Mn^{3+} is oxidizing because the configuration changes from Mn^{2+} to Mn^{3+} results in the half filled (d^5) configuration which has extra stability.

36. Why is the highest oxidation state of a metal exhibited in its oxide or fluoride only?

Ans: Both oxygen and fluorine are highly electronegative and have a very small size. Due to these properties, they are able to oxidize the metal to its highest oxidation state.

37. How does ionic character of metal oxides vary with oxidation number?


Ans: Lower the oxidation state of metal oxide higher the ionic character. (Contd……..)

ಇ.ವಿ. ಬಳಕೆ ಉತ್ತೇಜಿಸಲು ಕೇಂದ್ರದ ಹೊಸ ಯೋಜನೆ

‘ಫೇಮ್’ ಬದಲು ‘ಪಿಎಂ ಇ–ಡ್ರೈವ್’

ನವದೆಹಲಿ (ಪಿಟಿಐ): ₹10,900 ಕೋಟಿ ಗಾತ್ರದ, ಎರಡು ವರ್ಷಗಳ ‘ಪಿಎಂ ಇ–ಡ್ರೈವ್ ಯೋಜನೆ’ಗೆ ಕೇಂದ್ರ ಸಚಿವ ಸಂಪುಟವು ಬುಧವಾರ ಒಪ್ಪಿಗೆ ನೀಡಿದೆ. ದೇಶದಲ್ಲಿ ವಿದ್ಯುತ್ ಚಾಲಿತ ವಾಹನಗಳ ಬಳಕೆ ಹೆಚ್ಚಿಸುವುದಕ್ಕೆ ಉತ್ತೇಜನ ನೀಡುವುದು ಈ ಯೋಜನೆಯ ಉದ್ದೇಶ.

ಒಂಬತ್ತು ವರ್ಷ ಚಾಲ್ತಿಯಲ್ಲಿದ್ದ ಫೇಮ್ ಯೋಜನೆಯ ಬದಲಿಗೆ ಈ ಯೋಜನೆಯು ಜಾರಿಗೆ ಬರಲಿದೆ. ಫೇಮ್ ಯೋಜನೆಯು ಮಾರ್ಚ್ ತಿಂಗಳಿಗೆ ಅಂತ್ಯಗೊಂಡಿದೆ. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯು ‘ಪಿಎಂ ಇ–ಡ್ರೈವ್’ ಯೋಜನೆಗೆ ಅನುಮೋದನೆ ನೀಡಿತು ಎಂದು ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಅವರು ಸುದ್ದಿಗಾರರಿಗೆ ತಿಳಿಸಿದರು.



ಈ ಯೋಜನೆಯ ಅಡಿಯಲ್ಲಿ 24.7 ಲಕ್ಷ ಇ.ವಿ. ದ್ವಿಚಕ್ರ ವಾಹನಗಳಿಗೆ, 3.16 ಲಕ್ಷ ಇ.ವಿ. ತ್ರಿಚಕ್ರ ವಾಹನಗಳಿಗೆ ಮತ್ತು 14,082 ಇ.ವಿ. ಬಸ್ಸುಗಳಿಗೆ ನೆರವು ದೊರೆಯಲಿದೆ. ಅಲ್ಲದೆ, 88,500 ಚಾರ್ಜಿಂಗ್ ಕೇಂದ್ರಗಳಿಗೂ ಈ ಯೋಜನೆಯ ಅಡಿಯಲ್ಲಿ ನೆರವು ಲಭ್ಯವಾಗಲಿದೆ ಎಂದು ವೈಷ್ಣವ್ ಮಾಹಿತಿ ನೀಡಿದರು.

ಇ.ವಿ. ದ್ವಿಚಕ್ರ ವಾಹನಗಳು, ತ್ರಿಚಕ್ರ ವಾಹನಗಳು, ಇ–ಆಂಬುಲೆನ್ಸ್‌ಗಳು ಮತ್ತು ಇ–ಟ್ರಕ್ಕುಗಳ ಬಳಕೆಯನ್ನು ಉತ್ತೇಜಿಸಲು ಹೊಸ ಯೋಜನೆಯು ₹3,679 ಕೋಟಿ ಮೊತ್ತದ ಸಬ್ಸಿಡಿಯನ್ನು ಒದಗಿಸಲಿದೆ.

ರಾಜ್ಯಗಳ ಸಾರಿಗೆ ಸಂಸ್ಥೆಗಳು ಹಾಗೂ ಸಾರ್ವಜನಿಕ ಸಾರಿಗೆ ಸಂಸ್ಥೆಗಳಿಗೆ ಒಟ್ಟು 14,082 ವಿದ್ಯುತ್ ಚಾಲಿತ ಬಸ್ಸುಗಳನ್ನು ಖರೀದಿಸಲು ನೆರವಾಗುವ ಉದ್ದೇಶಕ್ಕೆ ಯೋಜನೆಯ ಅಡಿಯಲ್ಲಿ ₹4,391 ಕೋಟಿ ತೆಗೆದಿರಿಸಲಾಗಿದೆ. ಮುಂದಿನ ಎಂಟು ವರ್ಷಗಳಲ್ಲಿ, ₹12,461 ಕೋಟಿ ಗಾತ್ರದ 31,350 ಮೆಗಾ ವಾಟ್ ಸಾಮರ್ಥ್ಯದ ಜಲವಿದ್ಯುತ್ ಯೋಜನೆ ಅಭಿವೃದ್ಧಿಗೆ ನೆರವು ಒದಗಿಸಲು ಸಂಪುಟವು ಒಪ್ಪಿಗೆ ನೀಡಿದೆ.

ಸುಧಾ, ಮಯೂರ ಓದಿರಿ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ

ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.033/ಪಿಬಿ/ಗುತ್ತಿಗೆ/3054/2024–25/2398
ದಿನಾಂಕ : 10–09–2024

ಇ–ಟೆಂಡರ್ ಪ್ರಕಟಣೆ

ದಿನಾಂಕ : **10–09–2024** ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ, ಕಾಮಗಾರಿಗಳ ಇಂಡೆಂಟ್ ಸಂಖ್ಯೆ **11590**–2ನೇ ಕರೆ & **11594**–2ನೇ ಕರೆ ಕಾಮಗಾರಿಗಳಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **26–09–2024** (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬ್‌ಸೈಟ್ **http://www.kppp.karnataka.gov.in** ನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– (ಮಹಬಲೇಶಪ್ಪ.ಕೆ.) ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/279/2024–25

ಕರ್ನಾಟಕ ಸರ್ಕಾರ ತೋಟಗಾರಿಕೆ ಇಲಾಖೆ

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ರಾಜ್ಯವಲಯ ಕಚೇರಿ, ಹಾಸನ

email:sadhsshsn@gmail.com Ph: 08172-269995

ಸಂ:ಹಿಸತೋನಿ:ರಾವ:ಹಾ:ತಾಸ:17:2024–25 ದಿನಾಂಕ: 11.09.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಜಿಲ್ಲಾಡಳಿತ ಮತ್ತು ತೋಟಗಾರಿಕೆ ಇಲಾಖೆ ವತಿಯಿಂದ ಶ್ರೀ ಹಾಸನಾಂಬ ಮತ್ತು ಶ್ರೀ ಸಿದ್ದೇಶ್ವರ ಸ್ವಾಮಿ ದೇವಾಲಯದ ಜಾತ್ರಾ ಮಹೋತ್ಸವ 2024ರ ಅಂಗವಾಗಿ ದೇವಾಲಯದ ಹಾಗೂ ದೇವಾಲಯದ ಆವರಣದಲ್ಲಿ ಹೂವಿನ ಅಲಂಕಾರ ಕಾಮಗಾರಿ ನಿರ್ವಹಿಸಲು ಈ ಹರಾಜು ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ದಿನಾಂಕ 10.09.2024 ರಿಂದ ಟೆಂಡರ್ ಪ್ರಾರಂಭಿಸಲಾಗುವುದು. ದಿನಾಂಕ 23.09.2024 ರ ಅಪರಾಹ್ನ 5.30 ಗಂಟೆಗೆ ಟೆಂಡರ್ ಅನ್ನು ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ. ತಾಂತ್ರಿಕ ಬಿಡ್ಡನ್ನು ದಿನಾಂಕ 25.09.2024 ರಂದು ಪೂರ್ವಾಹ್ನ 11.00 ಗಂಟೆಗೆ ತೆರೆಯಲಾಗುವುದು. ತಾಂತ್ರಿಕ ಬಿಡ್ಡಿನಲ್ಲಿ ಅನರ್ಹರಾದ ಟೆಂಡರ್ ದಾರರ ಆರ್ಥಿಕ ಬಿಡ್ಡನ್ನು ನಂತರದ ದಿನಗಳಲ್ಲಿ ತೆರೆಯಲಾಗುವುದಿಲ್ಲ ಟೆಂಡರ್ ನಿಬಂಧನೆ ಮತ್ತು ನಿಯಮಾವಳಿ ಹಾಗೂ ಹೆಚ್ಚಿನ ವಿವರಗಳಿಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, ರಾಜ್ಯವಲಯ, ಹಾಸನ ಕಛೇರಿ ಅಥವಾ ದೂರವಾಣಿ ಸಂಖ್ಯೆ 08172–269995 ನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ರಾಜ್ಯವಲಯ), ಹಾಸನ.

ವಾಸಾಸಂಇ/ಹಿಸನಿ/ಹಾಸನ/439/ಕೆಎಸ್‌ಎಂಸಿಎ/2024–25

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ–ಇಪಿ–14/419/2024–25 ದಿನಾಂಕ : 10.09.2024

ಟೆಂಡರ್ ರದ್ದುಪಡಿಸಿ ಪ್ರಕಟಣೆ

ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ–ಇಪಿ/14/1143/2023–24 ದಿನಾಂಕ : 06.08.2024ರಲ್ಲಿ ಪ್ರಕಟವಾದ ಹಾಸನ ಜಿಲ್ಲೆಯ ಹಾಸನ ಬೆಳವಣಿಗೆ ಕೇಂದ್ರ, ಉಪ ಬಡಾವಣೆಗಳು, ಬಿ ಕತ್ತಿಹಳ್ಳಿ, ಹೊಳೇನರಸೀಪುರ, ತಿಮ್ಮನಹಳ್ಳಿ, ಟೆಕ್ಸ್‌ಟೈಲ್ಸ್ ಮತ್ತು ಫಾರ್ಮ SEZ ಕೈಗಾರಿಕಾ ಪ್ರದೇಶಗಳು ಮತ್ತು ಚಿಕ್ಕಮಗಳೂರು ಜಿಲ್ಲೆ ಅಂಬಳೆ ಕೈಗಾರಿಕಾ ಪ್ರದೇಶದಲ್ಲಿ ಬೀದಿ ದೀಪಗಳ ದುರಸ್ತಿ ಮತ್ತು ನಿರ್ವಹಣೆ ಮಾಡುವ ಕಾಮಗಾರಿಯನ್ನು ರದ್ದುಗೊಳಿಸಲಾಗಿದೆ.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/1946/Zen/2024-25

TRIDALA PHARMACEUTICALS PRIVATE LIMITED

Tridala Pharmaceuticals Pvt. Ltd. Kasturinagar, Bengaluru is hiring for the following Vacant positions. Interested candidates can contact the Address below.

SL. No.	Position	Location and No of Posts		Qualification	Age Limit (Maximum)	Experience
1	Territory Sales Executive	Bengaluru	20	Any Degree	30 Years	Minimum 1 Year and above
		Remaining all 30 Districts in Karnataka	2 Per District Total : 60 Posts			
2	Area Sales Manager (1st Line)	Bengaluru	4	Any Degree	35 Years	Minimum 2 Year and above in the same Position
		Remaining all 30 Districts in Karnataka	1 Per District Total : 30 Posts			
3	Regional Sales Manager (2nd Line)	Bengaluru and Hubli	Each One Post	Any Degree	40 Years	Minimum 2 Year and above in the same Position
4	Product Training Manager	Bengaluru HQ	1 Post	M.Pharma with MBA (Marketing)	40 Years	Minimum 2 Year and above in the same Position
5	H R Manager	Bengaluru HQ	1 Post	MBA (HR)	40 Years	Minimum 3 Year and above in the same Position

Note : Salary as per Market Standards

Address: **Tridala Pharmaceuticals Pvt Ltd**
Sakura Complex, 3rd Floor, No:24-317, NGEF Layout East, Kasturi Nagara Main Road, Bengaluru-560043.

Mobile No: 9448527188, 9988008991
e-mail Id: info@tridalapharma.com
website: www.tridalapharma.com

ಕರ್ನಾಟಕ ಸರ್ಕಾರ – ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಚನ್ನಗಿರಿ ಉಪ ವಿಭಾಗ, ಚನ್ನಗಿರಿ.

ಸಂಖ್ಯೆ:ಸಅಸಂ.ಚನ್ನಗಿರಿ:ಟೆಂಡರ್.ಸಿ.ಆರ್–02/2024–25. ದಿ:05.09.2024

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮೂಲಕ)

2024–25ನೇ ಸಾಲಿನಲ್ಲಿ ಭದ್ರಾವತಿ ಅರಣ್ಯ ವಿಭಾಗ ವ್ಯಾಪ್ತಿಯ ಚನ್ನಗಿರಿ ವಲಯಗಳಲ್ಲಿ ಆನೆ ನಿರೋಧಕ ಕಂದಕ ನಿರ್ಮಾಣಕ್ಕೆ ಸಂಬಂಧಪಟ್ಟ ಕಾಮಗಾರಿಗಳಿಗೆ ಸಂಬಂಧಪಟ್ಟ ಅರ್ಹ ಗುತ್ತಿಗೆದಾರರಿಂದ ನಿರ್ವಹಿಸಲು https://kppp.karnataka.gov.in ಪೋರ್ಟಲ್ ಮುಖಾಂತರ ದಿನಾಂಕ: 20–09–2024ರ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಿ ಟೆಂಡರ್ ಅಹ್ವಾನಿಸಲಾಗಿದ್ದು, ಟೆಂಡರ್ ನಿಬಂಧನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಕಾಮಗಾರಿಯ ಅಂದಾಜು ಮೊತ್ತ:–100.50674 ಲಕ್ಷಗಳು

1. ಆನೆ ನಿರೋಧಕ ಕಂದಕ ನಿರ್ಮಾಣಕ್ಕೆ ಸಂಬಂಧಪಟ್ಟ ಕಾಮಗಾರಿಗಳು

*) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 20–09–2024
*) ತಾಂತ್ರಿಕ ಬಿಡ್ಡು ತೆರೆಯುವ ದಿನಾಂಕ: 21–09–2024 17.00.
*) ಆರ್ಥಿಕ ಬಿಡ್ಡು ತೆರೆಯುವ ದಿನಾಂಕ: 23–07–2024 17.30.

ಸಹಿ/– (ಶ್ರೀಮತಿ ರತ್ನಪ್ರಭಾ ಟಿ.ಎ)
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚನ್ನಗಿರಿ ಉಪವಿಭಾಗ, ಚನ್ನಗಿರಿ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/24–25/53/09/654

KRISHNA BHAGYA JALA NIGAM LIMITED

(A.Government of Karnataka Undertaking)

Office of the **EXECUTIVE ENGINEER,** KBJNL NLBC Division., (Irrigation Department) Hunasagi-585215, Tq :Hunasagi, Dist :Yadagir, State : Karnataka - Mail Id: kbjnleenlbc123@gmail.com

ಕ್ರಮಸಂ: ಕೃಭಾಜನಿನಿ/ನಾಎದಂಕಾವಿಹು/ಪಿಬಿ/ಟೆಂಡರ್/2024–25/ 397 ದಿನಾಂಕ: 10–9–2024.

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಉಲ್ಲೇಖ :- ಈ ಕಚೇರಿಯ ಟೆಂಡರ್ ಪ್ರಕಟಣೆ ಸಂ: 194 ದಿನಾಂಕ : 2-7-2024.

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಆಲಮಟ್ಟಿ/ಬೆಂಗಳೂರು ಇವರ ಪರವಾಗಿ ಕೃಭಾಜನಿನಿ, ನಾಎದಂಕಾ ವಿಭಾಗ ಹುಣಸಗಿ ಅಡಿ 2024–25ನೇ ಸಾಲಿನ ಕ್ಲೋಜರ ಹಾಗೂ ವಿಶೇಷ ದುರಸ್ತಿಯ ಅನುಮೋದನೆಗೊಂಡಿರುವ ಒಟ್ಟು 40 ಕಾಮಗಾರಿಗಳಿಗಾಗಿ **Single Cover System** ಮುಖಾಂತರ ಉಲ್ಲೇಖಿತ ಪತ್ರದಂತೆ ಟೆಂಡರ ಆಹ್ವಾನಿಸಲಾಗಿತ್ತು ಇದರಲ್ಲಿ ತಾಂತ್ರಿಕ ಕಾರಣಗಳಿಂದಾಗಿ ಒಟ್ಟು 10 ಕಾಮಗಾರಿಗಳಿಗೆ 2ನೇ ಕರೆಯನ್ನು ಕರೆಯಲಾಗಿರುತ್ತದೆ. **Qualification criteria** ನಲ್ಲಿ ನಮೂದಿಸಿರುವಂತೆ ಎಲ್ಲಾ ದಾಖಲಾತಿಗಳನ್ನು ಹಾಗೂ ಪ್ರಮಾಣ ಪತ್ರಗಳನ್ನು ಹೊಂದಿರುವ ಅರ್ಹ ದರ್ಜೆ ಗುತ್ತಿಗೆದಾರರು ಭಾಗವಹಿಸತಕ್ಕದ್ದು. ಸದರಿ ಕಾಮಗಾರಿಗಳಿಗೆ ಈ ಕಛೇರಿ ಟೆಂಡರು ಪ್ರಕಟಣೆ ಸಂ 397 /2024–25 ದಿನಾಂಕ: 10.9.2024 ಅಡಿಯಲ್ಲಿ ಮೊಹರಾದ ಶೇಕಡಾವಾರು ಟೆಂಡರ್‌ಗಾಗಿ ಇ–ಪ್ರೋಟಲ್ ಮುಖಾಂತರ **http://kppp.karnataka.gov.in/eportal/ines.seam** ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಟೆಂಡರ ಪ್ರಕ್ರಿಯೆಯು ಈ ಕೆಳಗಿನಂತೆ ಇರುತ್ತದೆ.

ಕ್ರ.ಸಂ.	ವಿವರ	ಟೆಂಡರ್ ಪ್ರಕ್ರಿಯೆಯ ದಿನಾಂಕ
1.	ಟೆಂಡರ ಪ್ರಕಟಣೆಯನ್ನು ವೀಕ್ಷಿಸಲು ಹಾಗೂ ಟೆಂಡರ ಸಲ್ಲಿಸಲು ಕೊನೆಯ ದಿನಾಂಕ	12–09–2024 ರಿಂದ 21–09–2024 ಸಂಜೆ 5.00 ಗಂಟೆಯವರೆಗೆ
2.	ಟೆಂಡರನ್ನು ತೆರೆಯುವ ದಿನಾಂಕ	23–09–2024 ಸಂಜೆ 05.15 ಗಂಟೆಗೆ

ಆಸಕ್ತಿ ಹೊಂದಿದ ನೋಂದಾಯಿತ ಅರ್ಹ ಗುತ್ತಿಗೆದಾರರು ಅರ್ಜಿಗಳನ್ನು ಸಲ್ಲಿಸಬಹುದು ಹಾಗೂ ಹೆಚ್ಚಿನ ಮಾಹಿತಿಗಾಗಿ **http://kppp.karnataka.gov.in/eportal/ines.seam** ನಲ್ಲಿ ವೀಕ್ಷಿಸಬಹುದಾಗಿದ್ದು ಹಾಗೂ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ, ನಾಎದಂಕಾ ವಿಭಾಗ ಹುಣಸಗಿ ಇವರಿಂದ ಪಡೆದುಕೊಳ್ಳಬಹುದಾಗಿದೆ.

ಸಹಿ/–
ಕಾರ್ಯನಿರ್ವಾಹಕ ಇಂಜಿನೀಯರರು,
ಕೃಭಾಜನಿನಿ, ನಾಎದಂಕಾ ವಿಭಾಗ, ಹುಣಸಗಿ

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು
Telephone No: 9448994705

CHAMUNDESHWARI ELECTRICITY SUPPLY CORPORATION LIMITED

(A Government of Karnataka Undertaking)
Corporate Office, Procurement Section, CESC, Mysuru-570017.
Website: www.cescmysore.org
E-mail ID: gmpurc@cescmysore.org

Company Identity Number(CIN): U40109KA2004SGC035177

ಚಾವಿಸನಿನಿ/ಪ್ರ.ವ್ಯ/ಉ.ಪ್ರ.ವ್ಯ(ಖ)/ಸ.ಪ್ರ.ವ್ಯ(ಖ)–1/2024–25/12772 ದಿನಾಂಕ: 10.09.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

(ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾ.ವಿ.ಸ.ನಿ.ನಿ ವತಿಯಿಂದ ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗೆ ಕೂಲಿ ಗುತ್ತಿಗೆ ಆಧಾರದ ಮೇಲೆ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

ಕ್ರ.ಸಂ	ವಿವರಗಳು	ವಿಚಾರಣೆ ಸಂಖ್ಯೆ/ದಿನಾಂಕ
1	ಚಾವಿಸನಿನಿಯ **ಚಾಮರಾಜನಗರ** ವಿಭಾಗ ವ್ಯಾಪ್ತಿಯಲ್ಲಿ ಎಲೆಕ್ಟ್ರೋ ಮೆಕಾನಿಕಲ್ ಮೀಟರ್‌ಗಳನ್ನು ಸ್ಟ್ಯಾಟಿಕ್ ಮೀಟರ್‌ಗಳಿಂದ ಬದಲಾಯಿಸುವ ಕಾಮಗಾರಿ.	ಸಿ2–5893/ 09–09–2025
2	ಚಾವಿಸನಿನಿಯ **ಮಡಿಕೇರಿ** ವಿಭಾಗ ವ್ಯಾಪ್ತಿಯಲ್ಲಿ ಎಲೆಕ್ಟ್ರೋ ಮೆಕಾನಿಕಲ್ ಮೀಟರ್‌ಗಳನ್ನು ಸ್ಟ್ಯಾಟಿಕ್ ಮೀಟರ್‌ಗಳಿಂದ ಬದಲಾಯಿಸುವ ಕಾಮಗಾರಿ.	ಸಿ2–5894/ 09–09–2025
3	ಚಾವಿಸನಿನಿಯ **ಕೊಳ್ಳೇಗಾಲ** ವಿಭಾಗ ವ್ಯಾಪ್ತಿಯಲ್ಲಿ ಎಲೆಕ್ಟ್ರೋ ಮೆಕಾನಿಕಲ್ ಮೀಟರ್‌ಗಳನ್ನು ಸ್ಟ್ಯಾಟಿಕ್ ಮೀಟರ್‌ಗಳಿಂದ ಬದಲಾಯಿಸುವ ಕಾಮಗಾರಿ.	ಸಿ2–5895/ 09–09–2025

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ದಿ: 13.09.2024ರ ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ +91–8046010000, +91–8068948777 ಅಥವಾ ಇ–ಮೇಲ್ ವಿಳಾಸ support@eprochelpdesk.com ವ್ಯವಹರಿಸಲು ಕೋರಲಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912

ಸಹಿ/– ಪ್ರಧಾನ ವ್ಯವಸ್ಥಾಪಕರು(ಖರೀದಿ), ಚಾ.ವಿ.ಸ.ನಿನಿ., ಮೈಸೂರು

DIPR/DDMYS-540/KSMCA-363/2024-25

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ ಗದಗ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋಕೋಪಯೋಗಿ ಇಲಾಖೆ ಗದಗ ವಿಭಾಗ ಗದಗ

Phone No: 08372-238782 Fax No. 08372-237268 E.Mail : eepwdgad@gmail.com

ನಂ:ಕಾನಿಇಂಗ:ಲೋಇ:ಪಿಬಿ–1 4:ವಿವಿಧ: 2024–25/2365 ದಿನಾಂಕ: 09–11–2024

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು 157.42 ಲಕ್ಷ ಮೊತ್ತದಲ್ಲಿ ಒಟ್ಟು 04 ಕಾಮಗಾರಿಗೆ (ಕನಿಷ್ಟ ಮೊತ್ತ ರೂ: 08.00 ಲಕ್ಷ ಹಾಗೂ ಗರಿಷ್ಟ ಮೊತ್ತ ರೂ: 108.00 ಲಕ್ಷ) ಕೆಪಿಪಿಪಿ (kppp) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (kppp) ಸ್ಟಾಂಡರ್ಡ್ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ– 1 ಹಾಗೂ 2 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www.kppp.Karnataka.gov.in/ ದಲ್ಲಿ ನೋಡಿಕೊಳ್ಳಬಹುದು.

Work Indent No: 11441-Call-2, 11442-SC -Call-2 and 11395 SC- Call-2,
ಮೇಲಿನ ಕಾಮಗಾರಿಗಳ (ವ ಇ ನಂ 11441 –2ನೇ ಕರೆ, 11442–ಎಸ್ ಸಿ 2ನೇ ಕರೆ–2, 11395 ಎಸ್ ಸಿ 2ನೇ ಕರೆ–2) ಟೆಂಡರ ವಿವರ ಪಶ್ನೋತ್ತರ **ದಿನಾಂಕ: 17–09–2024** ಟೆಂಡರ್ ಸಲ್ಲಿಸುವ **ದಿನಾಂಕ: 18–09–2024** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 19–09–2024** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 20–09–2024**

Work Indent No: 11267 Call-2
ಮೇಲಿನ ಕಾಮಗಾರಿಯ (ವ ಇ ನಂ 11267–2ನೇ ಕರೆ) ಟೆಂಡರ ವಿವರ ಪಶ್ನೋತ್ತರ **ದಿನಾಂಕ: 17–09–2024** ಟೆಂಡರ್ ಸಲ್ಲಿಸುವ **ದಿನಾಂಕ: 20–09–2024** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 21–09–2024** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 22–09–2024**

The amount put to tender and tendered amount are inclusive of GST and all other taxes.

ಸಹಿ/– ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ ಗದಗ ವಿಭಾಗ ಗದಗ

ವಾ.ಸಾ.ಇ/ಬಾಗಲಕೋಟೆ/213/ದೇಶಪಾಂಡೆಪಬ್ಲಿಸಿಟಿ/2024–25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ ದ್ವಿ–ಹಂತದ ಟೆಂಡರ್ ಪದ್ಧತಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರವರ ಕಚೇರಿ (ಉತ್ತರ), 2ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–09.

ಕ್ರ. ಸಂ.	ಕಾಮಗಾರಿಗಳ ಹೆಸರು	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ
	ಐಎಫ್‌ಟಿ ನಂ: ಬೆಂಜಮಂ/ಪ್ರಮುಅ/ಮುಅ(ಉ)/ಅಮುಅ(ಉ)–I/ಉಮುಅ(ನಿ)–II/ತಾಂಸ(ಉ)/3772/2024–25 ದಿನಾಂಕ: 10.09.2024	
1	ಸಕಾನಿಅ(ಉ.ಪೂ–2) ಉಪ–ವಿಭಾಗದಡಿ ಬರುವ (ಎ) ಸಂಜಯನಗರ ಸೇವಾಠಾಣೆ ವ್ಯಾಪ್ತಿಯಡಿ ಬರುವ ಎಲ್ಲಾ ಸಬ್–ಕ್ರಾಸ್‌ಗಳ ಲ್ಯಾಟರಲ್ಸ್‌ಗಳನ್ನು ಸಂಪರ್ಕಗೊಳಿಸುವುದರೊಂದಿಗೆ ಏರ್‌ಫೋರ್ಸ್ ಜಂಕ್ಷನ್‌ನಿಂದ ಸಂಜಯನಗರ ಮುಖ್ಯರಸ್ತೆ ಮಾರ್ಗವಾಗಿ ನಾಗಶೆಟ್ಟಿಹಳ್ಳಿ ಬಸ್‌ಸ್ಟಾಪ್‌ವರೆಗೆ, (ಬಿ) ಸಂಜಯನಗರ ಸೇವಾಠಾಣೆ ವ್ಯಾಪ್ತಿಯಡಿ ಬರುವ ಎಲ್ಲಾ ಸಬ್–ಕ್ರಾಸ್‌ಗಳ ಲ್ಯಾಟರಲ್ಸ್‌ಗಳನ್ನು ಸಂಪರ್ಕಗೊಳಿಸುವುದರೊಂದಿಗೆ ಹೆಬ್ಬಾಳ ಮೇಲ್ಸೇತುವೆಯಿಂದ ಭೂಪಸಂದ್ರ ಮುಖ್ಯರಸ್ತೆಯ ನಾಗಶೆಟ್ಟಿಹಳ್ಳಿ ಜಂಕ್ಷನ್‌ವರೆಗೆ, (ಸಿ) ಜಯಮಹಲ್ ಸೇವಾಠಾಣೆ ವ್ಯಾಪ್ತಿಯಡಿ ಬರುವ ಜಯಮಹಲ್ ರಸ್ತೆ ಟಿ.ವಿ. ಟವರ್‌ನಿಂದ ಟಾಗೋರ್ ಸರ್ಕಲ್‌ವರೆಗೆ, (ಡಿ) ಕುಮಾರಪಾರ್ಕ್ ಸೇವಾಠಾಣೆ ವ್ಯಾಪ್ತಿಯಡಿ ಬರುವ ವಾಟಾಳ್ ನಾಗರಾಜ್ ರಸ್ತೆಯ ಟಿ–ಜಂಕ್ಷನ್‌ನ ಪ್ಲಾಟ್‌ಫಾರಂ ರಸ್ತೆಯಿಂದ ಮಂತ್ರಿ ಮಾಲ್‌ವರೆಗೆ, (ಇ) ಕುಮಾರಪಾರ್ಕ್ ಸೇವಾಠಾಣೆ ವ್ಯಾಪ್ತಿಯಡಿ ಬರುವ ಸಂಪಿಗೆ ರಸ್ತೆ ಬಿಗ್ ಬಜಾರ್ ಜಂಕ್ಷನ್‌ನ ಲಿಂಕ್ ರಸ್ತೆಯಿಂದ ಶೇಷಾದ್ರಿಪುರಂ ಮುಖ್ಯರಸ್ತೆಯವರೆಗೆ, (ಎಫ್) ಕುಮಾರಪಾರ್ಕ್ ಸೇವಾಠಾಣೆ ವ್ಯಾಪ್ತಿಯಡಿ ಬರುವ ಸುಬೇದಾರ್ ಛತ್ರಂ ರಸ್ತೆಯಿಂದ ರಾಜೀವ್‌ಗಾಂಧಿ ಸರ್ಕಲ್‌ವರೆಗೆ ವೈಟ್‌ಟಾಪಿಂಗ್‌ಗೆ ಸೌಲಭ್ಯ ಕಲ್ಪಿಸಲು 300 ಮಿಮೀ ವ್ಯಾಸದ ಆರ್‌ಸಿಸಿ ಎನ್‌ಪಿ3 ಒಳಚರಂಡಿ ಮಾರ್ಗವನ್ನು ಒದಗಿಸಿ, ಅಳವಡಿಸುವ ಕಾಮಗಾರಿ – **2ನೇ ಕರೆ.**	₹ 363.12 ಲಕ್ಷಗಳು / ₹ 5.45 ಲಕ್ಷಗಳು
	ಐಎಫ್‌ಟಿ ನಂ: ಬೆಂಜಮಂ/ಪ್ರಮುಅ/ಮುಅ(ಉ)/ಅಮುಅ(ಉ)–I/ಉಮುಅ(ನಿ)–II/ತಾಂಸ(ಉ)/3771/2024–25 ದಿನಾಂಕ: 10.09.2024	
2	ಸಕಾನಿಅ(ಉ.ಪೂ–1) ಉಪ–ವಿಭಾಗದಡಿ ಬರುವ (ಎ) ವಾಟಾಳ್ ನಾಗರಾಜ್ ರಸ್ತೆಯಲ್ಲಿ ಹಳೆಯದಾಗಿ ಹಾಳಾಗಿರುವ ಸಿಐ ಮಾರ್ಗದ ಬದಲಾಗಿ 200 ಮಿಮೀ & 100 ಮಿಮೀ ವ್ಯಾಸದ ಡಿಐ ಕೊಳವೆ ಮಾರ್ಗ, (ಬಿ) ಮಲ್ಲೇಶ್ವರಂ (ಆರ್‌ಹೆಚ್‌ಎಸ್) 8ನೇ ಮುಖ್ಯರಸ್ತೆಯಿಂದ ಚಿತ್ರಾಪುರ ಮಠದವರೆಗೆ ಹಾಗೂ 8ನೇ ಮುಖ್ಯರಸ್ತೆಯಿಂದ 18ನೇ ಕ್ರಾಸ್ ಜಂಕ್ಷನ್‌ವರೆಗೆ, 11ನೇ ಮುಖ್ಯ ಜಂಕ್ಷನ್‌ವರೆಗೆ 100 ಮಿಮೀ ವ್ಯಾಸ, 300 ಮಿಮೀ ವ್ಯಾಸ ಡಿಐ ಕೊಳವೆಮಾರ್ಗ ಮತ್ತು 450 ಮಿಮೀ ವ್ಯಾಸದ ಎಂಎಸ್ ಕೊಳವೆಮಾರ್ಗ, (ಸಿ) ಮಲ್ಲೇಶ್ವರಂ (ಎಲ್‌ಹೆಚ್‌ಎಸ್) 8ನೇ ಮುಖ್ಯರಸ್ತೆಯಿಂದ ಚಿತ್ರಾಪುರ ಮಠದವರೆಗೆ ಹಾಗೂ 8ನೇ ಮುಖ್ಯರಸ್ತೆಯಿಂದ 18ನೇ ಕ್ರಾಸ್ ಜಂಕ್ಷನ್‌ವರೆಗೆ, 11ನೇ ಮುಖ್ಯ ಜಂಕ್ಷನ್‌ವರೆಗೆ 100 ಮಿಮೀ ವ್ಯಾಸ & 300 ಮಿಮೀ ವ್ಯಾಸದ ಡಿಐ ಕೊಳವೆಮಾರ್ಗ ಮತ್ತು 450 ಮಿಮೀ ವ್ಯಾಸದ ಎಂಎಸ್ ಕೊಳವೆಮಾರ್ಗವನ್ನು ಒದಗಿಸಿ, ಅಳವಡಿಸುವ ಕಾಮಗಾರಿ–**2ನೇ ಕರೆ.**	₹ 201.88 ಲಕ್ಷಗಳು / ₹3.03 ಲಕ್ಷಗಳು
	ಐಎಫ್‌ಟಿ ನಂ: ಬೆಂಜಮಂ/ಪ್ರಮುಅ/ಮುಅ(ಉ)/ಅಮುಅ(ಉ)–I/ಉಮುಅ(ನಿ)–II/ತಾಂಸ(ಉ)/3770/2024–25 ದಿನಾಂಕ: 10.09.2024	
3	ಸಕಾನಿಅ(ಉ.ಪೂ–2) ಉಪ–ವಿಭಾಗದ ಕುಮಾರಪಾರ್ಕ್ ಸೇವಾಠಾಣೆ ವ್ಯಾಪ್ತಿಯಡಿ ಬರುವ (1) ವಾಟಾಳ್ ನಾಗರಾಜ್ ರಸ್ತೆಯ ಟಿ–ಜಂಕ್ಷನ್‌ನಿಂದ ಮಂತ್ರಿ ಮಾಲ್‌ವರೆಗೆ ಪ್ಲಾಟ್‌ಫಾರಂ ರಸ್ತೆಯಲ್ಲಿ, (2) ಸಂಪಿಗೆ ರಸ್ತೆ (ಬಿಗ್ ಬಜಾರ್ ಜಂಕ್ಷನ್)ಯಿಂದ ಶೇಷಾದ್ರಿಪುರಂವರೆಗೆ ಲಿಂಕ್ ರಸ್ತೆಯಲ್ಲಿ, (3) ಸುಬೇದಾರ್ ಛತ್ರಂ ರಸ್ತೆಯಿಂದ ರಾಜೀವ್‌ಗಾಂಧಿ ಸರ್ಕಲ್‌ವರೆಗೆ ನೆಟ್‌ವರ್ಕ್ ಜಾಲದ ದಕ್ಷತೆಯನ್ನು ಸುಧಾರಿಸಲು ಹಾಗೂ ಉದ್ದೇಶಿತ ವೈಟ್ ಟಾಪಿಂಗ್‌ನಲ್ಲಿ ಉಂಟಾಗುವ ನಷ್ಟವನ್ನು ಕಡಿಮೆಗೊಳಿಸಲು ಹಾಲಿಯಿರುವ ನೀರು ಸರಬರಾಜು ನೆಟ್‌ವರ್ಕ್ ಅನ್ನು ನವೀಕರಿಸಲು / ಬದಲಾಯಿಸುವುದರೊಂದಿಗೆ ಕಂಟ್ರೋಲ್ ವಾಲ್ವ್‌ಗಳೊಂದಿಗೆ 450ಮಿಮೀ, 200 ಮಿಮೀ, 100ಮಿಮೀ ವ್ಯಾಸದ ನೀರು ಕೊಳವೆ ಮಾರ್ಗವನ್ನು ಒದಗಿಸಿ, ಅಳವಡಿಸಿ, ಸಂಪರ್ಕಗೊಳಿಸುವ ಕಾಮಗಾರಿ–**2ನೇ ಕರೆ.**	₹ 350.95 ಲಕ್ಷಗಳು / ₹ 5.26 ಲಕ್ಷಗಳು
	ಐಎಫ್‌ಟಿ ನಂ: ಬೆಂಜಮಂ/ಪ್ರಮುಅ/ಮುಅ(ಉ)/ಅಮುಅ(ಉ)–I/ಉಮುಅ(ನಿ)–II/ತಾಂಸ(ಉ)/3769/2024–25 ದಿನಾಂಕ: 10.09.2024	
4	ಸಕಾನಿಅ(ಉ.ಪೂ–2) ಉಪ–ವಿಭಾಗದಡಿ ಬರುವ (1) ಜೀವರಾಜ್ ಆಳ್ವಾ ರಸ್ತೆ (10ಮೇ ಮೇನ್), ಸದಾಶಿವನಗರದಿಂದ ಭಾಷ್ಯಂ ಸರ್ಕಲ್ ಮಾರ್ಗವಾಗಿ ವಿನಾಯಕ ಸರ್ಕಲ್‌ವರೆಗೆ, (2) ಜಯಮಹಲ್ ರಸ್ತೆ (ಟಿವಿ ಟವರ್) ಯಿಂದ ಟಾಗೋರ್ ಸರ್ಕಲ್‌ವರೆಗೆ, (3) ಹೆಬ್ಬಾಳ ಮೇಲ್ಸೇತುವೆಯಿಂದ ಭೂಪಸಂದ್ರ ಮುಖ್ಯರಸ್ತೆಯ ನಾಗಶೆಟ್ಟಿಹಳ್ಳಿ ಜಂಕ್ಷನ್‌ವರೆಗೆ ನೆಟ್‌ವರ್ಕ್ ಜಾಲದ ದಕ್ಷತೆಯನ್ನು ಸುಧಾರಿಸಲು ಹಾಗೂ ಉದ್ದೇಶಿತ ವೈಟ್ ಟಾಪಿಂಗ್‌ನಲ್ಲಿ ಉಂಟಾಗುವ ನಷ್ಟವನ್ನು ಕಡಿಮೆಗೊಳಿಸಲು ಹಾಲಿಯಿರುವ ನೀರು ಸರಬರಾಜು ನೆಟ್‌ವರ್ಕ್ ಅನ್ನು ನವೀಕರಿಸಲು / ಬದಲಾಯಿಸುವುದರೊಂದಿಗೆ ಕಂಟ್ರೋಲ್ ವಾಲ್ವ್‌ಗಳೊಂದಿಗೆ 450ಮಿಮೀ, 200 ಮಿಮೀ, 100ಮಿಮೀ ವ್ಯಾಸದ ನೀರು ಕೊಳವೆ ಮಾರ್ಗವನ್ನು ಒದಗಿಸಿ, ಅಳವಡಿಸಿ, ಸಂಪರ್ಕಗೊಳಿಸುವ ಕಾಮಗಾರಿ–**2ನೇ ಕರೆ.**	₹ 316.50 ಲಕ್ಷಗಳು / ₹ 4.75 ಲಕ್ಷಗಳು
	ಐಎಫ್‌ಟಿ ನಂ: ಬೆಂಜಮಂ/ಪ್ರಮುಅ/ಮುಅ(ಉ)/ಅಮುಅ(ಉ)–I/ಉಮುಅ(ನಿ)–II/ತಾಂಸ(ಉ)/3768/2024–25 ದಿನಾಂಕ: 10.09.2024	
5	ಸಕಾನಿಅ(ಉ.ಪೂ–2) ಉಪ–ವಿಭಾಗದ ಸಂಜಯ್‌ನಗರ ಸೇವಾಠಾಣೆ ವ್ಯಾಪ್ತಿಯಡಿ ಬರುವ ಎಲ್ಲಾ ಸಬ್–ಕ್ರಾಸ್‌ಗಳ ಲ್ಯಾಟರಲ್ಸ್‌ಗಳನ್ನು ಸಂಪರ್ಕಗೊಳಿಸುವುದರೊಂದಿಗೆ ಏರ್‌ಫೋರ್ಸ್ ಗೇಟ್‌ನಿಂದ ಸಂಜಯ್‌ನಗರ ಮುಖ್ಯರಸ್ತೆ ಮಾರ್ಗವಾಗಿ ನಾಗಶೆಟ್ಟಿಹಳ್ಳಿ ಬಸ್‌ಸ್ಟಾಪ್‌ವರೆಗೆ ನೆಟ್‌ವರ್ಕ್ ಜಾಲದ ದಕ್ಷತೆಯನ್ನು ಸುಧಾರಿಸಲು ಹಾಗೂ ಉದ್ದೇಶಿತ ವೈಟ್ ಟಾಪಿಂಗ್‌ನಲ್ಲಿ ಉಂಟಾಗುವ ನಷ್ಟವನ್ನು ಕಡಿಮೆಗೊಳಿಸಲು ಹಾಲಿಯಿರುವ ನೀರು ಸರಬರಾಜು ನೆಟ್‌ವರ್ಕ್ ಅನ್ನು ನವೀಕರಿಸಲು / ಬದಲಾಯಿಸುವುದರೊಂದಿಗೆ ಕಂಟ್ರೋಲ್ ವಾಲ್ವ್‌ಗಳೊಂದಿಗೆ 450X200X100ಮಿಮೀ ವ್ಯಾಸದ ನೀರು ಕೊಳವೆ ಮಾರ್ಗವನ್ನು ಒದಗಿಸಿ, ಅಳವಡಿಸಿ, ಸಂಪರ್ಕಗೊಳಿಸುವ ಕಾಮಗಾರಿ–**2ನೇ ಕರೆ.**	₹ 383.54 ಲಕ್ಷಗಳು / ₹ 5.75 ಲಕ್ಷಗಳು

ಮೇಲಿನ ಕಾಮಗಾರಿಗಳಿಗೆ ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **27.09.2024ರ ಮಧ್ಯಾಹ್ನ 3:00 ಗಂಟೆವರೆಗೆ.** ಬಿಡ್‌ಗಳನ್ನು ತೆರೆಯುವ ದಿನಾಂಕ: **30.09.2024ರಂದು ಸಂಜೆ 4.00 ಗಂಟೆಯ ನಂತರ.**

ಸಹಿ/–
ಮುಖ್ಯ ಅಭಿಯಂತರರು (ಉತ್ತರ)

ಟೆಂಡರ್ ಮತ್ತು ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು **https://kppp.karnataka.gov.in**ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/YC/1932/2024-25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ–ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಚೇರಿ (ದಕ್ಷಿಣ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ		ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1	ದಕ್ಷಿಣ ಪಶ್ಚಿಮ–2	ಬೆಂಜಮಂ/ಕಾನಿಅ(ದ.ಪ.–2)/ತಾಂಅ/ಪಿಬಿ/1518/2024–25, ದಿನಾಂಕ: 10.09.2024	1	ರೂ.22,01,111/– / ರೂ.50,000/–	25.09.2024ರ ಮಧ್ಯಾಹ್ನ 2:00 ಗಂಟೆಯವರೆಗೆ	26.09.2024ರ ಸಂಜೆ 4:00 ಗಂಟೆಯ ನಂತರ
2			2	ರೂ.23,31,720/– / ರೂ.50,000/–		
3		ಬೆಂಜಮಂ/ಕಾನಿಅ(ದ.ಪ.–2)/ತಾಂಅ/ಪಿಬಿ/1518/2024–25, ದಿನಾಂಕ: 10.09.2024 (ಪರಿಶಿಷ್ಟ ಜಾತಿಗೆ ಮೀಸಲು)	3	ರೂ.44,49,279/– / ರೂ.44,500/–		
4		ಬೆಂಜಮಂ/ಕಾನಿಅ(ದ.ಪ.–2)/ತಾಂಅ/ಪಿಬಿ/1518/2024–25, ದಿನಾಂಕ: 10.09.2024	4	ರೂ.53,27,743/– / ರೂ.1,06,600/–		
5			5	ರೂ.19,17,094/– / ರೂ.47,950/–		
6			6	ರೂ.36,87,913/– / ರೂ.92,200/–		
7			7	ರೂ.11,58,393/– / ರೂ.29,000/–		
8			8	ರೂ.40,45,322/– / ರೂ.80,950/–		
9		ಬೆಂಜಮಂ/ಕಾನಿಅ(ದ.ಪ.–2)/ತಾಂಅ/ಪಿಬಿ/1518/2024–25, ದಿನಾಂಕ: 10.09.2024 (ಪರಿಶಿಷ್ಟ ಜಾತಿಗೆ ಮೀಸಲು)	9	ರೂ.15,99,135/– / ರೂ.25,000/–		
10		ಬೆಂಜಮಂ/ಕಾನಿಅ(ದ.ಪ.–2)/ತಾಂಅ/ಪಿಬಿ/1518/2024–25, ದಿನಾಂಕ: 10.09.2024	10	ರೂ.17,89,999/– / ರೂ.44,750/–		
11			11	ರೂ.27,12,802/– / ರೂ.67,900/–		
12		ಬೆಂಜಮಂ/ಕಾನಿಅ(ದ.ಪ.–2)/ತಾಂಅ/ಪಿಬಿ/1518/2024–25, ದಿನಾಂಕ: 10.09.2024 (ಪರಿಶಿಷ್ಟ ಪಂಗಡಕ್ಕೆ ಮೀಸಲು)	12	ರೂ.22,97,008/– / ರೂ.25,000/–		
13			13	ರೂ.22,91,454/– / ರೂ.25,000/–		
14		ಬೆಂಜಮಂ/ಕಾನಿಅ(ದ.ಪ.–2)/ತಾಂಅ/ಪಿಬಿ/1518/2024–25, ದಿನಾಂಕ: 10.09.2024 (ಪರಿಶಿಷ್ಟ ಜಾತಿಗೆ ಮೀಸಲು)	14	ರೂ.43,92,610/– / ರೂ.44,000/–		
15		ಬೆಂಜಮಂ/ಕಾನಿಅ(ದ.ಪ.–2)/ತಾಂಅ/ಪಿಬಿ/1518/2024–25, ದಿನಾಂಕ: 10.09.2024	15	ರೂ.19,80,235/– / ರೂ.49,600/–		
16		ಬೆಂಜಮಂ/ಕಾನಿಅ(ದ.ಪ.–2)/ತಾಂಅ/ಪಿಬಿ/1518/2024–25, ದಿನಾಂಕ: 10.09.2024 (ಪರಿಶಿಷ್ಟ ಜಾತಿಗೆ ಮೀಸಲು)	16	ರೂ.5,96,342/– / ರೂ.7,500/–		
17		ಬೆಂಜಮಂ/ಕಾನಿಅ(ದ.ಪ.–2)/ತಾಂಅ/ಪಿಬಿ/1518/2024–25, ದಿನಾಂಕ: 10.09.2024 (2ನೇ ಕರೆ)	17	ರೂ.19,95,790/– / ರೂ.58,900/–		

ಸಹಿ/– **ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ ಪಶ್ಚಿಮ–2)**

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/BCPL/1954/2024-25

ತಾಲೂಕಾ ಸಾರ್ವಜನಿಕ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ

ಆಡಳಿತ ವೈದ್ಯಾಧಿಕಾರಿಗಳ ಕಾರ್ಯಾಲಯ, ಜಮಖಂಡಿ.
ತಾಲೂಕ ಜಮಖಂಡಿ, ಜಿಲ್ಲೆ ಬಾಗಲಕೋಟೆ. ಇಮೇಲ್ : cmoghjkd@gmail.com

ಸಂಖ್ಯೆ : ಸಾ.ಆ.ಜ./ಗ್ರೂಪ್–ಡಿ/ಸ್ವೀ.ಗಾ./ಡೇಟಾ ಆಪರೇಟರ್/2024–25/160
ದಿನಾಂಕ : 10–09–2024

ಹೊರಗುತ್ತಿಗೆ ಅಡಿಯಲ್ಲಿ ಗ್ರೂಪ್-ಡಿ, ಸ್ವೀಪರ್/ಗಾರ್ಡ-(ಡ-ವರ್ಗ) ಹಾಗೂ ಡೇಟಾ ಎಂಟ್ರಿ ಆಪರೇಟರ್ ಟೆಂಡರ್ ಪ್ರಕಟಣೆ

ಸನ್ 2024–25 ನೇ ಸಾಲಿಗಾಗಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಜಮಖಂಡಿ ಜಿಲ್ಲೆ ಬಾಗಲಕೋಟೆ ಈ ಆಸ್ಪತ್ರೆಗೆ ಹೊರಗುತ್ತಿಗೆ ಅಡಿಯಲ್ಲಿ ಮಾನವ ಹೊರಸಂಪನ್ಮೂಲ ಏಜೆನ್ಸಿ ಮುಖಾಂತರ ಗ್ರೂಪ್–ಡಿ, ಸ್ವೀಪರ್ / ಗಾರ್ಡ ಹಾಗೂ ಡೇಟಾ ಎಂಟ್ರಿ ಆಪರೇಟರ್ ಸೇವೆಯನ್ನು ಪಡೆದುಕೊಳ್ಳಲು ನೊಂದಾಯಿತ ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಈ ಕೆಳಗೆ ವಿವರಿಸಿದಂತೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ : www.kppp.karnataka.gov.in ನಿಂದ ಪಡೆಯಬಹುದು ಮತ್ತು ತಾಲೂಕಾ ಸಾರ್ವಜನಿಕ ಆಸ್ಪತ್ರೆ ಜಮಖಂಡಿ (ಜಿಲ್ಲೆ ಬಾಗಲಕೋಟೆ) ಕಾರ್ಯಾಲಯದಿಂದ ಕೆಲಸದ ದಿನಗಳಂದು ಪಡೆಯಬಹುದು.

01	ಆಸ್ಪತ್ರೆಯ ಹಾಸಿಗೆ ಸಾಮರ್ಥ್ಯ	100 ಹಾಸಿಗೆ
02	ಸ್ವಚ್ಛತಾ ಕೆಲಸಕ್ಕೆ/ ಡೇಟಾ ಎಂಟ್ರಿ ಆಪರೇಟರ್ ಕೆಲಸಕ್ಕೆ ಒದಗಿಸಬೇಕಾದ ಮಾನವ ಸಂಪನ್ಮೂಲ (ಕಾರ್ಮಿಕರ ಸಂಖ್ಯೆ)	* ಗ್ರೂಪ್–ಡಿ–14 * ಸ್ವೀಪರ್/ಗಾರ್ಡ–04 * ಡೇಟಾ ಎಂಟ್ರಿ ಆಪರೇಟರ್–02 ಒಟ್ಟು ಸಿಬ್ಬಂದಿ = 20
03	ಟೆಂಡರ ಅಂದಾಜು ಮೊತ್ತ	* ಗ್ರೂಪ್–ಡಿ (ಡ–ವರ್ಗ)–14 = 43,99,080/– * ಸ್ವೀಪರ/ಗಾರ್ಡ (ಡ–ವರ್ಗ)–04 = 12,56,880/– * ಡೇಟಾ ಎಂಟ್ರಿ ಆಪರೇಟರ್–02 = 7,77,768/– ಒಟ್ಟು ರೂಪಾಯಿ = 64,33,728/– ರೂ. ಅರವತ್ನಾಲ್ಕು ಲಕ್ಷದ ಮೂವತ್ಮೂರು ಸಾವಿರದ ಏಳು ನೂರ ಇಪ್ಪತ್ತೇಂಟು ಮಾತ್ರ)
04	ಇ.ಎಂ.ಡಿ. ಮೊತ್ತ	ಒಟ್ಟು ರೂಪಾಯಿ = 1,60,843/– (ರೂ. ಒಂದು ಲಕ್ಷದ ಅರವತ್ತು ಸಾವಿರದ ಎಂಟು ನೂರ ನಲವತ್ಮೂರು ಮಾತ್ರ) ಇ–ಪ್ರೊಕ್ಯೂರಮೆಂಟ್ ಮುಖಾಂತರ
05	ಟೆಂಡರ್ ಅರ್ಜಿ ಫೀ	ಇ–ಪ್ರೊಕ್ಯೂರಮೆಂಟ್ ನಿಯಮಾನುಸಾರ
06	ಟೆಂಡರ್ ಅರ್ಜಿ ಅಪಲೋಡ್ ಪ್ರಾರಂಭ ದಿನಾಂಕ	10–09–2024 ರಿಂದ 30–09–2024 ರವರೆಗೆ
07	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ	30–09–2024 ಸಾಯಂಕಾಲ 05.30 ವರೆಗೆ
08	ಟೆಂಡರ್ ತಾಂತ್ರಿಕ ದಾಖಲಾತಿ ತೆರೆಯುವ ದಿನಾಂಕ ಮತ್ತು ಸ್ಥಳ	03–10–2024 ತಾಲೂಕಾ ಸಾರ್ವಜನಿಕ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಜಮಖಂಡಿ, ಜಿಲ್ಲಾ ಬಾಗಲಕೋಟೆ.

ಒಂದು ವೇಳೆ ತಾಂತ್ರಿಕ ಹಾಗೂ ಹಣಕಾಸು ಬಿಡ್‌ನ ತೆರೆಯುವ ದಿನಾಂಕದಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ, ಆಡಳಿತಾತ್ಮಕ ಹಾಗೂ ತಾಂತ್ರಿಕ ತೊಂದರೆಯಾದಲ್ಲಿ ಮುಂದಿನ ಕರ್ತವ್ಯದ ದಿನದಂದು ಟೆಂಡರ್ ತೆರೆಯಲಾಗುವುದು.

ಸಹಿ/– ಆಡಳಿತ ವೈದ್ಯಾಧಿಕಾರಿಗಳು,
ತಾಲೂಕಾ ಸಾರ್ವಜನಿಕ ಆಸ್ಪತ್ರೆ ಜಮಖಂಡಿ,
ಜಿಲ್ಲೆ ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟೆ/227/ಮಣಿಪಾಲ್/2024–25

ಕೋಲ್ಕತ್ತ: ಆರ್‌.ಜಿ. ಕರ್ ಆಸ್ಪತ್ರೆಯಲ್ಲಿ ವೈದ್ಯ ವಿದ್ಯಾರ್ಥಿನಿಯ ಅತ್ಯಾಚಾರ ಮತ್ತು ಕೊಲೆ ಪ್ರಕರಣ

ವೈದ್ಯರ ಷರತ್ತು ತಿರಸ್ಕರಿಸಿದ ಸರ್ಕಾರ

ಕೋಲ್ಕತ್ತ(ಪಿಟಿಐ): ಮಾತುಕತೆಗೆ ಕಿರಿಯ ವೈದ್ಯರು ಮುಂದಿಟ್ಟಿದ್ದ ಕೆಲವು ಷರತ್ತುಗಳನ್ನು ಪಶ್ಚಿಮ ಬಂಗಾಳ ಸರ್ಕಾರ ತಿರಸ್ಕರಿಸಿದ ಕಾರಣ ಬುಧವಾರ ಸಂಜೆ ನಿಗದಿಯಾಗಿದ್ದ ಸಭೆ ನಡೆಯಲಿಲ್ಲ. ಕರ್ತವ್ಯಕ್ಕೆ ಮರಳುವಂತೆ ಸುಪ್ರೀಂ ಕೋರ್ಟ್ ನೀಡಿರುವ ಆದೇಶಕ್ಕೆ ಕಿಮ್ಮತ್ತು ನೀಡದ ವೈದ್ಯರು ಪ್ರತಿಭಟನೆ ಮುಂದು-ವರಿಸಿದ್ದಾರೆ.

ಆರ್‌.ಜಿ. ಕರ್ ಆಸ್ಪತ್ರೆಯಲ್ಲಿ ಆಗಸ್ಟ್ 9ರಂದು ನಡೆದಿದ್ದ ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ-ಕೊಲೆ ಪ್ರಕರಣದ ಹಿನ್ನೆಲೆಯಲ್ಲಿ ವೈದ್ಯರು ಪ್ರತಿಭಟನೆ ನಡೆಸುತ್ತಿದ್ದಾರೆ.

ಈ ಬಿಕ್ಕಟ್ಟು ಪರಿಹರಿಸಲು ಕಿರಿಯ ವೈದ್ಯರನ್ನು ಸರ್ಕಾರ ಬುಧವಾರ ಮಾತುಕತೆಗೆ ಆಹ್ವಾನಿಸಿ, ನಸುಕಿನಲ್ಲಿ ಇಮೇಲ್ ಸಂದೇಶ ಕಳುಹಿಸಿತ್ತು. ಆದರೆ, ಕಿರಿಯ ವೈದ್ಯರು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಸಮ್ಮುಖ ದಲ್ಲಿ ಚರ್ಚೆ ಆಗಬೇಕು ಮತ್ತು ಮಾತುಕತೆಯನ್ನು ನೇರ ಪ್ರಸಾರ ಮಾಡಬೇಕು ಎಂದು ಷರತ್ತು ವಿಧಿಸಿದರು.

ಆದರೆ, ಸರ್ಕಾರವು ತನ್ನ ನಿಲುವಿಗೆ ದೃಢವಾಗಿ ಅಂಟಿಕೊಂಡು, ಮಾತುಕತೆಯ ಪೂರ್ವ ಷರತ್ತುಗಳಿಗೆ ಸಮ್ಮತಿಸಲು ನಿರಾಕರಿಸಿತು.

ಆರೋಗ್ಯ ಸಚಿವೆ ಚಂದ್ರಿಮಾ ಭಟ್ಟಾಚಾರ್ಯ ಅವರು ಚರ್ಚೆ ನಡೆಸಲು ಸರ್ಕಾರ ಮುಕ್ತವಾಗಿದೆ. ಆದರೆ, 'ರಾಜಕೀಯ ಶಕ್ತಿಗಳು' ಪ್ರತಿಭಟನೆಗಳ ಮೇಲೆ ಪ್ರಭಾವ ಬೀರುತ್ತಿವೆ ಎಂದು ಹೇಳಿದರು.

ವೈದ್ಯರು ಕೆಲಸಕ್ಕೆ ಮರಳುತ್ತಾರೆ ಮತ್ತು ಸಾರ್ವಜನಿಕರಿಗೆ ಅಗತ್ಯ ಸೇವೆ ಒದಗಿಸುವುದಾಗಿ ರಾಜ್ಯ ಸರ್ಕಾರ ಆಶಿಸುತ್ತಿದೆ
ಮನೋಜ್ ಪಂತ್, ಮುಖ್ಯ ಕಾರ್ಯದರ್ಶಿ, ಪಶ್ಚಿಮ ಬಂಗಾಳ ಸರ್ಕಾರ

ವೈದ್ಯರ ಮುಷ್ಕರದಿಂದ ಜನರು ಬಳಲುತ್ತಿರುವ ಕಾರಣ ವೈದ್ಯರ ವಿರುದ್ಧ ಪಕ್ಷದ ವತಿಯಿಂದ ಪ್ರತಿಭಟನೆಗಳನ್ನು ಆಯೋಜಿಸುತ್ತೇವೆ
ಹುಮಾಯೂನ್ ಕಬೀರ್, ಟಿಎಂಸಿ ಶಾಸಕ

ಷರತ್ತುಗಳ ಹೊರತಾಗಿಯೂ ಚರ್ಚೆಗೆ ಬಾಗಿಲುಗಳು ತೆರೆದಿರುತ್ತವೆ. ಮಾತುಕತೆಯಲ್ಲಿ ಸಿ.ಎಂ ಕಡ್ಡಾಯ ಉಪಸ್ಥಿತಿ ಬೇಡಿಕೆ ಸ್ವೀಕರಿಸಲ್ಲ
ಚಂದ್ರಿಮಾ ಭಟ್ಟಾಚಾರ್ಯ
ಆರೋಗ್ಯ ರಾಜ್ಯ ಸಚಿವ

ಸುಪ್ರೀಂ ಕೋರ್ಟ್ ಆದೇಶ ಧಿಕ್ಕರಿಸಿ ಮುಷ್ಕರ ನಡೆಸುತ್ತಿರುವ ವೈದ್ಯರು ರಾಷ್ಟ್ರ ವಿರೋಧಿಗಳು
ಚಂದನ್ ಮುಖೋಪಾಧ್ಯಾಯ
ಟಿಎಂಸಿ ನಾಯಕ

ಮುಖ್ಯಾಂಶಗಳು

- ಸಭೆಯಲ್ಲಿ ಕನಿಷ್ಠ 30 ಪ್ರತಿನಿಧಿಗಳಿಗೆ ಅವಕಾಶ ಬೇಕು– ವೈದ್ಯರ ಬೇಡಿಕೆ
- ಸಿಬಿಐ ತನಿಖೆ ಪಾರದರ್ಶಕ ಆಗಿರಬೇಕು– ಕಿರಿಯ ವೈದ್ಯರ ಒತ್ತಾಯ
- ಮುಷ್ಕರನಿರತ ವೈದ್ಯರ ವಿರುದ್ಧ ಪ್ರತಿಭಟನೆ ಎಚ್ಚರಿಕೆ ನೀಡಿರುವ ಟಿಎಂಸಿ

ಸಚಿವರ ಈ ಹೇಳಿಕೆಯು ವೈದ್ಯರ ಕಡೆಯಿಂದಲೂ ಸರ್ಕಾರದ ಮಾತುಕತೆಯ ಆಹ್ವಾನವನ್ನು ತ್ವರಿತವಾಗಿ ತಿರಸ್ಕರಿಸಲು ಕಾರಣವಾಯಿತು. ಅಲ್ಲದೆ, ಸಚಿವೆಯ ಹೇಳಿಕೆಯನ್ನು ವೈದ್ಯರು ಆಧಾರರಹಿತವೆಂದು ತಳ್ಳಿಹಾಕಿದರು.

ಸುಪ್ರೀಂ ಕೋರ್ಟ್ ನಿರ್ದೇಶನವನ್ನು ಗೌರವಿಸುವ ಮೂಲಕ ವೈದ್ಯರು ಪುನಃ ಕರ್ತವ್ಯಕ್ಕೆ ಹಾಜರಾಗಬೇಕು ಎಂದು ಒತ್ತಾಯಿಸಿದ ಸಚಿವರು, ಕೋರ್ಟ್ ಆದೇಶವನ್ನು ಉಲ್ಲಂಘಿಸಿದ್ದಕ್ಕಾಗಿ ರಾಜ್ಯ ಸರ್ಕಾರವು ದಂಡನಾ ಕ್ರಮವನ್ನು ತೆಗೆದುಕೊಳ್ಳುತ್ತದೆಯೇ ಎಂಬುದರ ಬಗ್ಗೆ ನೇರ ಉತ್ತರ ನೀಡಲಿಲ್ಲ.

ಏತನ್ಮಧ್ಯೆ, ಟಿಎಂಸಿ ನಾಯಕರು ಮತ್ತು ಶಾಸಕರು ಧರಣಿನಿರತ ಕಿರಿಯ ವೈದ್ಯರನ್ನು 'ರಾಷ್ಟ್ರ ವಿರೋಧಿಗಳು' ಎಂದು ಜರೆಯುವ ಮೂಲಕ ಅವರಿಗೆ ಪರೋಕ್ಷವಾಗಿ ಬೆದರಿಕೆ-ಗಳನ್ನು ಹಾಕಿದರು. ಮುಷ್ಕರನಿರತ ವೈದ್ಯರ ವಿರುದ್ಧ ಪಕ್ಷವೂ ಪ್ರತಿಭಟನೆಗಳನ್ನು ನಡೆಸಬಹುದು ಎಂದು ಎಚ್ಚರಿಕೆ ನೀಡಿದರು.



ವೈದ್ಯ ವಿದ್ಯಾರ್ಥಿನಿಯ ಅತ್ಯಾಚಾರ– ಕೊಲೆ ಪ್ರಕರಣ ಖಂಡಿಸಿ ಕೋಲ್ಕತ್ತದ ಸ್ವಾಸ್ಥ್ಯ ಭವನದ ಬಳಿ ಕಿರಿಯ ವೈದ್ಯರು ಬುಧವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

33ನೇ ದಿನಕ್ಕೆ ಕಾಲಿಟ್ಟ ಪ್ರತಿಭಟನೆ

ವೈದ್ಯರು ನಡೆಸುತ್ತಿರುವ ಪ್ರತಿಭಟನೆ ಬುಧವಾರ 33ನೇ ದಿನಕ್ಕೆ ಕಾಲಿಟ್ಟಿತು. ಕೋಲ್ಕತ್ತ ಪೊಲೀಸ್ ಕಮಿಷನರ್ ವಿನೀತ್ ಗೋಯಲ್, ರಾಜ್ಯ ಆರೋಗ್ಯ ಕಾರ್ಯದರ್ಶಿ, ಆರೋಗ್ಯ ಶಿಕ್ಷಣ ನಿರ್ದೇಶಕರು ಮತ್ತು ಆರೋಗ್ಯ ಸೇವೆಗಳ ನಿರ್ದೇಶಕರನ್ನು ವಜಾಗೊಳಿಸುವಂತೆ ಒತ್ತಾಯಿಸಿ ವೈದ್ಯರು ರಾಜ್ಯ ಆರೋಗ್ಯ ಇಲಾಖೆ ಪ್ರಧಾನ ಕಚೇರಿ ಸ್ವಾಸ್ಥ್ಯ ಭವನದ ಹೊರಗೆ ಧರಣಿ ನಡೆಸುತ್ತಿದ್ದಾರೆ.

ಸಾಕ್ಷ್ಯಗಳನ್ನು ತಿರುಚುವಲ್ಲಿ ಭಾಗಿಯಾಗಿರುವ ಆರ್‌.ಜಿ. ಕರ್ ಆಸ್ಪತ್ರೆಯ ಹಿಂದಿನ ಪ್ರಾಂಶುಪಾಲ ಸಂದೀಪ್ ಘೋಷ್ ಮತ್ತು ಇತರರ ಅಮಾನತಿಗೂ ಅವರು ಒತ್ತಾಯಿಸಿದ್ದಾರೆ.

ಆರೋಗ್ಯ ವೃತ್ತಿಪರರಿಗೆ ಎದುರಾಗಿರುವ ಬೆದರಿಕೆಗಳು ಮತ್ತು ಸಮಸ್ಯೆಗಳನ್ನು ನಿವಾರಿಸಲು ಹೆಚ್ಚು ಪ್ರಜಾಸತ್ತಾತ್ಮಕ ಪ್ರಾತಿನಿಧ್ಯವು ಆಡಳಿತದಲ್ಲಿ ಲಭಿಸುವಂತಾಗಬೇಕು ಎಂದೂ ಕಿರಿಯ ವೈದ್ಯರು ಒತ್ತಾಯಿಸಿದ್ದಾರೆ. ಸ್ವಾಸ್ಥ್ಯ ಭವನದ ಹೊರಗೆ ಧರಣಿ ನಿರತ ಕಿರಿಯ ವೈದ್ಯರು, ಸ್ಥಳಕ್ಕೆ ಆಗಮಿಸಿದ ಬಿಜೆಪಿಯ ಹಿರಿಯ ನಾಯಕ ಅಗ್ನಿಮಿತ್ರ ಪೌಲ್ ಅವರಿಗೆ 'ಹಿಂತಿರುಗಿ' ಎಂಬ ಘೋಷಣೆ ಕೂಗಿದ ಪ್ರಸಂಗವು ನಡೆಯಿತು.

ತೀರ್ಪು ಮರು ಪರಿಶೀಲನೆಗೆ 'ಸುಪ್ರೀಂ' ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ತನಗೆ ಜೀವಿತಾವಧಿ-ವರೆಗೆ ಜೈಲು ಶಿಕ್ಷೆ ವಿಧಿಸಿ ನೀಡಿರುವ ತೀರ್ಪನ್ನು ಮರುಪರಿಶೀಲಿಸುವಂತೆ ಕೋರಿ ಶ್ರದ್ಧಾನಂದ ಅಲಿಯಾಸ್ ಮುರಳಿಮನೋಹರ್ ಮಿಶ್ರಾ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಬುಧವಾರ ನಿರ್ಧರಿಸಿದೆ.

ಆದರೆ, ತನ್ನನ್ನು ಜೈಲಿನಿಂದ ಬಿಡುಗಡೆ ಮಾಡುವಂತೆ ಕೋರಿ, 84 ವರ್ಷದ ಶ್ರದ್ಧಾನಂದ ಸಲ್ಲಿಸಿದ್ದ ಪ್ರತ್ಯೇಕ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ. ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ, ಪಿ.ಕೆ.ಮಿಶ್ರಾ ಹಾಗೂ ಕೆ.ವಿಶ್ವನಾಥನ್ ಅವರು ಇದ್ದ ನ್ಯಾಯಪೀಠ ವಿಚಾರಣೆ ನಡೆಸಿತು.

ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಅವರ ಮೊಮ್ಮಗಳಾದ ಶಕೀರಾ ಖಲೀಲಿ ಅವರೊಂದಿಗೆ ಶ್ರದ್ಧಾನಂದ ಮದುವೆಯಾಗಿತ್ತು. ಪತ್ನಿ ಹತ್ಯೆ ಮಾಡಿದ್ದ ಪ್ರಕರಣದಲ್ಲಿ ಶ್ರದ್ಧಾನಂದಗೆ ವಿಚಾರಣಾ ನ್ಯಾಯಾಲಯ ಮರಣದಂಡನೆ ವಿಧಿಸಿತ್ತು. ಇದನ್ನು ಕರ್ನಾಟಕ ಹೈಕೋರ್ಟ್ ಎತ್ತಿ ಹಿಡಿದಿತ್ತು. ಆದರೆ, ಶಿಕ್ಷೆಯನ್ನು' ಜೀವಿತಾವಧಿ ವರೆಗೆ ಜೈಲುವಾಸ ಅನುಭವಿಸಬೇಕು ಎಂದು ಮಾರ್ಪಡಿಸಿ ಸುಪ್ರೀಂ ಕೋರ್ಟ್ 2008ರಲ್ಲಿ ತೀರ್ಪು ನೀಡಿತ್ತು.

ಸುದ್ದಿ 2 ನಿಮಿಷ

₹29 ಕೋಟಿ ಮೌಲ್ಯದ ನೀರವ್ ಸ್ವತ್ತು ಹೊಸದಾಗಿ ಜಪ್ತಿ: ಇ.ಡಿ

ನವದೆಹಲಿ(ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದ ಆರೋಪಿ, ದೇಶದಿಂದ ಪಲಾಯನ ಮಾಡಿರುವ ವಜ್ರ ವ್ಯಾಪಾರಿ ನೀರವ್ ಮೋದಿಗೆ ಸೇರಿದ ₹29.75 ಕೋಟಿ ಮೌಲ್ಯದ ಹೊಸ ಸ್ವತ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಬುಧವಾರ ಹೇಳಿದೆ.

ಬ್ಯಾಂಕ್ ಠೇವಣಿಗಳು, ಜಮೀನು ಹಾಗೂ ಕಟ್ಟಡಗಳನ್ನು ಒಳಗೊಂಡಿರುವ ಈ ಸ್ವತ್ತುಗಳ ಜಪ್ತಿಗೆ ಸಂಬಂಧಿಸಿ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ಆದೇಶ ಹೊರಡಿ-ಸಲಾಗಿತ್ತು ಎಂದು ಇ.ಡಿ ಪ್ರಕಟಣೆ ತಿಳಿಸಿದೆ.

ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ ಕೋಟ್ಯಂತರ ರೂಪಾಯಿ ವಂಚಿಸಿರುವ ಆರೋಪ ಎದುರಿಸುತ್ತಿರುವ ನೀರವ್ ಮೋದಿಗೆ ಸೇರಿದ ₹2,596 ಕೋಟಿ ಮೌಲ್ಯದ ಆಸ್ತಿಗಳನ್ನು ಈ ಹಿಂದೆ ಇ.ಡಿ ಜಪ್ತಿ ಮಾಡಿತ್ತು. ಈ ಸ್ವತ್ತುಗಳು ಭಾರತ ಮತ್ತು ವಿದೇಶಗಳಲ್ಲಿವೆ.

ನೀರವ್ ವಿರುದ್ಧದ ಆರೋಪಗಳ ಕುರಿತು ಸಿಬಿಐ ತನಿಖೆ ನಡೆಸುತ್ತಿದೆ. ಪ್ರಸ್ತುತ ಅವರನ್ನು ಬ್ರಿಟನ್‌ನ ಜೈಲಿನಲ್ಲಿ ಇರಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿ ತಮ್ಮನ್ನು ಭಾರತಕ್ಕೆ ಹಸ್ತಾಂತರಿಸಲು ನೀಡಿದ್ದ ಅನುಮತಿ ಪ್ರಶ್ನಿಸಿ ನೀರವ್ ಸಲ್ಲಿಸಿದ್ದ ಅರ್ಜಿಯನ್ನು ಬ್ರಿಟನ್ ನ್ಯಾಯಾಲಯ ವಜಾಗೊಳಿಸಿದೆ. ಅವರ ಹಸ್ತಾಂತರಕ್ಕೆ ಸಂಬಂಧಿಸಿದ ಪ್ರಕ್ರಿಯೆ ನಡೆಯುತ್ತಿದೆ ಎಂದೂ ಇ.ಡಿ ತಿಳಿಸಿದೆ.



ನಟಿ ಮಲೈಕಾ ತಂದೆ ಆತ್ಮಹತ್ಯೆ

ಮುಂಬೈ: ಬಾಲಿವುಡ್ ನಟಿಯರಾದ ಮಲೈಕಾ ಅರೋರಾ ಹಾಗೂ ಅಮೃತಾ ಅರೋರಾ ಅವರ ತಂದೆ ಅನಿಲ್ ಅರೋರಾ (70) ಅವರು ಬುಧವಾರ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಮುಂಬೈನ ಬಾಂದ್ರಾದಲ್ಲಿ ತಾವು ವಾಸಿಸುತ್ತಿದ್ದ ಕಟ್ಟಡದ ತಾರಸಿಯಿಂದ ಜಿಗಿದು ಅನಿಲ್ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪ್ರಾಥಮಿಕ ತನಿಖೆ ವೇಳೆ ತಿಳಿದು ಬಂದಿದೆ. ಸ್ಥಳದಲ್ಲಿ ಆತ್ಮಹತ್ಯೆ ಪತ್ರ ದೊರೆತಿಲ್ಲ. ಆದರೂ ಘಟನೆ ಕುರಿತು ಎಲ್ಲಾ ಆಯಾಮಗಳಿಂದ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಂಜಾಬ್ ಮೂಲದ ಅನಿಲ್ ಅವರು ನೌಕಾಪಡೆಯ ಮಾಜಿ ಉದ್ಯೋಗಿಯಾಗಿದ್ದರು. ಘಟನೆ ನಡೆದಾಗ ಪುಣೆಯಲ್ಲಿದ್ದ ಮಲೈಕಾ ಅವರು ತಕ್ಷಣವೇ ಬಾಂದ್ರಾಕ್ಕೆ ಆಗಮಿಸಿದರು. ಅವರ ಆಪ್ತ ಸ್ನೇಹಿತರಾದ ಕರೀನಾ ಕಪೂರ್, ಸೈಫ್ ಅಲಿ ಖಾನ್ ಸೇರಿದಂತೆ ಬಾಲಿವುಡ್‌ನ ಹಲವು ನಟ, ನಟಿಯರು ಘಟನಾ ಸ್ಥಳಕ್ಕೆ ಬಂದಿದ್ದರು.

ಬಿಜೆಪಿ ತೊರೆದ ಸಂತೋಷ್ ಯಾದವ್

ನಾರನೌಲ್ (ಪಿಟಿಐ): ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ನೀಡದ ಕಾರಣ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷೆ ಸಂತೋಷ್ ಯಾದವ್ ಅವರು ಮಂಗಳವಾರ ಪಕ್ಷವನ್ನು ತೊರೆದಿದ್ದಾರೆ.

ಪಕ್ಷದ ಪ್ರಮುಖ ನಾಯಕರು ತಮ್ಮನ್ನು ನಿರ್ಲಕ್ಷಿಸಿದರು ಎಂದು ಯಾದವ್ ಹೇಳಿದ್ದಾರೆ. 'ಅಟೇಲಿ ಕ್ಷೇತ್ರದಿಂದ ಟಿಕೆಟ್ ಬಯಸಿದ್ದೆ. ಆದರೆ ಕೇಂದ್ರ ಸಚಿವ ರಾವ್ ಇಂದ್ರಜಿತ್ ಸಿಂಗ್ ಅವರ ಪುತ್ರಿ ಆರತಿ ಸಿಂಗ್ ರಾವ್ ಅವರನ್ನು ಬಿಜೆಪಿ ಕಣಕ್ಕಿಳಿಸಿದೆ' ಎಂದು ಯಾದವ್ ಹೇಳಿದರು.

'ಕೈ' ಸೇರ್ಪಡೆ ನಿರ್ಧಾರ ಹಿಂಪಡೆದ ಮಿತ್ತಲ್

ಹರಿದ್ವಾರ (ಪಿಟಿಐ): ಗಾಯಕ ಕನ್ಹಯ್ಯ ಮಿತ್ತಲ್ ಅವರು ಕಾಂಗ್ರೆಸ್ ಸೇರ್ಪಡೆಯಾಗುವ ನಿರ್ಧಾರದಿಂದ ಹಿಂದೆ ಸರಿದಿದ್ದಾರೆ.

ಸಂತರು, ಮಹಾಂತರು ಮತ್ತು ರಾಜಕಾರಣಿಗಳ ಸಲಹೆ ಸ್ವೀಕರಿಸಿದ ನಂತರ ಈ ನಿರ್ಧಾರ ತೆಗೆದುಕೊಂಡಿರುವುದಾಗಿ ಮಿತ್ತಲ್ ತಿಳಿಸಿದರು.

'ಕಾಂಗ್ರೆಸ್ ಸೇರ್ಪಡೆಯಾಗುವ ಇಂಗಿತ ಇದೆ ಎಂದು ಹೇಳಿದ್ದೆ. ಆದರೆ ಜನರು ಸೇರದಂತೆ ಸಲಹೆ ನೀಡಿದ್ದಾರೆ. ಬಿಜೆಪಿಯ ಹಿರಿಯ ನಾಯಕರೊಬ್ಬರ ಬಳಿಯೂ ಮಾತನಾಡಿದೆ. ಬಳಿಕ ಇದು ತಪ್ಪು ಹೆಜ್ಜೆ ಎಂಬ ಅರಿವಾಯಿತು' ಎಂದರು. ಕಾಂಗ್ರೆಸ್ ಸೇರುವುದಾಗಿ ಸೆಪ್ಟೆಂಬರ್ 8ರಂದು ಘೋಷಿಸಿದ್ದರು.

ಸಂಕ್ಷಿಪ್ತ ಸುದ್ದಿ

ಶ್ರೀನಗರ: ಮೂವರು ಉಗ್ರರ ಹತ್ಯೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಉಧಂಪುರ ಜಿಲ್ಲೆಯ ಬಸಂತಗಢದಲ್ಲಿ ಭದ್ರತಾ ಪಡೆಗಳು ಬುಧವಾರ ನಡೆಸಿದ ಎನ್‌ಕೌಂಟರ್‌ನಲ್ಲಿ ಮೂವರು ಉಗ್ರರು ಮೃತಪಟ್ಟಿದ್ದಾರೆ.

ಉಗ್ರರು ಅಡಗಿರುವ ಕುರಿತು ಮಾಹಿತಿ ಲಭ್ಯವಾಗುತ್ತಿದ್ದಂತೆ ಭದ್ರತಾ ಪಡೆಗಳು ಕಾರ್ಯಾಚರಣೆ ನಡೆಸಿದವು.

ಕಠುವಾ–ಬಸಂತಗಢದ ಗಡಿಯಲ್ಲಿ ಅಡಗಿದ್ದ ಉಗ್ರರು ಭದ್ರತಾ ಪಡೆಗಳ ಮೇಲೆ ಮಧ್ಯಾಹ್ನ 12.50ರ ವೇಳೆಯಲ್ಲಿ ಗುಂಡಿನ ದಾಳಿ ನಡೆಸಿದರು. ಸೇನೆಯು ನಡೆಸಿದ ಪ್ರತಿ ದಾಳಿಯಲ್ಲಿ ಮೂವರು ಉಗ್ರರು ಹತರಾಗಿದ್ದಾರೆ.

ಯೋಧನಿಗೆ ಗಾಯ

ಜಮ್ಮು (ಪಿಟಿಐ): ಜಮ್ಮುವಿನ ಗಡಿಯಲ್ಲಿರುವ ಭಾರತೀಯ ಸೇನಾ ಠಾಣೆಗಳನ್ನು ಗುರಿಯಾಗಿಸಿಕೊಂಡು ಪಾಕಿಸ್ತಾನದ ಪಡೆಗಳು ಕದನ ವಿರಾಮ ಉಲ್ಲಂಘಿಸಿ ಬುಧವಾರ ಅಪ್ರಚೋದಿತ ಗುಂಡಿನ ದಾಳಿ ನಡೆಸಿದ್ದು, ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಯೋಧರೊಬ್ಬರು ಗಾಯಗೊಂಡಿದ್ದಾರೆ.

ಈ ದಾಳಿಗೆ ಪ್ರತೀಕಾರವಾಗಿ ಬಿಎಸ್‌ಎಫ್ ಪಡೆಗಳು ಸಹ ಗುಂಡಿನ ಸುರಿಮಳೆಗರೆದಿದ್ದು, ಪಾಕಿಸ್ತಾನದ ಕಡೆ ಹಾನಿಯಾಗಿರುವ ಕುರಿತಂತೆ ಯಾವುದೇ ಮಾಹಿತಿ ತಿಳಿದುಬಂದಿಲ್ಲ.

'ಹಳಿ ಮೇಲೆ ಸಿಲಿಂಡರ್: ಸುಳಿವು ಲಭ್ಯ'

ಕಾನ್ಪುರ (ಪಿಟಿಐ): 'ಹಳಿಯ ಮೇಲೆ ಸಿಲಿಂಡರ್ ಇರಿಸಿದ್ದ ಪ್ರಕರಣಕ್ಕೆ ಸಂಬಂಧಿಸಿ ನಮಗೆ ಮಹತ್ವದ ಸುಳಿವೊಂದು ದೊರೆತಿದೆ. ಕೆಲವೇ ದಿನಗಳಲ್ಲಿ ತನಿಖೆ ಪೂರ್ಣಗೊಳಿ-ಸಲಾಗುವುದು' ಎಂದು ಹೆಚ್ಚುವರಿ ಮಹಾನಿರ್ದೇಶಕ (ರೈಲ್ವೆ) ಪ್ರಕಾಶ್ ಡಿ. ಬುಧವಾರ ಮಾಹಿತಿ ನೀಡಿದರು.

'ಘಟನೆ ಸಂಬಂಧ ಸೋಮವಾರ ರಾತ್ರಿ ಸುಮಾರು 24ಕ್ಕೂ ಅಧಿಕ ಮಂದಿಯನ್ನು ವಶಕ್ಕೆ ಪಡೆದು, ಮಂಗಳವಾರ ಬೆಳಿಗ್ಗೆ ಬಿಟ್ಟುಕಳುಹಿಸ-ಲಾಗಿದೆ. ಅಪರಾಧ ಹಿನ್ನೆಲೆ ಇರುವ ವರನ್ನೇ ತನಿಖೆಗೆ ಒಳಪಡಿ-ಸಲಾಗುತ್ತಿದೆ' ಎಂದು ಪೊಲೀಸರು ವಿವರಿಸಿದರು.

ವಿವಿಧ ಏಜೆನ್ಸಿಗಳು ಪ್ರಕರಣದ ಕುರಿತು ತನಿಖೆ ನಡೆಸುತ್ತಿದ್ದು, ಘಟನೆಯಲ್ಲಿ ಭಯೋತ್ಪಾದಕರ ಕೈವಾಡವಿರುವ ಶಂಕೆಯನ್ನು ಪೊಲೀಸರು ವ್ಯಕ್ತಪಡಿಸಿದ್ದಾರೆ. ಆದರೆ, ಹೆಸರು ಹೇಳಲು ಇಚ್ಛಿಸದ ರೈಲ್ವೆ ಇಲಾಖೆ ಅಧಿಕಾರಿಯೊಬ್ಬರು ಮಾತನಾಡಿ, 'ಘಟನೆಯನ್ನು ಗಮನಿಸಿದರೆ, ಯಾರೋ 'ಅನನುಭವಿ' ವ್ಯಕ್ತಿಯೊಬ್ಬರು, ಇಲಾಖೆ-ಯೊಳಗಿನವರೇ ಕೃತ್ಯ ಎಸಗಿರಬಹುದು' ಎಂದಿದ್ದಾರೆ.

ಜಮ್ಮು–ಕಾಶ್ಮೀರ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ

5 'ಗ್ಯಾರಂಟಿ' ಘೋಷಿಸಿದ ಕಾಂಗ್ರೆಸ್

ಅನಂತ್‌ನಾಗ್ (ಪಿಟಿಐ): ಜಮ್ಮು ಮತ್ತು ಕಾಶ್ಮೀರದಲ್ಲಿ ಕಾಂಗ್ರೆಸ್–ಎನ್‌ಸಿ ಮೈತ್ರಿಕೂಟದ ಸರ್ಕಾರ ಅಧಿಕಾರಕ್ಕೆ ಬಂದರೆ, ಮಹಿಳಾ ಉದ್ಯಮಿಗಳಿಗೆ ₹5 ಲಕ್ಷ ಬಡ್ಡಿರಹಿತ ಸಾಲ, ಪ್ರತಿ ಕುಟುಂಬಕ್ಕೆ ₹25 ಲಕ್ಷದ ಆರೋಗ್ಯ ವಿಮೆ ಸೇರಿದಂತೆ ಐದು 'ಗ್ಯಾರಂಟಿ'ಗಳನ್ನು ಜಾರಿ ಮಾಡುವುದಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬುಧವಾರ ಘೋಷಿಸಿದರು.

ದಕ್ಷಿಣ ಕಾಶ್ಮೀರದಲ್ಲಿ ಮೈತ್ರಿ ಅಭ್ಯರ್ಥಿಗಳ ಪರ ಮತಯಾಚಿಸಿದ ಅವರು, ಮನೆಯ ಯಜಮಾನಿಗೆ ಪ್ರತಿ ತಿಂಗಳು ₹3,000 ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆ ಮೂಲಕ ಪ್ರತಿ ವ್ಯಕ್ತಿಗೆ 11 ಕೆ.ಜಿ ಧಾನ್ಯ ವಿತರಿಸಲಾಗುವುದು ಎಂದು ಭರವಸೆ ನೀಡಿದರು.

ಕಾಶ್ಮೀರಿ ಪಂಡಿತರ ಪುನರ್ವಸತಿಗೆ ಸಂಬಂಧಿಸಿದಂತೆ ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರ ನೀಡಿದ್ದ ಭರವಸೆಯನ್ನು ಈಡೇರಿಸಲಾಗುವುದು ಎಂದು ತಿಳಿಸಿದರು.

'ಪ್ರಸ್ತುತ ಜಮ್ಮು ಮತ್ತು ಕಾಶ್ಮೀರದಲ್ಲಿ ಒಂದು ಲಕ್ಷ ಹುದ್ದೆಗಳು ಖಾಲಿ ಇವೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಹುದ್ದೆಗಳ ಭರ್ತಿಗೆ ಅಡ್ಡಿಯಾಗಿದೆ. ಇಲ್ಲಿನ ಜನರು ಬಡವರಾಗಿಯೇ ಇರಬೇಕೆಂದು ಅದು ಬಯಸುತ್ತದೆ' ಎಂದು ವಾಗ್ದಾಳಿ ನಡೆಸಿದರು.

5 'ಗ್ಯಾರಂಟಿ'ಗಳು

- ಮಹಿಳಾ ಉದ್ಯಮಿಗಳಿಗೆ ₹5 ಲಕ್ಷ ಬಡ್ಡಿರಹಿತ ಸಾಲ
- ಪ್ರತಿ ಕುಟುಂಬಕ್ಕೆ ₹25 ಲಕ್ಷದ ಆರೋಗ್ಯ ವಿಮೆ
- ಮನೆಯ ಯಜಮಾನಿಗೆ ಪ್ರತಿ ತಿಂಗಳು ₹3,000
- ಪ್ರತಿ ವ್ಯಕ್ತಿಗೆ 11 ಕೆ.ಜಿ ಧಾನ್ಯ ವಿತರಣೆ
- ಕಾಶ್ಮೀರಿ ಪಂಡಿತರ ಪುನರ್ವಸತಿ

ಪ್ರಜಾ ಮತ
ಜನತಂತ್ರದ ಹಬ್ಬ

'ನಾವು ಖಾಲಿ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ. ನಾವು ಪ್ರವಾಸೋದ್ಯಮ ಮತ್ತು ಉತ್ಪಾದನೆಗೆ ಹೆಚ್ಚು ಆದ್ಯತೆ ನೀಡುತ್ತೇವೆ. ಕಳೆದ ಕೆಲ ವರ್ಷಗಳಿಂದ 4,400ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚಲಾಗಿದೆ. ಅವುಗಳನ್ನು ಪುನಃ ತೆರೆಯುವ ಮೂಲಕ ಶಿಕ್ಷಣಕ್ಕೆ ಪ್ರಾಮುಖ್ಯ ನೀಡುತ್ತೇವೆ' ಎಂದು ಆಶ್ವಾಸನೆ ನೀಡಿದರು.

ಎಎಪಿ: ವಿನೇಶ್ ವಿರುದ್ಧ ಕವಿತಾ

ನವದೆಹಲಿ (ಪಿಟಿಐ): ಎಎಪಿಯು ಹರಿಯಾಣ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವ 30 ಅಭ್ಯರ್ಥಿಗಳನ್ನು ಒಳಗೊಂಡ 4ನೇ ಪಟ್ಟಿಯನ್ನು ಬುಧವಾರ ಬಿಡುಗಡೆ ಮಾಡಿದೆ.

ಜುಲಾನಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿನೇಶ್ ಫೋಗಟ್ ಮತ್ತು ಬಿಜೆಪಿ ಅಭ್ಯರ್ಥಿ ಯೋಗೇಶ್ ಬೈರಾಗಿ ಅವರ ವಿರುದ್ಧ ಕವಿತಾ ದಲಾಲ್ ಅವರನ್ನು ಕಣಕ್ಕಿಳಿಸಿದೆ.

ಜುಲಾನಾದಿಂದ ವಿನೇಶ್ ನಾಮಪತ್ರ (ಚಂಡೀಗಢ ವರದಿ): ಕಾಂಗ್ರೆಸ್ ಅಭ್ಯರ್ಥಿ ವಿನೇಶ್ ಫೋಗಟ್ ಅವರು ಜುಲಾನಾ ಕ್ಷೇತ್ರದಿಂದ ಹರಿಯಾಣ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಲು ಬುಧವಾರ ನಾಮಪತ್ರ ಸಲ್ಲಿಸಿದರು.

ಕಾಂಗ್ರೆಸ್ ನಾಯಕ ಭೂಪೇಂದರ್ ಸಿಂಗ್ ಹೂಡಾ ಅವರು ಗಾಢಿ ಸಂಪಲ್ ಕಿಲೋಯಿ ಕ್ಷೇತ್ರದಿಂದ ಸ್ಪರ್ಧಿಸಲು ನಾಮಪತ್ರ ಸಲ್ಲಿಸಿದರು

ಜೆಜೆಪಿ–ಎಎಸ್‌ಪಿ ಪಟ್ಟಿ ಬಿಡುಗಡೆ

ಚಂಡೀಗಢ (ಪಿಟಿಐ): ಜನನಾಯಕ್ ಜನತಾ ಪಕ್ಷ (ಜೆಜೆಪಿ) ಮತ್ತು ಆಜಾದ್ ಸಮಾಜ್ ಪಕ್ಷಗಳ (ಎಎಸ್‌ಪಿ) ಮೈತ್ರಿಯು ಹರಿಯಾಣ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ 18 ಅಭ್ಯರ್ಥಿಗಳನ್ನು ಒಳಗೊಂಡ ಮೂರನೇ ಪಟ್ಟಿಯನ್ನು ಬುಧವಾರ ಬಿಡುಗಡೆ ಮಾಡಿದೆ.

ಈ ಪೈಕಿ ಜೆಜೆಪಿ 15 ಮತ್ತು ಎಎಸ್‌ಪಿ ಮೂವರನ್ನು ಕಣಕ್ಕಿಳಿಸಿದೆ.

ಇತ್ತೀಚೆಗೆ ಬಿಜೆಪಿಯನ್ನು ತೊರೆದ ಮಾಜಿ ಸಚಿವ ರಂಜಿತ್ ಸಿಂಗ್ ಚೌಟಾಲಾ ಅವರಿಗೆ ರಾನಿಯಾ ಕ್ಷೇತ್ರವನ್ನು ಬಿಟ್ಟುಕೊಡಲು ಎರಡೂ ಪಕ್ಷಗಳು ನಿರ್ಧರಿಸಿವೆ. ಚೌಟಾಲಾ ಅವರು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಲು ನಿರ್ಧರಿಸಿದ್ದಾರೆ.

ಶಿಮ್ಲಾ ಮಸೀದಿ ವಿವಾದ: ತೆರವಿಗೆ ಆಗ್ರಹಿಸಿ ಹಿಂದೂ ಸಂಘಟನೆಗಳ ಪ್ರತಿಭಟನೆ

ಪ್ರತಿಭಟನಕಾರರಿಂದ ಕಲ್ಲು ತೂರಾಟ

ಶಿಮ್ಲಾ (ಪಿಟಿಐ): ಶಿಮ್ಲಾದ ಸಂಜೌಲಿ ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಾಣ ಮಾಡಿರುವ ಮಸೀದಿಯ ಭಾಗವನ್ನು ನೆಲಸಮ ಮಾಡಬೇಕು ಎಂದು ಆಗ್ರಹಿಸಿದ ಪ್ರತಿಭಟನಕಾರರು ಮತ್ತು ಭದ್ರತಾ ಸಿಬ್ಬಂದಿ ನಡುವೆ ಬುಧವಾರ ಘರ್ಷಣೆ ನಡೆಯಿತು.

ಉದ್ರಿಕ್ತ ಗುಂಪು ಬ್ಯಾರಿಕೇಡ್‌ಗಳನ್ನು ಕಿತ್ತೊಗೆದು, ಮಸೀದಿ ಮೇಲೆ ಕಲ್ಲು ತೂರಾಟ ನಡೆಸಿತು. ಬಳಿಕ ಪ್ರತಿಭ-ಟನಕಾರರನ್ನು ಚದುರಿಸಲು ಪೊಲೀಸರು ಜಲಫಿರಂಗಿಗಳನ್ನು ಬಳಸಿದರು.

ಕೆಲ ಹಿಂದೂ ಸಂಘಟನೆಗಳು ಕರೆ ನೀಡಿದ್ದ ಪ್ರತಿಭಟನೆಗೆ ಓಗೊಟ್ಟು ಸಬ್ಜಿ ಮಂಡಿ ಢಲ್ಲಿ ಬಳಿ ನೆರೆದ ನೂರಾರು ಜನರು 'ಜೈ ಶ್ರೀರಾಮ್' ಮತ್ತು 'ಹಿಂದು ಏಕ್ತಾ ಜಿಂದಾಬಾದ್' ಎಂದು ಘೋಷಣೆ ಕೂಗಿದರು.

ನಿರ್ಬಂಧ ಮೀರಿ ಢಲ್ಲಿ ಸುರಂಗದ ಸಮೀಪ ಹಾಕಿದ್ದ ಬ್ಯಾರಿಕೇಡ್‌ಗಳನ್ನು ಕಿತ್ತೆಸೆದರು. ಸಂಜೌಲಿ ಪ್ರದೇಶವನ್ನು ಪ್ರವೇಶಿಸಿ ಮಸೀದಿ ಸಮೀಪ ಹಾಕಿದ್ದ ಬ್ಯಾರಿಕೇಡ್‌ಗಳನ್ನೂ ಕಿತ್ತೆಸೆಯುತ್ತಿದ್ದಂ-ತೆಯೇ ಪೊಲೀಸರು ಲಾಠಿ ಚಾರ್ಜ್ ಆರಂಭಿಸಿದರು.

ಹಿಂದೂ ಜಾಗರಣ್ ಮಂಚ್ ಕಾರ್ಯದರ್ಶಿ ಕಮಲ್ ಗೌತಮ್ ಸೇರಿದಂತೆ ಹಲವರನ್ನು ಪೊಲೀಸರು ವಶಕ್ಕೆ ಪಡೆದರು. ಮತ್ತೆ ಬ್ಯಾರಿಕೇಡ್‌ಗಳನ್ನು ಹಾಕಿದರು. ಆದರೂ ಸ್ಥಳದಿಂದ ಕದಲದ ಪ್ರತಿಭಟನಕಾರರು ಆಡಳಿತದ ವಿರುದ್ಧ ಘೋಷಣೆ ಕೂಗಿದರು.

ಮಕ್ಕಳು ಶಾಲೆಗಳಲ್ಲಿ ಅತಂತ್ರ: ಸಂಘರ್ಷ ಭುಗಿಲೆದ್ದ ಕಾರಣ ಸಂಜೌಲಿ, ಧಾಲಿ ಮತ್ತಿತರ ಪ್ರದೇಶಗಳ ವಿದ್ಯಾರ್ಥಿಗಳು ಶಾಲೆಯಲ್ಲಿಯೇ ಸಿಲುಕಿದರು. ಪ್ರತಿಭಟನೆ ಹಮ್ಮಿಕೊಂಡ ಬಗ್ಗೆ ಮಾಹಿತಿ ಇದ್ದರೂ ಶಾಲೆಗೆ ರಜೆ ನೀಡದೆ ನಿರ್ಲಕ್ಷ್ಯ ವಹಿಸಲಾಗಿದೆ ಎಂದು ವಿರುದ್ಧ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.


ಸಂಜೌಲಿ ಪ್ರದೇಶದಲ್ಲಿ ನೆರೆದಿದ್ದ ಪ್ರತಿಭಟನಕಾರರನ್ನು ಚದುರಿಸಲು ಪೊಲೀಸರು ಜಲಫಿರಂಗಿಗಳನ್ನು ಬಳಸಿದರು –ಪಿಟಿಐ ಚಿತ್ರ

ಮಾತುಕತೆ ಮೂಲಕ ಪರಿಸ್ಥಿತಿ ನಿಯಂತ್ರಣಕ್ಕೆ ತರುವ ಪ್ರಯತ್ನ ನಡೆಯುತ್ತಿದೆ. ಆದರೆ ಇಲ್ಲಿ ಯಾರೂ ನಾಯಕರಿಲ್ಲ. ಗುಂಪು ನಮ್ಮ ಮಾತು ಕೇಳಿಸಿಕೊಳ್ಳಲು ಸಿದ್ಧವಿಲ್ಲ
ಸಂಜೀವ್ ಕುಮಾರ್ ಗಾಂಧಿ
ಶಿಮ್ಲಾ ಪೊಲೀಸ್ ವರಿಷ್ಠಾಧಿಕಾರಿ

ಮಣಿಪುರದಲ್ಲಿ ಬಿಗುವಿನ ವಾತಾವರಣ

ಇಂಫಾಲ್ (ಪಿಟಿಐ): ರಾಜಭವನಕ್ಕೆ ಜಾಥಾ ತೆರಳುವ ವೇಳೆ ವಿದ್ಯಾರ್ಥಿಗಳು ಮತ್ತು ಭದ್ರತಾ ಸಿಬ್ಬಂದಿಯ ನಡುವೆ ಚಕಮಕಿ ಹಾಗೂ ಸಂಘರ್ಷ ನಡೆದಿದ್ದ ಬೆಳವಣಿಗೆಗಳ ಹಿಂದೆಯೇ ಮಣಿಪುರದ ರಾಜ್ಯಪಾಲ ಲಕ್ಷ್ಮಣ್ ಪ್ರಸಾದ್ ಆಚಾರ್ಯ ಅವರು ಬುಧವಾರ ಗುವಾಹಟಿಗೆ ತೆರಳಿದರು.

ಅಸ್ಸಾಂನ ರಾಜ್ಯಪಾಲರೂ ಆಗಿರುವ ಆಚಾರ್ಯ ಅವರಿಗೆ ಹೆಚ್ಚುವರಿಯಾಗಿ ಮಣಿಪುರದ ಉಸ್ತುವಾರಿಯನ್ನೂ ವಹಿಸಲಾಗಿದೆ. ಅವರು ಬೆಳಿಗ್ಗೆಯೇ ಗುವಾಹಟಿಗೆ ನಿರ್ಗಮಿಸಿದರು ಎಂದು ಅಧಿಕಾರಿಗಳು ದೃಢಪಡಿಸಿದರು.

ರಾಜಭವನದ ಬಳಿಯೇ ನಡೆದಿದ್ದ ಘರ್ಷಣೆಯಲ್ಲಿ 55 ವಿದ್ಯಾರ್ಥಿಗಳು ಹಾಗೂ ಕೆಲ ಭದ್ರತಾ ಸಿಬ್ಬಂದಿಗೆ ಗಾಯಗಳಾಗಿವೆ. ಮಂಗಳವಾರ ರಾತ್ರಿ ವಿದ್ಯಾರ್ಥಿಗಳ ಮುಖಂಡರ ಜೊತೆಗೆ ರಾಜ್ಯಪಾಲರು ಚರ್ಚಿಸಿದ್ದು, ಅವರ ಅಹವಾಲುಗಳನ್ನು ಆಲಿಸಿದರು. ರಾಜ್ಯದ ಡಿಜಿಪಿ ಮತ್ತು ಸರ್ಕಾರದ ಭದ್ರತಾ ಸಲಹೆಗಾರರ ಪದಚ್ಯುತಿಗೆ ಒತ್ತಾಯಿಸಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದರು.

ಶೀಘ್ರದ ಕೇಂದ್ರದ ಗಮನಕ್ಕೆ: ರಾಜ್ಯದಲ್ಲಿ ಶಾಂತಿ ಮರುಸ್ಥಾಪಿಸಲು ಪ್ರತಿಭಟನನಿರತ ವಿದ್ಯಾರ್ಥಿಗಳ ಬೇಡಿಕೆಗಳನ್ನು ರಾಜ್ಯಪಾಲರು ಶೀಘ್ರದಲ್ಲಿಯೇ ಕೇಂದ್ರ ಸರ್ಕಾರದ ಗಮನಕ್ಕೆ ತರಲಿದ್ದಾರೆ. ಈ ನಿಟ್ಟಿನಲ್ಲಿ ಅವರು ಸದ್ಯದಲ್ಲಿಯೇ ನವದೆಹಲಿಗೆ ಭೇಟಿ ನೀಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಈಚೆಗೆ ನಡೆದ ರಾಕೆಟ್, ಡ್ರೋನ್ ದಾಳಿ ಹಿನ್ನೆಲೆಯಲ್ಲಿ ಮಣಿಪುರದಲ್ಲಿ ಕಾನೂನು ಸುವ್ಯವಸ್ಥೆ ರಕ್ಷಿಸಲು ಈ ಇಬ್ಬರೂ ಅಸಮರ್ಥರಾಗಿದ್ದಾರೆ ಎಂದು ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದ್ದರು.

ಬುಧವಾರ ರಾಜ್ಯದಲ್ಲಿ ಪರಿಸ್ಥಿತಿ ನಿಯಂತ್ರಣದಲ್ಲಿತ್ತು. ಯಾವುದೇ ಘರ್ಷಣೆ, ಪ್ರತಿಭಟನೆ ಹೊಸದಾಗಿ ವರದಿ ಆಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಎರಡು ಜಿಲ್ಲೆಗಳಲ್ಲಿ ಕರ್ಫ್ಯೂ ಜಾರಿಯಲ್ಲಿದ್ದು, ರಾಜ್ಯದಾದ್ಯಂತ ಇಂಟರ್‌ನೆಟ್ ಸಂಪರ್ಕ ಸೇವೆಯನ್ನು ರದ್ದುಗೊಳಿಸ-ಲಾಗಿದೆ. ಸಂಘರ್ಷಪೀಡಿತ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಹೆಚ್ಚುವರಿ ಸಿಬ್ಬಂದಿಯನ್ನು ಮುನ್ನೆಚ್ಚರಿಕೆಯಾಗಿ ನಿಯೋಜಿಸಲಾಗಿದೆ. ಸೂಕ್ಷ್ಮ ಪ್ರದೇಶಗಳಲ್ಲಿ ಬಿಗಿ ಭದ್ರತೆಯನ್ನು ಏರ್ಪಡಿಸಲಾಗಿದೆ.

ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಅವರೂ ವಿದ್ಯಾರ್ಥಿ ಮುಖಂಡರ ಜೊತೆ ಚರ್ಚಿಸಿದರು. 'ಯುವಜನರ ಅಭಿಪ್ರಾಯಗಳು ಮುಖ್ಯವಾದುವು. ರಾಜ್ಯದ ಸಮಸ್ಯೆ ಬಗೆಹರಿಸಲು ಸರ್ಕಾರ ಬದ್ಧವಾಗಿದೆ. ನಾವು ಒಟ್ಟಾಗಿಯೇ ಮಣಿಪುರದ ಭವಿಷ್ಯಕ್ಕಾಗಿ ಕಾರ್ಯ-ನಿರ್ವಹಿಸಬೇಕಾಗಿದೆ' ಎಂದು ಸಿಂಗ್ ಹೇಳಿದರು.


ಕರ್ಫ್ಯೂ ಆದೇಶವು ಜಾರಿಯಲ್ಲಿರುವ ಇಂಫಾಲ್‌ನಲ್ಲಿ ಪ್ರಮುಖ ರಸ್ತೆಗಳಲ್ಲಿ ಬುಧವಾರ ವಾಹನ ಸಂಚಾರ ವಿರಳವಾಗಿತ್ತು –ಪಿಟಿಐ ಚಿತ್ರ

ಪರೀಕ್ಷೆ ಮುಂದೂಡಿಕೆ

ಇನ್ನೊಂದು ಬೆಳವಣಿಗೆಯಲ್ಲಿ ಮಣಿಪುರ ವಿಶ್ವವಿದ್ಯಾಲಯವು ಪದವಿ ಮತ್ತು ಸ್ನಾತಕೋತ್ತರ ಪದವಿ ಹಂತದ ಎಲ್ಲ ಪರೀಕ್ಷೆಗಳನ್ನು ಅನಿರ್ದಿಷ್ಟಾ-ವಧಿವರೆಗೂ ಮುಂದೂಡಿದೆ.

ಇಬ್ಬರು ಡಾನ್ಸರ್‌ಗಳ ಮೇಲೆ ಸಾಮೂಹಿಕ ಅತ್ಯಾಚಾರ: 8 ಜನ ಸೆರೆ

ಗೋರಖ್‌ಪುರ (ಉತ್ತರಪ್ರದೇಶ) (ಪಿಟಿಐ): ಉತ್ತರ ಪ್ರದೇಶದ ಕುಶಿನಗರ ಜಿಲ್ಲೆಯಲ್ಲಿ ಇಬ್ಬರು ಆರ್ಕೆಸ್ಟ್ರಾ ಡಾನ್ಸರ್‌ಗಳನ್ನು ಅಪಹರಿಸಿ, ಬಂದೂಕು ತೋರಿಸಿ ಸಾಮೂಹಿಕ ಅತ್ಯಾಚಾರ ಎಸಗಿದ ಪ್ರಕರಣಕ್ಕೆ ಸಂಬಂಧಿಸಿ ಎಂಟು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಸೋಮವಾರ ರಾತ್ರಿ ರಾಮ್‌ಕೋಲಾ ಪೊಲೀಸ್ ಠಾಣಾ ವ್ಯಾಪ್ತಿಯ ಮನೆಯಿಂದ ಸಂತ್ರಸ್ತೆಯರನ್ನು ಅಪಹರಿಸಲಾಗಿದೆ. ಎರಡು ಎಸ್‌ಯುವಿಗಳಲ್ಲಿ ಬಂದ ಆರೋಪಿಗಳು ಮೊದಲು ಗುಂಡಿನ ದಾಳಿ ನಡೆಸಿ ಡಾನ್ಸರ್‌ಗಳನ್ನು ಅಪಹರಿಸಿದ್ದಾರೆ. ಕಪ್ತಂಗಂಜ್ ಪ್ರದೇಶದಲ್ಲಿನ ಆರೋಪಿ ಅಜಿತ್ ಸಿಂಗ್ ಎಂಬಾತನ ಮನೆಗೆ ಕರೆದೊಯ್ದರು, ಅಲ್ಲಿ ಸಾಮೂಹಿಕ ಅತ್ಯಾಚಾರ ಎಸಗಲಾಗಿದೆ ಎಂದು ಕುಶಿನಗರ ಪೊಲೀಸ್ ವರಿಷ್ಠಾಧಿಕಾರಿ ಸಂತೋಷ್ ಕುಮಾರ್ ಮಿಶ್ರಾ ಹೇಳಿದ್ದಾರೆ.

ಆರೋಪಿಗಳಾದ ನಾಗೇಂದ್ರ ಯಾದವ್, ಅಶ್ವನ್ ಸಿಂಗ್, ಕ್ರಿಶ್ ತಿವಾರಿ, ಅರ್ಥಕ್ ಸಿಂಗ್, ಅಜಿತ್ ಸಿಂಗ್ ಮತ್ತು ಡಾ. ವಿವೇಕ್ ಸೇಠ್ ಎಂಬುವರನ್ನು ಸೋಮವಾರ ರಾತ್ರಿ ಬಂಧಿಸಲಾಗಿದೆ.

ಇನ್ನಿಬ್ಬರು ಆರೋಪಿಗಳಾದ ನಿಸಾರ್ ಅನ್ಸಾರಿ ಮತ್ತು ಆದಿತ್ಯ ಸಾಹ್ನಿ ಎಂಬುವರನ್ನು ಮಂಗಳವಾರ ಸಂಜೆ ಎನ್‌ಕೌಂಟರ್ ನಂತರ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿ ಅರ್ಥಕ್ ಸಿಂಗ್ ಸ್ಥಳೀಯ ಬಿಜೆಪಿ ಮುಖಂಡ ಆದಿತ್ಯ ಪ್ರತಾಪ್ ಸಿಂಗ್ ಅವರ ಪುತ್ರ ಎಂದು ಪಕ್ಷದ ಮುಖಂಡರೊಬ್ಬರು ತಿಳಿಸಿದ್ದಾರೆ. ಆದಿತ್ಯ ಪ್ರತಾಪ್ ಸಿಂಗ್ ಬಿಜೆಪಿಯ ಸದಸ್ಯರಾಗಿದ್ದಾರೆ ಎಂದು ಪಕ್ಷದ ಗೋರಖ್‌ಪುರ ಜಿಲ್ಲಾಧ್ಯಕ್ಷ ಯುಧಿಸ್ಥಿರ್ ಸಿಂಗ್ ಹೇಳಿದ್ದಾರೆ.

ಮತ್ತೊಬ್ಬ ಆರೋಪಿ ವೈದ್ಯ ವಿವೇಕ್ ಸೇಠ್ ಗೋರಖ್‌ಪುರದಲ್ಲಿ ವೈದ್ಯ ವೃತ್ತಿ ನಡೆಸುತ್ತಿದ್ದಾನೆ. ಆರೋಪಿಗಳಿಂದ ಅಕ್ರಮ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು ಮತ್ತು ವಾಹನಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಭಿಮತ

ಸಮರ್ಪಕ ಶಿಕ್ಷಣಕ್ಕೆ ಮದರಸಾ ಸೂಕ್ತವಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ ಸಮರ್ಪಕವಾದ ಶಿಕ್ಷಣ ಪಡೆಯಲು ಮದರಸಾಗಳು ಸೂಕ್ತವಲ್ಲದ ಮತ್ತು ಯೋಗ್ಯವಲ್ಲದ ಸ್ಥಳಗಳಾಗಿದ್ದು, ವಿವಿಧ ಕಾನೂನುಗಳನ್ನು ಉಲ್ಲಂಘಿಸಿ ಮನಬಂದಂತೆ ಕಾರ್ಯನಿರ್ವಹಿಸುತ್ತಿವೆ ಎಂದು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು (ಎನ್‌ಸಿಪಿಸಿಆರ್) ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಒಟ್ಟಾರೆ ಮದರಸಾಗಳು ಸಾಂವಿಧಾನಿಕ ಆದೇಶಗಳು, ಶಿಕ್ಷಣ ಹಕ್ಕು ಕಾಯ್ದೆ ಮತ್ತು ಬಾಲ ನ್ಯಾಯ ಕಾಯ್ದೆಗಳನ್ನು (2015) ಉಲ್ಲಂಘಿಸಿ ಕೆಲಸ ಮಾಡುತ್ತಿವೆ ಎಂದು ಆಯೋಗ ಹೇಳಿದೆ.

ಇಲ್ಲಿ ಸಂಪೂರ್ಣವಾಗಿ ಧಾರ್ಮಿಕ ಹಿನ್ನೆಲೆಯ ಶಿಕ್ಷಣ ನೀಡಲಾಗುತ್ತಿದ್ದು, ಮಗುವಿನ ಮೂಲಭೂತ ಹಕ್ಕಿನ ಉಲ್ಲಂಘನೆಯಾಗುತ್ತಿದೆ. ಅಲ್ಲದೆ ಶಿಕ್ಷಣ ಹಕ್ಕು ಕಾಯ್ದೆ 2009 ಸೇರಿದಂತೆ ಇತರ ಪೂರಕ ಕಾಯ್ದೆಗಳಿಗೆ ಇವು ಬದ್ಧವಾಗಿಲ್ಲ. ಧಾರ್ಮಿಕ ವಿಷಯದ ಕಲಿಕೆಯು ಮದರಸಾಗಳಲ್ಲಿ ಸಾಂಸ್ಥೀಕರಣ ಆಗಿರುವುದರಿಂದ ಮುಗ್ಧ ಮಕ್ಕಳು ಬಳಲುತ್ತಿದ್ದಾರೆ ಎಂದು ಮಕ್ಕಳ ಹಕ್ಕುಗಳ ಸಂಸ್ಥೆ ಉಲ್ಲೇಖಿಸಿದೆ. ಉತ್ತರ ಪ್ರದೇಶ ಅಂಜುಮ್ ಕದರಿ ಎಂಬುವರು ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ಆಯೋಗ ಲಿಖಿತ ಹೇಳಿಕೆ ದಾಖಲಿಸಿದೆ.



ಎನ್‌ಸಿಪಿಸಿಆರ್ ಹೇಳಿಕೆಯಲ್ಲಿ ಪ್ರಸ್ತಾಪಿಸಿರುವ ಪ್ರಮುಖಾಂಶಗಳು:

- ಮದರಸಾಗಳು ಶಾಲಾ ವ್ಯಾಖ್ಯಾನದಿಂದ ದೂರ ಉಳಿದಿವೆ. ಹೀಗಾಗಿ ಮಕ್ಕಳನ್ನು ಅಥವಾ ಅವರ ಕುಟುಂಬದವರನ್ನು ಮದರಸಾಗಳಲ್ಲಿ ಶಿಕ್ಷಣ ಪಡೆಯುವಂತೆ ಒತ್ತಾಯಿಸುವ ಯಾವುದೇ ಹಕ್ಕನ್ನು ಅವು ಹೊಂದಿಲ್ಲ
- ಸರಿಯಾದ ಪಠ್ಯಕ್ರಮ ಇಲ್ಲದಿರುವುದು, ಶಿಕ್ಷಕರ ಅರ್ಹತೆ, ಧನಸಹಾಯ ವಿಷಯಗಳಲ್ಲಿ ಪಾರದ-ರ್ಶಕತೆಯ ಕೊರತೆಯಿದೆ. ನೆಲದ ಕಾನೂನನ್ನು ಇವು ಉಲ್ಲಂಘಿಸುತ್ತಿವೆ. ಮಕ್ಕಳಿಗೆ ಸಮಗ್ರ ಕಲಿಕಾ ವಾತಾವರಣ ಕಲ್ಪಿಸುವಲ್ಲಿ ಮದರಸಾಗಳು ವಿಫಲವಾಗಿವೆ
- ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾದ ಕ್ಷೇತ್ರ ಕಾರ್ಯ ಸೇರಿದಂತೆ ಪಠ್ಯೇತರ ಚಟುವಟಿಕೆಗಳನ್ನು ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ಹೇಗೆ ಆಯೋಜಿಸಬೇಕು ಎಂಬುದು ಬಹುತೇಕ ಮದರಸಾಗಳಿಗೆ ತಿಳಿದಿಲ್ಲ. ರಾಷ್ಟ್ರೀಯ ಮುಖ್ಯವಾಹಿನಿಯ ಶಿಕ್ಷಣ ವ್ಯವಸ್ಥೆಯನ್ನು ಇವು ಅಳವಡಿಸಿಕೊಂಡಿಲ್ಲ
- ಮದರಸಾ ಶಿಕ್ಷಣ ಮಂಡಳಿಯು ಕೇವಲ ಪರೀಕ್ಷೆಗಳನ್ನು ನಡೆಸುವ ಅಧಿಕಾರ ಹೊಂದಿರುವ ಸಂಸ್ಥೆಯಾಗಿರುವ ಕಾರಣ, ಅದನ್ನು ಶೈಕ್ಷಣಿಕ ಪ್ರಾಧಿಕಾರ ಎಂದು ಪರಿಗಣಿ-ಸಬಾರದು
- ಸಮರ್ಥವಲ್ಲದ ಪಠ್ಯಕ್ರಮವು ಮಗುವಿನ ಶೈಕ್ಷಣಿಕ ಮತ್ತು ಮಾನಸಿಕ ಬೆಳವಣಿಗೆ ಮೇಲೆ ಪರಿಣಾಮ ಬೀರು ತ್ತದೆ. ಇದು ಮಕ್ಕಳ ಭವಿಷ್ಯಕ್ಕೆ ಮಾರಕ
- ದೇಶದ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮದರಸಾಗಳು ನಡೆಯುತ್ತಿದ್ದರೂ, ಲಭ್ಯ ಮಾಹಿತಿ ಪ್ರಕಾರ ಬಿಹಾರ, ಛತ್ತೀಸಗಢ, ಒಡಿಶಾ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಮಧ್ಯಪ್ರದೇಶ, ರಾಜಸ್ಥಾನ, ಉತ್ತರಾಖಂಡ ರಾಜ್ಯಗಳು ಮಾತ್ರ ಮದರಸಾ ಮಂಡಳಿಯನ್ನು ಹೊಂದಿವೆ
- ಮದರಸಾ ಮಂಡಳಿಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ದಿನಿಯತ್ ಪುಸ್ತಕಗಳಲ್ಲಿ ಆಕ್ಷೇಪಾರ್ಹ ವಿಷಯಗಳು ಇರುವುದು ಕಂಡುಬಂದಿದೆ
- ಮುಸ್ಲಿಮೇತರ ವಿದ್ಯಾರ್ಥಿಗಳೂ ಹೆಚ್ಚಿನ ಸಂಖ್ಯೆಯಲ್ಲಿ ಮದರಸಾಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ
- ಮಕ್ಕಳಿಗೆ ದೈಹಿಕ ಶಿಕ್ಷೆ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ಪ್ರಕರಣಗಳು ವರದಿಯಾಗಿವೆ.

ಗ್ಯಾನವಾಪಿ: ಹಿಂದೂ ಪರ ಅರ್ಜಿ ವಿಚಾರಣೆ ಪೂರ್ಣ

ಪ್ರಜಾವಾಣಿ ವಾರ್ತೆ/ ಪಿಟಿಐ

ಲಖನೌ/ವಾರಾಣಸಿ: ಗ್ಯಾನವ್ಯಾಪಿ ಮಸೀದಿ ಸಂಕೀರ್ಣದ ಆವರಣದಲ್ಲಿ ದೇವಸ್ಥಾನವಿದೆ ಎಂದು ವಾದಿಸಿ, ಇಡೀ ಗ್ಯಾನವಾಪಿ ಮಸೀದಿ ಆವರಣವನ್ನು ಯಂತ್ರಗಳಿಂದ ಅಗೆದು ಪುರಾವೆ ಸಂಗ್ರಹಿಸಲು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ (ಎಎಸ್‌ಐ) ಅನುಮತಿ ನೀಡಲು ಕೋರಿ ಹಿಂದೂ ಭಕ್ತರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ವಾರಾಣಸಿ ನ್ಯಾಯಾಲಯ ಬುಧವಾರ ಪೂರ್ಣಗೊಳಿಸಿದೆ.

ತ್ವರಿತ ನ್ಯಾಯಾಲಯದ ಹಿರಿಯ ವಿಭಾಗದ ಸಿವಿಲ್ ನ್ಯಾಯಾಧೀಶ ಜುಗಲ್ ಶಂಭು ಅವರು, ಮಸೀದಿ ನಿರ್ವಹಣೆ ನೋಡಿಕೊಳ್ಳುವ ಅಂಜುಮನ್ ಇಂತೇಜಾಮಿಯಾ ಸಮಿತಿಯ ಅರ್ಜಿ ವಿಚಾರಣೆಯನ್ನು ಇದೇ 18ಕ್ಕೆ ನಿಗದಿ ಪಡಿಸಿದ್ದಾರೆ.

ಹಿಂದೂ ಭಕ್ತರು ತಮ್ಮ ಅರ್ಜಿಯಲ್ಲಿ ಮಸೀದಿಯ ಪ್ರಧಾನ ಗುಮ್ಮಟದ ಅಡಿ ಶಿವಲಿಂಗವಿದೆ ಎಂದೂ ವಾದಿಸಿದ್ದಾರೆ.

ಹಿಂದೂ ಭಕ್ತರ ಪರ ವಾದಿಸಿದ ವಕೀಲ ವಿಜಯ್ ಶಂಕರ್ ರಸ್ತೋಗಿ ಅವರು 'ಜ್ಞಾನ ಕುಂಡ'ದಲ್ಲಿ ಸಂಗ್ರಹವಾಗುವ ನೀರು ಶಿವಲಿಂಗದ ಮೇಲೆ ನಿರಂತರವಾಗಿ ಹರಿಯುತ್ತಿತ್ತು. ಇದಕ್ಕೆ ಪುರಾವೆ ಸಂಗ್ರಹಿಸಲು ಸಂಪೂರ್ಣ ಗ್ಯಾನವಾಪಿ ಮಸೀದಿ ಆವರಣದ ವೈಜ್ಞಾನಿಕ ಸಮೀಕ್ಷೆ ಅತ್ಯಗತ್ಯ. ಯಂತ್ರಗಳ ಮೂಲಕ ಆವರಣವನ್ನು ಅಗೆಯುವ ಅಗತ್ಯವಿದೆ ಎಂದು ಹೇಳಿದರು.

ಎಎಸ್‌ಐ, ಮಸೀದಿಯ ಒಂದು ಭಾಗದ ವೈಜ್ಞಾನಿಕ ಸಮೀಕ್ಷೆಯನ್ನು ನಡೆಸಿದ್ದರೂ ಅದು ಪೂರ್ಣಗೊಂಡಿಲ್ಲ. ಅಗೆಯಲು ಯಂತ್ರ ಬಳಸಿಲ್ಲ. ಆವರಣವನ್ನು ಅಗೆದೂ ಇಲ್ಲ ಎಂದು ಅವರು ಹೇಳಿದರು.

ಎಎಸ್‌ಐ ವರದಿಯ ಪ್ರಕಾರ, ಮಸೀದಿಯ ಸ್ಥಳದಲ್ಲಿ ಹಿಂದೂ ದೇವಾಲಯ ಅಸ್ತಿತ್ವದಲ್ಲಿತ್ತು. 17ನೇ ಶತಮಾನದಲ್ಲಿ ಹಿಂದೂ ದೇವಾಲಯ ಕೆಡವಿ ಮಸೀದಿ ನಿರ್ಮಿಸಲಾಗಿದೆ ಎಂಬುದಕ್ಕೆ ಪುರಾವೆಗಳಿವೆ ಎಂದು ಕಾಶಿ ವಿಶ್ವನಾಥ ದೇವಸ್ಥಾನ-ಗ್ಯಾನವಾಪಿ ಮಸೀದಿ ಪ್ರಕರಣದಲ್ಲಿ ಹಿಂದೂ ಭಕ್ತರ ಪರ ವಾದಿಸುತ್ತಿರುವ ವಕೀಲರು ಹೇಳಿದ್ದಾರೆ.

ಗಣೇಶ ಮೂರ್ತಿಗಳ ಮೆರವಣಿಗೆ ವೇಳೆ ಘಟನೆ

ನಾಗಮಂಗಲ: ಕಲ್ಲು ತೂರಾಟ

ಪ್ರಜಾವಾಣಿ ವಾರ್ತೆ



ನಾಗಮಂಗಲ ಪಟ್ಟಣದ ಪೊಲೀಸ್ ಠಾಣೆಯ ಬಳಿ ಹಿಂದೂ ಯುವಕರು ಮೆರವಣಿಗೆಗೆ ಅವಕಾಶ ಕಲ್ಪಿಸುವಂತೆ ಆಗ್ರಹಿಸಿ ಪೊಲೀಸರೊಂದಿಗೆ ಮಾತಿನ ಚಕಮಕಿ ನಡೆಸಿದರು

ನಾಗಮಂಗಲ: ಪಟ್ಟಣದ ಮೈಸೂರು ರಸ್ತೆಯ ದರ್ಗಾದ ಬಳಿ ಬುಧವಾರ ರಾತ್ರಿ ಗಣೇಶ ಮೂರ್ತಿಗಳ ಮೆರವಣಿಗೆ ವೇಳೆ ಗುಂಪೊಂದು ಕಲ್ಲು ತೂರಾಟ ನಡೆಸಿದ್ದು, ಕೆಲವರಿಗೆ ಗಾಯಗಳಾಗಿವೆ. ಪರಿಸ್ಥಿತಿ ಉದ್ವಿಗ್ನಗೊಂಡು, ಪೊಲೀಸರು ಲಾಠಿ ಪ್ರಹಾರ ನಡೆಸಿದರು.

ಪಟ್ಟಣದ ಬದ್ರಿಕೊಪ್ಪಲಿನ ಯುವಕರು ಪಟ್ಟಣದ ಹೆದ್ದಾರಿಯಲ್ಲಿ ಮೆರವಣಿಗೆ ನಡೆಸುತ್ತಿದ್ದು, ಹಿಂದೂ–ಮುಸ್ಲಿಂ ಯುವಕರ ಗುಂಪಿನ ನಡುವೆ ಮಾತಿನ ಚಕಮಕಿ ನಡೆದಿತ್ತು. ಕಲ್ಲು ತೂರಾಟದಿಂದ ಕೋಪಗೊಂಡ ಯುವಕರು ಪೊಲೀಸ್ ಠಾಣೆ ಮುಂಭಾಗ ಮೆರವಣಿಗೆಯನ್ನು ನಿಲ್ಲಿಸಿ, ಪ್ರತಿಭಟಿಸಿದರು.

ಮಾಹಿತಿ ತಿಳಿದ ನೂರಾರು ಯುವಕರು ಜಮಾಯಿಸಿದರು. ಪಟ್ಟಣದ ಮೈಸೂರು ರಸ್ತೆಯಲ್ಲಿ ಮೆರವಣಿಗೆಗೆ ಅವಕಾಶ ನೀಡಬೇಕೆಂದು ಪಟ್ಟು ಹಿಡಿದರು. ಉದ್ರಿಕ್ತ ಗುಂಪೊಂದು ಅಂಗಡಿಗಳಿಗೆ ಬೆಂಕಿ ಹಚ್ಚಿ, ಟೈರುಗಳನ್ನು ಸುಟ್ಟು ಹಾಕಿದೆ.

ಶಾಲಾ ಶಿಕ್ಷಣದಲ್ಲಿ ಮೀಸಲಾತಿ ಎಸ್‌ಇಪಿ ಆಯೋಗ ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ಶಿಕ್ಷಣದಲ್ಲೂ ಮೀಸಲಾತಿ ಪರಿಚಯಿಸುವ ಸಾಧ್ಯತೆ ಕುರಿತು ರಾಜ್ಯ ಶಿಕ್ಷಣ ನೀತಿ ಆಯೋಗದ (ಎಸ್‌ಇಪಿ) ಅಡಿಯಲ್ಲಿ ರಚಿಸಲಾದ ಕಾರ್ಯಪಡೆ ಚರ್ಚೆ ನಡೆಸಿದೆ.

ಈಗಾಗಲೇ ಉನ್ನತ ಶಿಕ್ಷಣ ಹಾಗೂ ವೃತ್ತಿಪರ ಕೋರ್ಸ್‌ಗಳಲ್ಲಿ ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗಗಳ (ಒಬಿಸಿ) ವಿದ್ಯಾರ್ಥಿಗಳಿಗೆ ಮೀಸಲಾತಿ ದೊರೆಯುತ್ತಿದೆ. ಉನ್ನತ ಶಿಕ್ಷಣದ ಮಾದರಿಯಲ್ಲಿ ಶಾಲಾ ಶಿಕ್ಷಣದಲ್ಲೂ ಮೀಸಲಾತಿ ನೀಡುವ ಕುರಿತು ಹಲವು ಸಂಘಟನೆಗಳು ಮನವಿ ಸಲ್ಲಿಸಿವೆ. ಇಂತಹ ಸಾಧ್ಯತೆಗಳ ಕುರಿತು ಪರಿಶೀಲಿಸಲಾಗುತ್ತಿದೆ ಎಂದು ಎಸ್‌ಇಪಿ ಆಯೋಗದ ಮೂಲಗಳು ಹೇಳಿವೆ.

ಆರ್ಥಿಕ ದುರ್ಬಲ ವರ್ಗಗಳ ಶೇ 25ರಷ್ಟು ಮಕ್ಕಳಿಗೆ ಖಾಸಗಿ ಶಾಲೆಗಳಿಗೆ ಪ್ರವೇಶ ಪಡೆಯಲು ಹಿಂದೆ ರೂಪಿಸಲಾಗಿದ್ದ ನಿಯಮಗಳನ್ನು ಮರು ಜಾರಿಗೊಳಿಸಲು ಚಿಂತನೆ ನಡೆದಿದೆ. ಅದಕ್ಕಾಗಿ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು (ಆರ್‌ಟಿಇ) ಕಾಯ್ದೆಯ ಸೆಕ್ಷನ್ 12 (1) (ಸಿ)ಗೆ ಮಾಡಲಾಗಿದ್ದ ತಿದ್ದುಪಡಿಗಳನ್ನು ರದ್ದು ಮಾಡುವಂತೆ ಸರ್ಕಾರಕ್ಕೆ ಶಿಫಾರಸು ಮಾಡುವ ಕುರಿತು ಆಯೋಗ ಚಿಂತನೆ ನಡೆಸಿದೆ.

ಆರ್‌ಟಿಇ ಅಡಿ ಮಕ್ಕಳಿಗೆ ನೀಡುತ್ತಿರುವ ಪ್ರವೇಶವನ್ನು 12ನೇ ತರಗತಿ ಅಥವಾ 18 ವರ್ಷದವರೆಗೆ ವಿಸ್ತರಿಸಲು ಶಿಫಾರಸು ಮಾಡಬೇಕು ಎಂದು ಆರ್‌ಟಿಇ ವಿದ್ಯಾರ್ಥಿಗಳ ಪೋಷಕರ ಸಂಘ ಸಲ್ಲಿಸಿದ ಮನವಿ ಕುರಿತು ಆಯೋಗ ಚರ್ಚೆ ನಡೆಸಿದೆ.

ವಿದ್ಯಾರ್ಥಿಗಳ ಜತೆ ಶಾಸಕರ ಪ್ರಯಾಣ

ಪ್ರಜಾವಾಣಿ ವಾರ್ತೆ



ಕಮಲಾಪುರ ತಾಲ್ಲೂಕಿನ ಮಹಾಗಾಂವ ಸರ್ಕಾರಿ ಪದವಿ ಪೂರ್ವ ಕಾಲೇಜಿನಿಂದ ಮಹಾಗಾಂವ ಕ್ರಾಸ್‌ವರೆಗೆ ವಿದ್ಯಾರ್ಥಿಗಳೊಂದಿಗೆ ಶಾಸಕ ಬಸವರಾಜ ಮತ್ತಿಮಡು ಬಸ್‌ನಲ್ಲಿ ಪ್ರಯಾಣಿಸಿದರು

ಕಮಲಾಪುರ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಮಹಾಗಾಂವ ಕ್ರಾಸ್‌ನಲ್ಲಿರುವ ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಬುಧವಾರ ವಿದ್ಯಾರ್ಥಿಗಳು ನಡೆದು ಹೋಗುತ್ತಿರುವುದನ್ನು ಕಂಡ ಶಾಸಕ ಬಸವರಾಜ ಮತ್ತಿಮಡು, ಬಸ್ ನಿಲ್ಲಿಸಿ ವಿದ್ಯಾರ್ಥಿಗಳ ಜೊತೆಗೆ ಪ್ರಯಾಣಿಸಿದರು.

ಮಹಾಗಾಂವ ಕ್ರಾಸ್ ಬಳಿ ಬಸ್ ನಿಲ್ಲಿಸದಿರುವ ಕುರಿತು 'ಪ್ರಜಾವಾಣಿ' ವರದಿ ಮಾಡಿತ್ತು. ಶಾಸಕರು ಬಸ್ ನಿಲುಗಡೆಗೆ ಅಧಿಕಾರಿಗಳಿಗೆ ಸೂಚಿಸಿದ್ದರು. ಕೆಲ ದಿನ ಇಲ್ಲಿ ಕಂಟ್ರೋಲರ್ ನೇಮಿಸಿ ವಿದ್ಯಾರ್ಥಿಗಳನ್ನು ಬಸ್‌ನಲ್ಲಿ ಹತ್ತಿಸಿಕೊಂಡು ಹೋಗಲಾಗುತ್ತಿತ್ತು.

ಈ ಮಾರ್ಗದಲ್ಲಿ ಬುಧವಾರ ಶಾಸಕರು ಸಾಗುತ್ತಿದ್ದಾಗ ವಿದ್ಯಾರ್ಥಿಗಳು ನಡೆದು ಹೋಗುತ್ತಿರುವುದು ಕಂಡು ಕಾರಿನಿಂದಿಳಿದು ವಿಚಾರಿಸಿದರು.

'ಕಂಟ್ರೋಲರ್ ಇರುವಾಗ ಬಸ್ ನಿಲ್ಲಿಸುತ್ತಿದ್ದರು. ಈಗ ಬಸ್ ನಿಲ್ಲಿಸದೇ ಇರುವುದರಿಂದ ನಡೆದೇ ಹೋಗುತ್ತಿದ್ದೇವೆ' ಎಂದು ವಿದ್ಯಾರ್ಥಿಗಳು ಅಳಲು ತೋಡಿಕೊಂಡರು.

ಸಾರಿಗೆ ಸಂಸ್ಥೆಯ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಸಿದ ಶಾಸಕರು, ಬಸ್ ನಿಲ್ಲಿಸಿ, ಅದರಲ್ಲಿ ವಿದ್ಯಾರ್ಥಿಗಳ ಜೊತೆಗೆ ಮಹಾಗಾಂವ ಕ್ರಾಸ್‌ವರೆಗೂ ಪ್ರಯಾಣಿಸಿದರು.

ಎಸ್‌ಸಿಡಿಸಿಸಿಗೆ ಅಪೆಕ್ಸ್ ಬ್ಯಾಂಕ್ ಪ್ರಶಸ್ತಿ

ಮಂಗಳೂರು: ಅಪೆಕ್ಸ್ ಬ್ಯಾಂಕ್ ನೀಡುವ ರಾಜ್ಯದ ಅತ್ಯುತ್ತಮ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ 'ಪ್ರಥಮ ಪ್ರಶಸ್ತಿ'ಯು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ (ಎಸ್‌ಸಿಡಿಸಿಸಿ) ಬ್ಯಾಂಕ್‌ಗೆ ಲಭಿಸಿದೆ. ಎಸ್‌ಸಿಡಿಸಿಸಿ ಬ್ಯಾಂಕ್ 2022-23ನೇ ಸಾಲಿನ ಸಾರ್ವಂಗೀಣ ಪ್ರಗತಿ ಜೊತೆಗೆ, ಲೆಕ್ಕ ಪರಿಶೋಧನೆಯಲ್ಲಿ 'ಎ' ಶ್ರೇಣಿ ಪಡೆಯುವ ಮೂಲಕ ಪ್ರಥಮ ಪ್ರಶಸ್ತಿಗೆ ಆಯ್ಕೆಯಾಗಿದೆ. ಸೆ. 13ರಂದು ಬೆಂಗಳೂರಿನಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ.

12 ಲೇಖಕರಿಗೆ ಕರ್ನಾಟಕ ಸಂಘದ ಪುಸ್ತಕ ಬಹುಮಾನ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಇಲ್ಲಿನ ಕರ್ನಾಟಕ ಸಂಘವು ನೀಡುವ ಬಹುಮಾನಕ್ಕೆ 2023ರಲ್ಲಿ ಪ್ರಕಟವಾದ ಕನ್ನಡ ಸಾಹಿತ್ಯದ 12 ವಿವಿಧ ಪ್ರಕಾರದ ಪುಸ್ತಕಗಳು ಆಯ್ಕೆಯಾಗಿವೆ.

'ಬಹುಮಾನವು ತಲಾ ₹10,000 ನಗದು ಮತ್ತು ಪ್ರಶಸ್ತಿ ಪತ್ರ ಒಳಗೊಂಡಿದೆ. ಬಹುಮಾನ ವಿತರಣೆ ಸಮಾರಂಭ ಸೆ.22ರಂದು ಸಂಘದ ಸಭಾಭವನದಲ್ಲಿ ನಡೆಯಲಿದೆ' ಎಂದು ಸಂಘದ ಅಧ್ಯಕ್ಷ ಎಂ.ಎನ್. ಸುಂದರರಾಜ್ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕುವೆಂಪು ಕಾದಂಬರಿ ಬಹುಮಾನವು ಲೇಖಕ ಕೆ.ಬಿ.ಪವಾರ ಅವರ 'ಕೊಳ್ಳ' ಪುಸ್ತಕ, ಪ್ರೊ.ಎಸ್.ವಿ. ಪರಮೇಶ್ವರ ಭಟ್ಟ ಅನುವಾದ ಬಹುಮಾನವು ರಾಜಾರಾಂ ತಲ್ಲೂರು ಅವರ 'ಎಂ.ಡಾಕ್ಯೂಮೆಂಟ್', ಎಂ.ಕೆ. ಇಂದಿರಾ ಮಹಿಳಾ ಸಾಹಿತ್ಯ ಬಹುಮಾನವು ಕಾತ್ಯಾಯಿನಿ ಕುಂಜಿಬೆಟ್ಟು ಅವರ 'ಇರುವಿನ ಅರಿವು', ಮುಸ್ಲಿಂ ಬರಹಗಾರರಿಗೆ ಪಿ.ಲಂಕೇಶ್ ಹೆಸರಿನಲ್ಲಿ ಕೊಡಮಾಡುವ ಬಹುಮಾನವು ಹಬೀಬ್ ಅಬ್ರ ಅವರ 'ಸಂಪಿಗೆಯ ಪರಿಮಳ ಕೃತಿಗೆ ಲಭಿಸಿದೆ.

ಜಿ.ಎಸ್.ಶಿವರುದ್ರಪ್ಪ ಹೆಸರಿನ ಕವನ ಸಂಕಲನ ಬಹುಮಾನವು ಎಸ್.ಎಸ್. ಚಾಂದ್‌ಪಾಷ ಅವರ 'ಒದ್ದೆಗಣ್ಣಿನ ದೀಪ', ಹಾ.ಮಾ.ನಾಯಕ ಅಂಕಣ ಬರಹ ಬಹುಮಾನವು ಗುರುರಾಜ್ ಎಸ್. ದಾವಣಗೆರೆ ಅವರ 'ಹಸಿರು ಮಂಥನ', ಯು.ಆರ್. ಅನಂತಮೂರ್ತಿ ಸಣ್ಣ ಕಥಾ ಸಂಕಲನ ಬಹುಮಾನವು ಗೋವಿಂದರಾಜು ಎಂ. ಕಲ್ಲೂರು ಅವರ 'ನಕ್ಷತ್ರಕ್ಕಂಟದ ಮುಟ್ಟಿನ ನೆತ್ತರು' ಕೃತಿಗೆ ದೊರೆತಿದೆ.

'ಕೆ.ವಿ. ಸುಬ್ಬಣ್ಣ ನಾಟಕ ಬಹುಮಾನವು ಶಿವಕುಮಾರ್ ಮಾವಲಿ ಅವರ 'ಒಂದು ಕಾನೂನಾತ್ಮಕ ಕೊಲೆ', ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿ ಪ್ರವಾಸ ಸಾಹಿತ್ಯ ಬಹುಮಾನವು ರಹಮತ್ ತರೀಕೆರೆ ಅವರ 'ಜೆರುಸಲೇಂ' ಪುಸ್ತಕ, ಹಸೂಡಿ ವೆಂಕಟಶಾಸ್ತ್ರಿ ಹೆಸರಿನ ವಿಜ್ಞಾನ ಸಾಹಿತ್ಯ ಬಹುಮಾನವು ಎಸ್.ಎನ್.ಹೆಗಡೆ ಅವರ 'ಜೀವವೈವಿಧ್ಯ, ವನ್ಯಜೀವಿಗಳು ಮತ್ತು ಸಂರಕ್ಷಣೆ', ನಾ.ಡಿಸೋಜ ಮಕ್ಕಳ ಸಾಹಿತ್ಯ ಬಹುಮಾನವು ಲಲಿತಾ ಹೊಸಪ್ಯಾಟಿ ಅವರ 'ಬ್ಯೂಟಿ ಬೆಳ್ಳಕ್ಕಿ' ಹಾಗೂ ಎಚ್.ಡಿ.ಚಂದ್ರಪ್ಪಗೌಡ ಹೆಸರಿನ ವೈದ್ಯ ಸಾಹಿತ್ಯ ಬಹುಮಾನವು ಡಾ.ಲಕ್ಷ್ಮಿ ಶ್ರೀನಿವಾಸನ್ ಅವರ 'ಕಣ್ಣು ಬೆರಗು ಬವಣೆ' ಪುಸ್ತಕಕ್ಕೆ ಲಭಿಸಿವೆ' ಎಂದು ಸುಂದರರಾಜ್ ಹೇಳಿದರು.

'ಸಂಸದ ತುಕಾರಾಂ ವಿರುದ್ಧ ಕಾನೂನು ಹೋರಾಟ'

ಸಂಡೂರು(ಬಳ್ಳಾರಿ): 'ವಾಲ್ಮೀಕಿ ನಿಗಮದ ಹಣ ಲೋಕಸಭೆ ಚುನಾವಣೆಯಲ್ಲಿ ದುರ್ಬಳಕೆಯಾಗಿದೆ. ಬಳ್ಳಾರಿ ಕ್ಷೇತ್ರದ ಸಂಸದ ಇ.ತುಕರಾಂ ಸದಸ್ಯತ್ವ ರದ್ದತಿಗೆ ಕೋರಿ ಪರಾಜಿತ ಬಿಜೆಪಿ ಅಭ್ಯರ್ಥಿ ಶ್ರೀರಾಮುಲು ಕೋರ್ಟ್ ಮೊರೆ ಹೋಗುವರು' ಎಂದು ರಾಜ್ಯ ಬಿಜೆಪಿ ಉಸ್ತುವಾರಿ ರಾಧಾ ಮೋಹನ್‌ದಾಸ್ ಅಗರವಾಲ್ ತಿಳಿಸಿದರು.

ಸಂಡೂರಿನಲ್ಲಿ ಬುಧವಾರ ನಡೆದ ವಿಧಾನಸಭಾ ಕ್ಷೇತ್ರ ಉಪಚುನಾವಣೆ ಮತ್ತು ಸದಸ್ಯತಾ ಅಭಿಯಾನ ಸಭೆಯಲ್ಲಿ ಅವರು ಮಾತನಾಡಿದರು.

'ನಿಗಮದ ಹಗರಣ ಕುರಿತು ಜಾರಿ ನಿರ್ದೇಶನಾಲಯ ಕೋರ್ಟ್‌ಗೆ ಸಲ್ಲಿಸಿದ ದೋಷಾರೋಪ ಪಟ್ಟಿಯಲ್ಲಿ ನಿಗಮದ ₹20.19 ಕೋಟಿ ಹಣ ಆಂಧ್ರಪ್ರದೇಶ ಮತ್ತು ತೆಲಂಗಾಣದ ಮೂಲಕ ಬಳ್ಳಾರಿಗೆ ಬಂದಿದ್ದು ಚುನಾವಣೆಯಲ್ಲಿ ಬಳಕೆಯಾಗಿದೆ ಎಂದು ಉಲ್ಲೇಖಿಸಲಾಗಿದೆ. ಇದು ಅಕ್ರಮವಾಗಿದೆ' ಎಂದರು.

'ಹಿಂದೆ ಇಂದಿರಾಗಾಂಧಿ ಅವರು ಅಧಿಕಾರ ದುರ್ಬಳಕೆ ಮಾಡಿ, ಗೆದ್ದಿದ್ದರು. ನಂತರ ಅವರ ಸದಸ್ಯತ್ವವನ್ನು ಹೈಕೋರ್ಟ್ ರದ್ದುಪಡಿಸಿತ್ತು. 1977ರ ಮನಸ್ಥಿತಿ ಕಾಂಗ್ರೆಸ್‌ನಲ್ಲಿ ಇಂದಿಗೂ ಇದೆ' ಎಂದೂ ಹೇಳಿದರು.

'ಶ್ರೀರಾಮುಲು ಅವರು ಸಂಡೂರು ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಆಕಾಂಕ್ಷಿ ಅಲ್ಲ' ಎಂದು ಅವರು ತಿಳಿಸಿದರು.



ಸುಭಾಷಿತ

ನಿಜವಾದ ಸಂತೋಷವು ನಿಮ್ಮನ್ನು ನೀವು ಅರ್ಥಮಾಡಿಕೊಳ್ಳುವುದರಲ್ಲಿ, ನಿಮ್ಮನ್ನು ನೀವು ಒಪ್ಪಿಕೊಳ್ಳುವುದರಲ್ಲಿ ಮತ್ತು ನಿಮ್ಮ ಬಗ್ಗೆ ನೀವು ವಿಶ್ವಾಸ ಹೊಂದುವುದರಲ್ಲಿ ಅಡಗಿರುತ್ತದೆ.

–ನಾಟ್ ಹಾನ್

ಜಿಎಸ್‌ಟಿ ಮಂಡಳಿ ತೀರ್ಮಾನ ಸ್ವಾಗತಾರ್ಹ ಸರಳಗೊಳಿಸಲು ಬೇಕು ಆಸ್ಥೆ

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿಯು ಸೋಮವಾರ ನಡೆದ ತನ್ನ 54ನೇ ಸಭೆಯಲ್ಲಿ ಕೆಲವು ನಿರ್ದಿಷ್ಟ ತೀರ್ಮಾನಗಳನ್ನು ಕೈಗೊಂಡಿದೆ. ಇನ್ನು ಕೆಲವು ಪ್ರಸ್ತಾವಗಳ ಕುರಿತ ತೀರ್ಮಾನವನ್ನು ಮುಂದಕ್ಕೆ ಹಾಕಿದೆ. ಹಲವು ಉತ್ಪನ್ನಗಳ ಮೇಲಿನ ತೆರಿಗೆ ದರದಲ್ಲಿ ಒಂದಿಷ್ಟು ಹೊಂದಾಣಿಕೆಗಳನ್ನು ತರಲು ನಿರ್ಧರಿಸಿದೆ. ಕ್ಯಾನ್ಸರ್ ಚಿಕಿತ್ಸೆಯಲ್ಲಿ ಬಳಸುವ ಕೆಲವು ಔಷಧಗಳ ಮೇಲಿನ ತೆರಿಗೆಯ ಪ್ರಮಾಣವನ್ನು ಈಗಿನ ಶೇಕಡ 12ರ ಪ್ರಮಾಣದಿಂದ ಶೇ 5ಕ್ಕೆ ಇಳಿಕೆ ಮಾಡಲು ತೀರ್ಮಾನಿಸಿದೆ. ಕೆಲವು ಕೈಗಾರಿಕಾ ಉತ್ಪನ್ನಗಳ ಮೇಲಿನ ತೆರಿಗೆ ಪ್ರಮಾಣ ಶೇ 18ರಷ್ಟು ಇರುವುದನ್ನು ಶೇ 12ಕ್ಕೆ ತಗ್ಗಿಸಲು ಕೂಡ ಮಂಡಳಿ ತೀರ್ಮಾನಿಸಿದೆ. ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಿಗೆ ಖಾಸಗಿ ಹಾಗೂ ಸರ್ಕಾರಿ ವಲಯದಿಂದ ಸಂಶೋಧನೆ ಮತ್ತು ಅಭಿವೃದ್ಧಿ ಉದ್ದೇಶಕ್ಕೆ ಸಿಗುವ ಅನುದಾನವನ್ನು ಜಿಎಸ್‌ಟಿ ವ್ಯಾಪ್ತಿಯಿಂದ ಹೊರಗಿರಿಸುವ ತೀರ್ಮಾನವನ್ನು ಮಂಡಳಿಯು ಕೈಗೊಂಡಿದೆ. ಈ ಬಗೆಯ ಅನುದಾನದ ವಿಚಾರವಾಗಿ, ಜಿಎಸ್‌ಟಿ ಪಾವತಿ ಆಗಿಲ್ಲ ಎಂದು ಹಲವು ಸಂಸ್ಥೆಗಳಿಗೆ ನೋಟಿಸ್ ನೀಡಲಾಗಿತ್ತು ಎಂಬುದು ಇಲ್ಲಿ ಉಲ್ಲೇಖಾರ್ಹ. ಈ ಬಗೆಯ ನೋಟಿಸ್‌ಗಳು ಸಂಶೋಧನೆ ಮತ್ತು ಅಭಿವೃದ್ಧಿ ಕೆಲಸಗಳ ವಿಚಾರವಾಗಿ ಸರ್ಕಾರದ ಧೋರಣೆ ಏನು ಎಂಬ ಪ್ರಶ್ನೆಗಳನ್ನು ಹುಟ್ಟುಹಾಕಿದ್ದವು. ಜಿಎಸ್‌ಟಿ ವ್ಯವಸ್ಥೆಯನ್ನು ಇನ್ನಷ್ಟು ಪರಿಣಾಮಕಾರಿ ಆಗಿಸುವ ಹಾಗೂ ತೆರಿಗೆ ಸಂಗ್ರಹವನ್ನು ಸುಧಾರಿಸುವ ಉದ್ದೇಶದಿಂದ ಮಂಡಳಿಯು ಕೆಲವು ನಿರ್ಧಾರಗಳನ್ನು ಕೈಗೊಂಡಿದೆ.




ಜಿಎಸ್‌ಟಿ ವ್ಯವಸ್ಥೆಯನ್ನು ಇನ್ನಷ್ಟು ಪರಿಣಾಮಕಾರಿ ಆಗಿಸುವ ಹಾಗೂ ತೆರಿಗೆ ಸಂಗ್ರಹವನ್ನು ಸುಧಾರಿಸುವ ಉದ್ದೇಶದಿಂದ ಮಂಡಳಿಯು ಕೆಲವು ನಿರ್ಧಾರಗಳನ್ನು ಕೈಗೊಂಡಿದೆ

ಕೆಲವು ವಿಷಯಗಳ ಬಗ್ಗೆ ವಿಸ್ತೃತವಾದ ಅಧ್ಯಯನದ ಅಗತ್ಯವಿದೆ ಎಂದು ಮಂಡಳಿಯು ಅಭಿಪ್ರಾಯ ಪಟ್ಟಿದೆ. ಆ ಹೊಣೆಯನ್ನು ಸಚಿವರ ತಂಡಗಳಿಗೆ ವಹಿಸಲಾಗಿದೆ. ಅವು ನೀಡುವ ಶಿಫಾರಸುಗಳನ್ನು ಆಧರಿಸಿ ಅಂತಿಮ ನಿರ್ಣಯ ಕೈಗೊಳ್ಳಲಾಗುತ್ತದೆ. ವಿಮಾ ಉತ್ಪನ್ನಗಳ ಮೇಲೆ ವಿಧಿಸುತ್ತಿರುವ ಜಿಎಸ್‌ಟಿ ಅಂತಹ ವಿಷಯಗಳಲ್ಲಿ ಒಂದು. ಈ ಬಗ್ಗೆ ಈಚಿನ ದಿನಗಳಲ್ಲಿ ಬಹಳಷ್ಟು ಚರ್ಚೆಗಳು ಆಗಿವೆ. ವಿಮಾ ಪ್ರೀಮಿಯಂ ಪಾವತಿ ಮೇಲೆ ಶೇ 18ರಷ್ಟು ಜಿಎಸ್‌ಟಿ ವಿಧಿಸುತ್ತಿರುವುದನ್ನು ಪುನರ್ ಪರಿಶೀಲನೆಗೆ ಒಳಪಡಿಸಬೇಕು, ತೆರಿಗೆ ಪ್ರಮಾಣವನ್ನು ಕಡಿಮೆ ಮಾಡಬೇಕು ಎಂಬ ಬೇಡಿಕೆ ಬಹಳ ಬಲವಾಗಿದೆ. ಕೇಂದ್ರ ಸಚಿವ ನಿತಿನ್ ಗಡ್ಕರಿ ಹಾಗೂ ಬಿಜೆಪಿಯ ಕೆಲವು ಮಿತ್ರಪಕ್ಷಗಳ ಪ್ರಮುಖರು ಕೂಡ ಈ ಬೇಡಿಕೆಯನ್ನು ಮಂಡಿಸಿದ್ದಾರೆ. ಈಗ ಈ ವಿಚಾರವಾಗಿ ಕೇಂದ್ರ ಸರ್ಕಾರದ ನಿಲುವು ಕೂಡ ಬದಲಾಗಿರುವಂತೆ ಕಾಣುತ್ತಿದೆ. ಸಚಿವರ ಹೊಸ ತಂಡವೊಂದು ಇದರ ಬಗ್ಗೆ ಕೆಲವು ವಾರಗಳಲ್ಲಿ ಶಿಫಾರಸು ಮಾಡುವ ನಿರೀಕ್ಷೆ ಇದೆ. ಈ ಶಿಫಾರಸುಗಳನ್ನು ಜಿಎಸ್‌ಟಿ ಮಂಡಳಿಯು ನವೆಂಬರ್‌ನಲ್ಲಿ ನಡೆಯಲಿರುವ ಸಭೆಯಲ್ಲಿ ಪರಿಗಣನೆಗೆ ತೆಗೆದುಕೊಳ್ಳಲಿದೆ. ದೇಶದಲ್ಲಿ ಆರೋಗ್ಯ ವಿಮೆಗಳನ್ನು ಪಡೆದುಕೊಳ್ಳುವವರ ಪ್ರಮಾಣವು ಬಹಳ ಕಡಿಮೆ ಇದೆ. ವಿಮೆಯ ಪ್ರೀಮಿಯಂ ಮೊತ್ತ ಹೆಚ್ಚಿರುವುದು ಸೇರಿದಂತೆ ಇದಕ್ಕೆ ಹಲವು ಕಾರಣಗಳಿವೆ. ದೇಶದ ಸಾರ್ವಜನಿಕ ಆರೋಗ್ಯ ಸೇವಾ ಮೂಲಸೌಕರ್ಯವು ಯಾವುದಕ್ಕೂ ಸಾಲದ ಸ್ಥಿತಿಯಲ್ಲಿದೆ. ಕೋವಿಡ್ ಸಾಂಕ್ರಾಮಿಕದ ನಂತರದ ಅವಧಿಯಲ್ಲಿ, ಆಸ್ಪತ್ರೆಗೆ ದಾಖಲಾದಾಗ ಆಗುವ ವೆಚ್ಚಗಳು ಹೆಚ್ಚಾಗಿವೆ. ಪ್ರೀಮಿಯಂ ಮೇಲಿನ ತೆರಿಗೆಯಲ್ಲಿ ಯಾವ ರೀತಿಯಲ್ಲಿ ಬದಲಾವಣೆಗಳನ್ನು ತರಬೇಕು ಎಂಬ ವಿಚಾರವಾಗಿ ಹಲವು ಸಲಹೆಗಳು ಇವೆ. ಅತಿಹೆಚ್ಚು ಜನರಿಗೆ ನೆರವಾಗುವ ರೀತಿಯಲ್ಲಿ ತೀರ್ಮಾನವೊಂದನ್ನು ಜಿಎಸ್‌ಟಿ ಮಂಡಳಿ ತೆಗೆದುಕೊಳ್ಳಬಹುದು ಎಂಬ ನಿರೀಕ್ಷೆಯನ್ನು ಈಗ ಇಟ್ಟುಕೊಳ್ಳಬಹುದು.

ಜಿಎಸ್‌ಟಿ ಪರಿಹಾರ ಸೆಸ್ ಹಾಗೂ ತೆರಿಗೆ ದರಗಳಲ್ಲಿ ಕೆಲವು ಬದಲಾವಣೆಗಳನ್ನು ತರುವ ವಿಚಾರಗಳು ಕೂಡ ಮಂಡಳಿಯ ಪರಿಗಣನೆಯಲ್ಲಿ ಇವೆ. ವರಮಾನದಲ್ಲಿ ಆಗುವ ಕೊರತೆಗೆ ರಾಜ್ಯಗಳಿಗೆ ಪರಿಹಾರ ನೀಡುವ ಉದ್ದೇಶದಿಂದ ಪರಿಹಾರ ಸೆಸ್ ಸಂಗ್ರಹಿಸುವುದು ಆರಂಭವಾಯಿತು. ಇದನ್ನು 2022ರ ಜೂನ್‌ವರೆಗೆ ಸಂಗ್ರಹಿಸಬೇಕಿತ್ತು. ಆದರೆ, ಕೋವಿಡ್ ಅವಧಿಯಲ್ಲಿ ರಾಜ್ಯಗಳು ಎದುರಿಸಿದ ವರಮಾನ ಖೋತಾಕ್ಕೆ ಪರಿಹಾರ ಒದಗಿಸಲು ಪಡೆದ ಸಾಲ ಹಿಂದಿರುಗಿಸುವ ಉದ್ದೇಶದಿಂದ ಇದನ್ನು 2026ರ ಮಾರ್ಚ್‌ವರೆಗೆ ವಿಸ್ತರಿಸಲಾಗಿದೆ. ಈಗ, 2026ರ ಮಾರ್ಚ್ ನಂತರವೂ ಈ ಸೆಸ್ ಮುಂದುವರಿಯಲಿದೆಯೇ ಎಂಬುದನ್ನು ಹಾಗೂ ಮುಂದುವರಿಯುತ್ತದೆ ಎಂದಾದರೆ ಯಾವ ಸ್ವರೂಪದಲ್ಲಿ ಎಂಬುದನ್ನು ಮಂಡಳಿಯು ತೀರ್ಮಾನಿಸಬೇಕಿದೆ. ಈ ಬಗ್ಗೆ ಪರಿಶೀಲನೆ ನಡೆಸಲು ಸಚಿವರ ತಂಡವೊಂದನ್ನು ರಚಿಸಲಾಗಿದೆ. ಜಿಎಸ್‌ಟಿ ವ್ಯವಸ್ಥೆಯಲ್ಲಿನ ವಿವಿಧ ತೆರಿಗೆ ಪ್ರಮಾಣಗಳ ವಿಚಾರವಾಗಿ ಹಲವು ಅಭಿಪ್ರಾಯಗಳು ಇವೆ. ಬೇರೆ ಬೇರೆ ಪ್ರಮಾಣದ ತೆರಿಗೆ ವ್ಯವಸ್ಥೆಯು ಜಿಎಸ್‌ಟಿಯನ್ನು ಇನ್ನಷ್ಟು ಸಂಕೀರ್ಣಗೊಳಿಸಿದೆ, ಇದು ಜಿಎಸ್‌ಟಿ ಜಾರಿಗೊಳಿಸಿದ ಉದ್ದೇಶಕ್ಕೇ ವಿರುದ್ಧವಾಗಿದೆ ಎಂಬ ಅಭಿಪ್ರಾಯವೂ ಬಲವಾಗಿದೆ. ಈ ವಿಚಾರದ ಬಗ್ಗೆ ಸಚಿವರ ತಂಡವು ತೀರ್ಮಾನವೊಂದನ್ನು ಕೈಗೊಳ್ಳುವ ನಿರೀಕ್ಷೆ ಇದೆ.

ದಿನದ ಟ್ವೀಟ್


ಮುದ್ದುಪ್ರಾಣಿಯ ಸಾವನ್ನು ಗೌರವಿಸೋಣ



ಮನುಷ್ಯರಂತೆ ಸಾಕುಪ್ರಾಣಿಗಳಿಗೂ ಗೌರವಯುತವಾಗಿ ಅಂತ್ಯಸಂಸ್ಕಾರ ನಡೆಯಬೇಕು. ಸಾಕುಪ್ರಾಣಿಯ ಪೋಷಕಿಯಾಗಿ, ಮೃತಪ್ರಾಣಿಗಳ ಕಳೇಬರಗಳನ್ನು ಬೀದಿಗಳಲ್ಲಿ ಎಸೆಯುವುದನ್ನು ಕಂಡು ನೊಂದಿದ್ದೇನೆ. ಪ್ರಾಣಿಪ್ರಿಯರ ಮನವಿಯ ಮೇರೆಗೆ, ಭುವನೇಶ್ವರ, ಕಟಕ್ ಮತ್ತು ನೆರೆಯ ನಗರಗಳಲ್ಲಿ ಸಾಕುಪ್ರಾಣಿಗಳಿಗೆ ಸ್ಮಶಾನ ಸ್ಥಾಪನೆಯ ಅಗತ್ಯವನ್ನು ಪ್ರತಿಪಾದಿಸಿದ್ದೇನೆ. ಇದಕ್ಕೆ ನಗರಾಭಿವೃದ್ಧಿ ಸಚಿವರಿಂದ ಸಕಾರಾತ್ಮಕ ಪ್ರತಿಕ್ರಿಯೆ ದೊರೆತಿದೆ.

ಸೋಫಿಯಾ ಫಿರ್ದೌಸ್, ಒಡಿಶಾ ಶಾಸಕಿ

ಕಿಡಿನುಡಿ



ಇದು ಒಂದು ಪ್ರಕರಣವಷ್ಟೆ. ಪ್ರತಿದಿನ ಕೋಟ್ಯಂತರ ರೂಪಾಯಿಯ ಲಂಚದ ವ್ಯವಹಾರ ನಡೆಯುತ್ತದೆ. ಯಾವುದೇ ಸರ್ಕಾರಿ ಕೆಲಸಕ್ಕೆ ಜವಾನನಿಂದ ಹಿಡಿದು ವಿಭಾಗ ಮುಖ್ಯಸ್ಥನವರೆಗೆ ನಾವು ಲಂಚ ಕೊಡಬೇಕಾಗುತ್ತದೆ.

(ಉತ್ತರಪ್ರದೇಶದ ಅಮೇಠಿಯಲ್ಲಿ ಲಂಚ ಪಡೆಯುತ್ತಿದ್ದ ಸರ್ಕಾರಿ ಕಚೇರಿಯ ಜವಾನನನ್ನು ಭ್ರಷ್ಟಾಚಾರ ವಿರೋಧಿ ದಳವು ಲಂಚ ಪಡೆಯುತ್ತಿರುವಾಗಲೇ ಹಿಡಿದಿರುವುದಕ್ಕೆ ಪ್ರತಿಕ್ರಿಯೆ)

ಸುಭೋದೀಪ್, ಉದ್ಯಮಿ

25 ವರ್ಷಗಳ ಹಿಂದೆ

ಭಾನುವಾರ, 12-9-1999

• ಬೆಳಗಾವಿ ಹೋಟೆಲ್ ದುರಂತ ಮೂವರ ಸಾವು

ಬೆಳಗಾವಿ, ಸೆ. 11– ನಗರದ ರಾಮದೇವ ಹೋಟೆಲ್‌ನ ತಾರಸಿ ಕುಸಿದು ಶುಕ್ರವಾರ ಸಂಜೆ ಸಂಭವಿಸಿದ ದುರಂತದಲ್ಲಿ ಒಟ್ಟು ಮೂವರು ಸತ್ತಿದ್ದಾರೆ.

ನಿನ್ನೆ ಮಧ್ಯರಾತ್ರಿ ವೇಳೆಯಲ್ಲಿ ಅವಶೇಷವನ್ನೆಲ್ಲ ತೆಗೆದ ನಂತರ ಅದರ ಅಡಿಯಲ್ಲಿ ಕಟ್ಟಡದ ಗುತ್ತಿಗೆದಾರ ಯಳ್ಳೂರಿನ ದತ್ತಾತ್ರೇಯ (28) ಎಂಬುವರ ಶವ ಅಪ್ಪಚ್ಚಿಯಾಗಿ ಸಿಕ್ಕಿದೆ. ಅವಶೇಷದ ಅಡಿಯಲ್ಲಿ ಈ ಒಂದು ಶವ ಮಾತ್ರ ಸಿಕ್ಕಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗುತ್ತಿಗೆದಾರ ಅವಶೇಷಗಳ ಅಡಿಯಲ್ಲಿ ಸಿಲುಕುವುದಕ್ಕಿಂತ ಮುಂಚೆ ಅದು ಕುಸಿಯುತ್ತದೆ ಎಂಬ ಎಚ್ಚರಿಕೆ ನೀಡಿದರು.

• ಧಾರ್ಮಿಕ ಅಸಹನೆ: ಅಮೆರಿಕದ ಟೀಕೆಗೆ ಭಾರತದ ತಿರಸ್ಕಾರ

ನವದೆಹಲಿ, ಸೆ. 11 (ಪಿಟಿಐ)– ಭಾರತದಲ್ಲಿ ಮತೀಯ ಅಸಹನೆ ಇದೆ ಎಂಬ ಅಮೆರಿಕದ ವರದಿಯನ್ನು ಭಾರತ ಸರ್ಕಾರ ಸಾರಾ ಸಗಟಾಗಿ ತಿರಸ್ಕರಿಸಿದ್ದು, ಈ ಕುರಿತು ಭಾರತ ಸರ್ಕಾರದೊಡನೆ ಮಾತುಕತೆ ನಡೆಸಲು ಅಮೆರಿಕ ಕಳಿಸಲು ಉದ್ದೇಶಿಸಿರುವ ವಿಶೇಷ ದೂತನನ್ನು ಸ್ವಾಗತಿಸಲು ನಿರಾಕರಿಸಿದೆ.

‘ನಾವು ನಮ್ಮ ವ್ಯವಹಾರಗಳನ್ನು ಹೇಗೆ ನಡೆಸುತ್ತೇವೆ ಎಂಬ ವಿಷಯದಲ್ಲಿ ಮೂಗು ತೂರಿಸುವ ಯತ್ನವನ್ನು ನಾವು ತಿರಸ್ಕರಿಸುತ್ತೇವೆ’ ಎಂದು ವಿದೇಶಾಂಗ ಇಲಾಖೆ ವಕ್ತಾರರು ಹೇಳಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 12-9-1974

• ಚುನಾಯಿತ ಸರ್ಕಾರಗಳ ಪತನ ಚಳವಳಿಗಳ ಗುರಿ: ಇಂದಿರಾ ಖಂಡನೆ

ನವದೆಹಲಿ, ಸೆ. 11– ಆರ್ಥಿಕ ಸಂಕಷ್ಟಗಳ ಕಾರಣದಿಂದ ಜನರಲ್ಲಿರುವ ಅಸಮಾಧಾನವನ್ನು ಕೆರಳಿಸಿ ಭಾರತಕ್ಕೆ ವಿರೋಧಿಯಾಗಿರುವ ಶಕ್ತಿಗಳು ಚಿಲಿಯಲ್ಲಿನಂತೆ ಇಲ್ಲಿ ಸಹ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರ್ಕಾರಗಳನ್ನು ಉರುಳಿಸಲು ಪ್ರಯತ್ನಿಸುತ್ತಿವೆಯೆಂದು ಪ್ರಧಾನಿ ಇಂದಿರಾ ಗಾಂಧಿ ಎಚ್ಚರಿಸಿದ್ದಾರೆ.

ಸಂಸದೀಯ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಮಾತನಾಡಿದ ಅವರು, ಬಿಹಾರ ಮತ್ತಿತರ ಕಡೆ ನಡೆಯುತ್ತಿರುವ ಚಳವಳಿಗಳಲ್ಲಿ ಭಾಗವಹಿಸುತ್ತಿರುವವರಲ್ಲಿ ಆರ್.ಎಸ್.ಎಸ್. ಸದಸ್ಯರು, ನಕ್ಸಲೀಯರು ಮತ್ತು ಆನಂದಮಾರ್ಗಿಗಳು ಇದ್ದಾರೆಂದರು.

• ಎಷ್ಟು ಗರ್ವ?

ಬೆಂಗಳೂರು, ಆ. 11– ಈ ಅಧಿಕಾರಿಗೆ ಎಷ್ಟು ಗರ್ವ?

ಬುಧವಾರ ವಿಧಾನ ಪರಿಷತ್ತಿನಲ್ಲಿ ಈ ಕುಪಿತ ಮಾತು ಹಾಗೂ ಅದೇ ಧಾಟಿಯಲ್ಲಿ ಟೀಕೆ ಬಂದದ್ದು ರಾಜ್ಯದ ಎಕ್ಸೈಜ್ ಕಮಿಷನರ್ ಬಗ್ಗೆ. ಈ ಅಧಿಕಾರಿಯ ಬಗ್ಗೆ ಎಲ್ಲ ಪಕ್ಷಗಳ ಸದಸ್ಯರಿಂದ ಖಂಡನೆ.

ಪುದುಚೇರಿಯಿಂದ ಮಾಹೆಗೆ ತೆರಳುತ್ತಿದ್ದ ಮದ್ಯವಿದ್ದ ಲಾರಿಯೊಂದನ್ನು ಹಿಡಿದ ಪ್ರಕರಣ ಇದು. ಅಬ್ಕಾರಿ ಕಮಿಷನರ್ ಅವರ ವರ್ತನೆ ಕುರಿತು ರಾಜ್ಯದ ಹೈಕೋರ್ಟ್ ಸಹ ಟೀಕಿಸಿತ್ತು.

ಬುಲೆಟ್ ಟ್ರೇನಿಗಿಂತ, ಜೆಟ್ ವಿಮಾನಕ್ಕಿಂತ ವೇಗವಾಗಿ ಚಲಿಸುವ ವಾಹನ ಬೇಕೆ?

ಮತ್ತೆ ಮುನ್ನೆಲೆಗೆ ಬಂತು ‘ಹೈಪರ್‌ಲೂಪ್’



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಇದು ಹೈ ಸ್ಪೀಡ್ ಸುದ್ದಿಯ ಸಮಯ. ಬೊಲಿವಿಯಾ ದೇಶದಲ್ಲಿ ಕಾಳ್ಗಿಚ್ಚು ಅತಿವೇಗದಲ್ಲಿ ಹಬ್ಬುತ್ತ 38 ಲಕ್ಷ ಹೆಕ್ಟೇರ್‌ಗಳಷ್ಟು ದಟ್ಟ ಕಾಡನ್ನು ಬೂದಿ ಮಾಡುತ್ತಿದೆ. ತುರ್ತು ಪರಿಸ್ಥಿತಿಯ ಘೋಷಣೆ ಮಾಡಲಾಗಿದೆ. ಅಕ್ಕಪಕ್ಕದ ಪೆರು, ಅರ್ಜೆಂಟೀನಾ, ಬ್ರೆಝಿಲ್ ದೇಶಗಳಲ್ಲಿ ಆತಂಕದ ಹೊಗೆ ಹಬ್ಬಿಸುತ್ತಿದೆ. ಅದು ದಕ್ಷಿಣ ಅಮೆರಿಕದ ಸುದ್ದಿಯಾದರೆ ಇತ್ತ ಪೂರ್ವ ಏಷ್ಯಾದಲ್ಲಿ ‘ಯಾಗಿ’ ಹೆಸರಿನ ಚಂಡಮಾರುತ (ಸೂಪರ್ ಟೈಫೂನ್) ಫಿಲಿಪ್ಪೀನ್ಸ್ ದೇಶವನ್ನು ಚೆಂಡಾಡಿ ಹಾಂಗ್‌ಕಾಂಗ್/ ಚೀನಾದ ಭೂಭಾಗವನ್ನು ಪತರಗುಟ್ಟಿಸಿ ಈಗ ವಿಯೆಟ್ನಾಂ ದೇಶಕ್ಕೆ ದಾಳಿ ಇಟ್ಟಿದೆ. ಹಿಂದಿನ ಎಲ್ಲ ಸ್ಪೀಡ್ ದಾಖಲೆಗಳನ್ನು ಮುರಿಯುತ್ತ, ಚಲಿಸುವ ಬಸ್‌ಗಳನ್ನೂ ಸೇತುವೆಗಳನ್ನೂ ಪಲ್ಟಿ ಹೊಡೆಸುತ್ತ, ಉದ್ಯಮ ಸಂಕೀರ್ಣಗಳನ್ನು ನೆಲಸಮ ಮಾಡುತ್ತಿದೆ. ಅದರ ಜೊತೆಜೊತೆಗೇ ಬಂದ ಅಬ್ಬರದ ಮಳೆಯಿಂದ ನೆರೆಹಾವಳಿ, ಭೂಕುಸಿತಗಳಿಂದ 160ಕ್ಕೂ ಹೆಚ್ಚು ಜನರು ಬಲಿಯಾಗಿದ್ದಾರೆ.

ಯುರೋಪ್‌ನಲ್ಲಿ ಇನ್ನೊಂದು ಬಗೆಯ ಹೈಸ್ಪೀಡ್ ಸುದ್ದಿ ಮಾಡುತ್ತಿದೆ: ‘ಹೈಪರ್‌ಲೂಪ್’ ಹೆಸರಿನ ಅತಿವೇಗದ ಸಂಚಾರ ಸಾಧನಕ್ಕೆ ಈ ವಾರ ಪ್ರಾಯೋಗಿಕ ಚಾಲನೆ ನೀಡಲಾಗುತ್ತಿದೆ. ನೆಲದ ಮೇಲೆ ಉದ್ದಕ್ಕೆ ಮಲಗಿಸಿದ ಕೊಳವೆಯಲ್ಲಿ ರಾಕೆಟ್‌ನಂಥ ಸಾಧನವನ್ನು ರಾಕೆಟ್ ವೇಗದಲ್ಲಿ ಓಡಿಸುವ ಪ್ರಯೋಗ ಇದು. ‘ಐದನೇ ಮಾದರಿಯ ಸಂಚಾರ ಸಾಧನ’ ಎಂದು ಇದನ್ನು ಬಣ್ಣಿಸಲಾಗುತ್ತಿದೆ. ಇದುವರೆಗೆ ಹಡಗು, ರಸ್ತೆಸಾರಿಗೆ, ರೈಲು ಮತ್ತು ವಿಮಾನ ಎಂಬ ನಾಲ್ಕು ವಿಧಗಳಲ್ಲಿ ನಾವೆಲ್ಲ ಸಂಚರಿಸುತ್ತಿದ್ದೆವು. ಈ ಹೊಸ ವಿಧಾನ 2030ರ ವೇಳೆಗೆ ಸಿದ್ಧವಾದರೆ ಯುರೋಪ್‌ನ ವಿವಿಧ ನಗರಗಳ ಮಧ್ಯೆ ಜನರು ಜೆಟ್ ವಿಮಾನಕ್ಕಿಂತ ಫಾಸ್ಟಾಗಿ ಓಡಾಡಬಹುದು.

ಜಗತ್ತಿನ ಅತಿಶ್ರೀಮಂತ ವ್ಯಕ್ತಿ ಎನಿಸಿದ ಇಲಾನ್ ಮಸ್ಕ್ ಎಂಬ ಉದ್ಯಮಿ (ಆತನ ಸಂಪತ್ತು ಇಂದು ₹ 20,450 ಶತಕೋಟಿ) ಹತ್ತು ವರ್ಷಗಳ ಹಿಂದೆ ಇಂಥದ್ದೊಂದು ವಾಹನದ ಚಿತ್ರಣವನ್ನು ಮುಂದಿಟ್ಟಿದ್ದ. ಅದರ ತತ್ತ್ವ ಸಾಕಷ್ಟು ಸರಳವಾಗಿದೆ. ಒಂದು ಕೊಳವೆಯಲ್ಲಿನ ಬಹುತೇಕ ಗಾಳಿಯನ್ನೆಲ್ಲ ತೆಗೆದುಬಿಡಬೇಕು. ಅದರೊಳಕ್ಕೆ ರಾಕೆಟ್ ಓಡಿದರೆ ಅದಕ್ಕೆ ಗಾಳಿಯ ಘರ್ಷಣೆ ಇರುವುದಿಲ್ಲ. ಕೊಳವೆಯ ಒಳಗಿನ ಹಳಿಯ ಮೇಲೆ ಆ ರಾಕೆಟ್ ಚಲಿಸಬಾರದು. ಘರ್ಷಣೆ ಅಲ್ಲೂ ಇರುತ್ತದಲ್ಲ? ಹಳಿಗಿಂತ ಕೊಂಚ, ಅಂದರೆ ಬೆರಳಷ್ಟು ಎತ್ತರದಲ್ಲಿ ಅದು ಚಲಿಸಬೇಕು. ಈ ತಂತ್ರಕ್ಕೆ ಮ್ಯಾಗ್ನೆಟಿಕ್ ಲೆವಿಟೇಶನ್ ಎನ್ನುತ್ತಾರೆ. ಅಯಸ್ಕಾಂತಗಳ ಒಂದೇ ಧ್ರುವವನ್ನು ಒಟ್ಟಿಗೆ ತರಲು ಸಾಧ್ಯವಿಲ್ಲವಲ್ಲ. ಹೈಪರ್‌ಲೂಪ್‌ನ ಕೊಳವೆ ಮತ್ತು ಅದರೊಳಗಿನ ರಾಕೆಟ್ ನಡುವೆ ಅಂಥದ್ದೇ ಸಂಬಂಧ ಇರುತ್ತದೆ. ಕರೆಂಟ್ ಕೊಟ್ಟಾಗ ಅವೆರಡರ ನಡುವೆ ಒಂದರ್ಧ ಸೆಂಟಿಮೀಟರ್ ಅಂತರ ಏರ್ಪಡುತ್ತದೆ. ಈಗ ರಾಕೆಟ್‌ಗೆ ನೂಕುಬಲವನ್ನು ಕೊಟ್ಟರೆ ಅದು ಕೊಳವೆಯಲ್ಲಿ ಯಾವುದೇ ಘರ್ಷಣೆ ಇಲ್ಲದೇ ಬುಲೆಟ್ ಟ್ರೇನಿಗಿಂತ, ವಿಮಾನಕ್ಕಿಂತ ಹೆಚ್ಚಿನ, ಅಂದರೆ ಗಂಟೆಗೆ ಸಾವಿರ ಕಿಲೊಮೀಟರ್ ವೇಗದಲ್ಲಿ ಆ ಬಂಡಿಯನ್ನು ಓಡಿಸಬಹುದು.

ಲೆಕ್ಕಾಚಾರದ ಪ್ರಕಾರ, ಇಂಥದ್ದೊಂದು ಕೊಳವೆಯನ್ನು ಬೆಂಗಳೂರು- ಮೈಸೂರಿನ ನಡುವೆ ಸ್ಥಾಪಿಸಿದರೆ ಅದರೊಳಗಿನ ವಾಹನದಲ್ಲಿ ಕೂತು ನೀವು ಕೇವಲ ಏಳೆಂಟು ನಿಮಿಷಗಳಲ್ಲಿ ಇಲ್ಲಿಂದ ಅಲ್ಲಿಗೆ ಧಾವಿಸಬಹುದು. ಕಣ್ಣೆವೆ ಮುಚ್ಚಿ ತೂಕಡಿಸಲೂ ಸಮಯ ಇರುವುದಿಲ್ಲ.

ಕನಸುಗಾರ ಇಲಾನ್ ಮಸ್ಕ್ ಹತ್ತು ವರ್ಷಗಳ ಹಿಂದೆ ಅಲ್ಲೆಲ್ಲೋ ತೂಕಡಿಸುತ್ತಿದ್ದಾಗ ಇಂಥದ್ದೇ ಒಂದು ಯೋಚನೆ ಬಂದಿರಬೇಕು. ಕನಸಿನ ಸಾಕ್ಷಾತ್ಕಾರಕ್ಕೆ ಬೇಕಾದ ಧನಬಲ, ತಾಂತ್ರಿಕ ಜ್ಞಾನ, ಬಿಸಿನೆಸ್ ನೈಪುಣ್ಯ ಎಲ್ಲವೂ ಮೇಳವಿಸಿರುವ ಆತ ಅಮೆರಿಕದ ನೆವಾಡಾ ಮರುಭೂಮಿಯಲ್ಲಿ ಎಂಟು ವರ್ಷಗಳ ಹಿಂದೆ ಹೈಪರ್‌ಲೂಪ್ ಕೊಳವೆಯನ್ನು ಸ್ಥಾಪಿಸಿಯೂ ಆಗಿತ್ತು. ಈ ಕ್ರಾಂತಿಕಾರ ಸಂಚಾರ ಸಾಧನದ ಬಗ್ಗೆ ಎಲ್ಲೆಡೆ ಚರ್ಚೆ ನಡೆದು, ಬಂಡವಾಳ ಹೂಡಲು ಯಾರೆಲ್ಲ ಆಸಕ್ತಿ ತೋರಿಸಿದಾಗ ಮಸ್ಕ್‌ಗೆ ಬೇರೇನೊ ಐಡಿಯಾ ಹೊಳೆದಿರಬೇಕು. ತನ್ನ ಕಂಪನಿಯನ್ನು ರಿಚರ್ಡ್ ಬ್ರಾನ್ಸನ್ ಎಂಬ ಇನ್ನೊಬ್ಬ ಸಾಹಸಿ ಉದ್ಯಮಿಗೆ ಮಾರಿಬಿಟ್ಟ. ‘ಹೈಪರ್‌ಲೂಪ್ 1’ ಹೆಸರಿನಲ್ಲಿ ಹೊಸ ಕಂಪನಿ ಅದೇ ತಾಣದಲ್ಲಿ ಪ್ರಯೋಗವನ್ನು ಮುಂದುವರಿಸಿತು. ಅದರ ಆಗಿನ ಪ್ರಚಾರ ಭರಾಟೆ ಎಷ್ಟಿತ್ತೆಂದರೆ, ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ದೇವೇಂದ್ರ ಫಡಣವೀಸ್ ತಾನೂ ಮುಂಬೈ- ಪುಣೆ ಮಧ್ಯೆ ಅಂಥದ್ದೇ ಮಿಂಚಿನ ಮಾರ್ಗವನ್ನು ಹಾಕಿಸುತ್ತೇನೆಂದು 2018ರಲ್ಲಿ ಭೂಮಿ ಖರೀದಿಗೂ ವ್ಯವಸ್ಥೆ ಮಾಡಿ, ನೇರವಾಗಿ ನೆವಾಡಾಕ್ಕೆ ಖುದ್ದಾಗಿ ಹೋಗಿ ನೋಡಿಕೊಂಡು ಬಂದಿದ್ದೂ ಆಯಿತು. (‘ನಾಲ್ಕು ಗಂಟೆಗಳ ಮುಂಬೈ- ಪುಣೆ ದೂರವನ್ನು ಕೇವಲ 25 ನಿಮಿಷಗಳಲ್ಲಿ ಪೂರೈಸುವ ವ್ಯವಸ್ಥೆ ಮಾಡುತ್ತೇವೆ, ಜಗತ್ತಿನ ಮೊದಲ ಹೈಪರ್‌ಲೂಪ್ ಸಂಚಾರ ವ್ಯವಸ್ಥೆ ನಮ್ಮಲ್ಲೇ ಆಗಲಿದೆ’ ಎಂಬುದು ಆಗ ಅವರು ನೀಡಿದ ಭರವಸೆಯಾಗಿತ್ತು).

ಅದೇ ವೇಳೆಗೆ ಅಬುಧಾಬಿ-ದುಬೈ ಮಧ್ಯೆ ತಾನೂ ಅಂಥ ಮಾಯಾಮಾರ್ಗವನ್ನು ಆರಂಭಿಸುತ್ತೇನೆ ಎಂದು ಯು.ಎ.ಇ. ತೈಲದೊರೆಯೂ ಉತ್ಸಾಹ ತೋರಿದ್ದರಿಂದ ಫಡಣವೀಸ್ ತುಸು ವೇಗವಾಗಿಯೇ ನೆವಾಡಾ ಮರುಭೂಮಿಗೆ ಧಾವಿಸಿದರೆಂದು ಕಾಣುತ್ತದೆ. ಅಲ್ಲಿ ಅರ್ಧ ಕಿಲೊಮೀಟರ್ ಉದ್ದದ ಕೊಳವೆಯಲ್ಲಿ ಇಟ್ಟ ವಾಹನ ಗಂಟೆಗೆ 400 ಕಿಲೊಮೀಟರ್ ಓಡಿದ್ದನ್ನು ನೋಡಿದ್ದೂ ಆಯಿತು. ಕೊಳವೆಯ ಉದ್ದ ಇನ್ನೂ ನೂರಿನ್ನೂರು ಕಿಲೊಮೀಟರ್ ಇದ್ದರೆ ಹೈಪರ್‌ಲೂಪ್ ವೇಗವನ್ನು ಇಮ್ಮಡಿ ಮಾಡಬಹುದು ಎಂಬುದು ವರ್ಜಿನ್ ಕಂಪನಿಯ ಭರವಸೆಯಾಗಿತ್ತು. ರಸ್ತೆ, ರೈಲು, ವಿಮಾನಗಳ ಸಂಚಾರಕ್ಕೆ ಹೋಲಿಸಿದರೆ ಇದು ಕಡಿಮೆ ವೆಚ್ಚದ್ದೆಂದೂ ಸೌರ ವಿದ್ಯುತ್‌ನಿಂದ ಕೂಡ ಇದಕ್ಕೆ ಚಾಲನೆ ನೀಡಬಹುದೆಂದೂ ಹೇಳಲಾಗಿತ್ತು.

ಹಾಗಿದ್ದರೆ ಆ ಭರವಸೆ ಈಡೇರಿತೆ? ಹೈಪರ್‌ಲೂಪ್ ಯೋಜನೆ ಫಡಣವೀಸ್ ಅವರ ರಾಜಕೀಯ ನಡೆಯಂತೆಯೇ ಏರಿಳಿತ ಕಂಡಿತು (ಫಡಣವೀಸ್ 2019ರಲ್ಲಿ ಮುಖ್ಯಮಂತ್ರಿಯಾಗಿ ಮುಂದುವರಿಯಲು ಹೋಗಿ, ಶಿವಸೇನೆ ಕೈಕೊಟ್ಟಿದ್ದರಿಂದ ಎನ್‌ಸಿಪಿ ಕೈಹಿಡಿದು ನಾಟಕೀಯವಾಗಿ ನಸುಕಿನಲ್ಲಿ ಪ್ರತಿಜ್ಞಾವಿಧಿಯನ್ನು ಕೈಗೊಂಡು, ಮೂರೇ ದಿನ ಆಳ್ವಿಕೆ ನಡೆಸಿ ಮುಗ್ಗರಿಸಿ, ಹೇಗೋ ಎದ್ದು ಈಗ ಉಪಮುಖ್ಯಮಂತ್ರಿ ಆಗಿದ್ದಾರಲ್ಲ?). ‘ಹೈಪರ್‌ಲೂಪ್ 1’ ಕಂಪನಿ ಏನೇನೋ ಮಾಡಿ ಈ ಯೋಜನೆಯನ್ನು ವಿವಿಧ ದೇಶಗಳಲ್ಲಿ ಜಾರಿಗೆ ತರಲು ಗುದ್ದಾಡಿ ಎಲ್ಲೂ ಯಾವುದೂ ಕೈಗೆ ಹತ್ತದೆ, ಕಳೆದ ವರ್ಷ ತನ್ನನ್ನು ತಾನೇ ದಿವಾಳಿ ಎಂದು ಘೋಷಿಸಿಕೊಂಡಿತು. ಕೊರೊನಾ ಕಾರಣವೆಂಬ ಸಬೂಬು ಕೆಲಮಟ್ಟಿಗೆ ನಿಜವಿರಲೂಬಹುದು. ಆದರೆ ಅಮೆರಿಕ, ಕೆನಡಾ, ಚೀನಾ ಮತ್ತು ಯುರೋಪ್ ದೇಶಗಳಲ್ಲಿ ಹೊಸ ಕಂಪನಿಗಳು ಹಣ ಹೂಡುತ್ತಿವೆ.

ಇದೀಗ ಹಾರ್ಡ್ಟ್ ಹೈಪರ್‌ಲೂಪ್ ಹೆಸರಿನ ಡಚ್ ಕಂಪನಿ ಮೊನ್ನೆ ಹೊಚ್ಚ ಹೊಸ ಕೊಳವೆ ಮಾರ್ಗಗಳನ್ನು ಜೋಡಿಸುತ್ತಿರುವ ಫೋಟೊಗಳನ್ನು ಬಿತ್ತರಿಸಿದೆ. ನೆದರ್‌ಲ್ಯಾಂಡ್ಸ್‌ನ ವೀಂಧಾಮ್ ನಗರದ ಹೊರವಲಯದಲ್ಲಿ ಜೋಡಿ ಕೊಳವೆಯಲ್ಲಿ ವಾಹನ ರಾಕೆಟ್ ವೇಗದಲ್ಲಿ ಚಲಿಸಿತು ಎಂದು ಇದೀಗ ವರದಿ ಬಂದಿದೆ. ವಿಶೇಷ ಏನೆಂದರೆ, ಆ ಕೊಳವೆಗಳ ನಿರ್ಮಾಣ ನಮ್ಮ ಟಾಟಾ ಸ್ಟೀಲ್ ಕಂಪನಿಯದ್ದಾಗಿದೆ. 2030ರ ವೇಳೆಗೆ ಫ್ರಾನ್ಸ್, ಇಟಲಿ, ಸ್ವಿಟ್ಜರ್ಲೆಂಡ್ ದೇಶಗಳಲ್ಲಿ ಹೈಪರ್‌ಲೂಪ್ ಸಂಚಾರ ಆರಂಭವಾಗಲಿದೆ ಎಂದು ಕಂಪನಿ ಹೇಳಿದೆ.

ವೇಗ, ಇನ್ನೂ ವೇಗ, ಮತ್ತೂ ವೇಗ ಎಂಬುದು ಎಲ್ಲರಿಗೂ ಥ್ರಿಲ್ ಕೊಡುತ್ತದೆ ನಿಜ. ಅದರಿಂದಾಗುವ ದುರಂತಗಳ ಸುದ್ದಿ ಮತ್ತೆ ಮತ್ತೆ ಸಿಗುತ್ತಲೇ ಇದೆಯಾದರೂ ಯಾರಿಗೂ ಆ ದಿಸೆಯಲ್ಲಿ ಚಿಂತಿಸುವ ವ್ಯವಧಾನ ಇದ್ದಂತಿಲ್ಲ. ಈಗಿನ ಕಾಲದ ವಿಶೇಷ ಏನೆಂದರೆ, ಮನುಷ್ಯರಿಗೆ ಪೈಪೋಟಿ ನೀಡುವಂತೆ ಗಾಳಿ, ಮಳೆ, ಸೆಕೆ, ಬೆಂಕಿ ಎಲ್ಲವೂ ವೇಗವನ್ನು ಹೆಚ್ಚಿಸಿಕೊಂಡಂತಿವೆ. ಜಾಗತಿಕ ತಾಪಮಾನವನ್ನು ಅಷ್ಟರಮಟ್ಟಿಗೆ ನಾವು ಏರಿಸಿ ಕೂತಿದ್ದೇವೆ.

ವೇಗದ ಚಲನೆಯೇ ಆಧುನಿಕ ನಾಗರಿಕತೆಗೆ ಮಹಾನ್ ವ್ಯಸನವಾಗಿದೆ ಎಂದು ಅನೇಕ ದಾರ್ಶನಿಕರು ಹೇಳುತ್ತಲೇ ಬಂದಿದ್ದಾರೆ. ಎಲ್ಲರಿಗಿಂತ ಸೊಗಸಾದ ಹೇಳಿಕೆಯನ್ನು ಮಹಾತ್ಮ ಗಾಂಧಿ ಕೊಟ್ಟಿದ್ದಾರೆ: ‘ನೀವು ತಪ್ಪುದಾರಿಯಲ್ಲಿ ಹೋಗುತ್ತಿದ್ದರೆ, ವೇಗ ಹೆಚ್ಚಾದಷ್ಟೂ ನಷ್ಟವೂ ಹೆಚ್ಚುತ್ತದೆ’.



ಚುರುಮುರಿ



ನೆಟ್‌ವರ್ಕಿಂಗ್ ಸಿ.ಎಂ!

• ಗುರು ಪಿ.ಎಸ್.

‘ಹೊರಗೆ ಬನ್ರೀ... ಮೂವರು ಎಮ್ಮೆಲ್ಲೆಗಳು ನಿಮಗಾಗಿ ಕಾಯ್ತಿದ್ದಾರೆ’ ಕೂಗಿದಳು ಹೆಂಡತಿ.

‘ಬಂದೆ’ ಎನ್ನುತ್ತಾ ಹಾಲ್‌ಗೆ ಬಂದೆ.

‘ಏನ್ ಸರ್, ನಮ್ಮನ್ನು ಕರೆಸಿದ ಉದ್ದೇಶ’ ಕೇಳಿದರು ಶಾಸಕರು.

‘ನಿಮಗೆ ಗೊತ್ತಿಲ್ಲದ್ದು ಏನಿದೆ ಇವರೇ, ಮುಂದಿನ ಮುಖ್ಯಮಂತ್ರಿ ಯಾರಾಗಬೇಕು ಅನ್ನೋ ಚರ್ಚೆ ನಡೆಯುತ್ತಿದೆಯಲ್ವ. ಸದ್ಯಕ್ಕೆ ಆ ಹುದ್ದೆ ಖಾಲಿ ಇಲ್ಲ ಅಂತ ನಂಗೊತ್ತು. ಆದರೂ, ಒಂದು ವೇಳೆ ಖಾಲಿಯಾದರೆ ನಾನೇ ಏಕೆ ಸಿ.ಎಂ. ಆಗಬಾರದು ಅನಿಸಿತು. ಅದಕ್ಕೆ ನಿಮ್ಮ ಅಭಿಪ್ರಾಯ ಕೇಳಲು ಕರೆದೆ’ ಎಂದೆ.

ನನ್ನನ್ನು ಅಡಿಯಿಂದ ಮುಡಿಯವರೆಗೂ ನೋಡಿದ ಶಾಸಕರು, ‘ಸರ್, ನೀವಾ?’ ಎಂದರು!

ಶಾಸಕರ ಪ್ರತಿಕ್ರಿಯೆ ನೋಡಿ ನನಗೆ ಇರುಸುಮುರುಸು ಎನಿಸಿದರೂ ಮುಂದುವರಿದು ಹೇಳಿದೆ, ‘ಹ್ಞೂಂ... ಯಾಕಾಗಬಾರದು?’

‘ಆಗಬಹುದು ಸರ್. ಆದರೆ, ನಾವೊಂದು ಮೂವರು ಶಾಸಕರು ಬಿಟ್ಟರೆ ಯಾರೂ ನಿಮ್ಮ ಪರವಾಗಿ ಇಲ್ಲ. ಎಷ್ಟೋ ಎಮ್ಮೆಲ್ಲೆಗಳಿಗೆ ನಿಮ್ಮ ಹೆಸರೂ ಗೊತ್ತಿಲ್ಲ, ಅಂಥದ್ದರಲ್ಲಿ...’ ಸ್ವಲ್ಪ ಹಿಂಜರಿಕೆಯಿಂದಲೇ ಹೇಳಿದರು ಬಂದವರಲ್ಲಿ ಸ್ವಲ್ಪ ಹಿರಿಯರಾಗಿದ್ದ ಶಾಸಕರೊಬ್ಬರು.

‘ನೋಡಿ ಇವರೇ, ನಾನು ರಾಜಕೀಯಕ್ಕೆ ಬರುವ ಮೊದಲು ನೆಟ್‌ವರ್ಕಿಂಗ್ ಜಾಬ್‌ನಲ್ಲಿದ್ದೆ’

‘ಹೌದು, ಅದಕ್ಕೇನೀಗ?’

‘ಅದೇ ಸ್ಟ್ರಾಟಜಿಯನ್ನು ಇಲ್ಲಿ ಫಾಲೋ ಮಾಡೋಣ. ಅಂದರೆ, ನೀವು ಮೂವರು ಶಾಸಕರು, ಒಬ್ಬೊಬ್ಬರು ಮೂವರು ಶಾಸಕರನ್ನು ನನ್ನ ಬಳಿ ಕರೆದುಕೊಂಡು ಬನ್ನಿ. ಆ 9 ಜನ ಎಮ್ಮೆಲ್ಲೆಗಳು ಮತ್ತೆ 9 ಎಮ್ಮೆಲ್ಲೆಗಳನ್ನು ಕರೆದುಕೊಂಡು ಬರಲಿ. ಆಗ ನನ್ನ ನೆಟ್‌ವರ್ಕ್ ದೊಡ್ಡದಾಗುತ್ತೆ. ಹೆಚ್ಚು ಶಾಸಕರ ಬೆಂಬಲ ಹೊಂದಿರುವವರನ್ನೇ ಸಿ.ಎಂ. ಮಾಡಬೇಕು ತಾನೆ?’ ಎಂದು ಖುಷಿಯಲ್ಲಿ ಜೋರಾಗಿ ನಗುತ್ತಿರುವಾಗಲೇ ಮುಖದ ಮೇಲೆ ನೀರು ಬಿತ್ತು!

‘ಏಳ್ರೀ ಸಾಕು, ಯಾವಾಗಲೂ ಬಡಬಡ ಸ್ತೀರ’ ಎಂದು ಜೋರು ಮಾಡಿದ ಹೆಂಡತಿ, ‘ಏನ್ ಕನಸು ಕಾಣ್ತಿದ್ರಿ’ ಎಂದು ಕೇಳಿದಳು.

‘ಸಿ.ಎಂ ಆಗಿದ್ದೆ ಕಣೆ’ ಅಂದೆ.

‘ಸಿಯೆಮ್ಮಾ?!’

‘ಹ್ಞೂಂ, ಕಾಮನ್ ಮ್ಯಾನ್’.

ಸಂಗತ

ಭಾಷೆ ಭಿನ್ನ: ಕಲಿಯದಿದ್ದರೇನು ಚೆನ್ನ?

ಕೆಲವು ಶಾಲೆಗಳಲ್ಲಿ ಬಹುಭಾಷಾ ಸನ್ನಿವೇಶ ಸಾಮಾನ್ಯವಾಗಿರುವುದರಿಂದ, ತರಗತಿಯೊಳಗಿನ ಭಾಷಾ ತೊಡಕಿಗೆ ಸಾಂಸ್ಥಿಕ ಪರಿಹಾರ ಕಂಡುಕೊಳ್ಳುವ ಪ್ರಯತ್ನಗಳಾಗಬೇಕಿದೆ

• ಎಚ್.ಬಿ.ಚಂದ್ರಶೇಖರ್

ಪ್ರಾಥಮಿಕ ಶಾಲೆಗಳ ಭಾಷಾ ಶಿಕ್ಷಕರ ಸಮಾಲೋಚನಾ ಸಭೆಯಲ್ಲಿ ಶಿಕ್ಷಕರೊಂದಿಗೆ ಸಂವಾದಿಸುತ್ತಿದ್ದಾಗ ಕೆಲವು ಕುತೂಹಲಕಾರಿ ಅಂಶಗಳು ಹೊರಬಂದವು. ಮನೆಯಲ್ಲಿ ಹಿಂದಿ ಮಾತನಾಡುವ ತಮ್ಮ ವಿದ್ಯಾರ್ಥಿಗೆ ಇಂಗ್ಲಿಷ್ ಭಾಷೆಯ ಲಿಪಿ ಬಳಸಿ ಕನ್ನಡ ಕಲಿಸುವುದರಲ್ಲಿ ಯಶಸ್ವಿಯಾಗಿದ್ದನ್ನು ಶಿಕ್ಷಕರೊಬ್ಬರು ಹಂಚಿಕೊಂಡರು. ಬಿಹಾರಿ ಮಾತನಾಡುವ ವಿದ್ಯಾರ್ಥಿಗಳಿಗೆ ಹಿಂದಿಯಲ್ಲಿ ಮಾತನಾಡುತ್ತಾ ಕನ್ನಡ ಕಲಿಸುವ ಪ್ರಯತ್ನದಲ್ಲಿ ಯಶಸ್ಸು ಸಿಕ್ಕ ಕುರಿತು ಇನ್ನೊಬ್ಬ ಶಿಕ್ಷಕರು ವಿವರಿಸಿದರು.

ಇಂದಿನ ತರಗತಿಗಳು ಶಿಕ್ಷಕರಿಗೆ ಸವಾಲಿನಿಂದ ಕೂಡಿರುತ್ತವೆ. ಪಠ್ಯ ವಿಷಯವನ್ನು ಪೂರ್ಣಗೊಳಿಸಿದರಷ್ಟೇ ಸಾಕಾಗದೆ ಮಕ್ಕಳು ಏಕೆ ಮತ್ತು ಹೇಗೆ ಕಲಿಯುತ್ತಿದ್ದಾರೆ ಅಥವಾ ಕಲಿಯುತ್ತಿಲ್ಲ ಎಂಬ ಕುರಿತು ನಿರಂತರ ಪರಾಮರ್ಶೆ ಮಾಡಬೇಕಾಗುತ್ತದೆ. ಶಿಕ್ಷಕರು ಈ ದಿಸೆಯಲ್ಲಿ ವಿದ್ಯಾರ್ಥಿಗಳ ಕಲಿಕೆಯ ಕುರಿತು ಕುತೂಹಲಿಗಳು, ಚಿಂತನಶೀಲರು, ಅನ್ವೇಷಣಾ ಪ್ರವೃತ್ತಿಯವರು ಆಗಿರಬೇಕಾಗುತ್ತದೆ.

ಉತ್ತರ ಕರ್ನಾಟಕದ ಜಿಲ್ಲೆಯೊಂದರ ಚಿಕ್ಕ ಗ್ರಾಮದ ಶಾಲೆಯ ಶಿಕ್ಷಕಿಯೊಬ್ಬರ ಅನುಭವಕಥನ ಪ್ರಸ್ತುತವಾದುದು. ಲಂಬಾಣಿ ಭಾಷೆ ಮಾತನಾಡುವ ಊರಿನಲ್ಲಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸಿದ ಹೊಸದರಲ್ಲಿ ಅವರು ಮಕ್ಕಳನ್ನು ಸೆಳೆಯಲು ಕತೆ ಹೇಳುತ್ತಿದ್ದರು. ಆದರೂ ಮಕ್ಕಳಿಂದ ಸ್ಪಂದನೆ ದೊರೆಯುತ್ತಿರಲಿಲ್ಲ. ಇದರಿಂದ ಚಿಂತಿತರಾಗಿ ಕಾರಣ ತಿಳಿಯಲು ಮುಂದಾಗುತ್ತಾರೆ. ಊರಿನಲ್ಲಿ ಕನ್ನಡ ಮತ್ತು ಲಂಬಾಣಿ ಭಾಷೆ ಎರಡನ್ನೂ ಬಲ್ಲ ಒಬ್ಬ ಬಾಲಕಿಯ ಸಹಾಯ ಪಡೆಯುತ್ತಾರೆ. ತಾವು ನಿರೂಪಿಸಿದ ಕತೆ ಮಕ್ಕಳಿಗೆ ಅರ್ಥವಾಗಿಲ್ಲ ಎಂಬುದು ಆಗ ಶಿಕ್ಷಕಿಗೆ ತಿಳಿಯುತ್ತದೆ. ಅವರು ಮಕ್ಕಳು ಹೆಚ್ಚು ಮಾತನಾಡುವ ಕೆಲವು ಲಂಬಾಣಿ ಪದಗಳನ್ನು ಕಲಿತು, ಅವುಗಳನ್ನು ಕನ್ನಡ ಭಾಷೆಯ ಸರಳ ಪದ ಮತ್ತು ಚಿತ್ರಗಳ ಜೊತೆ ಸೇರಿಸಿ, ಪಾಠ ಮಾಡಿ ಯಶಸ್ಸು ಗಳಿಸುತ್ತಾರೆ. ಈ ರೀತಿ ಊರಿನ ಜನರ ಜೊತೆ ಬೆರೆತು ಅವರ ಸಂಸ್ಕೃತಿಯನ್ನು ಅರ್ಥ ಮಾಡಿಕೊಂಡು, ಅದಕ್ಕೆ ತಕ್ಕಂತೆ ಕಾರ್ಯನಿರ್ವಹಿಸಿದ ಶಿಕ್ಷಕರು ಯಶಸ್ವಿಯಾದ ಅನೇಕ ಉದಾಹರಣೆಗಳಿವೆ.

ಕೆಲ ವರ್ಷಗಳ ಹಿಂದೆ ತಮಿಳುನಾಡು ಹಾಗೂ ಆಂಧ್ರಪ್ರದೇಶ ರಾಜ್ಯಗಳ ಜನ ಬೆಂಗಳೂರು ಮತ್ತು ಇತರ ಪ್ರದೇಶಗಳಿಗೆ ಹೆಚ್ಚಾಗಿ ವಲಸೆ ಬರುತ್ತಿದ್ದರು. ಪ್ರಸ್ತುತ ಬಿಹಾರ, ಪಶ್ಚಿಮ ಬಂಗಾಳ, ಅಸ್ಸಾಂನಂತಹ ಉತ್ತರ ಭಾರತದ ರಾಜ್ಯಗಳಿಂದ ಬೆಂಗಳೂರಿಗೆ ವಲಸೆ ಬರುತ್ತಿದ್ದಾರೆ. ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಹಲವೆಡೆ ಪಶ್ಚಿಮ ಬಂಗಾಳದಿಂದ ಅನೇಕ ಕುಟುಂಬಗಳು ಬಂದಿರುವ ಬಗ್ಗೆ ತಿಳಿದುಬಂತು. ರಾಜ್ಯದ ಹಲವೆಡೆ ವಿವಿಧ ಭಾಷೆ ಮಾತನಾಡುವ ಜನರು ಉದ್ಯೋಗ ಅರಸಿ ವಲಸೆ ಬರುತ್ತಿದ್ದು, ಇವರಲ್ಲಿ ಹೆಚ್ಚಿನವರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲಿಸುತ್ತಿದ್ದಾರೆ.

ಬಹುಭಾಷಾ ಸನ್ನಿವೇಶ ಸಾಮಾನ್ಯ ಎನಿಸುವ ವಾತಾವರಣ ಕೆಲವು ಶಾಲೆಗಳಲ್ಲಿ ಸೃಷ್ಟಿಯಾಗಿದೆ. ತಮ್ಮ ಮನೆಭಾಷೆಯಲ್ಲದ ಶಿಕ್ಷಣ ಮಾಧ್ಯಮದಲ್ಲಿ ಕಲಿಯುವ ಸವಾಲು ಮಕ್ಕಳದ್ದಾದರೆ, ತಮಗೆ ತಿಳಿದಿರದ ಹಲವು ಭಾಷೆಗಳ ಮಕ್ಕಳು ತರಗತಿಯಲ್ಲಿದ್ದಾಗ ಕಲಿಸುವುದು ಹೇಗೆ ಎಂಬ ಸವಾಲನ್ನು ಶಿಕ್ಷಕರು ಎದುರಿಸುತ್ತಿದ್ದಾರೆ. ಈ ರೀತಿಯ ಭಾಷಾ ತೊಡಕಿಗೆ ಪರಿಹಾರವನ್ನು ಕೆಲವು ಉತ್ಸಾಹಿ ಶಿಕ್ಷಕರು ತಮ್ಮದೇ ಆದ ವಿಧಾನದಲ್ಲಿ ಕಂಡುಕೊಂಡು, ಗುಣಮಟ್ಟದ ಕಲಿಕೆಯನ್ನು ಸಾಧ್ಯವಾಗಿಸಿದ್ದಾರೆ. ತರಗತಿಯೊಳಗಿನ ಭಾಷಾ ತೊಡಕಿಗೆ ಸಾಂಸ್ಥಿಕ ಪರಿಹಾರ ಕಂಡುಕೊಳ್ಳುವೆಡೆ ಪ್ರಯತ್ನಗಳಾಗಬೇಕಿದೆ.

ರಾಜ್ಯದ ಹೊರಗಿನ ಪ್ರದೇಶಗಳಿಂದ ಬಂದ ಮಕ್ಕಳಿಗೆ ಮಾತ್ರ ಈ ಭಾಷಾ ತೊಡಕು ಸೀಮಿತವಾಗಿಲ್ಲ. ನಮ್ಮದೇ ರಾಜ್ಯದ ಬೀದರ್, ಕಲಬುರಗಿ, ರಾಯಚೂರು, ಧಾರವಾಡದಂತಹ ಜಿಲ್ಲೆಗಳಿಂದ ಬೆಂಗಳೂರು ಮತ್ತು ಇತರೆಡೆ ವಲಸೆ ಹೋಗಿರುವ ಕುಟುಂಬಗಳ ಮಕ್ಕಳು ಅಲ್ಲಿನ ಶಾಲೆಗಳಲ್ಲಿ ಕಲಿಯುವಾಗಲೂ ಇಂತಹದ್ದೇ ಸಮಸ್ಯೆಗಳನ್ನು ಎದುರಿಸುತ್ತಾರೆ. ಅವರು ತಮ್ಮ ಮನೆಯಲ್ಲಿ ಮಾತನಾಡುವ ಕನ್ನಡಕ್ಕೂ ಪಠ್ಯ-ಪುಸ್ತಕದಲ್ಲಿ ಮುದ್ರಿತವಾಗಿರುವ ಮತ್ತು ಶಿಕ್ಷಕರು ತರಗತಿಯಲ್ಲಿ ಮಾತನಾಡುವ ಕನ್ನಡ ಭಾಷೆಗೂ ವ್ಯತ್ಯಾಸವಿರುತ್ತದೆ. ಈ ರೀತಿಯ ವಿಭಿನ್ನ ಸಾಂಸ್ಕೃತಿಕ ಮತ್ತು ಭಾಷೆಯ ಹಿನ್ನೆಲೆಗಳಿಂದ ಬರುವ ಮಕ್ಕಳು ಶಾಲೆಯಲ್ಲಿ ಹೊಂದಿಕೊಳ್ಳಲು ಕಷ್ಟಪಡುತ್ತಾರೆ. ಹೀಗಾಗಿ ಇದು, ಮಕ್ಕಳು ಶಾಲೆಯನ್ನು ಬಿಡುವ ಸಮಸ್ಯೆ ಮತ್ತು ಕಲಿಕೆಯ ಹಿಂದುಳಿಯುವಿಕೆಗೆ ಕಾರಣವಾಗುತ್ತದೆ.



ಶಿಕ್ಷಕರು ಇಂತಹ ಸನ್ನಿವೇಶದಲ್ಲಿ ಮಕ್ಕಳು ಮಾತನಾಡುವ ಧಾರವಾಡ ಕನ್ನಡ, ರಾಯಚೂರು ಅಥವಾ ಬೀದರ್ ಕನ್ನಡದ ಕೆಲ ಪದಗಳನ್ನು ಮಕ್ಕಳೊಂದಿಗಿನ ತಮ್ಮ ಮಾತುಕತೆ, ಬೋಧನೆಯಲ್ಲಿ ಬಳಸಿದರೆ ಅವರು ತರಗತಿಗೆ ಹೊಂದಿಕೊಂಡು, ಪರಿಣಾಮಕಾರಿಯಾಗಿ ಕಲಿಯುತ್ತಾರೆ.

ಬಹುಸಂಸ್ಕೃತಿ ಮತ್ತು ಬಹುಭಾಷಾ ಹಿನ್ನೆಲೆಗಳ ಮಕ್ಕಳಿರುವ ತರಗತಿಗಳಲ್ಲಿ ವಿಭಿನ್ನ ಸಂಸ್ಕೃತಿಗಳಿಂದ ಉಂಟಾಗುವ ತೊಡಕನ್ನು ಶಿಕ್ಷಕರು ಮುಕ್ತ ಮನಸ್ಸಿನಿಂದ ಒಪ್ಪಿಕೊಂಡು, ಚಲನಶೀಲವಾಗಿ ಮತ್ತು ನಾವೀನ್ಯದಿಂದ ಕಲಿಸಲು ಪ್ರಯತ್ನಿಸಬೇಕು. ಮಕ್ಕಳಾಡುವ ಭಾಷೆಯ ಕೆಲವು ಸಾಮಾನ್ಯ ಪದಗಳನ್ನು ಕಲಿತು, ಅವುಗಳನ್ನು ತರಗತಿಯಲ್ಲಿ ಬಳಸುತ್ತಾ ಆಹ್ಲಾದಕರ ಪರಿಸರವನ್ನು ಸೃಷ್ಟಿಸಬೇಕು. ಪೋಷಕರ ಜೊತೆ ಸಂಪರ್ಕ ಸಾಧಿಸಿ ಅವರ ಸಂಸ್ಕೃತಿಯನ್ನು ಅರಿಯುವ ಪ್ರಯತ್ನ ಮಾಡಿದಲ್ಲಿ, ಹೊಸ ಬೋಧನಾ ವಿಧಾನಗಳ ಕುರಿತು ಮಕ್ಕಳು ಚಿಂತಿಸಲು ಸಹಾಯವಾಗುತ್ತದೆ.

ಬಹುಭಾಷಾ ತರಗತಿಗಳನ್ನು ಸಮರ್ಥವಾಗಿ ಮುನ್ನಡೆಸಲು ನವೀನ ಕಾರ್ಯತಂತ್ರಗಳ ಅನುಷ್ಠಾನಕ್ಕೆ ಸಂಬಂಧಿಸಿ ಹೆಚ್ಚಿನ ಪರ್ಯಾಲೋಚನೆಯ ಅಗತ್ಯವಿದೆ.

ಲೇಖಕ: ಹಿರಿಯ ಉಪನ್ಯಾಸಕ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಬೆಂಗಳೂರು ನಗರ ಜಿಲ್ಲೆ

ವಾಚಕರ ವಾಣಿ

ಗುಂಡು ಲೂಟಿ: ಗುಂಟೂರು ‘ಮಾದರಿ’?

‘ಗುಂಡು’ ಕಂಡು ಮುಗಿಬಿದ್ದ ಭೂಪರು!’ ಎಂಬ ಶೀರ್ಷಿಕೆಯ, ಸುಧಾಕರ್ ಉದುಮುಲ ಅವರ ಟ್ವೀಟ್ (ಪ್ರ.ವಾ., ಸೆ. 11) ಓದಿ ನಗಬೇಕೋ ಅಳಬೇಕೋ ತಿಳಿಯದಾಯಿತು. ಆಂಧ್ರಪ್ರದೇಶದಲ್ಲಿ ಪೊಲೀಸರು ವಶಪಡಿಸಿಕೊಂಡಿದ್ದ ಮದ್ಯವನ್ನು ನಾಶಪಡಿಸಲು ಮುಂದಾದಾಗ, ಮದ್ಯಪ್ರಿಯರ ಗುಂಪು ಅಲ್ಲಿಗೆ ನುಗ್ಗಿ ಸಿಕ್ಕಷ್ಟನ್ನು ದೋಚಿಕೊಂಡು ಪರಾರಿಯಾಗಿದ್ದನ್ನು ಈ ಟ್ವೀಟ್ ವಿವರಿಸಿದೆ. ಸರ್ಕಾರವೇ ಪೋಷಿಸಿ ಪಾಲಿಸಿಕೊಂಡು ಬಂದಿರುವ ಈ ‘ಗುಂಡು’ ಪದ್ಧತಿ ದೇಶದ ಬಹುತೇಕ ಮಂದಿಯಲ್ಲಿ ಜನಪ್ರಿಯ ಪಾನೀಯ. ಇದಕ್ಕೆ ಆಂಧ್ರಪ್ರದೇಶದ ಈ ಗುಂಟೂರು ಪ್ರಸಂಗವೇ ಸಾಕ್ಷಿ. ಗುಂಟೂರು ಜಿಲ್ಲೆ ಮೆಣಸಿನಕಾಯಿಗೆ ಪ್ರಸಿದ್ಧಿ. ‘ಗುಂಟೂರು ಮೆಣಸಿನಕಾಯಿ’ ಎಂದೇ ಪ್ರಸಿದ್ಧಿಯಾಗಿರುವ ಈ ಜಿಲ್ಲೆ ಇನ್ನು ಮುಂದೆ ‘ಗುಂಟೂರು ಟೈಪ್ ಗುಂಡು ಲೂಟಿ’ ಎಂದು ಪ್ರಸಿದ್ಧಿಯಾದರೆ ಆಶ್ಚರ್ಯವಿಲ್ಲ. ಆದರೆ ಈ ಲೂಟಿಯಲ್ಲಿ ಸರ್ಕಾರಿ ಅಧಿಕಾರಿಗಳ ಕೈವಾಡವೂ ಇರಬಹುದೇ?

ರಮೇಶ್, ಬೆಂಗಳೂರು

ನಮ್ಮ ನಿರ್ಲಕ್ಷ್ಯದಿಂದ ಪ್ರಾಣಿಗಳಿಗೆ ಕಂಟಕ

ಮೂಕಪ್ರಾಣಿಗಳು ‘ಡಸ್ಟ್‌ಬಿನ್ ಸಿಂಡ್ರೋಮ್’ನಿಂದ ಸಾವಿಗೀಡಾಗುವುದಕ್ಕೆ ನಮ್ಮ ನಿರ್ಲಕ್ಷ್ಯ ಕಾರಣ. ಪ್ಲಾಸ್ಟಿಕ್‌ನಂತಹ ಅಪಾಯಕಾರಿ ತ್ಯಾಜ್ಯದ ಸೂಕ್ತ ವಿಲೇವಾರಿಗೆ ಪೌರಾಡಳಿತ ಅವಶ್ಯ ಕ್ರಮ ಕೈಗೊಳ್ಳಬೇಕು. ಈ ದಿಸೆಯಲ್ಲಿ ಜನರಲ್ಲಿ ಅರಿವು ಮೂಡಿಸಲು ಪ್ರಾಣಿಪ್ರಿಯರು ಮುಂದಾಗಬೇಕು.

ಅನಿಲಕುಮಾರ ಮುಗಳಿ, ಧಾರವಾಡ

ಹೋಮ್‌ವರ್ಕ್ ಆಗಲಿ ಸ್ಮಾರ್ಟ್‌ವರ್ಕ್

‘ಹೋಮ್‌ವರ್ಕ್‌ಗೆ ಮೊಬೈಲ್ ನೆರವು ಪಡೆಯುವುದು ಸರಿಯಲ್ಲ, ಹಿಂದೆ ಮಕ್ಕಳು ಉತ್ತರಕ್ಕಾಗಿ ಪರಿಶ್ರಮ ವಹಿಸಿ ಕಷ್ಟಪಟ್ಟು ಎರಡೆರಡು ಬಾರಿ ಓದಿ ಉತ್ತರ ಬರೆಯುತ್ತಿದ್ದರು’ ಎಂದಿದ್ದಾರೆ ರಾಜು ಬಿ. ಲಕ್ಕಂಪುರ (ವಾ.ವಾ., ಸೆ. 11). ಈಗಿನ ಮಕ್ಕಳು ಹೋಮ್‌ವರ್ಕ್‌ನಲ್ಲಿ ಕೊಟ್ಟ ಪ್ರಶ್ನೆಗಳಿಗೆ ಯೂಟ್ಯೂಬ್‌ನಲ್ಲಿ ಉತ್ತರ ಹುಡುಕಿ ಬರೆಯುತ್ತಾರೆ. ಇದರಿಂದ ಸಮಯ ಉಳಿಯುತ್ತದೆ. ಅಲ್ಲದೆ, ಪೋಷಕರಿಗೆ ಬೇರೆ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳಲು ಸಮಯ ಸಿಕ್ಕುತ್ತದೆ.

ಈಗ ಒಂದನೇ ತರಗತಿಯ ಮಕ್ಕಳಿಗೆ ಕೊಡುವ ಎಷ್ಟೋ ಪ್ರಶ್ನೆಗಳು ಹಿರಿಯರಿಗೇ ಉತ್ತರಿಸಲು ಕಷ್ಟವಾಗುವಂತೆ ಇರುತ್ತವೆ. ಈಗಿನ ಮಕ್ಕಳು ಹೆಚ್ಚು ಬುದ್ಧಿವಂತರಾಗಿರುತ್ತಾರೆ. ಹಿಂದೆ ಪ್ರಥಮ ಶ್ರೇಣಿಯಲ್ಲಿ ಪಾಸಾಗುವುದೇ ಹೆಚ್ಚು ಎಂಬಂತಿತ್ತು. ಆದರೆ ಈಗಿನ ವಿದ್ಯಾರ್ಥಿಗಳು ರ‍್ಯಾಂಕ್ ಪಡೆಯುವುದರಲ್ಲಿ ನಿಸ್ಸೀಮರು. ಹೀಗಾಗಿ, ನಾವು ಈಗಿನ ಯುಗವನ್ನು ಹಿಂದಿನ ಯುಗಕ್ಕೆ ಹೋಲಿಸುವುದು ಸಮಂಜಸವಾಗಲಾರದು.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಇಂಗಿತ

ತಪ್ಪೇನಿಲ್ಲ ಪ್ರಜಾಪ್ರಭುತ್ವದಲ್ಲಿ
ಹೇಳಿಕೊಳ್ಳುವುದರಲ್ಲಿ
ಮನದ ಇಂಗಿತ...
ಹೇಳಬೇಡಿ ನನ್ನದಲ್ಲ,
ಅಭಿಮಾನಿಗಳ ಆಸೆ
ಅಂತ!

ವಿಜಯಮಹಾಂತೇಶ್ ಬಂಗಾರಗುಂಡ್
ಬಾಗಲಕೋಟೆ

ಸಾಮೂಹಿಕ ಕೊಲೆಯ ಸಂಚು

ಉತ್ತರಪ್ರದೇಶದ ಪ್ರಯಾಗ್‌ರಾಜ್‌ನಿಂದ ಹರಿಯಾಣದ ಭಿವನೀ ಜಿಲ್ಲೆಗೆ ಹೊರಟಿದ್ದ ಕಲಿಂದಿ ಎಕ್ಸ್‌ಪ್ರೆಸ್ ರೈಲು ಮಾರ್ಗದ ಹಳಿಯಲ್ಲಿ ಕಿಡಿಗೇಡಿಗಳು ಸಿಲಿಂಡರ್ ಇರಿಸಿದ್ದ ಸುದ್ದಿಯನ್ನು (ಪ್ರ.ವಾ., ಸೆ. 10) ಓದಿ ದಿಗ್ಭ್ರಮೆಯಾಯಿತು. ದೇಶದಲ್ಲಿ ಸಾಕ್ಷರರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ ಎಂದು ವರದಿಗಳು ಹೇಳುತ್ತವೆ. ಆದರೆ ಸಮಾಜದಲ್ಲಿ ನಡೆಯುವ ಭಿನ್ನ ಅಪರಾಧ ಕೃತ್ಯಗಳನ್ನು ನೋಡಿದರೆ ಇದೊಂದು ವಿರೋಧಾಭಾಸ ಎನಿಸುತ್ತದೆ.

ಇಂತಹ ಹೀನ ಕೃತ್ಯಗಳ ಹಿಂದೆ ಹಿಂದೂ, ಮುಸ್ಲಿಂ, ಬೌದ್ಧ, ಕ್ರೈಸ್ತರಂತಹ ಯಾವುದೇ ಧರ್ಮದ ವ್ಯಕ್ತಿಗಳು ಇರಲಿ ಅವರನ್ನು ಮತ್ತು ಅವರಿಗೆ ಬೆಂಬಲ ನೀಡುವ ಸಂಘಟನೆಗಳನ್ನು ತೀವ್ರಗತಿಯಲ್ಲಿ ವಿಚಾರಣೆ ನಡೆಸಿ ಕಠಿಣ ಶಿಕ್ಷೆಗೆ ಗುರಿಪಡಿಸಬೇಕು. ಏಕೆಂದರೆ ಇದು ಸಾಮೂಹಿಕ ಕೊಲೆ ಮಾಡುವ ಸಂಚಾಗಿರುತ್ತದೆ. ಮುಂದೆ ಭಯೋತ್ಪಾದಕ ಕೃತ್ಯ ಕೈಗೊಳ್ಳುವ ಕಲ್ಪನೆಯನ್ನು ಸಹ ಮಾಡಿಕೊಳ್ಳದ ರೀತಿಯಲ್ಲಿ ಶಿಕ್ಷೆ ನೀಡಿದರೆ ಮಾತ್ರ ಇಂತಹ ದುಷ್ಕೃತ್ಯಗಳು ಕಡಿಮೆಯಾಗಲು ಸಾಧ್ಯ.

ಸಂಜು, ಹೆಂದೊರೆ, ಶಿರಾ

ಸೈಬರ್ ಭದ್ರತೆ: ತಡವೇಕೆ?

ಇದು ಕೃತಕ ಬುದ್ಧಿಮತ್ತೆಯ (ಎ.ಐ) ಜಗತ್ತು. ಇಂದು ಪ್ರತಿ ಕ್ಷೇತ್ರದಲ್ಲೂ ಎ.ಐ. ಬಳಕೆ ಸರ್ವೇಸಾಮಾನ್ಯವಾಗಿದ್ದು, ಬಹಳಷ್ಟು ಜನ ಅದನ್ನು ಅವಲಂಬಿಸಿದ್ದಾರೆ. ಇದರ ನಡುವೆ ದೇಶದಲ್ಲಿ ಸೈಬರ್ ಅಪರಾಧಗಳು ಸಹ ದಿನೇ ದಿನೇ ಹೆಚ್ಚಾಗುತ್ತಿವೆ. ಇದಕ್ಕಿಂತ ಮುಖ್ಯವಾಗಿ, ಮುಂದಿನ ದಿನಗಳಲ್ಲಿ ಅತಿ ಹೆಚ್ಚು ಸೈಬರ್ ದಾಳಿಗಳು ನಡೆಯುವ ಸಾಧ್ಯತೆ ಇದೆ ಎಂದು ಬಹುತೇಕ ರಾಷ್ಟ್ರಗಳು ಆತಂಕ ವ್ಯಕ್ತಪಡಿಸಿವೆ. ಇದು ಭಾರತದಂತಹ ಅಭಿವೃದ್ಧಿಶೀಲ ದೇಶದ ಆಂತರಿಕ ಭದ್ರತೆಗೂ ದೊಡ್ಡ ಸವಾಲಾಗಿದೆ. ಹೀಗಿರುವಾಗ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮುಂದಿನ ಐದು ವರ್ಷಗಳಲ್ಲಿ ಸೈಬರ್ ಭದ್ರತೆಗಾಗಿ ತರಬೇತಿ ಪಡೆದ ಐದು ಸಾವಿರ ಕಮಾಂಡೊ ಪಡೆಯನ್ನು ನಿಯೋಜಿಸುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ ಎಂದು ಹೇಳಿರುವುದು ನಾವೆಷ್ಟು ಹಿಂದುಳಿದಿದ್ದೇವೆ ಎಂಬುದನ್ನು ತೋರಿಸಿಕೊಡುತ್ತದೆ.

ಮುಂದಿನ ಐದು ವರ್ಷಗಳಲ್ಲಿ ತಂತ್ರಜ್ಞಾನದಲ್ಲಿ ಏನೆಲ್ಲಾ ಬದಲಾವಣೆ ಆಗಲಿದೆಯೋ ಊಹಿಸಲು ಸಾಧ್ಯವಿಲ್ಲ. ಜೊತೆಗೆ ಅಲ್ಲಿಯತನಕ ಇನ್ನೆಷ್ಟು ಅಪರಾಧಗಳು ಹೆಚ್ಚಾಗುತ್ತವೆ ಎಂದು ಸಹ ಹೇಳಲಾಗದು. ಆದ್ದರಿಂದ ಸೈಬರ್ ಭದ್ರತೆಗಾಗಿ ಐದು ವರ್ಷಗಳ ಗುರಿ ಇರಿಸಿಕೊಳ್ಳದೆ ಈ ಸಂಬಂಧ ಶೀಘ್ರದಲ್ಲೇ ಕ್ರಮ ಕೈಗೊಳ್ಳಬೇಕಾಗಿರುವುದು ಅನಿವಾರ್ಯ.

ಸುರೇಂದ್ರ ಪೈ, ಭಟ್ಕಳ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವಿಮೆಗೆ ಜಿಎಸ್‌ಟಿ ಇಳಿಯಲಿದೆಯೇ ಹೊರೆ?



ವಿಮಾ ಕಂತುಗಳ ಮೇಲೆ ಜಿಎಸ್‌ಟಿ ವಿಧಿಸುವುದರ ವಿರುದ್ಧ ಕೇಳಿ ಬಂದಿರುವ ಮಾತುಗಳಿಗೆ ಕೇಂದ್ರ ಸರ್ಕಾರ ಸ್ಪಂದಿಸಿದಂತೆ ಕಾಣುತ್ತಿದೆ. ಈ ಬಗ್ಗೆ ಪರಿಶೀಲನೆ ನಡೆಸುವುದಕ್ಕಾಗಿ ಸಚಿವರ ತಂಡವನ್ನು ರಚಿಸಿದೆ. ತಂಡವು ವಸ್ತುಸ್ಥಿತಿ ಅಧ್ಯಯನ ಮಾಡಿ ಜಿಎಸ್‌ಟಿ ಕೌನ್ಸಿಲ್‌ಗೆ ವರದಿ ನೀಡಲಿದೆ. ಮುಂದಿನ ಸಭೆಯಲ್ಲಿ ಈ ಬಗ್ಗೆ ಮಂಡಳಿಯು ತೀರ್ಮಾನ ಕೈಗೊಳ್ಳುವ ಸಾಧ್ಯತೆ ಇದೆ. ಜಿಎಸ್‌ಟಿಯನ್ನು ಪೂರ್ಣವಾಗಿ ರದ್ದುಪಡಿಸಬೇಕು ಎಂಬ ಬೇಡಿಕೆಯನ್ನು ಸರ್ಕಾರ ಪರಿಗಣಿಸಿದಂತೆ ಕಾಣುತ್ತಿಲ್ಲ. ತೆರಿಗೆ ಕಡಿತಕ್ಕೆ ಮಾತ್ರ ಒಲವು ತೋರಿದಂತಿದೆ

• ಸೂರ್ಯನಾರಾಯಣ ವಿ.

ಭಾರತದ ಪ್ರತಿಯೊಬ್ಬ ಪ್ರಜೆಯೂ 2047ರ ವೇಳೆಗೆ ವಿಮಾ ಸೌಲಭ್ಯವನ್ನು ಹೊಂದಿರಬೇಕು ಎಂಬ ಮಹತ್ವಾಕಾಂಕ್ಷೆಯ ಗುರಿಯನ್ನು ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಐಆರ್‌ಡಿಎಐ) ಹೊಂದಿದೆ. ದೇಶದ ವಿಮಾ ಕ್ಷೇತ್ರದಲ್ಲಿ ನಡೆಯುತ್ತಿರುವ ಈಗಿನ ಬೆಳವಣಿಗೆಯನ್ನು ಗಮನಿಸಿದರೆ ಈ ಗುರಿಯನ್ನು ತಲುಪಲು ಪ್ರಾಧಿಕಾರಕ್ಕೆ ಸಾಧ್ಯವೇ ಎಂಬ ಪ್ರಶ್ನೆ ಮೂಡುತ್ತದೆ. ಜೀವವಿಮೆ, ಆರೋಗ್ಯ ವಿಮೆ ಸೇರಿದಂತೆ ಎಲ್ಲ ರೀತಿಯ ವಿಮೆಗಳ ಕಂತುಗಳ ಮೇಲೆ ವಿಧಿಸಲಾಗುತ್ತಿರುವ ಸರಕು ಮತ್ತು ಸೇವಾ ತೆರಿಗೆಯು (ಜಿಎಸ್‌ಟಿ) ದೇಶದಲ್ಲಿ ದೊಡ್ಡ ಚರ್ಚೆಯನ್ನೇ ಹುಟ್ಟುಹಾಕಿದೆ. ತೆರಿಗೆಯನ್ನು ಕಡಿತಗೊಳಿಸುವಂತೆ ಕೇಂದ್ರ ಸರ್ಕಾರದ ಮೇಲೆ ರಾಜಕೀಯ, ಸಾರ್ವಜನಿಕ, ವಿಮಾ ವಲಯಗಳಿಂದ ಒತ್ತಡವೂ ಬಂದಿದೆ. ಕೇಂದ್ರ ಸರ್ಕಾರವು ಒತ್ತಡಕ್ಕೆ ಮಣಿದಂತೆ ಕಾಣುತ್ತಿದೆ. ಮುಂದಿನ ಜಿಎಸ್‌ಟಿ ಮಂಡಳಿಯ ಸಭೆ ಈ ಬಗ್ಗೆ ನಿರ್ಧಾರ ಕೈಗೊಳ್ಳುವ ನಿರೀಕ್ಷೆ ಇದೆ.

ಸದ್ಯ, ಎಲ್ಲ ರೀತಿಯ ವಿಮಾ ಪಾಲಿಸಿಗಳ ಮೇಲೆ ಶೇ 18ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ. 2017ರಲ್ಲಿ ಜಿಎಸ್‌ಟಿ ಜಾರಿಗೆ ಬರುವುದಕ್ಕೂ ಮುನ್ನ ವಿಮಾ ಕಂತುಗಳ ಮೇಲೆ ಶೇ 15ರಷ್ಟು ಸೇವಾ ತೆರಿಗೆ ವಿಧಿಸಲಾಗುತ್ತಿತ್ತು (ಈ ತೆರಿಗೆಯಲ್ಲಿ ಮೂಲ ಸೇವಾ ತೆರಿಗೆ, ಸ್ವಚ್ಛ ಭಾರತ್ ಸೆಸ್, ಕೃಷಿ ಸೆಸ್ ಸೇರಿದಂತೆ ಇನ್ನಿತರ ಸೆಸ್‌ಗಳು ಸೇರಿದ್ದವು). ಜಿಎಸ್‌ಟಿ ಅನುಷ್ಠಾನದ ಬಳಿಕ ವಿಮಾ ಕಂತುಗಳ ಮೊತ್ತ ಜಾಸ್ತಿಯಾಗಿದೆ. ಜೀವ, ಆರೋಗ್ಯಕ್ಕೆ ವಿಮೆಯ ರಕ್ಷಣೆ ಪಡೆಯುವಾಗಲೂ ಹೆಚ್ಚು ತೆರಿಗೆ ಪಾವತಿಸಬೇಕಾಗಿದೆ ಎಂಬ ಭಾವನೆ ಪಾಲಿಸಿದಾರರಲ್ಲಿ ಬೇರೂರಿದೆ. ಇತ್ತೀಚಿನ ವರ್ಷಗಳಲ್ಲಿ ಕೆಲವು ಆರೋಗ್ಯ ವಿಮೆ ಕಂಪನಿಗಳು ಕೂಡ ಕಂತಿನ ಮೊತ್ತವನ್ನು ಗಣನೀಯವಾಗಿ ಹೆಚ್ಚಿಸಿವೆ. ಮೂರು ವರ್ಷಗಳಲ್ಲಿ ಆರೋಗ್ಯ ವಿಮೆ ಕಂತುಗಳ ಮೇಲೆ ₹24,529 ಕೋಟಿ ಜಿಎಸ್‌ಟಿ ಸಂಗ್ರಹವಾಗಿದೆ ಎಂದು ಹಣಕಾಸು ಸಚಿವಾಲಯವೇ ಹೇಳಿದೆ. 2023–24ನೇ ಸಾಲಿನಲ್ಲೇ ಆರೋಗ್ಯ ವಿಮೆ ಕಂತುಗಳಿಂದ ಮೇಲೆ ₹8,262.94 ಕೋಟಿ ಮತ್ತು ಆರೋಗ್ಯ ಮರುವಿಮೆ ಕಂತುಗಳಿಂದ ₹1,484.36 ಕೋಟಿ ಜಿಎಸ್‌ಟಿ ಸಂಗ್ರಹವಾಗಿದೆ.

ವಿಮಾ ಕಂತುಗಳ ಮೇಲೆ ತೆರಿಗೆ

18% — 2017ರಲ್ಲಿ ಜಿಎಸ್‌ಟಿ ಜಾರಿಗೆ ಬಂದ ನಂತರ ನಿಗದಿಪಡಿಸಲಾಗಿರುವ ತೆರಿಗೆ ಪ್ರಮಾಣ

15% — ಜಿಎಸ್‌ಟಿ ಜಾರಿಗೆ ಬರುವುದಕ್ಕೂ ಮುನ್ನ ವಿಧಿಸಲಾಗುತ್ತಿದ್ದ ಸೇವಾ ತೆರಿಗೆ ಪ್ರಮಾಣ

ವಿನಾಯಿತಿಗೆ ಹೆಚ್ಚಿದ ಕೂಗು

ವಿಮೆ ಮೇಲೆ ಜಿಎಸ್‌ಟಿ ವಿಧಿಸಬಾರದು ಎಂಬ ಒತ್ತಾಯ ಹಲವು ಸಮಯದಿಂದ ಕೇಳಿಬರುತ್ತಿದೆ. ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಜುಲೈ 31ರಂದು ಪತ್ರ ಬರೆದ ನಂತರ ಈ ಬಗ್ಗೆ ಗಂಭೀರ ಚರ್ಚೆ ನಡೆಯುತ್ತಿದೆ.


‘ಜೀವ ವಿಮೆ ಮತ್ತು ಆರೋಗ್ಯ ವಿಮೆ ಕಂತುಗಳ ಮೇಲೆ ಜಿಎಸ್‌ಟಿ ವಿಧಿಸುವುದರಿಂದ ಬದುಕಿನ ಅನಿಶ್ಚಿತತೆಯ ಮೇಲೆ ತೆರಿಗೆ ವಿಧಿಸಿದಂತೆ ಆಗುತ್ತದೆ. ಜೀವನದ ಅನಿಶ್ಚಿತತೆಯ ಸಂದರ್ಭದಲ್ಲಿ ಕುಟುಂಬಕ್ಕೆ ರಕ್ಷಣೆ ಒದಗಿಸುವ ಉದ್ದೇಶದಿಂದ ವ್ಯಕ್ತಿಯೊಬ್ಬ ಖರೀದಿಸಿದ ವಿಮೆಗೆ ತೆರಿಗೆ ವಿಧಿಸಬಾರದು ಎಂದು ವಿಮಾ ನೌಕರರ ಒಕ್ಕೂಟ ಅಭಿಪ್ರಾಯಪಟ್ಟಿದೆ’ ಎಂದು ಅವರು ಪತ್ರದಲ್ಲಿ ಹೇಳಿದ್ದರು. ವಿಮೆ ಮೇಲಿನ ಜಿಎಸ್‌ಟಿ ತೆಗೆದು ಹಾಕಬೇಕು ಎಂದೂ ಅವರು ಕೋರಿದ್ದರು. ಗಡ್ಕರಿ ಹೇಳಿಕೆಗೆ ವಿವಿಧ ವಲಯಗಳಿಂದ ಭಾರಿ ಬೆಂಬಲ ವ್ಯಕ್ತವಾಗಿತ್ತು. ಆಗಸ್ಟ್‌ನಲ್ಲಿ ನಡೆದಿದ್ದ ಮುಂಗಾರು ಅಧಿವೇಶನದಲ್ಲಿ ವಿರೋಧ ಪಕ್ಷಗಳು ಇದೇ ವಿಚಾರವನ್ನು ಪ್ರಸ್ತಾಪಿಸಿದ್ದವು. ಸದನದ ಒಳಗೆ ಮಾತ್ರವಲ್ಲದೆ ಹೊರಗೂ ಹೋರಾಟ ನಡೆಸಿದ್ದವು.

ಸರ್ಕಾರದ ವಾದವೇನು?


ವಿಮೆಯು ಒಂದು ಸೇವೆ ಆಗಿರುವುದರಿಂದ ಎಲ್ಲ ವಿಮಾ ಪಾಲಿಸಿಗಳು ತೆರಿಗೆ ವಿಧಿಸಲು ಅರ್ಹವಾಗಿವೆ ಎಂಬುದು ಸರ್ಕಾರದ ವಾದ. ವಿಮಾ ಕಂತುಗಳ ಮೇಲೆ ವಿಧಿಸಲಾಗುತ್ತಿರುವ ಜಿಎಸ್‌ಟಿಯು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಉತ್ತಮ ವರಮಾನ ತರುತ್ತಿದೆ. ಜಿಎಸ್‌ಟಿ ವಿಧಿಸುತ್ತಿರುವುದನ್ನು ಸಮರ್ಥಿಸಿಕೊಂಡು ಮಾತನಾಡಿದ್ದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ‘ಮೂರು ವರ್ಷಗಳಲ್ಲಿ ಸಂಗ್ರಹವಾಗಿದ್ದ ₹24,529 ಕೋಟಿ ಜಿಎಸ್‌ಟಿಯಲ್ಲಿ ₹12,264 ಕೋಟಿ ಹಣವು ಎಸ್‌ಜಿಎಸ್‌ಟಿಯಾಗಿ ನೇರವಾಗಿ ರಾಜ್ಯಗಳಿಗೆ ಸಂದಿವೆ’ ಎಂದು ಹೇಳಿದ್ದರು.

ಜೀವ ವಿಮೆ, ಆರೋಗ್ಯ ವಿಮೆ ಮಾಡಿಸಿಕೊಂಡವರಿಗೆ ಆದಾಯ ಲೆಕ್ಕಪತ್ರ ಸಲ್ಲಿಕೆ ವೇಳೆ ತೆರಿಗೆ ರಿಯಾಯಿತಿ ಸಿಗುತ್ತದೆ ಎಂಬುದು ಸರ್ಕಾರದ ಇನ್ನೊಂದು ವಾದ. ವಸ್ತುಗಳು, ಸೇವೆಗಳ ಮೇಲೆ ಜಿಎಸ್‌ಟಿ ನಿಗದಿಪಡಿಸುವುದು ಜಿಎಸ್‌ಟಿ ಮಂಡಳಿಯ ಶಿಫಾರಸಿನ ಮೇಲೆ. ಕೇಂದ್ರ ಹಣಕಾಸು ಸಚಿವರ ಅಧ್ಯಕ್ಷತೆಯ ಈ ಮಂಡಳಿಯಲ್ಲಿ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳ ಸಚಿವರು ಇರುತ್ತಾರೆ. ಜಿಎಸ್‌ಟಿ ವಿನಾಯಿತಿ ಅಥವಾ ಕಡಿತ ಮಾಡುವ ಸಂಬಂಧ ಮಂಡಳಿಯ ಸದಸ್ಯರು ತೀರ್ಮಾನಿಸಬೇಕು ಎಂದು ಸರ್ಕಾರ ಹೇಳಿತ್ತು.


ಜೀವ ವಿಮಾ ಕಂತಿನ ವರಮಾನ



ಇತರ ವಿಮೆಗಳ (ನಾನ್ ಲೈಫ್) ಕಂತಿನ ವರಮಾನ



ಆರೋಗ್ಯ ವಿಮೆ ಕಂತಿನ ವರಮಾನ



ವಿಮಾ ಮಾರುಕಟ್ಟೆ: ಏನು, ಎತ್ತ?

ಭಾರತೀಯ ವಿಮಾ ಮಾರುಕಟ್ಟೆಯು ಹಲವು ವರ್ಷಗಳಿಂದ ಗಣನೀಯವಾಗಿ ಪ್ರಗತಿ ಕಾಣುತ್ತಿವೆ. ಇದರಲ್ಲಿ ಭಾರತೀಯ ಜೀವ ವಿಮಾ ನಿಗಮ ಮತ್ತು ಇತರೆ ಸರ್ಕಾರಿ ಸ್ವಾಮ್ಯದ ವಿಮಾ ಕಂಪನಿಗಳ ಪಾಲು ಶೇ 60ಕ್ಕೂ ಹೆಚ್ಚಿವೆ. ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ ಪ್ರಕಾರ, 2022–23ರಲ್ಲಿ ಜೀವ ವಿಮಾ ಉದ್ಯಮವು ಶೇ 12.98 ರಷ್ಟು ಬೆಳವಣಿಗೆ ಸಾಧಿಸಿತ್ತು. ವಿಮಾ ಕಂತುಗಳಿಂದ ₹7.83 ಲಕ್ಷ ಕೋಟಿ ವರಮಾನ ಗಳಿಸಿತ್ತು. ಆ ವರ್ಷ ವಿಮಾ ಕಂಪನಿಗಳು 2.85 ಕೋಟಿಗಳಷ್ಟು ಹೊಸ ಪಾಲಿಸಿಗಳನ್ನು ವಿತರಿಸಿದ್ದವು. ಇವುಗಳಲ್ಲಿ ಶೇ 71.75ರಷ್ಟು ಪಾಲಿಸಿಗಳನ್ನು ಸರ್ಕಾರಿ ಸ್ವಾಮ್ಯದ ಕಂಪನಿಗಳೇ ವಿತರಿಸಿದ್ದವು.



ಜೀವ ವಿಮಾಯೇತರ ವಿಮಾ (ಆರೋಗ್ಯ, ಅಗ್ನಿಆಕಸ್ಮಿಕ, ನೌಕೆ, ವಾಹನ ವಿಮೆ) ಉದ್ಯಮವು 2022–23ರ ಸಾಲಿನಲ್ಲಿ ಶೇ 16.40ರಷ್ಟು ಪ್ರಗತಿ ಸಾಧಿಸಿತ್ತು. ಆ ವರ್ಷ ₹2.57 ಲಕ್ಷ ಕೋಟಿಯಷ್ಟು ವರಮಾನ ವಿಮಾ ಕಂತುಗಳಿಂದ ಬಂದಿತ್ತು. ವಿಮಾ ಕಂತಿನ ವರಮಾನದಲ್ಲಿ ಆರೋಗ್ಯ ವಿಮೆಯ ಕೊಡುಗೆಯೇ ಶೇ 38.02ರಷ್ಟಿತ್ತು. ಆ ಸಾಲಿನಲ್ಲಿ ಆರೋಗ್ಯ ವಿಮಾ ಕ್ಷೇತ್ರವು ಶೇ 21.32ರಷ್ಟು ಪ್ರಗತಿ ದಾಖಲಿಸಿತ್ತು. ₹97,634 ಕೋಟಿಯಷ್ಟು ಹಣ ಕಂತು ಪಾವತಿಯಿಂದ ಸಂಗ್ರಹವಾಗಿತ್ತು.




ಹೆಚ್ಚಿದ ವೈದ್ಯಕೀಯ ಹಣದುಬ್ಬರ

ಕೆಲವು ವರ್ಷಗಳಿಂದೀಚೆಗೆ ಆರೋಗ್ಯ ಸೇವೆ ದುಬಾರಿಯಾಗುತ್ತಿದೆ. ರೋಗಿಗಳ ಆಸ್ಪತ್ರೆ ವೆಚ್ಚ ಜಾಸ್ತಿಯಾಗುತ್ತಿದೆ. ಕಳೆದ ವರ್ಷ ವೈದ್ಯಕೀಯ ಹಣದುಬ್ಬರ ಶೇ 14ರಷ್ಟಿತ್ತು. ಇದು ವಿಮಾ ಕಂಪನಿಗಳಿಗೆ ಹೊರೆಯಾಗುತ್ತಿದೆ. ಇದರೊಂದಿಗೆ ಜಿಎಸ್‌ಟಿಯೂ ಜಾಸ್ತಿ ಇರುವುದರಿಂದ ವಿಮಾ ಕಂತುಗಳ ಮೊತ್ತ ಹೆಚ್ಚಳವಾಗಿದೆ. ಹೀಗಾಗಿ ಜಿಎಸ್‌ಟಿಯಲ್ಲಿ ಕಡಿತ ಮಾಡಬೇಕು ಎಂಬುದು ವಿಮಾ ಕ್ಷೇತ್ರದಲ್ಲಿ ತೊಡಗಿಕೊಂಡವರ ಹೇಳಿಕೆ. ಭಾರತೀಯ ಸಾಮಾನ್ಯ ವಿಮಾ ಏಜೆಂಟರ ಮಹಾ ಒಕ್ಕೂಟವು ಜೂನ್ ತಿಂಗಳಲ್ಲೇ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಪತ್ರ ಬರೆದು ಸಾಮಾನ್ಯ ವಿಮೆಗಳ ಮೇಲಿನ ಜಿಎಸ್‌ಟಿಯನ್ನು ಶೇ 18ರಿಂದ ಶೇ 5ಕ್ಕೆ ಇಳಿಸಬೇಕು ಎಂದು ಒತ್ತಾಯಿಸಿತ್ತು.

ಆರೋಗ್ಯ ವಿಮೆ ಕಂತು: ಸಂಗ್ರಹವಾದ ಜಿಎಸ್‌ಟಿ

(ಕೋಟಿ ₹ಗಳಲ್ಲಿ)



* ಮರುವಿಮೆ ಎಂದರೆ, ಪಾಲಿಸಿದಾರರಿಗೆ ವಿಮೆ ಮೊತ್ತ ಪಾವತಿ ಮಾಡುವ ಹೊರೆಯನ್ನು ತಗ್ಗಿಸುವ ಉದ್ದೇಶದಿಂದ ವಿಮಾ ಕಂಪನಿಗಳು ಖರೀದಿಸುವ ವಿಮೆ



ವಿಮಾ ಕಂತಿನ ಮೇಲೆ ಜಿಎಸ್‌ಟಿ ಲೆಕ್ಕಾಚಾರ ಹೇಗೆ?

ಜೀವ ವಿಮೆ, ಆರೋಗ್ಯ ವಿಮೆ ಸೇರಿದಂತೆ ಯಾವುದೇ ವಿಮೆಯ ಮೂಲ ಕಂತಿನ ಮೇಲೆ ಶೇ 18ರಷ್ಟು ಜಿಎಸ್‌ಟಿಯನ್ನು ವಿಧಿಸಲಾಗುತ್ತದೆ. ಆರೋಗ್ಯ ವಿಮೆಯೊಂದರ ಕಂತಿನ ಮೂಲ ಮೊತ್ತ ₹10 ಸಾವಿರ ಎಂದಿದ್ದರೆ, ಆ ಮೊತ್ತಕ್ಕೆ ಶೇ18ರಷ್ಟು ತೆರಿಗೆಯಂತೆ ಲೆಕ್ಕ ಹಾಕಿದಾಗ ಬರುವ ಮೊತ್ತ (₹1,800) ಪಾವತಿಸಬೇಕಾಗಿರುವ ತೆರಿಗೆಯಾಗಿರುತ್ತದೆ. ಈ ಮೊತ್ತವನ್ನು ಮೂಲ ಕಂತಿಗೆ (₹10 ಸಾವಿರ) ಸೇರಿಸಿದಾಗ ಬರುವ ಒಟ್ಟು ಮೊತ್ತವನ್ನು (₹11,800) ಪಾಲಿಸಿದಾರ ವಿಮೆಯ ಕಂತಾಗಿ ಪಾವತಿಸಬೇಕಾಗುತ್ತದೆ.


ಆಧಾರ: ಪಿಟಿಐ, ಪಿಐಬಿ, ಸಂಸತ್ತಿನಲ್ಲಿ ಹಣಕಾಸು ಸಚಿವರ ಹೇಳಿಕೆ, ಐಆರ್‌ಡಿಎಐ 2022–23 ವಾರ್ಷಿಕ ವರದಿ

‘ಫ್ಲರ್ಟ್’ನೊಂದಿಗೆ ಬಂದ ಚಂದನ್!

‘**ಲಕ್ಷ್ಮಿ ಬಾರಮ್ಮ**’ ಧಾರಾವಾಹಿ ಮೂಲಕ ಜನಪ್ರಿಯತೆ ಗಳಿಸಿದ್ದ ನಟ ಚಂದನ್, ಬಳಿಕ ಸಿನಿಮಾದಲ್ಲಿ ಸಕ್ರಿಯವಾದರು. ಜೊತೆಗೆ ಬೇರೆ ಧಾರಾವಾಹಿಗಳಲ್ಲಿಯೂ ಕಾಣಿಸಿಕೊಂಡರು. ಅದಾದ ನಂತರ ಸಣ್ಣ ವಿರಾಮ ತೆಗೆದುಕೊಂಡಿದ್ದ ಚಂದನ್ ಸದ್ದಿಲ್ಲದೆ ಒಂದು ಚಿತ್ರವನ್ನು ಸಿದ್ಧಪಡಿಸಿದ್ದಾರೆ. ಇದರ ಮೂಲಕ ಅವರು ಸಿನಿಮಾ ನಿರ್ದೇಶನಕ್ಕಿಳಿದಿದ್ದಾರೆ.

ಎವರೆಸ್ಟ್ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ತಾವೇ ನಿರ್ಮಾಣ ಮಾಡಿ, ನಾಯಕನಾಗಿ ನಟಿಸುತ್ತಿರುವ ಚಿತ್ರಕ್ಕೆ ‘ಫ್ಲರ್ಟ್’ ಎಂದು ಹೆಸರಿಡಲಾಗಿದೆ. ‘ಇದು ನನ್ನ ಹತ್ತನೇ ಚಿತ್ರ. ವಿಭಿನ್ನವಾದ ಕಥೆಯೊಂದಿಗೆ ನಿರ್ದೇಶನಕ್ಕೆ ಇಳಿದಿರುವೆ. ಈಗಾಗಲೇ ಚಿತ್ರೀಕರಣ ಪ್ರಾರಂಭವಾಗಿದೆ. ಯುವಜನತೆಯನ್ನು ಗಮನದಲ್ಲಿಟ್ಟುಕೊಂಡು ಸಿದ್ಧಗೊಂಡಿರುವ ಕಮರ್ಷಿಯಲ್ ಚಿತ್ರ. ಜೊತೆಗೆ ಫ್ಯಾಮಿಲಿ ಆಡಿಯನ್ಸ್‌ಗೆ ಅಗತ್ಯ ಅಂಶಗಳು, ಆ್ಯಕ್ಷನ್ ಕೂಡ ಇದೆ. ದೊಡ್ಡ ತಾರಾಗಣವಿದೆ. ಈ ಬಗ್ಗೆ ಶೀಘ್ರದಲ್ಲಿಯೇ ಇನ್ನಷ್ಟು ಮಾಹಿತಿ ಹಂಚಿಕೊಳ್ಳುತ್ತೇನೆ’ ಎಂದಿದ್ದಾರೆ ಚಂದನ್.

ಅವಿನಾಶ್, ಸಾಧು ಕೋಕಿಲ, ಶ್ರುತಿ ಮೊದಲಾದವರು ಚಿತ್ರದಲ್ಲಿ ನಟಿಸುತ್ತಿದ್ದಾರೆ. ಜೆಸ್ಸಿ ಗಿಫ್ಟ್ ಸಂಗೀತ, ವೇಣುಗೋಪಾಲ್ ಛಾಯಾಚಿತ್ರಗ್ರಹಣ ಈ ಚಿತ್ರಕ್ಕಿದೆ.



ಚಂದನ್

‘ಫೈರ್‌ಫ್ಲೈ’ ವಿಕ್ಕಿ ಕಥೆ ಕೇಳಿ...

ನಿವೇದಿತಾ ಶಿವರಾಜ್‌ಕುಮಾರ್ ನಿರ್ಮಾಣದ, ವಂಶಿ ನಟಿಸಿ ನಿರ್ದೇಶಿಸಿರುವ ‘ಫೈರ್ ಫ್ಲೈ’ ಸಿನಿಮಾ ತೆರೆಕಾಣಲು ಸಜ್ಜಾಗುತ್ತಿದೆ. ಚಿತ್ರದಲ್ಲಿ ‘ವಿಕ್ಕಿ’ಯಾಗಿ ವಂಶಿ ನಟಿಸಿದ್ದು, ‘ವಿಕ್ಕಿ’ಯನ್ನು ಪರಿಚಯಿಸುವ ಟೀಸರ್ ಒಂದನ್ನು ಚಿತ್ರತಂಡ ಬಿಡುಗಡೆ ಮಾಡಿದೆ.

‘ಸುತ್ತ ಸಂತೆ ಇದ್ದರೂ ಯಾರೂ ನನ್ನವರಲ್ಲ ಎನ್ನುವ ಅನಾಥಭಾವ ಕಾಡುತ್ತಲ್ಲಾ, ಅದು ಹಾರಿಬಲ್’ ಎನ್ನುತ್ತಾ ತನ್ನ ಏಕಾಂತದ ಸಮಸ್ಯೆಯನ್ನು ಹಂಚಿಕೊಳ್ಳುವ ವಿಕ್ಕಿ, ಪ್ರೇಕ್ಷಕರನ್ನು ತನ್ನ ಕಲ್ಪನಾಲೋಕಕ್ಕೂ ಕರೆದುಕೊಂಡು ಹೋಗುತ್ತಾನೆ. ಹೀಗೆ ವಿಕ್ಕಿಯ ಖಿನ್ನತೆಯ ಪ್ರಪಂಚವನ್ನು ಚಿತ್ರತಂಡ ಪರಿಚಯಿಸಿದೆ. ವಿಕ್ಕಿಯ ಪ್ರಪಂಚದಲ್ಲಿ ಬೆಳಿಗ್ಗೆ 7ಕ್ಕೆ, ಮಧ್ಯಾಹ್ನ 1 ಗಂಟೆಗೆ ಮತ್ತು ರಾತ್ರಿ 8 ಗಂಟೆಗೆ ಏನು ನಡೆಯುತ್ತದೆ ಎನ್ನುವ ಕುತೂಹಲವನ್ನು ಈ ಟೀಸರ್ ಸೃಷ್ಟಿಸಿದೆ. ತಾಂತ್ರಿಕವಾಗಿ ಟೀಸರ್ ಭಿನ್ನವಾಗಿದೆ. ಚಿತ್ರಕ್ಕೆ ಚರಣ್ ರಾಜ್ ಸಂಗೀತ, ಅಭಿಲಾಷ್ ಕಳತ್ತಿ ಛಾಯಾಚಿತ್ರಗ್ರಹಣ, ರಘು ನಿಡುವಳ್ಳಿ ಸಂಭಾಷಣೆ, ಸುರೇಶ್ ಆರುಮುಗಂ ಸಂಕಲನವಿದೆ. ವಂಶಿಗೆ ಜೋಡಿಯಾಗಿ ರಚನಾ ಇಂದರ್ ನಟಿಸಿದ್ದು, ಅಚ್ಯುತ್ ಕುಮಾರ್, ಸುಧಾರಾಣಿ, ಶೀತಲ್ ಶೆಟ್ಟಿ, ಮೂಗು ಸುರೇಶ್, ಚಿತ್ಕಲಾ ಬಿರಾದಾರ್, ಸಿಹಿ ಕಹಿ ಚಂದ್ರು ತಾರಾಬಳಗದಲ್ಲಿದ್ದಾರೆ. ಈ ಸಿನಿಮಾವನ್ನು ಶ್ರೀ ಮುತ್ತು ಸಿನಿ ಸರ್ವೀಸ್ ಸಂಸ್ಥೆ ನಿರ್ಮಾಣ ಮಾಡುತ್ತಿದೆ. ಚಿತ್ರೀಕರಣ ಪೂರ್ಣಗೊಳಿಸಿರುವ ಚಿತ್ರತಂಡ ವರ್ಷಾಂತ್ಯಕ್ಕೆ ಸಿನಿಮಾವನ್ನು ತೆರೆಗೆ ತರುವ ಯೋಜನೆ ಹಾಕಿಕೊಂಡಿದೆ.



ವಂಶಿ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ನಾವು ಬಳಕೆದಾರರು, ಮಾಲೀಕರಲ್ಲ!

ನುಡಿ ಬೆಳಗು 21



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ನಾವು ಈ ಭೂಮಿಯ ಬಳಕೆದಾರರು ಅಷ್ಟೆ. ಮಾಲೀಕರಲ್ಲ. ಇದನ್ನು ಹ್ಯಾಂಗ್ ಬಳಸಬೇಕು ಅಂದರ ಈ ಜಗತ್ತು ಕೆಟ್ಟಿರಬಾರದು ಹಾಂಗ್ ಬಳಸಬೇಕು. ಜಗತ್ತು ಕೆಟ್ಟಿರಬಾರದು, ನಾವು ಸಂತೋಷ ಪಡೋದು ಬಿಟ್ಟಿರಬಾರದು ಹಾಂಗ್ ಇರಬೇಕು. ಇದು ಸೂತ್ರ. ದುಂಬಿಯೊಂದು ಸಾವಿರ ಹೂವುಗಳಿಂದ ಮಕರಂದ ಹೀರಿದರೂ ಒಂದು ಹೂವಾದರೂ ಕೆಟ್ಟೈತೇನು? ದುಂಬಿ ಮಕರಂದ ಹೀರೋದನ್ನು ಬಿಟ್ಟಿಲ್ಲ, ಹೂವು ಕೆಟ್ಟಿಲ್ಲ ಹಾಂಗ್ ನಾವು ಬದುಕಬೇಕು.

ನಾವು ಗುಡ್ಡ ನೋಡಿದರೆ ಪೂರಾ ಮುಗಸೇಬಿಡ್ತೇವಿ. ಒಬ್ಬನಿಗೆ ಗುಡ್ಡ ನೋಡಿ ಹಂಪಿ ಮಾಡಬೇಕು ಅನಸ್ತು, ಇನ್ನೊಬ್ಬನಿಗೆ ಕ್ರಶರ್ ಮೆಶಿನ್ ಹಾಕಬೇಕು ಅನಸ್ತು. ಇದು ಹ್ಯಾಂಗ್ ಅಂದರ ಆಕಳ ಕೆಚ್ಚಲಿಗೆ ಹತ್ತಿದ ಉಣ್ಣೆಯಂತೆ. ಉಣ್ಣೆ ಬರೀ ರಕ್ತ ಕುಡಿದು ಬದುಕತೈತಿ. ಅದಕ್ಕೆ ಹಾಲಿನ ರುಚಿನೇ ಗೊತ್ತಾಗಿಲ್ಲ. ನಮಗೂ ಹಾಂಗ.
ಮನುಷ್ಯ ದೇವರಿಗೆ ಒಂದು ಕಪ್ ನೀರು ಕೇಳಿದ. ಅವನು ಕೆರೆ, ಹೊಳೆ ಹಳ್ಳಗಳನ್ನೇ ನೀಡಿದ. ಮನುಷ್ಯ ತನ್ನ ಮನೆಯೊಳಗೆ ದೀಪ ಬೇಕು ಅಂದ. ಅದಕ್ಕೆ ದೇವರು ಎಂದೆಂದೂ ಆರದ ಸೂರ್ಯಚಂದ್ರರೆಂಬ ದೀಪಗಳನ್ನೇ ಹಚ್ಚಿಟ್ಟ. ಒಂದು ತುತ್ತು ಅನ್ನ ಬೇಕು ಅಂದಿದ್ದಕ್ಕೆ ಕೋಟಿ ಕೋಟಿ ವರ್ಷಗಳಿಂದ ಅನ್ನ ನೀಡುವ ಭೂಮಿ ಕೊಟ್ಟ. ಅದು ಇನ್ನೂ ದಣಿದಿಲ್ಲ. ಭೂಮಿ ತಾಯಿಯನ್ನೇ ತಂದಿಟ್ಟಾನಲ್ಲ ಆ ದೇವರು ಅವನಿಗೆ ನಾವೇನು ಮಾಡಬೇಕು?

ಭೂಮಿ ಎಷ್ಟೇ ಕೊಟ್ಟರೂ ನಮ್ಮ ಹಸಿವು ಇಂಗಿಲ್ಲ. ಎಷ್ಟೇ ಹೊಳೆ ಹರಿದರೂ ನಮ್ಮ ನೀರಡಿಕೆ ಕಡಿಮೆ ಆಗಿಲ್ಲ. ಎಷ್ಟೇ ಬೆಳಕಿದ್ದರೂ ನಾವು ಕತ್ತಲಿನಿಂದ ಹೊರಬಂದಿಲ್ಲ. ಈ ವಿಶ್ವ ಅತ್ಯಂತ ರಹಸ್ಯಮಯ. ವಿಶ್ವದ ಆಳ, ಅಗಲ, ಅಂತ್ಯವನ್ನು ಕಂಡುಕೊಳ್ಳಲು ಮನುಷ್ಯನ ಜೀವನ ಬಹಳ ಸಣ್ಣದು. ಎಷ್ಟು ಜನ ವಾಸ್ಕೊಡಗಾಮನಂತಹವರು, ಕೋಲಂಬಸ್‌ನಂತಹವರು ಜಲಯಾತ್ರೆಗಳು ಬಂದರೂ ಸಮುದ್ರದ ಆಳ ಅಗಲ ಅಳೆಯಲಿಕ್ಕಾಗ್ತದೇನು? ಎಷ್ಟು ಜನ ನೀಲ್ ಆರ್ಮಸ್ಟ್ರಾಂಗ್, ರಾಕೇಶ್ ಶರ್ಮಾ ಅವರಂಥವರು ಬಂದರೂ ಆಕಾಶದ ಆಳ ಅಗಲ ಅರಿಯಲಿಕ್ಕಾಗ್ತದೇನು? ಎಷ್ಟು ಜನ ನ್ಯೂಟನ್‌ನಂತಹ ಭೌತ ವಿಜ್ಞಾನಿಗಳು ಬಂದರೂ ಭೂಮಿಯ ಆಳ ಅಗಲ ತಿಳಿಯಲು ಸಾಧ್ಯವಿದೆಯೇನು?

ಒಂದು ಸಾಧಾರಣ ಉದಾಹರಣೆ ತಗೊಳ್ಳಿ. ಮನೆ ಮುಂದೆ ಕಸ ಹಾಕ್ತೀರಿ. ಆ ಕಸದ ಗುಂಡಿ ಒಂದು ತಿಪ್ಪೆಯಾಗ್ತದೆ. ತಿಪ್ಪೆಯ ಮಗ್ಗಲು ಹೋದರೆ ಹೊಲಸು ನಾರತೈತಿ ಅಂತ ಮೂಗು ಮುಚ್ಕೋತೀರಿ, ಅದನ್ನು ಮುಟ್ಟಿದರೆ ಹೊಲಸೈತಿ ಅಂತ ಕೈ ತೊಳಕೋತೀರಿ. ಯಾವುದನ್ನು ಮುಟ್ಟಿದರೆ ಕೈತೊಳಕೋತೀರಿ, ಯಾವುದರ ಮಗ್ಗಲು ಹೋದರೆ ಹೊಲಸು ನಾರತೈತಿ ಅಂತ ಮೂಗು ಮುಚ್ಚಕೋತೀರಿ ಅಂತಹ ತಿಪ್ಪೆಯ ಗರ್ಭದಿಂದಲೇ ಸುಗಂಧ ಸೂಸುವ ಹೂವು ಅರಳತೈತಲ್ಲ ಅದು ಸೃಷ್ಟಿಯ ವೈಚಿತ್ರ್ಯ.

ಪಂಚಭೂತಗಳಿಂದ ಜಗತ್ತು ನಿರ್ಮಾಣ ಆಗಿದೆ. ಮಣ್ಣು, ನೀರು, ಗಾಳಿ, ಅಗ್ನಿ, ಆಕಾಶದಿಂದ ಕೂಡಿದ ಈ ಜಗತ್ತನ್ನು ಬಳಸಬೇಕು. ಕೆಡಿಸಬಾರದು. ಈ ಜೀವ ಅದಲ್ಲ, ಅದು ಪೂರಾ ದಡ್ಡನೂ ಅಲ್ಲ, ಪೂರಾ ಶಾಣ್ಯಾನೂ ಅಲ್ಲ. ತಿಳಿವಳಿಕೆ ಇರುವಂಗೆ ಮಾತನಾಡತೈತಿ. ಆದರ ತಿಳಿವಳಿಕೆ ಇಲ್ಲ. ನಾವು ತಿಳಕೋಬೇಕು; ನಾವು ಮಾಲೀಕರಲ್ಲ, ತಿಳಿದು ಬಳಸಬೇಕು ಅಂಬೋದನ್ನ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಗುರುವಾರ ಸೆಪ್ಟೆಂಬರ್ 12, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ನವಮಿ ಗಂ. 23-33 **ನಕ್ಷತ್ರ:** ಮೂಲ ಗಂ. 21-53 **ಯೋಗ:** ಆಯುಷ್ಮಾನ್ ಗಂ. 22-41 **ಕರಣ:** ಬಾಲವ ಗಂ. 11-46, ಸಿಂಹ ಮಾಸದ 26 ನೇ ದಿನ, **ಮಳೆನಕ್ಷತ್ರ:** ಪೂರ್ವಫಲ್ಗುಣಿ 4.
ರಾಹುಕಾಲ: ಮಧ್ಯಾಹ್ನ 01-30 – 03-00
ಸೂರ್ಯೋದಯ: 06-23 **ಸೂರ್ಯಾಸ್ತ:** 06-30
ಮುಸ್ಲಿಂ ದಿನಾಂಕ: 08 ರಬಿಉಲ್ಲಾವಲ್
ದಿನ ವಿಶೇಷ: ಕೇದಾರೇಶ್ವರ ವ್ರತ **ಅದೃಷ್ಟ ಸಂಖ್ಯೆ:** 2, 5

ಮೇಷ: ಮನೆಯಲ್ಲಿನ ಅನ್ನ ಸಂತರ್ಪಣೆ ಕಾರ್ಯಕ್ರಮಕ್ಕಾಗಿ ಸರಕು ಸಾಮಾನುಗಳನ್ನು ಖರೀದಿಸುವಿರಿ. ಸರ್ಕಾರಿ ದಾಖಲೆಗಳಿಗೆ ಸಂಬಂಧಿಸಿದ ಬಾಕಿ ಕೆಲಸಗಳನ್ನು ಬೇಗ ಮುಗಿಸಿಕೊಳ್ಳುವುದು ಸೂಕ್ತ.

ವೃಷಭ: ಎಷ್ಟೇ ಪರಿಶ್ರಮ ಹಾಕಿದರೂ ರಾಜಕೀಯ ಭವಿಷ್ಯ ಅನುಕೂಲಕರವಾಗಿರುವುದಿಲ್ಲ. ಅಭಿವೃದ್ಧಿ ಕಾರ್ಯಗಳು ನಿರಂತರವಾಗಿ ಮುಂದುವರಿಯಲಿದೆ. ಇತರರನ್ನು ನಂಬದಿರುವಂತಹ ಪರಿಸ್ಥಿತಿ ನಿರ್ಮಾಣವಾಗಲಿದೆ.

ಮಿಥುನ: ಅನಗತ್ಯ ವಸ್ತುಗಳಿಗೆ ಹೆಚ್ಚಿನ ಹಣ ವ್ಯಯಿಸುವುದರಿಂದ ಕುಟುಂಬ ಸದಸ್ಯರು ಕೋಪಗೊಳ್ಳುವರು. ಆದಾಗ್ಯೂ, ಖರ್ಚು-ವೆಚ್ಚಗಳನ್ನು ನಿರ್ವಹಿಸುವಲ್ಲಿ ಯಶಸ್ವಿಯಾಗುವಿರಿ. ಷೇರು ಖರೀದಿಸುವಾಗ ಎಚ್ಚರವಹಿಸಿ.

ಕರ್ಕಾಟಕ: ವೃತ್ತಿರಂಗದಲ್ಲಿ ಅನ್ಯರ ಮಾತಿಗೆ ಕಿವಿಗೊಡದೆ, ಸ್ವ–ಇಚ್ಛೆಯಂತೆ ಮುಂದುವರಿಯಿರಿ. ಯಂತ್ರೋಪಕರಣಗಳ ಮಾರಾಟದಿಂದ ಅಧಿಕ ಲಾಭವಾಗುವುದು. ಚಿನ್ನ ಬೆಳ್ಳಿ ವಸ್ತುಗಳನ್ನು ಖರೀದಿ ಮಾಡುವಿರಿ.

ಸಿಂಹ: ಮನೆ ಅಥವಾ ಕಟ್ಟಡ ನಿರ್ಮಾಣವು ಯಾವುದೇ ತೊಂದರೆಗಳಿಲ್ಲದೆ ಮುಂದುವರಿಯಲಿದೆ. ಕುಟುಂಬದವರೊಡನೆ ಮನರಂಜನೆಗಾಗಿ ಸಮಯ ಮೀಸಲಿಡಿ. ಅಧಿಕಾರಿಗಳ ಮಾತಿಗೆ ವಿಧೇಯರಾಗಿ ನಡೆದುಕೊಳ್ಳಿ.

ಕನ್ಯಾ: ರಕ್ಷಣಾ ವಲಯದಲ್ಲಿ ಕಾರ್ಯ ನಿರ್ವಹಿಸುವವರಿಂದ ಕರ್ತವ್ಯ ಲೋಪಗಳು ಸಂಭವಿಸಬಹುದು. ಸಂಜೆ ವೇಳೆಗೆ ತಾಯಿಯ ತವರು ಮನೆಯ ಕಡೆಯಿಂದ ಸಿಹಿ ಸುದ್ದಿ ಬರಲಿದೆ. ಶ್ರೀ ವಿನಾಯಕನ ಸ್ತುತಿ ಮಾಡಿ.

ತುಲಾ: ಐಷಾರಾಮಿ ಖರ್ಚು ವೆಚ್ಚಗಳ ಬಗ್ಗೆ ಜಾಗ್ರತೆ ವಹಿಸುವುದು ಅನಿವಾರ್ಯ. ವಿವಾಹ ವಯಸ್ಕ ಯೋಗ್ಯರಿಗೆ ನೂತನ ಸಂಬಂಧಗಳು ಕಂಡು ಬರಲಿವೆ. ಸಾಫ್ಟ್‌ವೇರ್ ಹಾಗೂ ತಾಂತ್ರಿಕ ವಿದ್ಯಾರ್ಥಿಗಳಿಗೆ ನೌಕರಿ ಸಿಗಲಿದೆ.

ವೃಶ್ಚಿಕ: ಪ್ರೀತಿ ಪಾತ್ರರಿಗೆ ವಿಶೇಷ ಉಡುಗೊರೆ ನೀಡುವ ಉದ್ದೇಶದಿಂದ ಖರೀದಿ ಮಾಡುವಿರಿ. ಜನರ ಭಾವನೆಗಳಿಗೆ ಸೂಕ್ತ ರೀತಿಯಲ್ಲಿ ಸ್ಪಂದಿಸಿ. ನೂತನ ನೌಕರಿ ಹುಡುಕಲು ಪ್ರಯತ್ನಿಸುವಿರಿ.

ಧನು: ದಾಕ್ಷಿಣ್ಯ ಪ್ರವೃತ್ತಿಗೆ ಒಳಗಾಗದಂತೆ ನಿಸ್ಸಂಕೋಚತೆಯಿಂದ ಇರಬೇಕಾಗುತ್ತದೆ. ಸಣ್ಣವಯಸ್ಸಿನ ಮಕ್ಕಳ ಆಟೋಟಗಳನ್ನು ನೋಡಿ ಕಳೆದು ಹೋದ ದಿನಗಳನ್ನು ನೆನಪಿಸಿಕೊಳ್ಳುವಿರಿ. ಕ್ರೀಡಾಪಟುಗಳಿಗೆ ಪ್ರೋತ್ಸಾಹ ಸಿಗಲಿದೆ.

ಮಕರ: ಕಾರ್ಯದೊತ್ತಡದ ನಡುವೆ ಕೌಟುಂಬಿಕ ಸಮಸ್ಯೆಗಳನ್ನು ಉಪೇಕ್ಷಿಸದಿರಿ. ತಂದೆ-ತಾಯಿಯ ಆರೋಗ್ಯದ ಬಗ್ಗೆ ಕಾಳಜಿವಹಿಸುವುದು ಅನಿವಾರ್ಯ. ಪಾಲುದಾರಿಕೆಯ ವ್ಯವಹಾರದಲ್ಲಿ ನಷ್ಟ ಸಂಭವಿಸಬಹುದು.

ಕುಂಭ: ವ್ಯವಹಾರದಲ್ಲಿ ಆತ್ಮೀಯರ ಸಲಹೆ ಸ್ವೀಕರಿಸಿದ ಪರಿಣಾಮ ನಷ್ಟ ಉಂಟಾಗಬಹುದು. ಮನೆಯಲ್ಲಿ ಬಾಕಿ ಇರುವ ಗೃಹಕೃತ್ಯಗಳನ್ನು ಪೂರೈಸುವ ಪ್ರಯತ್ನ ಮಾಡುವಿರಿ. ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ.

ಮೀನ: ಒಂಟಿತನ ಹೋಗಲಾಡಿಸಿಕೊಳ್ಳಲು ಕೆಲಸಗಳತ್ತ ಮನಸ್ಸು ಹರಿಸುವಿರಿ. ಸಾಂಸಾರಿಕ ಸಂಬಂಧಗಳನ್ನು ಉಳಿಸಿ ಕಾಪಾಡುವುದರಲ್ಲಿ ಜಯವಿರುತ್ತದೆ. ಕುಟುಂಬದ ಉನ್ನತ ಜವಾಬ್ದಾರಿ ವಹಿಸಿಕೊಳ್ಳಬೇಕಾಗುವುದು.

ಪದಬಂಧ 5800

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಮಾತು ಕೊಡುವುದು (3)
4.ಮೂರು ಮಾತ್ರೆಗಳ ಕಾಲವನ್ನು ಹೊಂದಿರುವ ಅಕ್ಷರ (2)
6.ವಿದಾಯ ಹೇಳಲು ಸೇರಿದ ಗುಂಪು! (4)
7.ಕಾಲಕ್ಕೆ ಸರಿಯಾದುದು (4)
10.ಗತಿಸಿದ ಮಹಾಪುರುಷರ ಹುಟ್ಟುಹಬ್ಬ (3)
11.ಎಲ್ಲರೂ ಒಟ್ಟಾಗಿ ಹಾಡುವುದು (5)
12.ಮಾದ ಎಸಗಿದ ತಪ್ಪು! (3)
14.ಶ್ರೀಮಂತನಿಲ್ಲಿ ತಿರುಗಿದ್ದಾನೆ (4)
17.ಮದುವೆ ಗಂಡಿನ ಆದಾಯ! (4)
18.ತಲೆಯ ಮಧ್ಯಭಾಗ (2)
19.ಶುನಕ ಮೂಸುತ್ತಿರುವ ಬಳ್ಳುಳ್ಳಿ! (3)

ಮೇಲಿಂದ ಕೆಳಕ್ಕೆ
1.ಉಸಿರಾಟಕ್ಕೆ ಸಹಾಯಕವಾದ ಅಂಗ (4)
2.ಪಾಯಸ ನೆಕ್ಕುತ್ತಿರುವ ಕಾಗೆ! (3)
3.ಇದು ಅಸಲಿಯಂತೂ ಅಲ್ಲವೇ ಅಲ್ಲ! (3)
5.ವರ್ಗ ಅಥವಾ ಇಯತ್ತೆ (4)
8.ಸಮಯವನ್ನು ವ್ಯರ್ಥವಾಗಿ ಕಳೆಯುವುದು (5)
9.ವನದ ಬಗ್ಗೆ ಬರೆದ ಪದ್ಯ (3)
11.ಬೆಲೆಯಿಟ್ಟು ನೀಡಿದ ಸಲುಗೆ! (3)
12.ನಡುವೆ ಲೋಭವಿಟ್ಟು ಆಸೆ ಹುಟ್ಟಿಸುವುದು (4)
13.ತುಸುವೆ ಬೀರಿದ ಮಂದಹಾಸ (4)
15.ಈತ ಹಳ್ಳಿಯವನು (3)
16.ವನದ ಕೊನೆಗೆ ಮಾಡಿದ ಯಜ್ಞ (3)



5799ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉರುಲು 2.ಹಣಾಹಣಿ 4.ಹಕ್ಕುದಾರ 6.ಗಿಂಬಳ 7.ಣೆಹ 9.ರಭಸ 11.ಹಸು 13.ಮೆಲುಕು 14.ಪರಿಪೂರ್ಣ 16.ಭರವಸೆ 17.ಅಂಬುಧಿ

ಮೇಲಿಂದ ಕೆಳಕ್ಕೆ:
1.ಉದಾಹರಣೆ 2.ಹಟ್ಟಿ 3.ಹಣೆಬರಹ 4.ಪುರಸ್ಕಾರ 8.ಹಲಾಲುಕೋರ 10.ಸನ್ಯಾಪಲು 12.ಸುವರ್ಣಸಂಧಿ 15.ಮೂಸೆ

ಸುಡೊಕು 6185

	6		8				1	2
2								
		4	9		2	8		6
3		6				5		9
	7		3	2	4		8	
		1				3		7
4			6		1		9	
	3				5			8
6		8	2				5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6184 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

₹15 ಸಾವಿರ ದಾಟಿದ ಉಂಡೆ ಕೊಬ್ಬರಿ ಬೆಲೆ

ಪ್ರಜಾವಾಣಿ ವಾರ್ತೆ



ತುಮಕೂರು: ಏರಿಕೆಯತ್ತ ಮುಖ ಮಾಡಿರುವ ಉಂಡೆ ಕೊಬ್ಬರಿ ಬೆಲೆ ಬುಧವಾರ ಕ್ವಿಂಟಲ್‌ಗೆ ₹15 ಸಾವಿರ ದಾಟಿದ್ದು, ರೈತರ ಮುಖದಲ್ಲಿ ಮಂದಹಾಸ ಮೂಡಿಸಿದೆ.

ತಿಪಟೂರು ಎಪಿಎಂಸಿ ಮಾರುಕಟ್ಟೆಯಲ್ಲಿ ಕ್ವಿಂಟಲ್ ಕೊಬ್ಬರಿ ಗರಿಷ್ಠ ₹15,022ಕ್ಕೆ ಹರಾಜಾಗಿದೆ. ಕನಿಷ್ಠ ₹13,800 ದರ ಸಿಕ್ಕಿದೆ. ಮಾರುಕಟ್ಟೆಗೆ ಬುಧವಾರ 2,150 ಕ್ವಿಂಟಲ್ (5,002 ಚೀಲ) ಆವಕವಾಗಿತ್ತು. ಕಳೆದ ಬುಧವಾರದ ಹರಾಜಿನಲ್ಲಿ ಕ್ವಿಂಟಲ್ ₹12,555ಕ್ಕೆ ಮಾರಾಟವಾಗಿತ್ತು. ಒಂದೇ ವಾರದ ಅಂತರದಲ್ಲಿ ₹2,500 ಹೆಚ್ಚಳ ದಾಖಲಿಸಿದೆ.

ಮೂರು ವಾರದ ಹಿಂದೆ ಕ್ವಿಂಟಲ್‌ಗೆ ₹12 ಸಾವಿರ ದಾಟಿತ್ತು. ನಂತರದ ದಿನಗಳಲ್ಲಿ ಮತ್ತೆ ಇಳಿಕೆಯತ್ತ ಸಾಗಿತ್ತು. ಕೆಲವು ವಾರ ಏರಿಕೆ ಕಂಡ ಧಾರಣೆ ಈಗ ಒಮ್ಮೆಲೆ ₹15 ಸಾವಿರ ದಾಟಿದೆ. ಅರಸೀಕೆರೆ ಮಾರುಕಟ್ಟೆಯಲ್ಲೂ ಇದೇ ಬೆಲೆಗೆ ಕೊಬ್ಬರಿ ಮಾರಾಟವಾಗಿದೆ.

ಆಯುಧ ಪೂಜೆ, ದೀಪಾವಳಿ ಹಬ್ಬ ಬರುತ್ತಿದ್ದು, ಉತ್ತರ ಭಾರತದಲ್ಲಿ ಇದೀಗ ಕೊಬ್ಬರಿಗೆ ಬೇಡಿಕೆ ಬಂದಿದೆ. ಜತೆಗೆ ತಮಿಳುನಾಡು, ಕೇರಳದಲ್ಲಿ ಕೊಬ್ಬರಿ ಎಣ್ಣೆ ಹಾಗೂ ಇತರ ಉಪ ಉತ್ಪನ್ನಗಳ ತಯಾರಿಕೆ ಉದ್ಯಮಗಳು ಆರಂಭವಾಗಿದ್ದು, ಹೆಚ್ಚು ಗುಣಮಟ್ಟ ಹೊಂದಿರುವ ತಿಪಟೂರು ಭಾಗದ ಕೊಬ್ಬರಿಯನ್ನು ಅಧಿಕ ಪ್ರಮಾಣದಲ್ಲಿ ಖರೀದಿಸಲಾಗುತ್ತಿದೆ. ಇದರಿಂದಲೂ ಬೇಡಿಕೆ ಹೆಚ್ಚಾಗಿದ್ದು, ಬೆಲೆ ಏರಿಕೆಗೆ ಕಾರಣವಾಗಿದೆ ಎಂದು ವರ್ತಕರು ಹೇಳುತ್ತಾರೆ.

ರೈತರಿಗೆ ಎಳನೀರು ಲಾಭದಾಯಕ

ಹಬ್ಬದ ಸಮಯದಲ್ಲಿ ಬೇಡಿಕೆ ಹೆಚ್ಚಾಗಿದ್ದು, ನಿರೀಕ್ಷಿಸಿದಷ್ಟು ಆವಕ ಬರುತ್ತಿಲ್ಲ. ಕಳೆದ ವರ್ಷ ತೀವ್ರ ಬರದಿಂದಾಗಿ ಇಳುವರಿ ಗಣನೀಯವಾಗಿ ಕಡಿಮೆಯಾಗಿದೆ. ಜತೆಗೆ ಎಳನೀರಿಗೆ ಬೇಡಿಕೆ ಇರುವುದರಿಂದ ಕೊಬ್ಬರಿ ಮಾಡುವ ಬದಲು, ರೈತರು ಎಳನೀರು ಮಾರಾಟ ಮಾಡುತ್ತಿದ್ದಾರೆ. ಮಾರುಕಟ್ಟೆಯಲ್ಲಿ ಒಂದು ಎಳನೀರು ₹50ರಿಂದ ₹60ರ ವರೆಗೆ ಮಾರಾಟವಾಗುತ್ತಿದೆ. ರೈತರಿಂದ ₹25ರಿಂದ ₹30ರ ವರೆಗೂ ಖರೀದಿ ಮಾಡಲಾಗುತ್ತಿದೆ. ಕೊಬ್ಬರಿಗಿಂತ ಎಳನೀರಿಗೆ ಉತ್ತಮ ಬೆಲೆ ಸಿಗುತ್ತಿದ್ದು, ಸಾಕಷ್ಟು ರೈತರು ಕೊಬ್ಬರಿ ಆಗುವ ವರೆಗೂ ಕಾಯದೆ ಮಾರಾಟಕ್ಕೆ ಮುಂದಾಗಿದ್ದಾರೆ. ಹಾಗಾಗಿ ಕೊಬ್ಬರಿ ಉತ್ಪಾದನೆ ಕಡಿಮೆಯಾಗಿದ್ದು, ಬೇಡಿಕೆ ಕಂಡುಕೊಂಡಿದೆ ಎಂದು ವರ್ತಕರು ಹೇಳುತ್ತಾರೆ.

ಈರುಳ್ಳಿ: ತಗ್ಗುವುದೇ ಚಿಲ್ಲರೆ ದರ?

ಚಿಲ್ಲರೆ ಮಾರುಕಟ್ಟೆಯಲ್ಲಿ ಈರುಳ್ಳಿ ದರ ಏರಿಕೆಯಾಗಿದೆ. ಬೆಲೆ ನಿಯಂತ್ರಣಕ್ಕೆ ಮುಂದಾಗಿರುವ ಕೇಂದ್ರ ಸರ್ಕಾರವು ರಿಯಾಯಿತಿ ದರದಡಿ ಮಾರಾಟಕ್ಕೆ ಕ್ರಮವಹಿಸಿದೆ. ಇದರಿಂದ ಧಾರಣೆ ಕುಸಿಯಲಿದೆ ಎಂದು ಆತಂಕಗೊಂಡಿರುವ ಮಹಾರಾಷ್ಟ್ರದ ವರ್ತಕರು ದಾಸ್ತಾನಿಟ್ಟಿದ್ದ ಈರುಳ್ಳಿಯನ್ನು ಕರ್ನಾಟಕದ ಮಾರುಕಟ್ಟೆಗೆ ರವಾನಿಸುತ್ತಿದ್ದಾರೆ. ಇದು ಲಾಭದ ನಿರೀಕ್ಷೆಯಲ್ಲಿರುವ ರಾಜ್ಯದ ಬೆಳೆಗಾರರನ್ನು ದಿಕ್ಕೆಡುವಂತೆ ಮಾಡಿದೆ

ಮಹಾರಾಷ್ಟ್ರದಿಂದ ಆವಕ ಹೆಚ್ಚಳ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕಳೆದ ಎರಡು ದಿನದಿಂದ ಇಲ್ಲಿನ ಯಶವಂತಪುರ ಕೃಷಿ ಉತ್ಪನ್ನ ಮಾರುಕಟ್ಟೆಗೆ ಮಹಾರಾಷ್ಟ್ರದಿಂದ ಈರುಳ್ಳಿ ಆವಕ ಹೆಚ್ಚಾಗುತ್ತಿದೆ.

ಬುಧವಾರ 46 ಸಾವಿರ ಚೀಲ (ಪ್ರತಿ ಚೀಲ 50 ಕೆ.ಜಿ) ಪೂರೈಕೆಯಾಗಿದೆ. ಹಾಗಾಗಿ, 'ಇನ್ನೊಂದು ವಾರದೊಳಗೆ ಚಿಲ್ಲರೆ ಮಾರುಕಟ್ಟೆಯಲ್ಲಿ ಈರುಳ್ಳಿ ಬೆಲೆ ಇಳಿಕೆಯ ಹಾದಿಯಲ್ಲಿ ಸಾಗುವ ಸಾಧ್ಯತೆಯಿದೆ' ಎಂದು ಸಗಟು ವ್ಯಾಪಾರಿಗಳು ಹೇಳುತ್ತಾರೆ.

ಪ್ರಸ್ತುತ ಚಿಲ್ಲರೆ ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿ 'ಎ' ಗ್ರೇಡ್ ಈರುಳ್ಳಿಗೆ ₹60 ಧಾರಣೆಯಿದೆ. ತಳ್ಳುವ ಗಾಡಿ ಹಾಗೂ ಸರಕು ಸಾಗಣೆ ಆಟೊಗಳಲ್ಲಿ ವ್ಯಾಪಾರಿಗಳು 'ಎ' ಗ್ರೇಡ್ ಈರುಳ್ಳಿಯನ್ನು ₹100ಕ್ಕೆ ಮೂರು ಕೆ.ಜಿ ಲೆಕ್ಕದಲ್ಲಿ ಮಾರಾಟ ಮಾಡುತ್ತಿದ್ದಾರೆ.

ಚಿಲ್ಲರೆ ಮಾರುಕಟ್ಟೆಯಲ್ಲಿ ಬೆಲೆ ನಿಯಂತ್ರಿಸಲು ಮೊದಲ ಹಂತದಲ್ಲಿ ದೆಹಲಿ ಮತ್ತು ಮುಂಬೈನಲ್ಲಿ ಪ್ರತಿ ಕೆ.ಜಿ ಈರುಳ್ಳಿಗೆ ₹35ರಂತೆ ಕೇಂದ್ರ ಸರ್ಕಾರವು ರಿಯಾಯಿತಿ ದರದಡಿ ಮಾರಾಟ ಆರಂಭಿಸಿದೆ. ಎರಡನೇ ಹಂತದಲ್ಲಿ ಕೋಲ್ಕತ್ತ, ಗುವಾಹಟಿ, ಹೈದರಾಬಾದ್, ಚೆನ್ನೈ, ಬೆಂಗಳೂರು ಹಾಗೂ ಅಹಮದಾಬಾದ್‌ನಲ್ಲಿ ಮಾರಾಟ ಆರಂಭಿಸುವ ಉದ್ದೇಶ ಹೊಂದಿದೆ.

ಹಾಗಾಗಿಯೇ, ಕಳೆದ ವರ್ಷದ ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ದಾಸ್ತಾನು ಮಾಡಿಟ್ಟುಕೊಂಡಿದ್ದ ಈರುಳ್ಳಿಯ ಮಾರಾಟಕ್ಕೆ ಮಹಾರಾಷ್ಟ್ರದ ವರ್ತಕರು ಮುಂದಾಗಿದ್ದಾರೆ. ಇದರಿಂದ ಮಾರುಕಟ್ಟೆಯಲ್ಲಿ ಆವಕ ಏರಿಕೆಯಾಗುತ್ತಿದೆ ಎನ್ನುತ್ತಾರೆ ವ್ಯಾಪಾರಿಗಳು.

ಪ್ರಸ್ತುತ ಬೆಂಗಳೂರು ಮಾರುಕಟ್ಟೆಗೆ ಹಗರಿಬೊಮ್ಮನಹಳ್ಳಿ, ಕೊಟ್ಟೂರು, ಹಿರಿಯೂರು, ಚಿತ್ರದುರ್ಗದಿಂದ ಈರುಳ್ಳಿ ಪೂರೈಕೆಯಾಗುತ್ತಿದೆ. ಬಿಸಿಲ ಝಳ ಕಡಿಮೆ ಇರುವುದು ಹಾಗೂ ಮಳೆಯಿಂದಾಗಿ ಹಸಿ ಸರಕು ಹೆಚ್ಚು ಪೂರೈಕೆಯಾಗುತ್ತಿದೆ. ಈ ಈರುಳ್ಳಿಗೆ ಬೆಲೆ ಕಡಿಮೆಯಿದೆ ಎಂಬುದು ಅವರ ವಿವರಣೆ.

ರಾಜ್ಯದ ವಿವಿಧೆಡೆಯಿಂದ ಪೂರೈಕೆಯಾಗುವ ಪ್ರತಿ ಕ್ವಿಂಟಲ್ 'ಎ' ಗ್ರೇಡ್ ಈರುಳ್ಳಿಗೆ ಸಗಟು ದರ ₹3,200ರಿಂದ ₹3,600 ಇದೆ. ಮಹಾರಾಷ್ಟ್ರದಿಂದ ಪೂರೈಕೆಯಾಗುವ ಈರುಳ್ಳಿಗೆ ₹3,500ರಿಂದ ₹4,500 ಸಗಟು ದರವಿದೆ. ಗುಣಮಟ್ಟದ ಈರುಳ್ಳಿಯು ಯಶವಂತಪುರ ಮಾರುಕಟ್ಟೆಯಿಂದ ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ, ಆಂಧ್ರಪ್ರದೇಶಕ್ಕೆ ಪೂರೈಕೆಯಾಗುತ್ತಿದೆ ಎಂದು ವ್ಯಾಪಾರಿಗಳು ಹೇಳುತ್ತಾರೆ.

'ಕೇಂದ್ರ ಸರ್ಕಾರವು ಚಿಲ್ಲರೆ ಮಾರುಕಟ್ಟೆಯಲ್ಲಿ ರಿಯಾಯಿತಿ ದರದಡಿ ಈರುಳ್ಳಿ ಮಾರಾಟಕ್ಕೆ ಮುಂದಾಗಿದೆ. ಇದರಿಂದ ಮಹಾರಾಷ್ಟ್ರದ ವರ್ತಕರಿಗೆ ಬೆಲೆ ಕುಸಿಯುವ ಆತಂಕ ಕಾಡುತ್ತಿದೆ. ಹಾಗಾಗಿ, ಬೆಂಗಳೂರು ಮಾರುಕಟ್ಟೆಗೆ ಹೆಚ್ಚು ಪೂರೈಕೆ ಮಾಡುತ್ತಿದ್ದಾರೆ. ಮುಂಬರುವ ವಾರಗಳಲ್ಲಿ ಚಿಲ್ಲರೆ ಮಾರುಕಟ್ಟೆಯಲ್ಲಿ ದರ ಇಳಿಕೆಯಾಗುವ ಸಾಧ್ಯತೆಯಿದೆ' ಎಂದು ಯಶವಂತಪುರ ಎಪಿಎಂಸಿ ವರ್ತಕ ಜಿ. ಲೋಕಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

ಲಾಭದ ನಿರೀಕ್ಷೆಯಲ್ಲಿ ರೈತರು

• ಕೆ.ಸೋಮಶೇಖರ್

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ತಾಲ್ಲೂಕಿನಲ್ಲಿ ಮುಂಗಾರು ಮುಕ್ತಾಯದ ಈರುಳ್ಳಿ ಕಟಾವು ಪ್ರಾರಂಭವಾಗಿದೆ. ಮಾರುಕಟ್ಟೆಯಲ್ಲಿ 'ಎ' ಗ್ರೇಡ್ ಈರುಳ್ಳಿಗೆ ಉತ್ತಮ ಬೆಲೆಯಿದ್ದು, ಬೆಳೆಗಾರರು ಹೆಚ್ಚಿನ ಲಾಭದ ನಿರೀಕ್ಷೆಯಲ್ಲಿದ್ದಾರೆ.


ಈ ವರ್ಷ ತಾಲ್ಲೂಕಿನಲ್ಲಿ 1,250 ಹೆಕ್ಟೇರ್ ಪ್ರದೇಶದಲ್ಲಿ ಈರುಳ್ಳಿ ಬಿತ್ತನೆಯಾಗಿದೆ. ಇಲ್ಲಿನ ರೈತರು ಬೆಂಗಳೂರು ಮಾರುಕಟ್ಟೆಯನ್ನು ಹೆಚ್ಚಾಗಿ ಅವಲಂಬಿಸಿದ್ದಾರೆ.

ಇಟ್ಟಿಗಿ ಹೋಬಳಿಯ ಇಟ್ಟಿಗಿ, ಉತ್ತಂಗಿ, ತಳಕಲ್ಲು, ಕಂಬಮ್ಮನಹಳ್ಳಿ, ಮಹಾಜನದಹಳ್ಳಿ, ಸೋಗಿ ಗ್ರಾಮ, ಹಡಗಲಿ, ಹಿರೇಹಡಗಲಿ ಹೋಬಳಿಯ ಕೆಲವು ಗ್ರಾಮಗಳಲ್ಲಿ ರೈತರು ಈರುಳ್ಳಿ ಬೆಳೆದಿದ್ದಾರೆ.

ಐದಾರು ವರ್ಷದಿಂದ ಈರುಳ್ಳಿ ಬೆಳೆಗೆ ಕೊಳೆ ರೋಗ ಬಂದು ಬೆಳೆಗಾರರು ನಷ್ಟ ಅನುಭವಿಸಿದ್ದರು. ಬೆಳೆ ನಿರ್ವಹಣೆ ಖರ್ಚು ಅಧಿಕವಿದ್ದ ಕಾರಣ ಹಲವು ರೈತರು ಈರುಳ್ಳಿ ಕೃಷಿಯಿಂದ ವಿಮುಖರಾಗಿದ್ದರು. ತಾಲ್ಲೂಕಿನಲ್ಲಿ ಈ ಹಿಂದೆ ಮೂರು-ನಾಲ್ಕು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಈರುಳ್ಳಿ ಬೆಳೆಯಲಾಗುತ್ತಿತ್ತು.

'ಎರಡು ಎಕರೆಯಲ್ಲಿ ಈರುಳ್ಳಿ ಬೆಳೆದು ಕಟಾವು ಮಾಡುತ್ತಿದ್ದೇನೆ. 120 ಕ್ವಿಂಟಲ್ ನಿರೀಕ್ಷೆಯಲ್ಲಿದ್ದೇನೆ. ಬೆಳೆ ನಿರ್ವಹಣೆಗೆ ₹1.50 ಲಕ್ಷ ಖರ್ಚು ಮಾಡಿದ್ದು, ಈ ಬಾರಿ ಮಾರುಕಟ್ಟೆಯಲ್ಲಿ ಸ್ಥಿರ ಬೆಲೆ ಇರುವುದರಿಂದ ಆದಾಯ ಕೈಸೇರುವ ನಿರೀಕ್ಷೆ ಇದೆ' ಎಂದು ಉತ್ತಂಗಿ ಗ್ರಾಮದ ರೈತ ಅಂಗಡಿ ಕೊಟ್ರೇಶ ಹೇಳಿದರು.

'ಕೇಂದ್ರ ಸರ್ಕಾರವು ರೈತರಿಂದ ಕ್ವಿಂಟಲ್‌ಗೆ ₹2,500 ದರದಲ್ಲಿ ಈರುಳ್ಳಿ ಖರೀದಿಸಿ, ಕೆ.ಜಿಗೆ ₹35ರಂತೆ ಗ್ರಾಹಕರಿಗೆ ಮಾರಲು ಮುಂದಾಗುತ್ತಿರುವುದು ಸರಿಯಲ್ಲ. ಪ್ರತಿ ಕ್ವಿಂಟಲ್ ಈರುಳ್ಳಿಯನ್ನು ₹7,000 ದರದಲ್ಲಿ ಖರೀದಿಸಿ, ಗ್ರಾಹಕರಿಗೆ ಮಾರಾಟ ಮಾಡಬೇಕು. ಆಗ ಬೆಳೆಗಾರರಿಗೆ ನಷ್ಟವಾಗುವುದಿಲ್ಲ' ಎಂಬುದು ಈರುಳ್ಳಿ ಬೆಳೆಗಾರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎನ್.ಎಂ. ಸಿದ್ದೇಶ ಅವರ ಒತ್ತಾಯ.



ಹೂವಿನಹಡಗಲಿ ತಾಲ್ಲೂಕಿನ ಉತ್ತಂಗಿ ಗ್ರಾಮದಲ್ಲಿ ಈರುಳ್ಳಿ ಶ್ರೇಣೀಕರಣ ಮಾಡುತ್ತಿರುವ ಕಾರ್ಮಿಕರು –ಪ್ರಜಾವಾಣಿ ಚಿತ್ರ

ಬರ್ಮಾ ಸರಕು ಕಲಬೆರಕೆ: ದರ ಕುಸಿತ

ಅಡಿಕೆಯ ಮಾನ ಕಳೆಯಬೇಡಿ...

• ರಾಜೇಂದ್ರ ಹೆಗಡೆ

ಶಿರಸಿ: ಕೆಲವು ವರ್ತಕರು ಮಲೆನಾಡಿನ ಗುಣಮಟ್ಟದ ಚಾಲಿ ಅಡಿಕೆ ಜತೆ ಬರ್ಮಾ ಅಡಿಕೆಯನ್ನು ಕಲಬೆರಕೆ ಮಾಡಿ ಮಾರುಕಟ್ಟೆಗೆ ಪೂರೈಕೆ ಮಾಡುತ್ತಿದ್ದಾರೆ. ಇದರಿಂದ ಕಳೆದ ಒಂದು ತಿಂಗಳ ಅವಧಿಯಲ್ಲಿ ಚಾಲಿ ಅಡಿಕೆ ದರ ಕ್ವಿಂಟಲ್‌ಗೆ ₹3 ಸಾವಿರ ಕುಸಿದಿದೆ. ದರ ಸ್ಥಿರತೆಗೆ ಶ್ರಮಿಸುತ್ತಿರುವ ಸಹಕಾರ ಸಂಘಗಳಿಗೆ ಇದು ಕಂಗೆಡಿಸಿದೆ.

ಕೊಳೆ, ಎಲೆಚುಕ್ಕಿ ರೋಗದಿಂದ ಫಸಲು ಕಳೆದುಕೊಂಡಿರುವ ಅಡಿಕೆ ಬೆಳೆಗಾರರಿಗೆ ಈಗ ಮಾರುಕಟ್ಟೆಯಲ್ಲಿನ ಕೆಲ ವರ್ತಕರ ನಡೆಯಿಂದ ಆರ್ಥಿಕ ಆಘಾತ ಎದುರಾಗಿದೆ.



'ಕಲಬೆರಕೆ ಕಾರಣಕ್ಕೆ ಚಾಲಿ ಅಡಿಕೆ ದರ ಇಳಿಕೆಯ ಹಾದಿ ಹಿಡಿದಿದ್ದು, ಪ್ರಾಮಾಣಿಕವಾಗಿ ಗುಣಮಟ್ಟದ ಅಡಿಕೆ ಮಾರುವ ರೈತರನ್ನು ಚಿಂತೆಗೀಡು ಮಾಡಿದೆ.

'ವಿದೇಶಿ ಒಪ್ಪಂದಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವ ವರ್ತಕರು ಬರ್ಮಾ ದೇಶದ ಕಳಪೆ ದರ್ಜೆಯ ಅಡಿಕೆಯನ್ನು ತರಿಸಿಕೊಳ್ಳುತ್ತಿದ್ದಾರೆ. ಕೆ.ಜಿಗೆ ₹100 ರಿಂದ ₹140ಕ್ಕೆ ಸಿಗುವ ಈ ಅಡಿಕೆಯನ್ನು ಸ್ಥಳೀಯ ಉತ್ತಮ ಗುಣಮಟ್ಟದ ಅಡಿಕೆ ಜತೆ ಮಿಶ್ರಣಗೊಳಿಸಿ ಮತ್ತೆ ಮಾರುಕಟ್ಟೆಗೆ ಪೂರೈಸುತ್ತಾರೆ. ಇಷ್ಟು ವರ್ಷ ಹೊರ ರಾಜ್ಯಗಳಲ್ಲಿ ಇಂಥ ಬೆಳವಣಿಗೆ ಹೆಚ್ಚಿತ್ತು. ಈಗ ಮಲೆನಾಡಿನ ಅಡಿಕೆ ಮಾರುಕಟ್ಟೆಗೂ ಬಂದಿದೆ' ಎಂದು ಮಾರುಕಟ್ಟೆ ತಜ್ಞರು ಹೇಳುತ್ತಾರೆ.

'ಈ ಕುತಂತ್ರದಿಂದಾಗಿ ಮಲೆನಾಡಿನ ಉತ್ತಮ ಅಡಿಕೆಗೆ ಉತ್ತರ ಭಾರತದ ಮಾರುಕಟ್ಟೆಯಲ್ಲಿ ಇದ್ದ ಬೇಡಿಕೆ ಕುಸಿಯುತ್ತಿದೆ. ಇದರಿಂದ ತಿಂಗಳಲ್ಲಿ ಚಾಲಿ ಅಡಿಕೆ ದರ ಕ್ವಿಂಟಲ್‌ಗೆ ₹33 ಸಾವಿರದಿಂದ ₹30 ಸಾವಿರಕ್ಕೆ ಇಳಿದಿದೆ. ಸರ್ಕಾರ ನಿಗಾ ವಹಿಸದಿದ್ದರೆ ಅಡಿಕೆ ಮಾರಾಟದ ಹಂಗಾಮಿನ ವೇಳೆ ದರ ಪಾತಾಳಕ್ಕೆ ಕುಸಿಯಬಹುದು' ಎಂಬುದು ಅವರ ಆತಂಕ.

> ಮಾರುಕಟ್ಟೆಯಲ್ಲಿ ಕಳಪೆ ದರ್ಜೆಯ ಬರ್ಮಾ ಅಡಿಕೆ ಮಿಶ್ರಣ ಮಾಲು ಮುಂದಾಗುವ ವರ್ತಕರ ವಿರುದ್ಧ ಕ್ರಮಕ್ಕೆ ಎಪಿಎಂಸಿ ಅಧಿಕಾರಿಗಳು ಮುಂದಾಗಬೇಕು
> **ಎಂ.ಎನ್.ಭಟ್,** ಉಪಾಧ್ಯಕ್ಷ, ಟಿಎಸ್‌ಎಸ್, ಶಿರಸಿ

'ಸ್ಥಳೀಯವಾಗಿ ರೈತರಿಂದ ಗುರುತಿಸಿಕೊಂಡು, ಅಡಿಕೆ ವರ್ತಕರಾಗಿರುವ ಕೆಲವರು ಬರ್ಮಾ ಅಡಿಕೆ ಮಿಶ್ರಣವನ್ನು ಸಂಘದಲ್ಲಿ ಮಾರಲು ಬಂದಾಗ 35 ರಿಂದ 40 ಚೀಲ ಕಲಬೆರಕೆ ಆಗಿದ್ದು ಗೊತ್ತಾಯಿತು. ತಕ್ಷಣವೇ ಎಲ್ಲ ಅಡಿಕೆಯನ್ನು ವಾಪಸ್ ಕಳುಹಿಸಲಾಯಿತು. ವರ್ತಕರ ಇಂಥ ಕುತಂತ್ರದಿಂದ ಅಡಿಕೆಯ ಸ್ಥಿರ ದರ ಕಾಪಾಡುವ ಸಮಸ್ಯೆ ಆಗುತ್ತಿದೆ' ಎನ್ನುತ್ತಾರೆ ಅಡಿಕೆ ವಹಿವಾಟು ಸಂಸ್ಥೆ ಟಿ.ಎಸ್.ಎಸ್. ಮುಖ್ಯಸ್ಥ ಗೋಪಾಲಕೃಷ್ಣ ವೈದ್ಯ.

'ಇದೇ ವರ್ತಕರು ಬೆಳೆಗಾರರನ್ನು ನೇರವಾಗಿ ಸಂಪರ್ಕಿಸಿ ಅವರ ಮನೆ ಬಾಗಿಲಲ್ಲೇ ಅಡಿಕೆ ಖರೀದಿಸಿ, ಅವುಗಳಿಗೂ ಬರ್ಮಾ ಅಡಿಕೆ ಸೇರಿಸಿ ಇಡೀ ಮಾರುಕಟ್ಟೆ ವ್ಯವಸ್ಥೆಯನ್ನು ಹದಗೆಡಿಸುತ್ತಿದ್ದಾರೆ' ಎಂದು ಹೇಳುತ್ತಾರೆ ಅವರು.

ಸ್ಯಾಮ್ಸಂಗ್ ನೌಕರರ ಮುಷ್ಕರ


ಚೆನ್ನೈ (ಪಿಟಿಐ/ ರಾಯಿಟರ್ಸ್): ವೇತನ ಪರಿಷ್ಕರಣೆ ಸೇರಿ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಶ್ರೀಪೆರಂಬದೂರು ಬಳಿ ಇರುವ ಸ್ಯಾಮ್ಸಂಗ್ ಕಂಪನಿಯ ನೌಕರರು ನಡೆಸುತ್ತಿರುವ ಮುಷ್ಕರವು ಬುಧವಾರ ಮೂರನೇ ದಿನಕ್ಕೆ ಕಾಲಿಟ್ಟಿದೆ.

ಉತ್ತಮ ವೇತನದ ಪ್ಯಾಕೇಜ್ ನೀಡುವಂತೆ ಕಂಪನಿಯ ಆಡಳಿತ ಮಂಡಳಿಗೆ ಬೇಡಿಕೆ ಸಲ್ಲಿಸಿದ್ದೇವೆ. ಈಗಾಗಲೇ, ಸೆಂಟರ್ ಫಾರ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಇದೆ. ಕಂಪನಿಯು ಇದಕ್ಕೆ ಮಾನ್ಯತೆ ನೀಡದ ಕಾರಣ ಪ್ರತಿಭಟನೆ ನಡೆಸಲಾಗುತ್ತಿದೆ ಎಂದು ನೌಕರರು ತಿಳಿಸಿದ್ದಾರೆ. ಈ ಕಂಪನಿಯಲ್ಲಿ 1,750 ನೌಕರರಿದ್ದಾರೆ.

ಶೇ 30ರಷ್ಟು ನೌಕರರ ವಜಾ?

ಸ್ಯಾಮ್ಸಂಗ್ ಕಂಪನಿಯು ವಿವಿಧ ದೇಶದ ತನ್ನ ಘಟಕಗಳಲ್ಲಿರುವ ಶೇ 30ರಷ್ಟು ನೌಕರರನ್ನು ವಜಾಗೊಳಿಸಲು ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ. ಮಾರಾಟ, ಮಾರುಕಟ್ಟೆ ವಿಭಾಗದಲ್ಲಿ ನೌಕರರ ಕಡಿತಕ್ಕೆ ಮುಂದಾಗಿದೆ. ಅಮೆರಿಕ, ಯುರೋಪ್, ಏಷ್ಯಾ, ಆಫ್ರಿಕಾದಲ್ಲಿರುವ ತನ್ನ ಘಟಕಗಳಲ್ಲಿನ ನೌಕರರನ್ನು ವಜಾಗೊಳಿಸಲು ತೀರ್ಮಾನಿಸಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	25,041
ಇಂದಿನ ಅಂತ್ಯ	24,918
▼	122
ದಿನದ ಕನಿಷ್ಠ	24,885

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹227
ಆರ್‌ಎಸ್‌ಎಸ್-5	₹221
ಗುಡ್ ಲಾಟ್	₹206

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹545
12 ಕ್ಕೆ	₹75
ಮೈಸೂರು	
100ಕ್ಕೆ	₹550

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹322-548
ದ್ವಿತಳಿ (ಬಿ.ವಿ)	₹405-755

ಕೊಬ್ಬರಿ ಧಾರಣೆ

	(ಕ್ವಿಂಟಲ್‌ಗೆ)
ಅರಸೀಕೆರೆ	₹11000-15000
ಕೆ.ಆರ್.ಪೇಟೆ	₹9851-10000
ಮಧುಗಿರಿ	₹8800-9900
ತಿಪಟೂರು	₹13800-15022
ತುರುವೇಕೆರೆ	₹14500-14500

ಸೆನ್ಸೆಕ್ಸ್, ನಿಫ್ಟಿ ಕುಸಿತ

ಮುಂಬೈ (ಪಿಟಿಐ): ಟಾಟಾ ಮೋಟರ್ಸ್ ಮತ್ತು ರಿಲಯನ್ಸ್ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಸತತ ಎರಡು ದಿನದಿಂದ ಏರಿಕೆ ಕಂಡಿದ್ದ, ಷೇರು ಸೂಚ್ಯಂಕಗಳು ಬುಧವಾರದ ವಹಿವಾಟಿನಲ್ಲಿ ಇಳಿಕೆ ದಾಖಲಿಸಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 398 ಅಂಶ ಇಳಿಕೆ ಕಂಡು 81,523 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 122 ಅಂಶ ಇಳಿಕೆ ಕಂಡು 24,918 ಅಂಶಗಳಲ್ಲಿ ವಹಿವಾಟನ್ನು ಮುಕ್ತಾಯಗೊಳಿಸಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಟಾಟಾ ಮೋಟರ್ಸ್ ಷೇರಿನ ಮೌಲ್ಯದಲ್ಲಿ ಶೇ 6ರಷ್ಟು ಇಳಿಕೆಯಾಗಿದೆ. ಇದರಿಂದ ಒಂದೇ ದಿನ ಕಂಪನಿಯ ಮಾರುಕಟ್ಟೆ ಮೌಲ್ಯವು ₹21,881 ಕೋಟಿ ಕರಗಿದೆ.

ಎನ್‌ಟಿಪಿಸಿ, ಅದಾನಿ ಪೋರ್ಟ್ಸ್, ಎಲ್ ಆ್ಯಂಡ್ ಟಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಜೆಎಸ್‌ಡಬ್ಲ್ಯು ಸ್ಟೀಲ್, ಮಹೀಂದ್ರ ಆ್ಯಂಡ್ ಮಹೀಂದ್ರ, ಇಂಡಸ್ ಇಂಡ್ ಬ್ಯಾಂಕ್, ಟೈಟನ್ ಷೇರಿನ ಮೌಲ್ಯದಲ್ಲಿ ಕುಸಿತವಾಗಿದೆ. ಏಷ್ಯನ್ ಪೇಂಟ್ಸ್, ಬಜಾಜ್ ಫೈನಾನ್ಸ್, ಹಿಂದುಸ್ತಾನ್ ಯೂನಿಲಿವರ್, ಬಜಾಜ್ ಫಿನ್‌ಸರ್ವ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ. ಸೋಲ್, ಟೋಕಿಯೊ, ಶಾಂಘೈ, ಹಾಂಗ್‌ಕಾಂಗ್ ಮಾರುಕಟ್ಟೆಯು ಇಳಿಕೆ ದಾಖಲಿಸಿವೆ.



5 ಸಾವಿರ ಉದ್ಯಮಿಗಳ ನಿರೀಕ್ಷೆ

ಫೆಬ್ರುವರಿ 12ರಿಂದ ಹೂಡಿಕೆದಾರರ ಸಮಾವೇಶ: ಎಂ.ಬಿ.ಪಾಟೀಲ

ಪ್ರಜಾವಾಣಿ ವಾರ್ತೆ



ನವದೆಹಲಿ: 'ಬೆಂಗಳೂರಿನಲ್ಲಿ ಮುಂದಿನ ವರ್ಷದ ಫೆಬ್ರುವರಿ 12ರಿಂದ 14ರ ವರೆಗೆ ನಡೆಯಲಿರುವ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ (ಜಿಮ್) ಐದು ಸಾವಿರ ಉದ್ಯಮಿಗಳು ಭಾಗವಹಿಸುವ ನಿರೀಕ್ಷೆ ಇದೆ' ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಜಿಮ್ ಸಂಬಂಧ ಕೇಂದ್ರ ಸಚಿವರು, ವಿವಿಧ ದೇಶಗಳ ರಾಯಭಾರಿಗಳು ಹಾಗೂ ಉದ್ಯಮಿಗಳನ್ನು ಭೇಟಿಯಾದ ಬಳಿಕ ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಳೆದ ಒಂದೂವರೆ ವರ್ಷದಲ್ಲಿ ರಾಜ್ಯದಲ್ಲಿ ಹೂಡಿಕೆ ಮಾಡಲು ಉದ್ಯಮಿಗಳ ಜತೆಗೆ ₹1.35 ಲಕ್ಷ ಕೋಟಿಯ ಒಪ್ಪಂದ ಮಾಡಿಕೊಳ್ಳಲಾಗಿದೆ' ಎಂದರು.

'ಕಳೆದ ಹೂಡಿಕೆದಾರರ ಸಮಾವೇಶದಲ್ಲಿ ಮಾಡಿಕೊಂಡ ಬಹುತೇಕ ಒಪ್ಪಂದಗಳು ಕಾರ್ಯಗತಗೊಂಡಿವೆ. ಹಸಿರು ಹೈಡ್ರೋಜನ್ ಕ್ಷೇತ್ರದಲ್ಲಿ ಹೂಡಿಕೆ ಸಂಬಂಧ ₹1.5 ಲಕ್ಷ ಕೋಟಿ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಮೂಲಸೌಕರ್ಯ ಕೊರತೆ ಕಾರಣದಿಂದ ಈ ಕ್ಷೇತ್ರದಲ್ಲಿ ಉದ್ಯಮಿಗಳು ಹೂಡಿಕೆ ಮಾಡಿಲ್ಲ' ಎಂದರು. ಆಸ್ಟ್ರೇಲಿಯಾ, ಜರ್ಮನಿ ಮತ್ತು ದಕ್ಷಿಣ ಕೊರಿಯಾ ದೇಶಗಳ ಹೈಕಮಿಷನರ್‌ಗಳನ್ನು ಭೇಟಿ ಮಾಡಿ ಸಮಾವೇಶಕ್ಕೆ ಆಹ್ವಾನಿಸಲಾಗಿದೆ. ಟಾಯ್ ಝೋನ್, ಎಎಂಡಿ, ವಾಟ್ಲೋ, ಭಾರತ್ ಸೆಮಿ ಸಿಸ್ಟಮ್ಸ್, ಥರ್ಡ್-ಐಟೆಕ್, ಎಚ್‌ಎಂಇಎಲ್ ಸೇರಿ ಹಲವು ಉದ್ಯಮ ಕಂಪನಿಗಳ ಪ್ರಮುಖರನ್ನು ಕಂಡು, ಸಮಾವೇಶಕ್ಕೆ ಆಮಂತ್ರಿಸಲಾಗಿದೆ ಎಂದರು.

ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್ ಮತ್ತು ಆಯುಕ್ತೆ ಗುಂಜನ್ ಕೃಷ್ಣ ಇದ್ದರು.

ಕೇಂದ್ರ ಸರ್ಕಾರಕ್ಕೆ ರಾಜ್ಯದ ಬೇಡಿಕೆಗಳು

- ರಕ್ಷಣಾ ಉತ್ಪನ್ನಗಳ ತಯಾರಿಕೆಯಲ್ಲಿ ರಾಜ್ಯದ ಪಾಲು ಶೇ 67ರಷ್ಟಿದೆ. ಹೀಗಾಗಿ, ರಾಜ್ಯದಲ್ಲಿ ರಕ್ಷಣಾ ಕಾರಿಡಾರ್ ಆರಂಭಿಸಬೇಕು
- ಬಿಇಎಲ್, ಬಿಇಎಂಎಲ್ ಮತ್ತಿತರ ಸಂಸ್ಥೆಗಳನ್ನು ಇನ್ನಷ್ಟು ಬಲಪಡಿಸಬೇಕು.
- ಕಾರವಾರದ ನೌಕಾ ವೈಮಾನಿಕ ನಿಲ್ದಾಣದ ವಿಸ್ತರಣೆಗೆ ನೆರವು ನೀಡಬೇಕು. ರನ್‌ವೇ ವಿಸ್ತರಣೆಗೆ ಈ ಹಿಂದೆ ಎರಡು ಸಲ ಪ್ರಸ್ತಾವ ಸಲ್ಲಿಸಲಾಗಿತ್ತು. ಈ ಪ್ರಸ್ತಾವಗಳನ್ನು ಕೇಂದ್ರ ತಿರಸ್ಕರಿಸಿದೆ. ರನ್‌ವೇ ವಿಸ್ತರಣೆಗೆ ₹165 ಕೋಟಿ ಬೇಕಿದೆ. ಕೇಂದ್ರ ಸರ್ಕಾರ ಶೇ 50ರಷ್ಟು ಮೊತ್ತ ಭರಿಸಬೇಕಿದೆ. ಇದಕ್ಕೆ ರಕ್ಷಣಾ ಸಚಿವ ರಾಜನಾಥ ಸಿಂಗ್ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ
- ಹಾರೋಹಳ್ಳಿ, ಕುದುತಿನಿ ಮತ್ತು ದೇವಕತ್ತಿಕೊಪ್ಪದಲ್ಲಿ ಕೈಗಾರಿಕಾ ಯೋಜನೆಗಳಿಗೆ ಪರಿಸರ ಮತ್ತು ಅರಣ್ಯ ಇಲಾಖೆಯ ಅನುಮತಿ ಸಿಕ್ಕಿಲ್ಲ. ಈ ಅನುಮತಿಯನ್ನು ಶೀಘ್ರದಲ್ಲಿ ನೀಡಬೇಕು
- ರಾಜ್ಯದಲ್ಲಿ ಸೆಮಿಕಂಡಕ್ಟರ್ ಉದ್ಯಮ ಸ್ಥಾಪನೆಗೆ ಅನುಮತಿ ನೀಡಬೇಕು. ಈ ಉದ್ಯಮ ಸ್ಥಾಪನೆಗೆ ಕೇಂದ್ರ ಶೇ 50ರಷ್ಟು ನೆರವು ನೀಡುತ್ತದೆ. ರಾಜ್ಯ ಸರ್ಕಾರ ಶೇ 20ರಿಂದ 30ರಷ್ಟು ಪಾಲು ನೀಡಲು ಸಿದ್ಧವಿದೆ
- ಕೇಂದ್ರ ಸರ್ಕಾರವು ಇತ್ತೀಚೆಗೆ 12 ಕೈಗಾರಿಕಾ ಕಾರಿಡಾರ್‌ಗಳನ್ನು ಸ್ಥಾಪಿಸುವುದಾಗಿ ಪ್ರಕಟಿಸಿದೆ. ರಾಜ್ಯಕ್ಕೆ ಒಂದೇ ಒಂದು ಕಾರಿಡಾರ್ ಘೋಷಿಸಿಲ್ಲ. ಮುಂದಿನ ಹಂತದಲ್ಲಿ ರಾಜ್ಯಕ್ಕೆ ಆದ್ಯತೆ ನೀಡಬೇಕು

ಸೆಮಿಕಂಡಕ್ಟರ್: ₹1.5 ಲಕ್ಷ ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): 'ಭಾರತವು ಅಲ್ಪಾವಧಿಯಲ್ಲಿ ಸೆಮಿಕಂಡಕ್ಟರ್ ತಯಾರಿಕಾ ವಲಯದಲ್ಲಿ ₹1.5 ಲಕ್ಷ ಕೋಟಿ ಬಂಡವಾಳವನ್ನು ಆಕರ್ಷಿಸಿದೆ. ವಿಶ್ವದಲ್ಲಿ ದೊರೆಯುವ ಪ್ರತಿ ಸೆಮಿಕಂಡಕ್ಟರ್ ಚಿಪ್ ಭಾರತದ್ದೇ ಆಗಿರಬೇಕೆಂಬುದು ಸರ್ಕಾರದ ಆಶಯವಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಬುಧವಾರ ಗ್ರೇಟರ್ ನೋಯ್ಡಾದಲ್ಲಿ ಆರಂಭವಾದ ಸೆಮಿಕಾನ್ 2024ಕ್ಕೆ ಚಾಲನೆ ನೀಡಿದ ಬಳಿಕ ಅವರು ಮಾತನಾಡಿದರು.

'ನೀವು ಸರಿಯಾದ ಸಮಯದಲ್ಲಿ ಸರಿಯಾದ ಸ್ಥಳದಲ್ಲಿ (ಭಾರತ) ಇದ್ದೀರಿ. 21ನೇ ಶತಮಾನದಲ್ಲಿ ಸೆಮಿಕಂಡಕ್ಟರ್ ಚಿಪ್‌ಗಳ ಕೊರತೆ ಎದುರಾಗುವುದಿಲ್ಲ. ಚಿಪ್‌ಗಳ ಕೊರತೆಯಾದರೆ ಭಾರತವನ್ನು ಅವಲಂಬಿಸಬಹುದಾಗಿದೆ. ಜಗತ್ತಿಗೆ ಭಾರತವು ಇಂಥ ಭರವಸೆ ನೀಡುತ್ತದೆ' ಎಂದರು.

ಪ್ರಸ್ತುತ ದೇಶದ ಎಲೆಕ್ಟ್ರಾನಿಕ್ಸ್ ವಲಯದ ಮಾರುಕಟ್ಟೆ ಮೌಲ್ಯವು ₹13 ಲಕ್ಷ ಕೋಟಿ ಇದೆ. 2030ರ ಅಂತ್ಯಕ್ಕೆ ₹42 ಲಕ್ಷ ಕೋಟಿಗೆ ಮುಟ್ಟುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.

'ಸ್ಮಾರ್ಟ್‌ಫೋನ್‌ನಿಂದ ಹಿಡಿದು ವಿದ್ಯುತ್‌ಚಾಲಿತ ವಾಹನ, ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ವರೆಗೂ ಸೆಮಿಕಂಡಕ್ಟರ್ ಚಿಪ್‌ಗಳು ಬಳಕೆಯಾಗುತ್ತವೆ. ಹಾಗಾಗಿ, ದೇಶೀಯವಾಗಿ ಈ ವಲಯದಲ್ಲಿ ಹೂಡಿಕೆಗೆ ಉತ್ತೇಜನ ನೀಡಲಾಗಿದೆ. ದೇಶದ ಆರ್ಥಿಕ ಬೆಳವಣಿಗೆ ದೃಷ್ಟಿಯಿಂದ ಚಿಪ್‌ಗಳ ಪೂರೈಕೆ ಸರಪಳಿಯನ್ನು ಬಲಗೊಳಿಸುವುದು ಅತ್ಯಗತ್ಯವಾಗಿದೆ' ಎಂದು ಪ್ರತಿಪಾದಿಸಿದರು.

ಕೋವಿಡ್ ಸಂದರ್ಭದಲ್ಲಿ ಚೀನಾದಲ್ಲಿ ವಿಮಾನ ಹಾರಾಟ ಮತ್ತು ಕಾರ್ಖಾನೆಗಳು ಬಂದ್ ಆಗಿದ್ದವು. ಇದರಿಂದ ಚಿಪ್‌ಗಳ ಪೂರೈಕೆ ಸರಪಳಿಯ ಕೊಂಡಿ ಕಳಚಿ ಬಿದ್ದಿತು. ಹಾಗಾಗಿ, ಪೂರೈಕೆ ಸರಪಳಿಯನ್ನು ಸದೃಢಗೊಳಿಸುವುದು ಅತಿಮುಖ್ಯವಾಗಿದೆ. ಸೆಮಿಕಂಡಕ್ಟರ್ ಸೇರಿ ಇತರೆ ವಲಯಗಳಲ್ಲಿ ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ಭಾರತ ಕಾರ್ಯೋನ್ಮುಖವಾಗಿದೆ ಎಂದು ಹೇಳಿದರು.

'ಭಾರತದ ಸುಧಾರಣಾವಾದಿ ಆಡಳಿತ ಹಾಗೂ ಸ್ಥಿರ ನೀತಿಗಳು ಸೆಮಿಕಂಡಕ್ಟರ್ ವಲಯದಲ್ಲಿ ಹೂಡಿಕೆಗೆ ಹೆಚ್ಚು ಉತ್ತೇಜನ ನೀಡುತ್ತವೆ' ಎಂದರು.



ಗ್ರೇಟರ್ ನೋಯ್ಡಾದಲ್ಲಿ ಬುಧವಾರ ಆರಂಭವಾದ ಸೆಮಿಕಾನ್ ಸಮಾವೇಶದ ವಸ್ತು ಪ್ರದರ್ಶನವನ್ನು ಪ್ರಧಾನಿ ನರೇಂದ್ರ ಮೋದಿ ವೀಕ್ಷಿಸಿದರು. ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಇದ್ದರು –ಪಿಟಿಐ ಚಿತ್ರ

> ಮೂರ್ನಾಲ್ಕು ತಿಂಗಳೊಳಗೆ ಸೆಮಿಕಾನ್ 2.0 ನೀತಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಅಗತ್ಯ ಸಿದ್ಧತೆ ಕೈಗೊಂಡಿದೆ
> **ಅಶ್ವಿನಿ ವೈಷ್ಣವ್,** ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ ಸಚಿವ

ಬಿಇಎಲ್: ₹1,155 ಕೋಟಿ ಕಾರ್ಯಾದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಕ್ಷಣಾ ವಲಯದ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಈ ವರ್ಷ ವೈವಿಧ್ಯಮಯ ಎಲೆಕ್ಟ್ರಾನಿಕ್ ಉತ್ಪನ್ನಗಳ ತಯಾರಿಕೆಗಾಗಿ ₹7,075 ಕೋಟಿ ಮೌಲ್ಯದಷ್ಟು ಕಾರ್ಯಾದೇಶ ಪಡೆದಿದ್ದು, ಹೊಸದಾಗಿ ಕೊಚ್ಚಿನ್ ಶಿಪ್ ಯಾರ್ಡ್ ಲಿಮಿಟೆಡ್‌ನಿಂದ ₹850 ಕೋಟಿ ಮೌಲ್ಯದ ಕಾರ್ಯಾದೇಶ ಪಡೆದಿದೆ.

ಕೊಚ್ಚಿನ್ ಶಿಪ್ ಯಾರ್ಡ್ ಲಿಮಿಟೆಡ್‌ಗೆ ಬಹು ಕಾರ್ಯಗಳನ್ನು ನಿರ್ವಹಿಸುವ ದೇಶೀಯ ನಿರ್ಮಿತ ಎಕ್ಸ್ ಬ್ಯಾಂಡ್ ರೇಡಾರ್ ಪೂರೈಸಬೇಕಾಗಿದೆ. ಈ ಸಂಬಂಧ ಬಿಇಎಲ್ ಜನರಲ್ ಮ್ಯಾನೇಜರ್ ಟಿ.ಡಿ. ನಂದಕುಮಾರ್ ಅವರು, ಕೊಚ್ಚಿನ್ ಶಿಪ್ ಯಾರ್ಡ್ ನಿರ್ದೇಶಕ ಶ್ರೀಜಿತ್ ಅವರಿಂದ ಬುಧವಾರ ಆದೇಶ ಪತ್ರ ಪಡೆದರು.

ಈ ರೇಡಾರ್ ಅನ್ನು ಡಿಆರ್‌ಡಿಒ ವಿನ್ಯಾಸಗೊಳಿಸಿದ್ದು, ಬಿಇಎಲ್ ತಯಾರಿಸಿದೆ. ನೌಕಾಪಡೆಯ ನೌಕೆಗಳಿಗೆ ವೈಮಾನಿಕ ದಾಳಿಗಳಿಂದ ರಕ್ಷಣೆ ನೀಡಲು ರೇಡಾರ್‌ಗಳು ಕ್ಷಿಪಣಿ, ಡ್ರೋನ್, ಯುದ್ಧ ವಿಮಾನಗಳನ್ನು ಪತ್ತೆ ಮಾಡುತ್ತವೆ. ಇದಲ್ಲದೇ ನೌಕೆಗಳಿಗೆ ನ್ಯಾವಿಗೇಷನ್ ಕಾಂಪ್ಲೆಕ್ಸ್ ವ್ಯವಸ್ಥೆ, ಥರ್ಮಲ್ ಇಮೇಜರ್, ಸಂವಹನ ಸಾಧನ, ಅಗ್ನಿ ನಿಯಂತ್ರಣ ವ್ಯವಸ್ಥೆ, ಗನ್ ಕಂಟ್ರೋಲ್ ಸಿಸ್ಟಮ್, ಬಿಡಿ ಭಾಗಗಳು ಸೇವೆಗಳನ್ನು ಒದಗೊಸಲು ಆಗಸ್ಟ್‌ನಲ್ಲಿ ಸುಮಾರು ₹305 ಕೋಟಿ ಮೌಲ್ಯದ ಆದೇಶ ಪಡೆಯಲಾಗಿದೆ ಎಂದು ಬಿಇಎಲ್ ಪ್ರಕಟಣೆ ತಿಳಿಸಿದೆ. ಎರಡು ತಿಂಗಳಲ್ಲಿ ಒಟ್ಟು ₹1,155 ಕೋಟಿ ಆದೇಶ ಪಡೆದಂತಾಗಿದೆ ಎಂದು ಹೇಳಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	18000-28500
ಹೊಸತು	28500-40500
ಹಳತು	40500-48000
ಕುಮಟ	
ಚಿಪ್ಪು	23019-26089
ಕೋಕ	6099-21599
ಫ್ಯಾಕ್ಟರಿ	8019-16299
ಹಳೆಚಾಲಿ	36699-38999
ಹೊಸಚಾಲಿ	30599-35299
ಪುತ್ತೂರು	
ಹೊಸತು	30000-40500
ಶಿವಮೊಗ್ಗ	
ಬೆಟ್ಟೆ	47109-54989
ಗೊರಬಲು	16500-35000
ರಾಶಿ	25338-48699
ಸರಕು	57599-85620

'ವಿದೇಶಿ ಹೂಡಿಕೆದಾರರ ನೈಜ ಮಾಲೀಕ ಯಾರು?'

ನವದೆಹಲಿ (ಪಿಟಿಐ): 'ಅದಾನಿ ಸಮೂಹದ ಪ್ರಕರಣದಲ್ಲಿ ಹೆಸರು ಕೇಳಿಬಂದಿದ್ದ ವಿದೇಶಿ ಹೂಡಿಕೆ ಕಂಪನಿಗಳು ತಮ್ಮ ನಿಜವಾದ ಮಾಲೀಕ ಯಾರು ಎನ್ನುವ ಕುರಿತು ನಿಮಗೆ ಮಾಹಿತಿ ನೀಡಿದ್ದಾರೆಯೇ?' ಎಂದು ಕಾಂಗ್ರೆಸ್ ಬುಧವಾರ ಸೆಬಿಯನ್ನು ಪ್ರಶ್ನಿಸಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ತಮ್ಮ ನೈಜ ಮಾಲೀಕ ಯಾರು ಎಂಬ ಮಾಹಿತಿಯನ್ನು ಸೆಬಿಗೆ ನೀಡಲು ಸೆಪ್ಟೆಂಬರ್ 9 ಕೊನೇ ದಿನವಾಗಿತ್ತು. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಸೆಬಿಗೆ ಹಲವು ಪ್ರಶ್ನೆಗಳನ್ನು ಕೇಳಿದೆ.

'ಈ ಮಾಹಿತಿಯನ್ನು ಬಹಿರಂಗ ಪಡಿಸುವ ಹೊಸ ನಿಯಮವನ್ನು ಎರಡು ತಿಂಗಳೊಳಗೆ ಜಾರಿಗೆ ತನ್ನಿ ಎಂದು ಸುಪ್ರೀಂ ಕೋರ್ಟ್ ನಿಮಗೆ ನಿರ್ದೇಶನ ನೀಡಿದ ಹದಿನೆಂಟು ತಿಂಗಳ ಬಳಿಕವೂ ನೀವು ಯಾಕೆ ನಿಯಮವನ್ನು ಜಾರಿಗೆ ತಂದಿರಲಿಲ್ಲ' ಎಂದೂ ಕಾಂಗ್ರೆಸ್ ಸೆಬಿಗೆ ಪ್ರಶ್ನಿಸಿದೆ.

ಈ ಕುರಿತು ತಮ್ಮ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿರುವ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 'ನಾವು ಈ ವಿಷಯವನ್ನು ಕೆಲವು ದಿನಗಳ ಹಿಂದೆಯೂ ಪ್ರಸ್ತಾಪಿಸಿದ್ದೆವು. ಯಾಕೆಂದರೆ, ಮಾರಿಷಸ್ ಮೂಲಕ ಎರಡು ಕಂಪನಿಗಳು ತಾವು ಯಾವ ಕಂಪನಿಯಲ್ಲಿ ಹೂಡಿಕೆ ಮಾಡಿದ್ದೇವೆ ಎನ್ನುವುದನ್ನು ಬಹಿರಂಗ ಪಡಿಸಲು ವಿನಾಯಿತಿ ನೀಡಬೇಕು ಎಂದು ಕೋರಿ ಷೇರು ಮೇಲ್ಮನವಿ ನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಿದ್ದಾರೆ' ಎಂದರು.

ಮೋದಾನಿ ಮ್ಯಾಜಿಕ್: 'ಬಡತನದಲ್ಲಿದ್ದ ಖಾಸಗಿ ಕಂಪನಿಯೊಂದು ಈಗ ಸಿರಿವಂತವಾಗಿದೆ. ಇವೆಲ್ಲವೂ 'ಮೋದಾನಿ ಮ್ಯಾಜಿಕ್' ಎಂದು ಕಾಂಗ್ರೆಸ್ ಲೇವಡಿ ಮಾಡಿದೆ. ಈ ಬಗ್ಗೆ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'2018ರಲ್ಲಿ ಡೈಮಂಡ್ ಪವರ್ ಇನ್ಫ್ರಾ ಲಿಮಿಟೆಡ್ ಎನ್ನುವ ಕಂಪನಿಯು ತಾನು ದಿವಾಳಿ ಎಂದು ಘೋಷಿಸಿಕೊಂಡಿತ್ತು. ಈ ಕಂಪನಿಯನ್ನು 2022ರಲ್ಲಿ ಉದ್ಯಮಿ ಗೌತಮ್ ಅದಾನಿ ಅವರ ಭಾವ, ₹501 ಕೋಟಿಗೆ ಖರೀದಿಸಿದರು. ಆಗ ಈ ಕಂಪನಿಯ ಮಾರುಕಟ್ಟೆ ಮೌಲ್ಯವು ₹1,000 ಕೋಟಿಯಷ್ಟಿತ್ತು' ಎಂದು ವಿವರಿಸಿದರು.

'2022ರಲ್ಲಿ ಯಾವುದೇ ವ್ಯವಹಾರವೂ ಇಲ್ಲವಾಗಿದ್ದ ಈ ಕಂಪನಿಯು 2023-24 ಹೊತ್ತಿಗೆ ₹344 ಕೋಟಿ ಆದಾಯ ಗಳಿಸಿತು. ಅದಾನಿ ಗ್ರೂಪ್‌ನ ಕಾರಣದಿಂದಲೇ ಡೈಮಂಡ್ ಪವರ್ ಕಂಪನಿಯೂ ಈ ಮೊತ್ತದ ಆದಾಯಗಳಿಸಿತು. ಈಗ ಈ ಕಂಪನಿಯ ಮೌಲ್ಯ ₹7,626 ಕೋಟಿಯಷ್ಟಾಗಿದೆ. ಅಂದರೆ, 1,000 ಮೌಲ್ಯದ ಹೋಲಿಕೆಯಲ್ಲಿ ಸುಮಾರು ಏಳು ಪಟ್ಟು ಹೆಚ್ಚು' ಎಂದರು.

ಸೆಬಿಗೆ ಕಾಂಗ್ರೆಸ್‌ನ ಪ್ರಶ್ನೆಗಳು

- ಯಾವೆಲ್ಲಾ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಮಾಹಿತಿಗಳನ್ನು ಬಹಿರಂಗಪಡಿಸಬೇಕಿತ್ತೋ ಆ ಎಲ್ಲ ಹೂಡಿಕೆದಾರರು ಮಾಹಿತಿಗಳನ್ನು ಬಹಿರಂಗಪಡಿಸಿದ್ದಾರೆಯೇ? ಯಾವೆಲ್ಲಾ ಹೂಡಕೆದಾರರು ನಿಮಗೆ ಮಾಹಿತಿ ನೀಡಿಲ್ಲ
- ಪ್ರಮುಖವಾಗಿ 'ಮೋದಾನಿ ಮೆಗಾ ಹಗರಣ'ದಲ್ಲಿ ಹೆಸರು ಕೇಳಿಬಂದಿದ್ದ ವಿದೇಶಿ ಹೂಡಿಕೆದಾರರು ಮಾಹಿತಿ ಬಹಿರಂಗ ಮಾಡಿದ್ದಾರೆಯೇ?
- ಎರಡು ತಿಂಗಳಲ್ಲಿ ನಿಯಮವನ್ನು ಜಾರಿಗೆ ತನ್ನಿ ಎಂದು ಸುಪ್ರೀಂ ಕೋರ್ಟ್ ಹೇಳಿದ್ದರೂ ನಿಯಮ ಜಾರಿಗೆ ನೀವು ಯಾಕೆ 18 ತಿಂಗಳು ತೆಗೆದುಕೊಂಡಿರಿ? ಹಗರಣದಲ್ಲಿ ಭಾಗಿಯಾಗಿರುವ ಕಂಪನಿಗಳು ತಮ್ಮ ಷೇರುಗಳನ್ನು ವರ್ಗಾವಣೆ ಮಾಡಿಕೊಳ್ಳಲು ಅನುವು ಮಾಡಿಕೊಡಲು ಹೀಗೆ ಮಾಡಿದಿರೇ?

ಕೆನ್ಯಾ: ಅದಾನಿ ಸಮೂಹಕ್ಕೆ ಪ್ರತಿಭಟನೆಯ ಬಿಸಿ

ನೈರೋಬಿ (ಎಎಫ್‌ಪಿ): ಕೆನ್ಯಾದ ನೈರೋಬಿ ನಗರದಲ್ಲಿರುವ ವಿಮಾನ ನಿಲ್ದಾಣದ ನಿರ್ವಹಣೆಯನ್ನು ಗುತ್ತಿಗೆ ಪಡೆಯಲು ಮುಂದಾಗಿರುವ ಭಾರತದ ಅದಾನಿ ಸಮೂಹದ ವಿರುದ್ಧ ವಿಮಾನ ನಿಲ್ದಾಣದ ಕಾರ್ಮಿಕರ ಒಕ್ಕೂಟದಿಂದ ಬುಧವಾರ ಪ್ರತಿಭಟನೆ ನಡೆಯಿತು.

ಇದರಿಂದ ಜೋಮೊ ಕೆನ್ಯಾಟಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ (ಜೆಕೆಐಎ) ವಿಮಾನಗಳ ಸಂಚಾರದಲ್ಲಿ ವ್ಯತ್ಯಯವಾಗಿದ್ದು, ನೂರಾರು ಪ್ರಯಾಣಿಕರು ನಿಲ್ದಾಣದಲ್ಲಿಯೇ ಉಳಿಯುವಂತಾಗಿದೆ.

ನಿಲ್ದಾಣದ ನಾವೀನ್ಯತೆ, ಹೆಚ್ಚುವರಿ ರನ್‌ವೇ ಮತ್ತು ಟರ್ಮಿನಲ್ ನಿರ್ಮಾಣಕ್ಕೆ ಅಲ್ಲಿನ ಸರ್ಕಾರವು 30 ವರ್ಷದವರೆಗೆ ಅದಾನಿ ಸಮೂಹದೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಇದಕ್ಕೆ ಅದಾನಿ ಸಮೂಹವು 185 ಕೋಟಿ ಡಾಲರ್ (₹15,536 ಕೋಟಿ) ವ್ಯಯಿಸಲಿದೆ.

ಈ ಒಪ್ಪಂದದಿಂದ ಸ್ಥಳೀಯ ಸಿಬ್ಬಂದಿ ಕೆಲಸ ಕಳೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಸರ್ಕಾರ ಈ ಒಪ್ಪಂದದಿಂದ ಹಿಂದೆ ಸರಿಯುವವರೆಗೂ ಪ್ರತಿಭಟನೆಯನ್ನು ಮುಂದುವರಿಸಲಾಗುವುದು ಎಂದು ಒಕ್ಕೂಟ ತಿಳಿಸಿದೆ.

ತಡೆಯಾಜ್ಞೆ ನೀಡಿದ ನ್ಯಾಯಾಲಯ

ಈ ಒಪ್ಪಂದ ಸಂಬಂಧ ಕೆನ್ಯಾದ ಕಾನೂನು ಸೊಸೈಟಿ ಮತ್ತು ಮಾನವ ಹಕ್ಕುಗಳ ಆಯೋಗವು ನ್ಯಾಯಾಲಯದ ಮೊರೆ ಹೋಗಿದ್ದು, ಒಪ್ಪಂದದಲ್ಲಿ ಪಾರದರ್ಶಕತೆಯ ಕೊರತೆ ಇದೆ ಎಂದು ಅರ್ಜಿಯಲ್ಲಿ ದೂರಿದೆ.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯವು, ಅದಾನಿ ಕಂಪನಿಯ ಈ ಒಪ್ಪಂದಕ್ಕೆ ತಡೆಯಾಜ್ಞೆ ನೀಡಿದೆ.

ಇಸ್ರೇಲ್ ದಾಳಿ: 25 ಪ್ಯಾಲೆಸ್ಟೀನಿಯನ್ನರ ಸಾವು

ಜರುಸಲೇಮ್ (ಎಪಿ): ಪ್ಯಾಲೆಸ್ಟೀನ್ ಮೇಲೆ ಇಸ್ರೇಲ್ ಬುಧವಾರ ನಡೆಸಿದ ದಾಳಿಯಲ್ಲಿ 25 ಮಂದಿ ಮೃತಪಟ್ಟಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ವೆಸ್ಟ್‌ಬ್ಯಾಂಕ್‌ನಲ್ಲಿ ಐವರು ಪ್ಯಾಲೆಸ್ಟೀನಿಯನ್ನರು ಮೃತಪಟ್ಟಿದ್ದಾರೆ. ಗಾಜಾಪಟ್ಟಿಯಲ್ಲಿ 16 ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ 20 ಮಂದಿ ಮೃತಪಟ್ಟಿದ್ದಾರೆ ಎಂದು ತಿಳಿಸಿದರು. ಇಸ್ರೇಲ್-ಹಮಾಸ್ ಯುದ್ಧ ಆರಂಭವಾದ ನಂತರ ಇದುವರೆಗೆ 40,000 ಪ್ಯಾಲೆಸ್ಟೀನಿಯನ್ನರು ಮೃತಪಟ್ಟಿದ್ದಾರೆ ಎಂದು ಗಾಜಾ ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ.

ರಾಷ್ಟ್ರೀಯ ಸೀನಿಯರ್ ಈಜು ಕೂಟ • ಮಿಂಚಿದ ಶ್ರೀಹರಿ, ಅನೀಶ್ ಗೌಡ, ವಿದಿತ್ ಶಂಕರ್

ಮತ್ತೆ 3 ಚಿನ್ನ ಗೆದ್ದು ಕರ್ನಾಟಕ ಪಾರಮ್ಯ

• ವಿಕ್ರಂ ಕಾಂತಿಕೆರೆ

ಮಂಗಳೂರು: ಸಂಜೆಯ ಎಳೆಬಿಸಿಲಿನಲ್ಲಿ ಹೊಳೆಯುತ್ತಿದ್ದ ಎಮ್ಮೆಕೆರೆ ಈಜುಕೊಳದ ನಾಲ್ಕನೇ ಲೇನ್ ಮೇಲೆ ನೋಟವಿಟ್ಟು ಕುಳಿತಿದ್ದ ಪ್ರೇಕ್ಷಕರಿಗೆ ನಿರಾಸೆಯಾಗಲಿಲ್ಲ. ಸರ್ವಿಸಸ್‌ನ ಆನಂದ್ ಎಸ್. ಅವರ ಪ್ರಬಲ ಪೈಪೋಟಿಗೆ ಸೆಡ್ಡು ಹೊಡೆದು ಭರವಸೆಯಿಂದ ಮುನ್ನುಗ್ಗಿದ ಒಲಿಂಪಿಯನ್ ಶ್ರೀಹರಿ ನಟರಾಜ್ ಚಿನ್ನ ಗೆದ್ದು ನಗೆ ಬೀರಿದಾಗ ಈಜುಪ್ರಿಯರೂ ಸಂಭ್ರಮಿಸಿದರು.

ಪುರುಷರ 100 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಶ್ರೀಹರಿ ಗೆದ್ದ ಚಿನ್ನವೂ ಸೇರಿದಂತೆ ರಾಷ್ಟ್ರೀಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನ ಎರಡನೇ ದಿನ ಕರ್ನಾಟಕ ಮೂರು ಚಿನ್ನ, ನಾಲ್ಕು ಬೆಳ್ಳಿ ಮತ್ತು ಒಂದು ಕಂಚಿನ ಪದಕ ಗಳಿಸಿತು. ಒಟ್ಟಾರೆ 17 ಪದಕಗಳೊಂದಿಗೆ ಚಾಂಪಿಯನ್‌ಷಿಪ್ ಪದಕ ಪಟ್ಟಿಯಲ್ಲಿ ಅಗ್ರಸ್ಥಾನ ಉಳಿಸಿಕೊಂಡಿತು. ಆತಿಥೇಯರ ಖಾತೆಯಲ್ಲಿ ಈಗ 9 ಚಿನ್ನ, 7 ಬೆಳ್ಳಿ ಮತ್ತು 1 ಕಂಚಿನ ಪದಕ ಸೇರಿದೆ.

ಮಹಿಳೆಯರ 1500 ಮೀಟರ್ ಫ್ರೀಸ್ಟೈಲ್‌ನೊಂದಿಗೆ ದಿನದ ಮೊದಲ ಫೈನಲ್‌ ರಂಗೇರಿತು. ಈ ಸ್ಪರ್ಧೆಯ ಚಿನ್ನದ ಪದಕ ತೆಲಂಗಾಣದ ವೃತ್ತಿ ಅಗರ ವಾಲ್ ಅವರ ಪಾಲಾಯಿತು. ಆರಂಭದಲ್ಲಿ ಭಾರಿ ಮುನ್ನಡೆ ಸಾಧಿಸಿದ್ದ ವೃತ್ತಿ ಸಾವಿರ ಮೀಟರ್‌ಗಳ ಮುಕ್ತಾಯದ ವೇಳೆ 50 ಮೀಟರ್‌ಗಳಷ್ಟು ಮುಂದಿದ್ದರು. ಕೊನೆಯ ಐದು ಲ್ಯಾಪ್‌ಗಳಲ್ಲಿ ಕರ್ನಾಟಕದ ಶಿರೀನ್ ಪೈಪೋಟಿ ಒಡ್ಡಿದರು. ಐದು ಸೆಕೆಂಡುಗಳ ಅಂತರದಲ್ಲಿ ಶಿರೀನ್ ಚಿನ್ನ ಕಳೆದುಕೊಂಡರು.



ಪುರುಷರ 100ಮೀ ಫ್ರೀಸ್ಟೈಲ್‌ನಲ್ಲಿ ಚಿನ್ನ ಗೆದ್ದ ಕರ್ನಾಟಕದ ಶ್ರೀಹರಿ ನಟರಾಜ್ ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್

ಮಿಶ್ರ ರಿಲೆಯಲ್ಲಿ ತಮಿಳುನಾಡು ದಾಖಲೆ

ದಿನದ ಕೊನೆಯ ಸ್ಪರ್ಧೆಯಾದ 4x100 ಮೀ ಮಿಶ್ರ ರಿಲೆಯಲ್ಲಿ ತಮಿಳುನಾಡು ದಾಖಲೆ ಬರೆಯಿತು. ಪ್ರಮಿತಿ ಜ್ಞಾನಶೇಖರನ್, ಧನುಷ್ ಸುರೇಶ್, ಬೆನೆಡಿಕ್ಷನ್ ರೋಹಿತ್ ಮತ್ತು ದೀಕ್ಷಾ ಶಿವಕುಮಾರ್ ಅವರನ್ನು ಒಳಗೊಂಡ ತಂಡ 4ನಿ 5.30 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಮಹಾರಾಷ್ಟ್ರದ ಹೆಸರಿನಲ್ಲಿದ್ದ ದಾಖಲೆ ಹಿಂದಿಕ್ಕಿತು. ಕಳೆದ ವರ್ಷದ ಚಾಂಪಿಯನ್‌ಷಿಪ್‌ನಲ್ಲಿ ಮಹಾರಾಷ್ಟ್ರ 4ನಿ 6.84 ಸೆಕೆಂಡುಗಳ ಸಾಧನೆ ಮಾಡಿತ್ತು. ಮಿಶ್ರ ರಿಲೆಯ ರಾಷ್ಟ್ರೀಯ ದಾಖಲೆ ಕರ್ನಾಟಕದ (3ನಿ 42.92ಸೆ) ಹೆಸರಿನಲ್ಲಿದೆ.

ಕರ್ನಾಟಕಕ್ಕೆ ಚಿನ್ನ–ಬೆಳ್ಳಿ: ಪುರುಷರ 800 ಮೀ ಫ್ರೀಸ್ಟೈಲ್ ಮತ್ತು 50 ಮೀ ಬ್ರೆಸ್ಟ್ ಸ್ಟ್ರೋಕ್‌ನ ಚಿನ್ನ ಕರ್ನಾಟಕದ ಪಾಲಾಯಿತು. 800 ಮೀ ಫ್ರೀಸ್ಟೈಲ್‌ನಲ್ಲಿ ಅನೀಶ್ ಎಸ್.ಗೌಡ ಮತ್ತು ದರ್ಶನ್ ನಡುವೆ ಅಗ್ರಸ್ಥಾನಕ್ಕೆ ಸ್ಪರ್ಧೆ ಏರ್ಪಟ್ಟಿತ್ತು. ಆರಂಭದ ಮುನ್ನಡೆಯನ್ನು ಉಳಿಸಿಕೊಂಡ ಅನೀಶ್ ಮೊದಲಿಗರಾದರು. 50 ಮೀ ಬ್ರೆಸ್ಟ್ ಸ್ಟ್ರೋಕ್‌ನಲ್ಲಿ ವಿದಿತ್ ಶಂಕರ್, ತಮಿಳುನಾಡಿನ ಯಾದೇಶ್ ಅವರ ಸವಾಲು ಮೀರಿ ಕರ್ನಾಟಕಕ್ಕೆ ಚಿನ್ನ ತಂದುಕೊಟ್ಟರು.

ಮೊದಲ ದಿನ 400 ಮೀ ಫ್ರೀಸ್ಟೈಲ್‌ನಲ್ಲಿ ದಾಖಲೆ ಬರೆದಿದ್ದ ಕರ್ನಾಟಕದ ಹಾಶಿಕಾ ರಾಮಚಂದ್ರ ಅವರಿದ್ದ ಮಹಿಳೆಯರ 200 ಮೀ ವೈಯಕ್ತಿಕ ಮೆಡ್ಲೆ ಸ್ಪರ್ಧೆ ಕುತೂಹಲಕ್ಕೆ ಕಾರಣವಾಗಿತ್ತು. ರಾಷ್ಟ್ರೀಯ ದಾಖಲೆ ಹೊಂದಿರುವ ಹಾಶಿಕಾ ಅವರನ್ನು ಹಿಂದಿಕ್ಕಿದ ತಮಿಳುನಾಡಿನ ಶ್ರೀನಿಧಿ ನಟೇಶನ್ ಚಿನ್ನ ತಮ್ಮದಾಗಿಸಿಕೊಂಡರು. ಬಟರ್‌ಫ್ಲೈ, ಬ್ಯಾಕ್‌ಸ್ಟ್ರೋಕ್ ಮತ್ತು ಬ್ರೆಸ್ಟ್ ಸ್ಟ್ರೋಕ್‌ನಲ್ಲಿ ಮುನ್ನಡೆ ಸಾಧಿಸಿದ್ದ ಕರ್ನಾಟಕದ ಮಾನವಿ ವರ್ಮಾ ಫ್ರೀಸ್ಟೈಲ್‌ನಲ್ಲಿ ಮುಗ್ಗರಿಸಿ ಕಂಚಿಗೆ ಸಮಾಧಾನಪಟ್ಟುಕೊಂಡರು. ಮಹಿಳೆಯರ 50 ಮೀ ಬ್ರೆಸ್ಟ್ ಸ್ಟ್ರೋಕ್ ಸ್ಪರ್ಧೆ ಪಂಜಾಬ್‌ನ ಅವನಿ ಛಾಬ್ರ ಮತ್ತು ಚಾಹತ್ ಅರೋರ ನಡುವೆ ಪೈಪೋಟಿಗೆ ಸಾಕ್ಷಿಯಾಯಿತು. ರಾಷ್ಟ್ರೀಯ ದಾಖಲೆ ಹೊಂದಿರುವ ಚಾಹತ್ ಅರೋರ ಅವರನ್ನು ಮಿಲಿ ಸೆಕೆಂಡುಗಳ ಅಂತರದಲ್ಲಿ ಹಿಂದಿಕ್ಕಿ ಅವನಿ ನಗೆಸೂಸಿದರು.

ಎರಡನೇ ದಿನದ ಫಲಿತಾಂಶಗಳು

ಪುರುಷರ ವಿಭಾಗ: 50 ಮೀ ಬ್ರೆಸ್ಟ್ ಸ್ಟ್ರೋಕ್: ವಿದಿತ್ ಎಸ್.ಶಂಕರ್ (ಕರ್ನಾಟಕ)–1. ಕಾಲ: 28.62ಸೆ, ಯಾದೇಶ್ ಬಾಬು (ತಮಿಳುನಾಡು)–2, ಧನುಷ್ ಸುರೇಶ್ (ತಮಿಳುನಾಡು)–3; 100 ಮೀ ಫ್ರೀ ಸ್ಟೈಲ್: ಶ್ರೀಹರಿ ನಟರಾಜ್ (ಕರ್ನಾಟಕ)–1. ಕಾಲ:50.59 ಸೆ, ಆನಂದ್ ಎ.ಎಸ್ (ಸರ್ವಿಸಸ್)–2, ರಿಷಭ್ ಅನುಪನ್ (ಮಹಾರಾಷ್ಟ್ರ)–3; 200 ಮೀ ವೈಯಕ್ತಿಕ ಮೆಡ್ಲೆ: ವಿನಾಯಕ ವಿಜಯ್ (ಸರ್ವಿಸಸ್)–1. ಕಾಲ: 2ನಿ 7.73ಸೆ, ಶಿವ ಶ್ರೀಧರ್ (ಕರ್ನಾಟಕ)–2, ಯುಗ್ ಚೇಲಾನಿ (ರಾಜಸ್ತಾನ)–3; 800 ಮೀ ಫ್ರೀಸ್ಟೈಲ್: ಅನೀಶ್ ಎಸ್.ಗೌಡ (ಕರ್ನಾಟಕ)–1.ಕಾಲ: 8ನಿ 20.1ಸೆ, ದರ್ಶನ್ ಎಸ್ (ಕರ್ನಾಟಕ)–2, ಸಂಪತ್ ಕುಮಾರ್ (ಆಂಧ್ರಪ್ರದೇಶ)–3.

ಮಹಿಳೆಯರ ವಿಭಾಗ: 50 ಮೀ ಬ್ರೆಸ್ಟ್ ಸ್ಟ್ರೋಕ್: ಅವನಿ ಛಾಬ್ರ (ಪಂಜಾಬ್)–1. ಕಾಲ: 33.76ಸೆ, ಚಾಹತ್ ಅರೋರ (ಪಂಜಾಬ್)–2, ಹರ್ಷಿತಾ ಜಯರಾಮ್ (ರೈಲ್ವೆ)–3; 100 ಮೀ ಫ್ರೀ ಸ್ಟೈಲ್: ಮಹಿ ಶ್ವೇತರಾಜ್ (ಬಿಹಾರ್)–1. ಕಾಲ: 58.54ಸೆ, ಶಿವಾಂಗಿ ಶರ್ಮಾ (ರೈಲ್ವೆ)–2, ಅದಿತಿ ಸತೀಶ್ ಹೆಗಡೆ (ಮಹಾರಾಷ್ಟ್ರ)–3; 200 ಮೀ ವೈಯಕ್ತಿಕ ಮೆಡ್ಲೆ: ಶ್ರೀನಿಧಿ ನಟೇಶನ್ (ತಮಿಳುನಾಡು)–1. ಕಾಲ: 2ನಿ 25.52ಸೆ, ಹಶೀಕಾ ರಾಮಚಂದ್ರ (ಕರ್ನಾಟಕ)–2, ಮಾನವಿ ವರ್ಮಾ (ಕರ್ನಾಟಕ)–3; 1500 ಮೀ ಫ್ರೀಸ್ಟೈಲ್: ವೃತ್ತಿ ಅಗರವಾಲ್ (ತೆಲಂಗಾಣ)–1. ಕಾಲ: 17ನಿ 45.63ಸೆ, ಶಿರೀನ್ (ಕರ್ನಾಟಕ)–2, ಭವ್ಯಾ ಸಚ್‌ದೇವ (ನವದೆಹಲಿ)–3, 4x100 ಮೀ ಫ್ರೀಸ್ಟೈಲ್ ಮಿಶ್ರ ರಿಲೆ: ಮಹಾರಾಷ್ಟ್ರ–1. ಕಾಲ: 3ನಿ 43.13ಸೆ, ತಮಿಳುನಾಡು–2, ರೈಲ್ವೆ–3.

ಹರ್ಷಿಲ್ ಶತಕ: ಕೋಲ್ಟ್ಸ್ ಹೋರಾಟ

ಪ್ರಜಾವಾಣಿ ವಾರ್ತೆ

ಮೈಸೂರು: ಹರ್ಷಿಲ್ (118; 157 ಎ, 4X18) ಅವರ ಶತಕದ ನೆರವಿನಿಂದ ಕೆಎಸ್‌ಸಿಎ ಕೋಲ್ಟ್ಸ್ ತಂಡವು, ಕ್ಯಾಪ್ಟನ್ ಕೆ.ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಡಾ. ಡಿ.ವೈ. ಪಾಟೀಲ ಕ್ರಿಕೆಟ್ ಅಕಾಡೆಮಿ ವಿರುದ್ಧ ಹೋರಾಟ ತೋರುತ್ತಿದ್ದು, ಇನಿಂಗ್ಸ್ ಮುನ್ನಡೆಗೆ ಇನ್ನೂ 155 ರನ್ ದೂರದಲ್ಲಿದೆ.

ಡಿ.ವೈ. ಪಾಟೀಲ ಅಕಾಡೆಮಿಯ 452 ರನ್‌ಗೆ ಉತ್ತರವಾಗಿ, ಎಸ್‌ಜೆಸಿಇ ಮೈದಾನದಲ್ಲಿ ನಡೆಯುತ್ತಿರುವ ಈ ಪಂದ್ಯದ ಮೂರನೇ ದಿನದಾಟದ ಕೊನೆಗೆ ಕೆಎಸ್‌ಸಿಎ ಕೋಲ್ಟ್ಸ್ ತಂಡವು 6 ವಿಕೆಟ್‌ಗೆ 298 ರನ್ ಕಲೆಹಾಕಿತು.

ಇನಿಂಗ್ಸ್‌ನ ಎರಡನೇ ಓವರ್‌ನಲ್ಲೇ ಎಂ.ಬಿ. ಶಿವಂ ಅವರ ವಿಕೆಟ್ ಕಳೆದುಕೊಂಡು ಆಘಾತ ಅನುಭವಿಸಿದ ಕೋಲ್ಟ್ಸ್‌ಗೆ ಹರ್ಷಿಲ್ ಆಸರೆಯಾದರು. ಎಸ್.ಯು. ಕಾರ್ತಿಕ್ (57) ಜೊತೆಗೂಡಿ ಎರಡನೇ ವಿಕೆಟ್‌ಗೆ 134 ರನ್ ಜೊತೆಯಾಟದ ಮೂಲಕ ತಂಡವನ್ನು ಸಂಕಷ್ಟದಿಂದ ಪಾರು ಮಾಡಿದರು. 31ನೇ ಓವರ್‌ನಲ್ಲಿ ಪರೀಕ್ಷಿತ್ ಈ ಜೋಡಿಯನ್ನು ಬೇರ್ಪಡಿಸಿದರು. ನಂತರದಲ್ಲಿ ಕ್ರೀಸ್‌ಗೆ ಬಂದ ಸೃಜನ್ ನಂದನ್ (49) ಕೂಡ ಹರ್ಷಿಲ್‌ಗೆ ಉತ್ತಮ ಸಾಥ್ ನೀಡಿದರು.

ಬುಧವಾರ ಬೆಳಿಗ್ಗೆ ಇನಿಂಗ್ಸ್ ಮುಂದುವರಿಸಿದ ವೈ.ಡಿ. ಪಾಟೀಲ ಅಕಾಡೆಮಿಯು ನಿನ್ನೆಯ ಮೊತ್ತಕ್ಕೆ 36 ರನ್ ಸೇರಿಸಿ ಆಲೌಟ್ ಆಯಿತು. ನಾಯಕ ಕರ್ಶ್ ಕೊಠಾರಿ 61 ರನ್ ಗಳಿಸಿ ಅಜೇಯರಾಗಿ ಉಳಿದರು.

ಗೋವಿಂದ ಪೊದ್ದಾರ್‌ಗೆ ನಿರಾಸೆ: ಇಲ್ಲಿನ ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣದಲ್ಲಿ ಬರೋಡಾ ಕ್ರಿಕೆಟ್ ಸಂಸ್ಥೆ ವಿರುದ್ಧದ ಪಂದ್ಯದಲ್ಲಿ ಬುಧವಾರ ಒಡಿಶಾ ಕ್ರಿಕೆಟ್ ಸಂಸ್ಥೆಯ ಗೋವಿಂದ ಪೊದ್ದಾರ್ ದ್ವಿಶತಕದ ಅಂಚಿನಲ್ಲಿ (195; 298ಎ, 4X16, 6X2) ಎಡವಿ ನಿರಾಸೆ ಅನುಭವಿಸಿದರು.

ಸಂಕ್ಷಿಪ್ತ ಸ್ಕೋರ್: ಎಸ್‌ಜೆಸಿಇ ಮೈದಾನ: ಡಾ. ಡಿ.ವೈ. ಪಾಟೀಲ ಕ್ರಿಕೆಟ್ ಅಕಾಡೆಮಿ: 106.2 ಓವರ್‌ಗಳಲ್ಲಿ 452 (ಕರ್ಶ್‌ಕೊಠಾರಿ ಔಟಾಗದೇ 61, ಶುಭಾಂಗ್ ಹೆಗ್ಡೆ 133ಕ್ಕೆ 5, ಪಿ. ಧ್ರುವ್ 54ಕ್ಕೆ 2). ಕೆಎಸ್‌ಸಿಎ ಕೋಲ್ಟ್ಸ್: 83 ಓವರ್‌ಗಳಲ್ಲಿ 6 ವಿಕೆಟ್‌ಗೆ 298 (ಎಸ್.ಯು ಕಾರ್ತಿಕ್ 57, ಹರ್ಷಿಲ್ 118, ಸೃಜನ್ ನಂದನ್ 49. ಪರೀಕ್ಷಿತ್ 76ಕ್ಕೆ 2)

ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣ: ಒಡಿಶಾ ಕ್ರಿಕೆಟ್ ಸಂಸ್ಥೆ: 129 ಓವರ್‌ಗಳಲ್ಲಿ 468 (ಗೋವಿಂದ ಪೊದ್ದಾರ್ 195, ಬಾಬಾಸಫಿ ಪಠಾಣ್ 108ಕ್ಕೆ 5). ಬರೋಡಾ ಕ್ರಿಕೆಟ್ ಸಂಸ್ಥೆ: 78 ಓವರ್‌ಗಳಲ್ಲಿ 5 ವಿಕೆಟ್‌ಗೆ 218 (ಕೇದಾರ್ ದೇವಧರ್ 68, ಸುಕೀರ್ತ್ ಪಾಂಡೆ ಔಟಾಗದೇ 81. ಸೂರ್ಯಕಾಂತ್ ಪ್ರಧಾನ್ 17ಕ್ಕೆ 2)

ಬೆಂಗಳೂರು ಪಂದ್ಯಗಳು: ಚಿನ್ನಸ್ವಾಮಿ ಕ್ರೀಡಾಂಗಣ: ಮೊದಲ ಇನಿಂಗ್ಸ್: ಮಧ್ಯಪ್ರದೇಶ ಕ್ರಿಕೆಟ್ ಅಕಾಡೆಮಿ: 79.3 ಓವರ್‌ಗಳಲ್ಲಿ 187. ಕೆಎಸ್‌ಸಿಎ ಇಲೆವನ್: 86.2 ಓವರ್‌ಗಳಲ್ಲಿ 201. ಎರಡನೇ ಇನಿಂಗ್ಸ್: ಮಧ್ಯಪ್ರದೇಶ: 80 ಓವರ್‌ಗಳಲ್ಲಿ 6ಕ್ಕೆ 260 (ಶುಭಂ ಶರ್ಮಾ 54, ರಿಷಭ್ ಚೌಹಾಣ್ 36, ಹರ್‌ಪ್ರೀತ್ ಸಿಂಗ್ ಔಟಾಗದೇ 81, ಆರ್ಯನ್ ಪಾಂಡೆ 35, ಅರ್ಷದ್ ಖಾನ್ ಔಟಾಗದೇ 30; ವಿ.ಕೌಶಿಕ್ 36ಕ್ಕೆ 2, ವಿದ್ಯಾಧರ ಪಾಟೀಲ 50ಕ್ಕೆ 2).

ಬಿಜಿಎಸ್ ಮೈದಾನ: ಮೊದಲ ಇನಿಂಗ್ಸ್: ವಿದರ್ಭ: 109.4 ಓವರ್‌ಗಳಲ್ಲಿ 331. ಕೆಎಸ್‌ಸಿಎ ಅಧ್ಯಕ್ಷರ ಇಲೆವನ್: 74.2 ಓವರ್‌ಗಳಲ್ಲಿ 216. ಎರಡನೇ ಇನಿಂಗ್ಸ್: ವಿದರ್ಭ: 72 ಓವರ್‌ಗಳಲ್ಲಿ 7ಕ್ಕೆ 286 (ಸಿದ್ಧೇಶ್ ವಾತ್ 74, ಅಮನ್ ಮೊಖಾಡೆ 100, ಅಕ್ಷಯ್ ಕರ್ನೇವರ್ ಔಟಾಗದೇ 65; ಅಭಿಷೇಕ್ ಪ್ರಭಾಕರ್ 33ಕ್ಕೆ 2, ಪಾರಸ್ ಗುರುಭಕ್ಷ್ ಆರ್ಯ 78ಕ್ಕೆ 3).

ಆಲೂರು (3): ಮೊದಲ ಇನಿಂಗ್ಸ್: ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್: 63.1 ಓವರ್‌ಗಳಲ್ಲಿ 181. ಆಂಧ್ರ: 51 ಓವರ್‌ಗಳಲ್ಲಿ 188. ಎರಡನೇ ಇನಿಂಗ್ಸ್: ಕರ್ನಾಟಕ: 76.1 ಓವರ್‌ಗಳಲ್ಲಿ 296 (ಶ್ರೇಯಸ್ ಗೋಪಾಲ್ 50, ಶ್ರೀಕರ ಮೂರ್ತಿ ಔಟಾಗದೇ 32). ಆಂಧ್ರ: 71 ಓವರ್‌ಗಳಲ್ಲಿ 8ಕ್ಕೆ 268 (ಕೆ.ಮಹೀಪ್ ಕುಮಾರ್ 85, ರೇವಂತ್ ರೆಡ್ಡಿ 35, ಅಶ್ವಿನ್ ಹೆಬ್ಬಾರ್ ಔಟಾಗದೇ 80; ಶಿಖರ್ ಶೆಟ್ಟಿ 34ಕ್ಕೆ 4, ಅಧೋಕ್ಷ್ ಹೆಗ್ಡೆ 45ಕ್ಕೆ 2.



ಕೆಎಸ್‌ಸಿಎ ಕೋಲ್ಟ್ಸ್ ಪರ ಶತಕ ಗಳಿಸಿದ ಹರ್ಷಿಲ್ ಸಂಭ್ರಮಿಸಿದರು ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ದುಲೀಪ್ ಟ್ರೋಫಿ: ರಿಂಕು, ಅಯ್ಯರ್ ಮೇಲೆ ಗಮನ

ಅನಂತಪುರ (ಪಿಟಿಐ): ಭಾರತ ಕ್ರಿಕೆಟ್ ತಂಡದೊಳಗೆ ಸ್ಥಾನ ಪಡೆಯಲು ಯತ್ನಿಸುತ್ತಿರುವ ರಿಂಕು ಸಿಂಗ್, ರಾಷ್ಟ್ರೀಯ ಆಯ್ಕೆಗಾರರಿಂದ ಅವಗಣನೆಗೆ ಒಳಗಾದ ಕೆಲವು ಅನುಭವಿ ಆಟಗಾರರು, ಗುರುವಾರ ಆರಂಭವಾಗುವ ದುಲೀಪ್ ಟ್ರೋಫಿ ಎರಡನೇ ಸುತ್ತಿನ ಪಂದ್ಯಗಳಲ್ಲಿ ಗಮನ ಸೆಳೆಯುವಂಥ ಪ್ರದರ್ಶನದ ನೀಡುವ ಗುರಿಯಲ್ಲಿದ್ದಾರೆ.

ದುಲೀಪ್ ಟ್ರೋಫಿ ಟೂರ್ನಿಯ ಮೊದಲ ಸುತ್ತಿನಲ್ಲಿ ಆಡಿದ್ದ ತಾರಾ ವರ್ಚಸ್ಸಿನ ಕೆಲವು ಆಟಗಾರರು, ಬಾಂಗ್ಲಾದೇಶ ವಿರುದ್ಧ ಟೆಸ್ಟ್ ಸರಣಿಗೆ ಮುಂಚಿನ ರಾಷ್ಟ್ರೀಯ ಶಿಬಿರಕ್ಕೆ ಹಾಜರಾಗುವ ಕಾರಣ ಈ ಪಂದ್ಯದಲ್ಲಿ ಇನ್ನುಳಿದ ಪ್ರಮುಖ ಆಟಗಾರರ ನಿರ್ವಹಣೆಯ ಮೇಲೆ ಸಹಜವಾಗಿ ಗಮನ ನೆಟ್ಟಿದೆ. ಬಾಂಗ್ಲಾದೇಶ ವಿರುದ್ಧ ಮೊದಲ ಟೆಸ್ಟ್ ಪಂದ್ಯ ಸೆ. 19ರಂದು ಚೆನ್ನೈನಲ್ಲಿ ಆರಂಭವಾಗಲಿದೆ.

ಹಾಲಿ ರಾಷ್ಟ್ರೀಯ ತಂಡದ ಆಟಗಾರ ಸರ್ಫರಾಜ್ ಖಾನ್ ಮಾತ್ರ ಎರಡನೇ ಸುತ್ತಿನಲ್ಲಿ ಆಡುತ್ತಿದ್ದಾರೆ.

ಪ್ರಮುಖರ ಗೈರಿನಲ್ಲಿ ರಿಂಕು ಸಿಂಗ್ ಪ್ರದರ್ಶನ ಕುತೂಹಲಕ್ಕೆ ಎಡೆಮಾಡಿದೆ. ಮೊದಲದರ್ಜೆ ಕ್ರಿಕೆಟ್‌ನಲ್ಲಿ ಉತ್ತಮ ಸಾಧನೆಯ ಹೊರತಾಗಿಯೂ, ಅಚ್ಚರಿಯೆಂಬಂತೆ ಅವರನ್ನು ಈ ಟೂರ್ನಿಯ ಮೊದಲ ಸುತ್ತಿನ ಪಂದ್ಯಕ್ಕೆ ಆಯ್ಕೆ ಮಾಡಿರಲಿಲ್ಲ.



ರಿಂಕು ಸಿಂಗ್

ಶುಭಮನ್ ಗಿಲ್ ರಾಷ್ಟ್ರೀಯ ತಂಡದಲ್ಲಿರುವ ಕಾರಣ, ಕನ್ನಡಿಗ ಬ್ಯಾಟರ್ ಮಯಂಕ್ ಅಗರವಾಲ್ ಅವರು ಭಾರತ 'ಎ' ತಂಡಕ್ಕೆ ನಾಯಕರಾಗಿದ್ದಾರೆ. 2022ರ ಮಾರ್ಚ್‌ನಲ್ಲಿ ಕೊನೆಯದಾಗಿ ಟೆಸ್ಟ್ ಆಡಿದ್ದ ಮಯಂಕ್, ರಾಷ್ಟ್ರೀಯ ತಂಡಕ್ಕೆ ಮರಳಬೇಕಾದರೆ ರನ್ ಹೊಳೆ ಹರಿಸಬೇಕಾಗಿದೆ.

ವೇಗದ ಬೌಲರ್ ಪ್ರಸಿದ್ಧ ಕೃಷ್ಣ ಎಡ ತೊಡೆಯ ಗಾಯದ ಪುನಶ್ಚೇತನದಲ್ಲಿದ್ದ ಕಾರಣ ಮೊದಲ ಸುತ್ತಿನ ಪಂದ್ಯ ಕಳೆದುಕೊಂಡಿದ್ದರು. ಅವರೂ ಈಗ 'ಎ' ತಂಡದಲ್ಲಿದ್ದಾರೆ. ಆಸ್ಟ್ರೇಲಿಯಾ ಪ್ರವಾಸ ಬಹುದೂರದಲ್ಲೇನೂ ಇರದ ಕಾರಣ ಅವರು ಇಲ್ಲಿ ತೋರುವ ನಿರ್ವಹಣೆ ಗಣನೆಗೆ ಬರಲಿದೆ.

ಪದಾರ್ಪಣೆ ಟೆಸ್ಟ್ ಪಂದ್ಯದಲ್ಲೇ ಯಶಸ್ಸು ಕಂಡಿದ್ದ, 'ಬಿ' ತಂಡದ ಆಟಗಾರ ಸರ್ಫರಾಜ್ ಅವರು ಮೊದಲ ಟೆಸ್ಟ್‌ನಲ್ಲಿ ತಮ್ಮ ಸೋದರ ಮುಷೀರ್ ಖಾನ್ ಶತಕದ ಮುಂದೆ ಕಳಾಹೀನರಾಗಿದ್ದರು. ಅವರು 181 ರನ್‌ಗಳು 'ಎ' ತಂಡದ ವಿರುದ್ಧ ಅಮೋಘ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಹೀಗಾಗಿ ಸರ್ಫರಾಜ್ ದೊಡ್ಡ ಮೊತ್ತದ ನಿರೀಕ್ಷೆಯಲ್ಲಿದ್ದಾರೆ.

'ಸಿ' ತಂಡದಲ್ಲಿರುವ ಎಡಗೈ ಸ್ಪಿನ್ನರ್ ಮಾನವ್ ಸುತಾರ್ ಮತ್ತೊಮ್ಮೆ ಉತ್ತಮ ಪ್ರದರ್ಶನದ ಗುರಿಯಲ್ಲಿದ್ದಾರೆ ಚೊಚ್ಚಲ ಟೆಸ್ಟ್ ಸರಣಿಯಲ್ಲಿ ನಿರಾಶೆ ಅನುಭವಿಸಿದ್ದ ರಜತ್ ಪಾಟೀದಾರ್ ಕೂಡ ದೀರ್ಘ ಮಾದರಿಯಲ್ಲಿ ರನ್ ಹಸಿವು ತೋರಬೇಕಾಗಿದೆ.

ಟೆಸ್ಟ್ ತಂಡದಿಂದ ಹೊರಬಿದ್ದಿರುವ ಶ್ರೇಯಸ್ ಅಯ್ಯರ್ ಭಾರತ 'ಡಿ' ತಂಡದ ನಾಯಕರಾಗಿದ್ದು, ಅಮೋಘ ಯಶಸ್ಸು ಮಾತ್ರ ಅವರನ್ನು ರಾಷ್ಟ್ರೀಯ ತಂಡಕ್ಕೆ ಮರಳಲು ದಾರಿ ಮಾಡಿಕೊಡಲಿದೆ. ಇದು ದೇವದತ್ತ ಪಡಿಕ್ಕಲ್, ಸಂಜು ಸಾಮ್ಸನ್ ಅವರಿಗೂ ಅನ್ವಯವಾಗಲಿದೆ. ಕರ್ನಾಟಕದ ವೇಗಿ ವೈಶಾಖ ವಿಜಯಕುಮಾರ್ 'ಸಿ' ತಂಡದಲ್ಲಿದ್ದರೆ, ವಿದ್ವತ್ ಕಾವೇರಪ್ಪ ಅವರೂ ಡಿ ತಂಡದಲ್ಲಿದ್ದಾರೆ.

ಅರ್ಹತಾ ವ್ಯವಸ್ಥೆಯಲ್ಲಿ ಮಾರ್ಪಾಡು: ಎಎಫ್‌ಐ

ಚೆನ್ನೈ (ಪಿಟಿಐ): ಭಾರತ ಅಥ್ಲೆಟಿಕ್ ಫೆಡರೇಷನ್ (ಎಎಫ್‌ಐ) ಮುಂದಿನ ಋತುವಿನಿಂದ ಪ್ರಮುಖ ಅಂತರ ರಾಷ್ಟ್ರೀಯ ಸ್ಪರ್ಧಾಕೂಟಗಳಿಗೆ ಅರ್ಹತಾ ವ್ಯವಸ್ಥೆ ಯಲ್ಲಿ ಬದಲಾವಣೆಗಳನ್ನು ಮಾಡಲಿದೆ. ದೇಶೀಯ ಕೂಟಗಳ ಸ್ವರೂಪದಲ್ಲೂ ಪುನಾರಚನೆ ಆಗಲಿದೆ ಎಂದು ಅಧ್ಯಕ್ಷ ಅದಿಲ್ ಸುಮರಿವಾಲಾ ಬುಧವಾರ ಇಲ್ಲಿ ತಿಳಿಸಿದರು.

ಇಲ್ಲಿನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಸ್ಯಾಫ್ ಜೂನಿಯರ್ ಅಥ್ಲೆಟಿಕ್ ಕೂಟದ ಸಂದರ್ಭದಲ್ಲಿ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, ಅಥ್ಲೀಟುಗಳು ಸಕಾಲದಲ್ಲಿ ತಮ್ಮ ಪ್ರದರ್ಶನದ ಮಟ್ಟ ಉತ್ತುಂಗಕ್ಕೆ ಏರಲು ಅವಕಾಶವಾಗುವಂತೆ ಕ್ವಾಲಿಫಿಕೇಷನ್ ವ್ಯವಸ್ಥೆಯಲ್ಲಿ ಮಾರ್ಪಾಡು ತರಲಾಗುವುದು ಎಂದರು.

ಅಥ್ಲೆಟಿಕ್ಸ್: ಪೂಜಾ, ಸಿದ್ಧಾರ್ಥ ದಾಖಲೆ

ಬೆಂಗಳೂರು: ಭಾರತದ ಪೂಜಾ ಮತ್ತು ಸಿದ್ಧಾರ್ಥ ಚೌಧರಿ ಅವರು ಚೆನ್ನೈನಲ್ಲಿ ನಡೆಯುತ್ತಿರುವ ಸ್ಯಾಫ್ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಕ್ರಮವಾಗಿ ಮಹಿಳೆಯರ ಹೈಜಂಪ್ ಮತ್ತು ಪುರುಷರ ಷಾಟ್‌ಪಟ್‌ನಲ್ಲಿ ಕೂಟ ದಾಖಲೆ ಬರೆದರು.



ಬೆಳ್ಳಿ ಗೆದ್ದ ಕರ್ನಾಟಕದ ಸುಧೀಕ್ಷಾ

ಪೂಜಾ 1.80 ಮೀ. ಎತ್ತರ ಜಿಗಿದು (ಹಿಂದಿನ ದಾಖಲೆ 1.75 ಮೀ.) ಚಾಂಪಿಯನ್ ಆದರು. ಸಿದ್ಧಾರ್ಥ 19.19 ಮೀ. ಸಾಧನೆಯೊಂದಿಗೆ (ಹಿಂದಿನ ದಾಖಲೆ 18.53 ಮೀ) ಚಿನ್ನಕ್ಕೆ ಕೊರಳೊಡ್ಡಿದರು.

ಭಾರತ ತಂಡದಲ್ಲಿರುವ ಕರ್ನಾಟಕದ ಸುಧೀಕ್ಷಾ, ಮಹಿಳೆಯರ 100 ಮೀ. ಓಟದಲ್ಲಿ (11.92ಸೆ) ಬೆಳ್ಳಿ ಗೆದ್ದರೆ, ಬೋಪಣ್ಣ ಕ್ಲಾಪ್ಪ, ಪುರುಷರ 800 ಮೀ. ಓಟದಲ್ಲಿ (1ನಿ.50.45ಸೆ) ಕಂಚಿನ ಪದಕ ಗೆದ್ದರು.

ಹಾಕಿ ಆಟಗಾರನಿಗೆ ಒಂದು ವರ್ಷ ನಿಷೇಧ

ಸಿಡ್ನಿ (ಎಪಿ): ಪ್ಯಾರಿಸ್ ಒಲಿಂಪಿಕ್ಸ್ ಸಂದರ್ಭದಲ್ಲಿ ಮಾದಕ ವಸ್ತು ಕೊಕೇನ್ ಖರೀದಿಗೆ ಯತ್ನಿಸಿದ್ದ ಆಸ್ಟ್ರೇಲಿಯಾದ ಹಾಕಿ ಆಟಗಾರ ಟಾಮ್ ಕ್ರೇಗ್ ಅವರ ಮೇಲೆ ಆಸ್ಟ್ರೇಲಿಯಾದ ಹಾಕಿಸಂಸ್ಥೆ ಒಂದು ವರ್ಷದ ನಿಷೇಧ ಹೇರಿದೆ.

ಆಗಸ್ಟ್ 7ರಂದು ಒಲಿಂಪಿಕ್ಸ್ ವೇಳೆ, ಕ್ರೇಗ್ ಅವರನ್ನು ಕೊಕೇನ್ ಖರೀದಿಗೆ ಪ್ರಯತ್ನಿಸುವಾಗ ಬಂಧಿಸಲಾಗಿತ್ತು. ಆದರೆ ನಂತರ ಅವರಿಗೆ ಎಚ್ಚರಿಕೆ ನೀಡಿ ಬಿಡುಗಡೆ ಮಾಡಲಾಗಿತ್ತು. ಆದರೆ ಅವರ ಹೆಸರು ಬಹಿರಂಗಪಡಿಸಿರಲಿಲ್ಲ.

ಅಮೆರಿಕ ಅಧ್ಯಕ್ಷೀಯ ಅಭ್ಯರ್ಥಿಗಳ ನಡುವೆ ಚರ್ಚೆ • ವಿವಿಧ ವಿಷಯಗಳ ಕುರಿತು ನಿಲುವು ಪ್ರಕಟ

ಟ್ರಂಪ್–ಕಮಲಾ ಮುಖಾಮುಖಿ; ವಾಕ್ಸಮರ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಅಧ್ಯಕ್ಷ ಸ್ಥಾನದ ಸ್ಪರ್ಧಿಗಳಾದ ಕಮಲಾ ಹ್ಯಾರಿಸ್ ಮತ್ತು ಡೊನಾಲ್ಡ್ ಟ್ರಂಪ್ ಬುಧವಾರ ಮುಖಾಮುಖಿಯಾದರು.

ಪರಸ್ಪರ ಹಸ್ತಲಾಘವದೊಂದಿಗೆ ಶುರುವಾದ ಚರ್ಚೆ, ಒಂದೂವರೆ ಗಂಟೆ ನಡೆಯಿತು. ಪರಸ್ಪರ ನಿಂದನೆ ಹಾಗೂ ತುರುಸಿನ ವಾದಗಳ ಮೂಲಕ ಅಂತ್ಯಗೊಂಡಿತು.

ದೇಶದ ಗಡಿ ರಕ್ಷಣೆ, ವಿದೇಶಾಂಗ ನೀತಿ, ಆರ್ಥಿಕತೆ, ಗರ್ಭಪಾತ ನೀತಿ ಸೇರಿ ಅಧಿಕಾರ ದೊರೆತರೆ ಜಾರಿಗೆ ತರಲು ಇಚ್ಛಿಸುವ ಕ್ರಮಗಳು ಹಾಗೂ ಪ್ರಮುಖ ವಿಷಯಗಳನ್ನು ಕುರಿತು ತಮ್ಮ ತಮ್ಮ ನಿಲುವನ್ನು ಜನರ ಮುಂದಿಟ್ಟರು.

ಪೆನ್ಸಿಲ್ವೇನಿಯಾದಲ್ಲಿ ನಡೆದ ಈ ಚರ್ಚೆ ಡೆಮಾಕ್ರಟಿಕ್ ಪಕ್ಷದ ಕಮಲಾ ಹ್ಯಾರಿಸ್, ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ, ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮೊದಲ ನೇರ ಮುಖಾಮುಖಿ ಮಂಥನವೂ ಹೌದು.

'ಎರಡು ಭಿನ್ನ ದೃಷ್ಟಿಕೋನಗಳನ್ನು ನೀವು ಆಲಿಸಿದ್ದೀರಿ. ಒಂದು, ದೇಶದ ಭವಿಷ್ಯವನ್ನು ಕೇಂದ್ರೀಕರಿಸಿದ ದೃಷ್ಟಿಕೋನ. ಮತ್ತೊಂದು, ಗತವನ್ನು ಸಾರುತ್ತಾ ಹಿಮ್ಮುಖವಾಗಿ ಸಾಗುವ ದೃಷ್ಟಿಕೋನ. ಆದರೆ, ನಾವು ಹೆಜ್ಜೆ ಹಿಂದಿಡುವವರಲ್ಲ' ಎಂದು 59 ವರ್ಷದ ಕಮಲಾ ಹ್ಯಾರಿಸ್ ತಮ್ಮ ವಾದಸರಣಿಯ ಕೊನೆಯಲ್ಲಿ ಪ್ರತಿಪಾದಿಸಿದರು.

ಇದಕ್ಕೆ ತಮ್ಮದೇ ಧಾಟಿಯಲ್ಲಿ ಉತ್ತರಿಸಿದ 78 ವರ್ಷದ ಡೊನಾಲ್ಡ್ ಟ್ರಂಪ್, 'ಕಮಲಾ ಅವರು ತಾವು ಹಾಗೆ ಮಾಡುತ್ತೇನೆ, ಹೀಗೆ ಮಾಡುತ್ತೇನೆ ಎಂದೆಲ್ಲಾ ಹೇಳಿಕೊಂಡಿದ್ದಾರೆ. ಬೈಡನ್–ಹ್ಯಾರಿಸ್ ನೇತೃತ್ವದ ಕಳೆದ ಮೂರೂವರೆ ವರ್ಷದ ಆಡಳಿತದಲ್ಲಿ ಈ ಎಲ್ಲವನ್ನೂ ಅವರು ಏಕೆ ಮಾಡಲಿಲ್ಲ' ಎಂದು ಪ್ರಶ್ನಿಸಿದರು.

'ಗಡಿ ಸಮಸ್ಯೆ ಬಗೆಹರಿಸಲು ಭದ್ರತೆ ಸುಧಾರಣೆ ಮಾಡಲು, ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಮೂರೂವರೆ ವರ್ಷ ಅವಕಾಶವಿತ್ತು. ಅದನ್ನು ಏಕೆ ಮಾಡಲಿಲ್ಲ' ಎಂಬ ಪ್ರಶ್ನೆಯನ್ನು ಅವರು ಪ್ರಮುಖವಾಗಿ ಉಲ್ಲೇಖಿಸಿದರು.

'ಎಲ್ಲರನ್ನೂ ಒಗ್ಗೂಡಿಸುವ ಅಧ್ಯಕ್ಷರನ್ನು ದೇಶದ ಜನ ಬಯಸುತ್ತಾರೆ ಎಂದೇ ನಾನು ನಂಬಿದ್ದೇನೆ. ನಾನು ಎಲ್ಲ ಅಮೆರಿಕನ್ನರ ಅಧ್ಯಕ್ಷಳಾಗಿ ಉಳಿಯುವ ಭರವಸೆ ನೀಡುತ್ತೇನೆ' ಎಂದು ಕಮಲಾ ವಾಗ್ದಾನ ಮಾಡಿದರು.

ಒಂದು ಹಂತದಲ್ಲಿ, 'ನೀವು ಸುಳ್ಳು ಹೇಳುತ್ತಿದ್ದೀರಿ' ಎಂದು ಕಮಲಾ ಮತ್ತು ಟ್ರಂಪ್ ಪರಸ್ಪರರನ್ನು ನಿಂದಿಸುವ ಮೂಲಕ ಚರ್ಚೆಯು ಕಾವು ಪಡೆದುಕೊಂಡಿತು. ಇಬ್ಬರೂ ಸ್ಪರ್ಧಿಗಳು ತಪ್ಪು ಮಾಹಿತಿ ನೀಡಿದಾಗಲೆಲ್ಲ, ಚರ್ಚೆ ನಡೆಸಿಕೊಟ್ಟ 'ಎಬಿಸಿ ನ್ಯೂಸ್' ಪ್ರತಿನಿಧಿಗಳು ಮಧ್ಯ ಪ್ರವೇಶಿಸಿ ಸತ್ಯಾಂಶ ತಿಳಿಸಿ, ಸಭಿಕರ ಗಮನಸೆಳೆದರು.

'ಕಮಲಾ ಅವರು ಮಾರ್ಕ್ಸಿಸ್ಟ್. ಅವರ ತಂದೆಯೂ ಅದೇ ವಿಷಯದಲ್ಲಿ ಪ್ರೊಫೆಸರ್ ಆಗಿದ್ದವರು. ಮಗಳಿಗೆ ಚೆನ್ನಾಗಿ ಉಪದೇಶ ಮಾಡಿರುತ್ತಾರೆ' ಎಂದು ಟ್ರಂಪ್ ವ್ಯಂಗ್ಯವಾಡಿದರು.

ಟ್ರಂಪ್ ಮಾತುಗಳನ್ನು ತಳ್ಳಿಹಾಕಿದ ಕಮಲಾ, 'ನೀವು (ಸಭಿಕರು) ಸುಳ್ಳುಗಳ ಕಂತೆಯನ್ನೇ ಆಲಿಸಲಿದ್ದೀರಿ ಎಂದು ನಾನು ಮೊದಲೇ ಹೇಳಿದ್ದೇನೆ. ಹೀಗಾಗಿ, ಅವರ ಮಾತುಗಳನ್ನು ಕೇಳಿ ನನಗೇನೂ ಅಚ್ಚರಿ ಆಗಿಲ್ಲ' ಎಂದರು.



ಡೊನಾಲ್ಡ್ ಟ್ರಂಪ್ ಹೇಳಿದ್ದು

- ಗರ್ಭಪಾತ ಕುರಿತ ನೀತಿ ರಾಜ್ಯಗಳಿಗೆ ಸಂಬಂಧಿಸಿದ್ದಾಗಿದೆ ಎಂಬುದು ನಮ್ಮ ಪ್ರತಿಪಾದನೆ. ಕಮಲಾ ಹ್ಯಾರಿಸ್ ಈ ಕುರಿತು ಸುಳ್ಳು ಹೇಳುತ್ತಿದ್ದಾರೆ. ನಾನು ಯಾವುದೇ ಮಸೂದೆಗೆ ಸಹಿ ಹಾಕುವುದಿಲ್ಲ. ಇದು ರಾಜ್ಯಗಳ ವಿವೇಚನೆಗೆ ಬಿಟ್ಟ ವಿಷಯ
- ನಾನು ಅಧ್ಯಕ್ಷನಾಗಿ ಆಯ್ಕೆಯಾದರೆ ರಷ್ಯಾ–ಉಕ್ರೇನ್ ಯುದ್ಧವನ್ನು ಕೊನೆಗಾಣಿಸುತ್ತೇನೆ. ಝೆಲೆನ್‌ಸ್ಕಿ ಮತ್ತು ಪುಟಿನ್ ಇಬ್ಬರೂ ನನಗೆ ಚೆನ್ನಾಗಿ ಗೊತ್ತು; ಅವರಿಬ್ಬರ ಜೊತೆಗೂ ನನಗೆ ಉತ್ತಮ ಬಾಂಧವ್ಯವಿದೆ
- ಅಧ್ಯಕ್ಷನಾಗಿ ನನ್ನ ನಾಲ್ಕು ವರ್ಷದ ಅವಧಿಯಲ್ಲಿ ಯುದ್ಧದ ಭೀತಿಯೇ ಇರಲಿಲ್ಲ. ಅಫ್ಗಾನಿಸ್ತಾನದಿಂದ ಸೇನೆ ವಾಪಸು ಕರೆಸಿಕೊಂಡಿದ್ದು ದೇಶದ ಇತಿಹಾಸದಲ್ಲಿಯೇ ತುಂಬ ಇರಿಸುಮುರಿಸಿನ ಸಂದರ್ಭವಾಗಿತ್ತು
- ಇಸ್ರೇಲ್ ಬಗ್ಗೆ ಕಮಲಾ ಅವರಿಗೆ ದ್ವೇಷದ ಭಾವನೆ ಇದೆ. ಅವರು ಅಧ್ಯಕ್ಷರಾದರೆ ಎರಡೇ ವರ್ಷದಲ್ಲಿ ಇಸ್ರೇಲ್ ತನ್ನ ಅಸ್ತಿತ್ವ ಕಳೆದುಕೊಳ್ಳಲಿದೆ. ಒಂದು ವೇಳೆ ಈಗ ನಾನು ಅಧ್ಯಕ್ಷ ಸ್ಥಾನದಲ್ಲಿ ಇದ್ದಿದ್ದರೆ ಇಸ್ರೇಲ್ ಹಾಗೂ ಹಮಾಸ್ ನಡುವೆ ಯುದ್ಧವೇ ನಡೆಯುತ್ತಿರಲಿಲ್ಲ



ಕಮಲಾ ಹ್ಯಾರಿಸ್ ಹೇಳಿದ್ದು...

- ಟ್ರಂಪ್ ಆಯ್ಕೆಯಾದರೆ ಗರ್ಭಪಾತ ಕುರಿತ ಮಸೂದೆಗೆ ಸಹಿ ಹಾಕುತ್ತಾರೆ. ಗರ್ಭಪಾತ, ಹೆರಿಗೆ ಮೇಲೂ ಕಣ್ಗಾವಲು ಇಡುವ ವ್ಯವಸ್ಥೆ ಬರಲಿದೆ. ತಮ್ಮ ದೇಹದ ಕುರಿತು ನಿರ್ಧರಿಸುವ ಸ್ವಾತಂತ್ರ್ಯ ಜನರಿಗೆ ಇರಬೇಕು
- ಡೊನಾಲ್ಡ್ ಟ್ರಂಪ್ ಅವರು ಊಹಿಸಲಾಗದ ಹಲವು ದುರ್ಬಲ ಒಪ್ಪಂದಗಳಿಗೆ ಸಹಿ ಹಾಕಿದ್ದರು. ಇದಕ್ಕೊಂದು ಉದಾಹರಣೆ ತಾಲಿಬಾನ್ ಜೊತೆಗಿನ ಮಾತುಕತೆ. ಈಗ, ಅಫ್ಗನ್‌ನಿಂದ ಸೇನೆ ಹಿಂದೆ ಕರೆಯಿಸಿದ ಬೈಡನ್ ನಿರ್ಧಾರಕ್ಕೆ ನಾನು ಬದ್ಧಳಾಗಿದ್ದೇನೆ
- ರಷ್ಯಾ–ಉಕ್ರೇನ್ ನಡುವಣ ಯುದ್ಧವನ್ನು ನಿಲ್ಲಿಸುತ್ತೇನೆ' ಎಂಬ ಟ್ರಂಪ್ ಭರವಸೆ ರಾಜಿ ಆಗುವುದೇ ಆಗಿದೆ. ಆದರೆ, ಅದು ಅಮೆರಿಕನ್ನರ ಗುಣವಲ್ಲ. ಅಮೆರಿಕ ನೀಡಿದ ಬೆಂಬಲದ ಕಾರಣದಿಂದಲೇ ಉಕ್ರೇನ್ ಇಂದು ಸ್ವತಂತ್ರ ರಾಷ್ಟ್ರವಾಗಿದೆ
- ಇಸ್ರೇಲ್‌ಗೆ ತನ್ನನ್ನು ರಕ್ಷಿಸಿಕೊಳ್ಳುವ ಸಾಮರ್ಥ್ಯವಿದೆ. ಅದು ಹೇಗೆ ಎಂಬುದೇ ಪ್ರಶ್ನೆ. ಇಸ್ರೇಲ್–ಹಮಾಸ್ ಯುದ್ಧ ಕೊನೆಗಾಣಬೇಕು ಎಂದು ನಾವೂ ಬಯಸುತ್ತೇವೆ. ಅದಕ್ಕೆ ಮೊದಲು ಒತ್ತೆಯಾಳುಗಳ ಬಿಡುಗಡೆ ಆಗಬೇಕು. ಅದಕ್ಕಾಗಿ ಕದನವಿರಾಮ ಘೋಷಣೆ ಆಗಬೇಕು. ಅದಕ್ಕೆ ನಾನು ಬದ್ಧ

> ಚರ್ಚೆಯ ಆಯೋಜಕರು ಟ್ರಂಪ್ ವಿಷಯದಲ್ಲಿ ನ್ಯಾಯೋಚಿತವಾಗಿದ್ದರು ಎಂದು ಅನಿಸಲಿಲ್ಲ. ಜನರ ನಿರೀಕ್ಷೆಗಳನ್ನು ಕಮಲಾ ಇನ್ನಷ್ಟು ವಿಸ್ತರಿಸಿದರಷ್ಟೆ
> **ಎಲಾನ್ ಮಸ್ಕ್**, ಉದ್ಯಮಿ

ಬಿಜೆಪಿ ವಿರುದ್ಧ ಕಾಂಗ್ರೆಸ್ ವಾಗ್ದಾಳಿ

ನವದೆಹಲಿ (ಪಿಟಿಐ): ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಅಮೆರಿಕದಲ್ಲಿ ದೇಶ ವಿರೋಧಿ ಹೇಳಿಕೆ ನೀಡಿದ್ದಾರೆ ಎಂದು ಬಿಜೆಪಿ ಆರೋಪಿಸಿದ ಬೆನ್ನಲ್ಲೇ ಅದರ ವಿರುದ್ಧ ವಾಗ್ದಾಳಿ ನಡೆಸಿರುವ ಕಾಂಗ್ರೆಸ್, ರಾಹುಲ್ ಅವರು ಸಂವಿಧಾನವನ್ನು ಎತ್ತಿಹಿಡಿಯುವ ಬಗ್ಗೆ ಮಾತನಾಡಿದರೆ ಆಡಳಿತ ಪಕ್ಷಕ್ಕೆ ಏನು ಸಮಸ್ಯೆ ಎಂದು ಪ್ರಶ್ನಿಸಿದೆ.

ಭಾರತ ವಿರೋಧಿ ಧೋರಣೆ ಹೊಂದಿರುವ ಡೆಮಾಕ್ರಟಿಕ್ ಸಂಸದೆ ಇಲ್ಹಾನ್ ಒಮರ್ ಅವರನ್ನು ರಾಹುಲ್ ಅವರು ಭೇಟಿ ಮಾಡಿದ ಕುರಿತು ವ್ಯಕ್ತವಾದ ಟೀಕೆಗಳನ್ನು ಕಾಂಗ್ರೆಸ್ ತಳ್ಳಿ ಹಾಕಿದೆ. ಒಂದು ವೇಳೆ ಹಾಗೇನಾದರೂ ಭಾವಿಸಿದ್ದರೆ, ಅಧಿಕಾರದಲ್ಲಿರುವ ಬಿಜೆಪಿ ಅಮೆರಿಕದ ರಾಯಭಾರಿಯನ್ನು ಕರೆಸಿ, ಕ್ರಮ ತೆಗೆದುಕೊಳ್ಳಲಿ ಎಂದು ಹೇಳಿದೆ.

ಈ ಕುರಿತು 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿರುವ ಗೃಹ ಸಚಿವ ಅಮಿತ್ ಶಾ, ದೇಶ ವಿಭಜಿಸಲು ಸಂಚು ರೂಪಿಸುವ ಶಕ್ತಿಗಳ ಜತೆ ನಿಲ್ಲುವುದು ಮತ್ತು ದೇಶ ವಿರೋಧಿ ಹೇಳಿಕೆ ನೀಡುವುದು ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ ಪಕ್ಷಕ್ಕೆ ಅಭ್ಯಾಸವಾಗಿ ಹೋಗಿದೆ' ಎಂದಿದ್ದಾರೆ.

ಅಮಿತ್ ಶಾ ಅವರ ಹೇಳಿಕೆಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಕಾಂಗ್ರೆಸ್‌ನ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ, 'ಅವರಿಗೆ ಕ್ರಮ ತೆಗೆದುಕೊಳ್ಳಲು ಹೇಳಿ. ನಂತರ ನಾವು ಪ್ರಧಾನಿ ಮತ್ತು ಗೃಹ ಸಚಿವರಿಬ್ಬರನ್ನೂ ಬಹಿರಂಗಪಡಿಸುತ್ತೇವೆ. ಪ್ರಧಾನಿ ವಿದೇಶಕ್ಕೆ ಹೋದಾಗ ಭಾರತ ಮತ್ತು ಭಾರತೀಯರ ಬಗ್ಗೆ ಭಯಾನಕ ಹೇಳಿಕೆಗಳನ್ನು ನೀಡಿದ್ದಾರಲ್ಲ, ಅದು ದೇಶ ವಿರೋಧಿಯಲ್ಲವೇ?' ಎಂದು ಪ್ರಶ್ನಿಸಿದ್ದಾರೆ.

'ಚೀನಾ ಸಂಘರ್ಷ ಸರಿಯಾಗಿ ನಿಭಾಯಿಸಿಲ್ಲ'

ಚೀನಾದಿಂದ 4,000 ಚದರ ಕಿ.ಮೀ. ಭೂಪ್ರದೇಶ ಆಕ್ರಮಣ: ರಾಹುಲ್ ಗಾಂಧಿ ಆರೋಪ

ವಾಷಿಂಗ್ಟನ್ (ಪಿಟಿಐ): ಚೀನಾ ಜೊತೆಗಿನ ಸಂಘರ್ಷವನ್ನು ನರೇಂದ್ರ ಮೋದಿ ನೇತೃತ್ವದ ಸರ್ಕಾರವು ನಿಭಾಯಿಸಿದ ಬಗೆಯ ಕುರಿತು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ನೆರೆಯ ದೇಶದ ಸೈನಿಕರು ಭಾರತದ ನಾಲ್ಕು ಸಾವಿರ ಚದರ ಕಿ.ಮೀ. ಪ್ರದೇಶವನ್ನು 'ಆಕ್ರಮಿಸಿಕೊಂಡಿರುವುದು ಒಂದು ದುರಂತ' ಎಂದು ರಾಹುಲ್ ಅವರು ಇಲ್ಲಿ ಸುದ್ದಿಗಾರರ ಬಳಿ ಹೇಳಿದ್ದಾರೆ.

ವಿದೇಶಾಂಗ ನೀತಿಗಳ ವಿಚಾರವಾಗಿ ಕಾಂಗ್ರೆಸ್ ಪಕ್ಷವು ಕೇಂದ್ರ ಸರ್ಕಾರದ ಜೊತೆ ಬಹುತೇಕ ಸಹಮತ ಹೊಂದಿದೆ ಎಂದು ಅವರು ಹೇಳಿದ್ದಾರೆ. ಇಲ್ಲಿನ ನ್ಯಾಷನಲ್ ಪ್ರೆಸ್ ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಭಾರತದ ಆಂತರಿಕ ವ್ಯವಹಾರಗಳಲ್ಲಿ ಅಮೆರಿಕವು ಹಸ್ತಕ್ಷೇಪ ಮಾಡುವುದನ್ನು ತಾವು ಬಯಸುವುದಿಲ್ಲ ಎಂದಿದ್ದಾರೆ.

'ಮೋದಿ ನೇತೃತ್ವದಲ್ಲಿ ಭಾರತವು ಅಮೆರಿಕ–ಚೀನಾ ಸ್ಪರ್ಧೆಯನ್ನು ಚೆನ್ನಾಗಿ ನಿಭಾಯಿಸಿದೆ ಎಂದು ಭಾವಿಸಿದ್ದೀರಾ' ಎಂದು ರಾಹುಲ್ ಅವರನ್ನು ಪ್ರಶ್ನಿಸಿದಾಗ, 'ನಮ್ಮ 4,000 ಚದರ ಕಿ.ಮೀ. ಪ್ರದೇಶದಲ್ಲಿ ಚೀನಾದ ಸೈನಿಕರು ಇರುವುದು ಪರಿಸ್ಥಿತಿಯನ್ನು ಚೆನ್ನಾಗಿ ನಿಭಾಯಿಸುವುದಕ್ಕೆ ಸಮ ಎಂದು ನೀವು ಹೇಳುವುದಾದರೆ, ಬಹುಶಃ ಅದೇ ಸರಿಯಿರಬಹುದು. ದೆಹಲಿಯಷ್ಟು ವಿಸ್ತಾರವಾದ ನಮ್ಮ ನೆಲವನ್ನು ಚೀನಾದ ಸೈನಿಕರು ಆಕ್ರಮಿಸಿಕೊಂಡಿದ್ದಾರೆ... ಈ ಬಗ್ಗೆ ಬರೆಯಲು ಮಾಧ್ಯಮಗಳಿಗೆ ಇಷ್ಟವಿಲ್ಲ' ಎಂದು ಹೇಳಿದ್ದಾರೆ.

'ನೆರೆ ದೇಶವು ನಿಮ್ಮ 4,000 ಚದರ ಕಿ.ಮೀ. ಪ್ರದೇಶವನ್ನು ಆಕ್ರಮಿಸಿಕೊಂಡರೆ ಅಮೆರಿಕ ಹೇಗೆ ಪ್ರತಿಕ್ರಿಯಿಸುತ್ತದೆ? ಪರಿಸ್ಥಿತಿಯನ್ನು ತಾನು ಚೆನ್ನಾಗಿ ನಿಭಾಯಿಸಿದ್ದೇನೆ ಎಂದು ಹೇಳಿ ಯಾವುದೇ ಅಧ್ಯಕ್ಷ ಬಚಾವಾಗಲು ಸಾಧ್ಯವೇ? ಹೀಗಾಗಿ, ಮೋದಿ ಅವರು ಚೀನಾ ಸಮಸ್ಯೆಯನ್ನು ಸರಿಯಾಗಿ ನಿಭಾಯಿಸಿದ್ದಾರೆ ಎಂದು ನನಗೆ ಅನ್ನಿಸುತ್ತಿಲ್ಲ. ಚೀನಾದ ಸೈನಿಕರು ನಮ್ಮ ನೆಲದಲ್ಲಿ ಕುಳಿತಿರುವುದಕ್ಕೆ ಕಾರಣಗಳೇ ಇಲ್ಲ' ಎಂದಿದ್ದಾರೆ.

ಪಾಕಿಸ್ತಾನದ ಕುರಿತಾಗಿ ಮೋದಿ ಅವರು ತಳೆದಿರುವ ನಿಲುವನ್ನು ರಾಹುಲ್ ಅವರು ಪತ್ರಿಕಾಗೋಷ್ಠಿಯಲ್ಲಿ ಬೆಂಬಲಿಸಿದರು. ಅಮೆರಿಕದ ಜೊತೆಗಿನ ಸಂಬಂಧದ ವಿಚಾರವಾಗಿ 'ಮೋದಿ ಅವರು ನಮ್ಮ ನಿಲುವಿಗೆ ತೀರಾ ಭಿನ್ನವಾಗಿಯೇನೂ ವರ್ತಿಸುತ್ತಿಲ್ಲ' ಎಂದು ಹೇಳಿದ್ದಾರೆ.

'ಭಾರತದಲ್ಲಿ ಪ್ರಜಾತಂತ್ರಕ್ಕಾಗಿ ನಡೆದಿರುವ ಹೋರಾಟವು ಭಾರತೀಯರ ಹೋರಾಟ. ಅದಕ್ಕೂ ಬೇರೆಯವರಿಗೂ ಸಂಬಂಧ ಇಲ್ಲ. ಅದು ನಮ್ಮ ಸಮಸ್ಯೆ. ಅದನ್ನು ನಾವೇ ನೋಡಿಕೊಳ್ಳುತ್ತೇವೆ. ಪ್ರಜಾತಂತ್ರ ಸುರಕ್ಷಿತವಾಗಿರುವಂತೆ ನಾವು ಖಾತರಿಪಡಿಸಿಕೊಳ್ಳುತ್ತೇವೆ' ಎಂದಿದ್ದಾರೆ.

ರಾಹುಲ್ ಹೇಳಿದ್ದು...

- ಕಳೆದ 10 ವರ್ಷಗಳಲ್ಲಿ ಭಾರತದ ಪ್ರಜಾತಂತ್ರ ವ್ಯವಸ್ಥೆ ಭಗ್ನಗೊಳ್ಳುತ್ತಾ ಬಂದಿತ್ತು. ಈಗ ಅದು ತಂತಾನೇ ಹೋರಾಟ ನಡೆಸುತ್ತಿದೆ
- ಮಹಾರಾಷ್ಟ್ರ ಸರ್ಕಾರವನ್ನು ನಮ್ಮಿಂದ ಕಿತ್ತುಕೊಂಡಿದ್ದನ್ನು, ನಮ್ಮ ಶಾಸಕರು ಇದ್ದಕ್ಕಿದ್ದಂತೆ ಬಿಜೆಪಿ ಶಾಸಕರಾಗಿದ್ದನ್ನು ಕಂಡಿದ್ದೇನೆ
- ನಮ್ಮ ಬ್ಯಾಂಕ್ ಖಾತೆಗಳು ಸ್ಥಗಿತಗೊಂಡಿದ್ದ ಸ್ಥಿತಿಯಲ್ಲೂ ನಾವು ಚುನಾವಣೆ ಎದುರಿಸಿದೆವು. ಇಂಥದ್ದು ಬೇರೆ ಪ್ರಜಾತಂತ್ರ ವ್ಯವಸ್ಥೆಗಳಲ್ಲಿ ಆಗಿರುವುದನ್ನು ನಾನು ಕಂಡಿಲ್ಲ. ಬಹುಶಃ ಸಿರಿಯಾ ಅಥವಾ ಇರಾಕ್‌ನಲ್ಲಿ ಹೀಗಾಗಿರಬಹುದು
- ನನ್ನ ವಿರುದ್ಧ 20ಕ್ಕೂ ಹೆಚ್ಚು ಪ್ರಕರಣಗಳಿವೆ. ಭಾರತದ ಇತಿಹಾಸದಲ್ಲಿ ಮಾನನಷ್ಟ ಮೊಕದ್ದಮೆಯಲ್ಲಿ ಜೈಲು ಶಿಕ್ಷೆಗೆ ಗುರಿಯಾದ ಏಕೈಕ ವ್ಯಕ್ತಿ ನಾನು

ಏಷ್ಯನ್ ಚಾಂಪಿಯನ್ಸ್ ಟ್ರೋಫಿ: ಸೆಮಿಫೈನಲ್‌ಗೆ ಭಾರತ

ಸುಲಭ ತುತ್ತಾದ ಮಲೇಷ್ಯಾ



ಗೋಲು ಗಳಿಸಿದ ಸಂಭ್ರಮದಲ್ಲಿ ಭಾರತ ತಂಡದ ಆಟಗಾರರು – ಎಕ್ಸ್ ಚಿತ್ರ

ಹುಲುನ್‌ಬುಯಿರ್ (ಚೀನಾ), (ಪಿಟಿಐ): ಯುವ ಫಾರ್ವರ್ಡ್ ಆಟಗಾರ ರಾಜಕುಮಾರ್ ಪಾಲ್ ಅವರ ಹ್ಯಾಟ್ರಿಕ್ ನೆರವಿನಿಂದ ಭಾರತ ತಂಡ 8–1 ಗೋಲುಗಳಿಂದ ಮಲೇಷ್ಯಾ ತಂಡವನ್ನು ಸದೆಬಡಿದು, ಹೀರೊ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಸತತ ಮೂರನೇ ಗೆಲುವನ್ನು ಸಾಧಿಸಿತು. ಆ ಮೂಲಕ ಸೆಮಿಫೈನಲ್ ಸ್ಥಾನವನ್ನು ಕಾದಿರಿಸಿತು.

ರಾಜಕುಮಾರ್ ಬುಧವಾರ ನಡೆದ ಈ ಪಂದ್ಯದ ಮೂರನೇ, 25 ಮತ್ತು 33ನೇ ನಿಮಿಷ ಗೋಲುಗಳನ್ನು ಗಳಿಸಿದರು. ಅರಿಜಿತ್ ಸಿಂಗ್ ಹುಂಡಲ್ (6 ಮತ್ತು 39ನೇ ನಿಮಿಷ), ಜುಗರಾಜ್ ಸಿಂಗ್ (ಏಳನೇ ನಿಮಿಷ), ನಾಯಕ ಹರ್ಮನ್‌ಪ್ರೀತ್ ಸಿಂಗ್ (22ನೇ) ಮತ್ತು ಉತ್ತಮ್ ಸಿಂಗ್ (40ನೇ ನಿಮಿಷ) ಅವರು ಇತರ ಗೋಲುಗಳಿಗೆ ಕಾರಣರಾದರು. ಮಲೇಷ್ಯಾದ ಏಕೈಕ ಗೋಲನ್ನು ಅಖೀಮುಲ್ಲಾ ಅನ್ವರ್ 34ನೇ ನಿಮಿಷ ಗಳಿಸಿದರು.

ಆರು ತಂಡಗಳು ಕಣದಲ್ಲಿರುವ ಈ ಟೂರ್ನಿಯಲ್ಲಿ ಭಾರತ ಪ್ರಸ್ತುತ ಮೂರು ಪಂದ್ಯಗಳಿಂದ 9 ಪಾಯಿಂಟ್ಸ್ ಗಳಿಸಿ ಅಂಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ತಂಡವು ಗುರುವಾರ ನಡೆಯುವ ತನ್ನ ಮುಂದಿನ ಪಂದ್ಯದಲ್ಲಿ ದಕ್ಷಿಣ ಕೊರಿಯಾವನ್ನು ಎದುರಿಸಲಿದೆ. ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ವಿರುದ್ಧದ ಕೊನೆಯ ಲೀಗ್ ಪಂದ್ಯ ಶನಿವಾರ ನಡೆಯಲಿದೆ.

ರೌಂಡ್-ರಾಬಿನ್ ಮಾದರಿಯಲ್ಲಿ ನಡೆಯುತ್ತಿರುವ ಈ ಟೂರ್ನಿಯಲ್ಲಿ ಮೊದಲ ನಾಲ್ಕು ಸ್ಥಾನ ಗಳಿಸುವ ತಂಡಗಳು ಸೆಮಿಫೈನಲ್‌ಗೆ ಪ್ರವೇಶಿಸುತ್ತವೆ. ಸೆ. 16ರಂದು ಸೆಮಿಫೈನಲ್ ಪಂದ್ಯಗಳು ನಡೆಯಲಿದ್ದು, ಮರುದಿನ ಫೈನಲ್ ನಿಗದಿಯಾಗಿದೆ.

ಭಾರತ, ಇದಕ್ಕೆ ಮೊದಲು ಆತಿಥೇಯ ಚೀನಾ ತಂಡವನ್ನು 3–0 ಗೋಲುಗಳಿಂದ, ಜಪಾನ್ ತಂಡವನ್ನು 5–1 ಗೋಲುಗಳಿಂದ ಸೋಲಿಸಿತ್ತು.

ಭಾರತದ ಮುಂಚೂಣಿ ಆಟಗಾರರು ಅತ್ಯುತ್ತಮ ಲಯದಲ್ಲಿದ್ದು, ತಂಡವು ಆರಂಭದಿಂದಲೇ ಮೇಲುಗೈ ಸಾಧಿಸಿತು. ಐದು ಫೀಲ್ಡ್ ಗೋಲುಗಳನ್ನು, ಪೆನಾಲ್ಟಿ ಕಾರ್ನರ್ ಮೂಲಕ ಮೂರು ಗೋಲುಗಳನ್ನ ಗಳಿಸಿತು. ಜುಗರಾಜ್, ಹರ್ಮನ್‌ಪ್ರೀತ್, ಉತ್ತಮ್ ಪೆನಾಲ್ಟಿ ಕಾರ್ನರ್‌ಗಳನ್ನು ಪರಿವರ್ತಿಸಿದರು.

ಪಾಕಿಸ್ತಾನಕ್ಕೆ ಗೆಲುವು: ದಿನದ ಮೊದಲ ಪಂದ್ಯದಲ್ಲಿ ಪಾಕಿಸ್ತಾನ ತಂಡ 2–1 ಗೋಲುಳಿಂದ ಜಪಾನ್ ತಂಡವನ್ನು ಸೋಲಿಸಿ ಸೆಮಿಫೈನಲ್ ಅವಕಾಶವನ್ನು ಹಸಿರಾಗಿಸಿಕೊಂಡಿತು.

ಏಕೈಕ ಟೆಸ್ಟ್: 3ನೇ ದಿನದಾಟವೂ ರದ್ದು

ಗ್ರೇಟರ್ ನೊಯ್ಡಾ (ಪಿಟಿಐ): ಅಫ್ಗಾನಿಸ್ತಾನ ಮತ್ತು ನ್ಯೂಜಿಲೆಂಡ್ ನಡುವಣ ಏಕೈಕ ಟೆಸ್ಟ್ ಪಂದ್ಯಕ್ಕೆ ಮಳೆ ಕೃಪೆ ತೋರುವಂತೆ ಕಾಣುತ್ತಿಲ್ಲ. ಕ್ರೀಡಾಂಗಣ ತೇವಗೊಂಡಿದ್ದ ಕಾರಣ ಟೆಸ್ಟ್ ಪಂದ್ಯದ ಮೂರನೇ ದಿನದಾಟ ಒಂದೂ ಎಸೆತ ಕಾಣದೇ ರದ್ದುಗೊಂಡಿತು.

ಬಾಲಕರ ಫುಟ್‌ಬಾಲ್: ನಾಲ್ಕರ ಘಟ್ಟಕ್ಕೆ ದೆಹಲಿ

ಬೆಂಗಳೂರು: ದೆಹಲಿ ತಂಡವು ಇಲ್ಲಿ ನಡೆಯುತ್ತಿರುವ ಎನ್‌ಎಫ್‌ಸಿ ಸಬ್ ಜೂನಿಯರ್ ಬಾಲಕರ ಸೆಮಿಫೈನಲ್‌ನಲ್ಲಿ ಆತಿಥೇಯ ಕರ್ನಾಟಕ ತಂಡವನ್ನು ಎದುರಿಸಲಿದೆ. ನಾಲ್ಕರ ಘಟ್ಟದ ಪಂದ್ಯವು ಶುಕ್ರವಾರ ಬೆಂಗಳೂರು ಫುಟ್‌ಬಾಲ್ ಮೈದಾನದಲ್ಲಿ ನಡೆಯಲಿದೆ.

ಬುಧವಾರ ನಡೆದ ಪಂದ್ಯದಲ್ಲಿ ದೆಹಲಿ ತಂಡವು 7–2ರಿಂದ ಒಡಿಶಾ ವಿರುದ್ಧ ಜಯಿಸಿತು. ಡೆಲ್ಲಿ ತಂಡದ ಮ್ಯಾಕ್‌ಡೊನಿಷ್ ಎನ್‌ಗೆರಂಗಬಮ್ (49, 52ನೇ ನಿ), ತೈಬಾಂಗ್ ಎನ್‌ಗಾಂಬಾ (64ನಿ, 88ನಿ) ಮತ್ತು ಅಂಶ್ ರಾಜ್ ಸಿಂಗ್ (71ನಿ, 86ನಿ) ಗೋಲು ಗಳಿಸಿದರು. ತಂಡದ ಅಮನ್ ಟೊಪ್ಪೊ ಉಡುಗೊರೆ ಗೋಲು ಕೊಟ್ಟರು.

ಒಡಿಶಾ ತಂಡದ ಆಯುಷ್ ಗೋಪಿ (19ನಿ, 58ನಿ) ಗೋಲು ಹೊಡೆದರು.

ಎ ಗುಂಪಿನಲ್ಲಿ ಪಂಜಾಬ್ ತಂಡವು 9–0ಯಿಂದ ಬಿಹಾರ ವಿರುದ್ಧ ಜಯಿಸಿತು. ಪಂಜಾಬ್‌ನ ಶಂಶೇರ್ ಸಿಂಗ್ (17ನಿ, 20ನಿ, 28ನಿ, 32ನಿ ಹಾಗೂ 89ನಿ) ಗೋಲುಗಳ ಮಳೆ ಸುರಿಸಿದರು. ಆಶು ಕುಮಾರ್ (45 + 2ನಿ), ಹರ್ಗುನ್ ಸಿಂಗ್ (62ನಿ) ಜಶನ್‌ಪ್ರೀತ್ ಸಿಂಗ್ (63ನಿ) ಮತ್ತು ಅಮಣಿಂದರ್ ಸಿಂಗ್ ಜೋಶಿ (87ನಿ) ತಲಾ ಒಂದು ಗೋಲು ಗಳಿಸಿದರು.

ಧನ್ಯವಾದಗಳು ಶ್ರೀಜೇಶ್– ಹಾಕಿ ದಿಗ್ಗಜನಿಗೆ ಪ್ರಧಾನಿ ಮೋದಿ ಪತ್ರ



ಪಿ.ಆರ್. ಶ್ರೀಜೇಶ್

ನವದೆಹಲಿ (ಪಿಟಿಐ): ಹೋದ ತಿಂಗಳು ಹಾಕಿಗೆ ವಿದಾಯ ಹೇಳಿದ ಗೋಲ್ ಕೀಪರ್ ಪಿ.ಆರ್. ಶ್ರೀಜೇಶ್ ಅವರು ಈ ಆಟಕ್ಕೆ ನೀಡಿರುವ ಕೊಡುಗೆಯನ್ನು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದು, ರಾಷ್ಟ್ರೀಯ ಜೂನಿಯರ್ ತಂಡದ ಕೋಚ್ ಆಗಿಯೂ ಅವರು ಪರಿಣಾಮಕಾರಿಯಾಗಿ ಸಾಮರ್ಥ್ಯ ತೋರುವರೆಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪ್ರಧಾನಿ ಮೋದಿ ಆ.16ರಂದು ಬರೆದಿರುವ ಪತ್ರವನ್ನು ಶ್ರೀಜೇಶ್ ಅವರು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಪ್ಯಾರಿಸ್ ಒಲಿಂಪಿಕ್ಸ್ ವೇಳೆ, ಕೇರಳದ ಈ ಹಿರಿಯ ಆಟಗಾರ 15 ವರ್ಷಗಳ ಅಂತರರಾಷ್ಟ್ರೀಯ ಹಾಕಿಗೆ ವಿದಾಯ ಹೇಳಿದ್ದರು. ಫ್ರಾನ್ಸ್ ರಾಜಧಾನಿಯಲ್ಲಿ ಭಾರತ ಸತತ ಎರಡನೇ ಸಲ ಕಂಚಿನ ಪದಕ ಗೆದ್ದುಕೊಂಡಿತ್ತು. ನಿವೃತ್ತಿ ಘೋಷಿಸಿದ ಬೆನ್ನಲ್ಲೇ ಅವರನ್ನು ಭಾರತ ಜೂನಿಯರ್ ಹಾಕಿ ತಂಡದ ಮುಖ್ಯ ಕೋಚ್ ಆಗಿ ನೇಮಿಸಲಾಗಿತ್ತು.

‘ನಿಮ್ಮ ಹೊಸ ಪಾತ್ರವನ್ನು ಪರಿಣಾಮಕಾರಿಯಾಗಿ ಮತ್ತು ಸ್ಫೂರ್ತಿದಾಯಕವಾಗಿ ನಿಭಾಯಿಸುವರೆಂಬ ಭರವಸೆಯಿದೆ’ ಎಂದು ಮೋದಿ ಪತ್ರದಲ್ಲಿ ಬರೆದಿದ್ದಾರೆ.

‘ಭಾರತದ ಹಾಕಿಗೆ ನೀವು ಸಲ್ಲಿಸಿರುವ ಸ್ಮರಣೀಯ ಸೇವೆಗಾಗಿ ನಿಮ್ಮನ್ನು ಅಭಿನಂದಿಸುತ್ತೇನೆ’ ಎಂದು ಆಗಸ್ಟ್ 16ರಂದು ಬರೆದ ಪತ್ರದಲ್ಲಿ ಮೋದಿ ತಿಳಿಸಿದ್ದಾರೆ.

ಶ್ರೀಜೇಶ್ ಅವರ ನಮ್ರತೆಯನ್ನೂ ಮೋದಿ ಶ್ಲಾಘಿಸಿದ್ದಾರೆ. ‘ಹಲವು ಪ್ರಶಸ್ತಿಗಳು, ರಾಷ್ಟ್ರೀಯ, ಅಂತರ ರಾಷ್ಟ್ರೀಯ ಪದಕಗಳು ನಿಮಗೆ ಬಂದಿದ್ದು ನೀವು ಸಾಧಿಸಿರುವ ಎತ್ತರವನ್ನು ತೋರಿಸುತ್ತವೆ. ಆದರೆ ಹಾಕಿ ಮೈದಾನದಲ್ಲಾಗಲಿ, ಹೊರಗೆಯೇ ಆಗಲಿ ನಿಮ್ಮಲ್ಲಿ ಕಂಡಿರುವ ವಿಶೇಷವೆಂದರೆ ಅದು ಸರಳತೆ ಮತ್ತು ವಿನೀತಭಾವ’ ಎಂದು ಪ್ರಧಾನಿ ಬರೆದಿದ್ದಾರೆ.

‘ನನ್ನ ನಿವೃತ್ತಿಗೆ ಸಂಬಂಧಿಸಿ ನೀವು ಬರೆದ ಆತ್ಮೀಯ ಪತ್ರ ಸ್ವೀಕರಿಸಿದ್ದೇನೆ ಮೋದಿ ಸರ್. ಹಾಕಿ ನನ್ನ ಜೀವನ. ನಾನು ಈ ಆಟಕ್ಕೆ ಕೊಡುಗೆ ಸಲ್ಲಿಸಿ, ಭಾರತವನ್ನು ಪ್ರಬಲ ಶಕ್ತಿಯಾಗಿ ರೂಪಿಸಲು ಶ್ರಮಿಸುತ್ತೇನೆ. 2020 ಮತ್ತು 2024ರಲ್ಲಿ ಒಲಿಂಪಿಕ್ ಪದಕಗಳ ಮೂಲಕ ಈ ಕೆಲಸ ಶುರುವಾಗಿದೆ. ನನ್ನ ಮೇಲೆ ವಿಶ್ವಾಸ ವಿರಿಸಿದ್ದಕ್ಕೆ ಧನ್ಯವಾದಗಳು ಪಿಎಂ ಸರ್’ ಎಂದು ಶ್ರೀಜೇಶ್ ಎಕ್ಸ್‌ನಲ್ಲಿ ಪ್ರಧಾನಿ ಪತ್ರಕ್ಕೆ ಪ್ರತಿಕ್ರಿಯಿಸಿದ್ದಾರೆ.

ಚೆಸ್ ಒಲಿಂಪಿಯಾಡ್: ಭಾರತ ತಂಡಗಳ ಶುಭಾರಂಭ

ಬುಕಾರೆಸ್ಟ್ (ರುಮೇನಿಯಾ): ಎರಡನೇ ಶ್ರೇಯಾಂಕದ ಭಾರತ ತಂಡ, ಬುಧವಾರ ಆರಂಭವಾದ 45ನೇ ಚೆಸ್ ಒಲಿಂಪಿಯಾಡ್‌ನಲ್ಲಿ ಶುಭಾರಂಭ ಮಾಡಿತು. ಓಪನ್ ವಿಭಾಗದ ಮೊದಲ ಸುತ್ತಿನಲ್ಲಿ ಮೊರಾಕ್ಕೊ ತಂಡವನ್ನು 4–0ಯಿಂದ ಸೋಲಿಸಿತು.

ಮೊದಲ ಬೋರ್ಡ್‌ನಲ್ಲಿ ಪ್ರಜ್ಞಾನಂದ, ಎರಡನೇ ಬೋರ್ಡ್‌ನಲ್ಲಿ ಅರ್ಜುನ್ ಇರಿಗೇಶಿ, ಮೂರನೇ ಬೋರ್ಡ್‌ನಲ್ಲಿ ವಿದಿತ್ ಗುಜರಾತಿ ಮತ್ತು ನಾಲ್ಕನೇ ಬೋರ್ಡ್‌ನಲ್ಲಿ ಪೆಂಟಾಲ ಹರಿಕೃಷ್ಣ ತಮ್ಮ ಎದುರಾಳಿಗಳನ್ನು ಸೋಲಿಸಿದರು. ಈ ಪಂದ್ಯದಲ್ಲಿ ಡಿ.ಗುಕೇಶ್ ಆಡಲಿಲ್ಲ. ಅಗ್ರ ಶ್ರೇಯಾಂಕದ ಅಮೆರಿಕ 3.5–0.5 ರಿಂದ ಪನಾಮಾ ಮೇಲೆ ಜಯಗಳಿಸಿತು.

ಮಹಿಳೆಯರ ವಿಭಾಗದಲ್ಲಿ ಅಗ್ರ ಶ್ರೇಯಾಂಕ ಪಡೆದಿರುವ ಭಾರತ 3.5– 0.5 ರಿಂದ ಜಮೈಕಾ ಮೇಲೆ ಜಯಗಳಿಸಿತು.